# THE BOOK WAS DRENCHED

UNIVERSAL LIBRARY

OU_198020

UNIVERSAL LIBRARY

# ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

## (ಪ್ರಕಾಶಕರೂ, ವ್ಯಾಪಾರಿಗಳೂ)

---

ನಮ್ಮಲ್ಲಿ ಎಲ್ಲ ತರದ ಉತ್ತಮ ಕನ್ನಡ ಪುಸ್ತಕಗಳೂ, ಬರವಣಿಗೆಯ ಉಪಕರಣಗಳೂ, ನಕಾಶೆ ಚಿತ್ರಗಳೂ, ಕಂಪಾಸ ಪೆಟ್ಟಿಗೆ, ಡ್ರಾಯಿಂಗ ಪುಸ್ತಕಗಳೂ, ಪಾಟಿ ಪೆನ್ಸಿಲುಗಳೂ, ಸ್ವದೇಶೀ ಕಾಜಿನ ಸಾಮಾನುಗಳೂ ಅಗ್ಗವಾಗಿ ದೊರೆಯುತ್ತವೆ.

ಕೆಳಗಿನ ಪುಸ್ತಕಗಳನ್ನು ಮಾರುವ ಪೂರ್ಣ ಸ್ವಾತಂತ್ರ್ಯವು ನಮ್ಮದೇ ಇದೆ.

| | | ಬೆಲೆ. |
|---|---|---|
| ೧. | ಕವಿಚರಿತ್ರೆ ಸ. ೧, ೨ | ೮— ೦—೦ |
| ೨. | ಅಕ್ಬರ ಚಕ್ರವರ್ತಿಯ ಚರಿತ್ರೆ (ಸಚಿತ್ರ) | ೧— ೧—೦ |
| ೩. | ಚರಿತ್ರಸಂಗ್ರಹ (ಪೂರ್ವಾರ್ಧ) | ೧— ೪—೦ |
| ೪. | ಮೊಗಲ್ ಬಾದಶಾಹಿ | ೦—೧೪—೦ |
| ೫. | ಮಹಾರಾಣಿ ಲಕ್ಷ್ಮೀಬಾಯಿ ಝೂ. ಸಿ. | ೨— ೦—೦ |
| ೬. | ಧರ್ಮ ಸ್ಥಾಪಕರೂ ಧರ್ಮ ಸುಧಾರಕರೂ | ೦— ೬—೦ |
| ೭. | ನಗೆಗಡಲು | ೦— ೬—೦ |
| ೮. | ನೀತಿಮಂಜರಿ ಭಾ. ೧ (ಪದ್ಯ) | ೦—೧೨—೦ |
| ೯. | ,, ,, ೨ ( ,, ) | ೦—೧೦—೦ |
| ೧೦. | ರಾಜಶೇಖರ ಚರಿತ್ರೆ | ೧— ೦—೦ |
| ೧೧. | ಉಪನ್ಯಾಸಮಂಜರಿ | ೧— ೧—೦ |
| ೧೨. | ಭಾರತ ಸಾಧ್ವೀಮಣಿಯ ಇತಿಹಾಸ ಮಂಜರಿ, ಭಾ. ೧ | ೦— ೮—೬ |
| ೧೩. | ,, ,, ,, ಭಾ. ೨ | ೦— ೮—೬ |
| ೧೪. | ನಿರ್ಮಲೆ | ೦—೧೨—೦ |
| ೧೫. | ನನ್ನ ಆಚಾರ್ಯ | ೦— ೬—೦ |

**ಶ್ರೀಪಾದ ರಾಮಚಂದ್ರ ದೇಶಪಾಂಡೆ,** ಬಿ. ಎಸ್‌ಸಿ.,

ಮಾಳಮಡ್ಡಿ, ಧಾರವಾಡ. ವ್ಯವಸ್ಥಾಪಕ.

ಶ್ರೀ ವಿದ್ಯಾರಣ್ಯ ಪುಸ್ತಕ ಮಾಲೆ ೧.

# ಕರ್ನಾಟಕ ಸಿಂಹಾಸನ ಸ್ಥಾಪನೆ

ಇದನ್ನು

ಶಂಕರ ಅಣ್ಣಾಜಿ ಕುಲಕರ್ಣಿ ಇವರು ಬರೆದರು

ಮತ್ತು

ಶ್ರೀಪಾದ ರಾಮಚಂದ್ರ ದೇಶಪಾಂಡೆ, ಬಿ. ಎಸ್‌ಸಿ.,

ಆಡಳಿತೆಗಾರ

"ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ"

ಮಾಳಮಡ್ಡಿ, ಧಾರವಾಡ ಇವರು ತಿದ್ದಿ ಬೆಳಿಸಿ ಮುದ್ರಿಸಿ

ಪ್ರಸಿದ್ಧ ಪಡಿಸಿದರು.

OSMANIA UNIVERSITY

COLLEGE LIBRARY.

ಮೊದಲನೆಯ ಆವೃತ್ತಿ.

ಬೆಲೆ: ೧ ರೂಪಾಯಿ.

ಈ ಪುಸ್ತಕದ ಎಲ್ಲ ಸ್ವಾಮಿತ್ವವನ್ನು ಪ್ರಕಾಶಕರು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ

೧೯೨೨.

ಮಂಗಳೂರು :
ಕೊಡಿಯಾಲ್‌ಬೈಲ್ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟು,
ಶ್ರೀಪಾದ ರಾಮಚಂದ್ರ ದೇಶಪಾಂಡೆ, ಬಿ. ಎಸ್‌ಸಿ., ಮಾಳಮಡ್ಡಿ, ಧಾರವಾಡ
ಇವರು ತಿದ್ದಿ ಬೆಳೆಸಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

## ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ

# ಶ್ರೀ ವಿದ್ಯಾರಣ್ಯರವರ ಜಯಜಯ ಕಾರ

### (ಶ್ರೀ ವಿದ್ಯಾರಣ್ಯರವರ ಪುಣ್ಯತಿಥಿಯು ದಿವಸ ರಚಿಸಿದ ಪದ)

ಧಾಟಿ:—"ಆರು ಹಿತವರು ನಿನಗೆ ಮೂವರೊಳಗೆ ಎಂಬಂತೆ."

ಜಯತು ವಿದ್ಯಾರಣ್ಯ! ಜಯ ಮಾಧವಾರ್ಯ! | ಜಯತು ಕರ್ಣಾಟ ಸಾಮ್ರಾಜ್ಯ ಸ್ಥಾಪಕನೇ! || ಪಲ್ಲ ||

ಅಂದು ಹಿಂದುಗಳು ದುರುಳರು ಕೊಡುವ ತಾಪಕುರೆ | ಬೆಂದು ಬಳಲುತ್ತಲಿರಲವರನಿರದೆ || ಬಂಧದಿಂ ದಾಂಟಿಸಲು ಧರೆಯೊಳವತರಿಸಿರ್ದ | ವೃಂದಾರಕಾಚಾರ್ಯನಹುದೊ! ನೀ ನಿಜದಿ || ೧ || ಸಲೆ ಸ್ವರಾಜ್ಯವನು ಸ್ಥಾಪಿಸಲು ನೆರೆ ಸ್ವಾರ್ಥವ | ನ್ನಳಿದು ಸನ್ಯಾಸಾಶ್ರಮುವನು ತಳೆದು || ಬಲು ಕಠಿಣ ತಪವ ನಾಚರಿಸಿ ಈ ಭೂಮಿಯಲಿ | ಬಲಶಾಲಿಯೆನಿಸಿರ್ದ ಭಾರತಿಯ ಕುವರಾ! || ೨ || ಸಿರಿದೇವಿಯೊಲುಮೆಯಂ ಪಡೆದು ಚಿನ್ನದ ಸರಿಯ | ಸುರಿಸಿ ಧರಣಿಯಲಿ ಕೀರ್ತಿಯಂ ಪಸರಿಸಿ || ಇರಿಸಿ ಪ್ರೇಮವ ಮಾತೃಭೂಮಿಯಲಿ ಸ್ವಜನರಿಗೆ | ಪರಮ ಸ್ವಾತಂತ್ರ್ಯ ಸುಖ ಸುಧೆಯ ನೀಂಟಿಸಿದ್ಯೆ || ೩ || ವರವಿಜಯ ನಗರ ರಾಜ್ಯಸ್ಥಾಪನೆ ಯುಗೈದು | ಹಿರಿಬಂಟನಾದ ಹರಿಹರ ರಾಜನಂ | ನೆರೆರಾಜ್ಯ ಲಕ್ಷ್ಮಿಯ ತೊಡೆಯಮೇಲೆ ಕುಳ್ಳಿರಿಸಿ || ಮೆರೆದೆಯ್ಯ ನೀನವಗೆ ಸಹಕಾರಿಯಾಗಿ || ೪ || ಸರಸತಿಯು ಸೇವೆಯಂ ಜರುಗಿಸುತ ವಾದದಲಿ | ದುರುಳವಾದಿಗಳ ನೆರೆ ಸೋಲಿಸುತಲಿ || ಹರವಿ ಸಕಲರಲಿ ಸದ್ಧರ್ಮಾಭಿಮಾನವನು | ಧರಣಿಗುರುವೆನಿಸಿರ್ದ ಶ್ರೀ ಕೃಷ್ಣ ಪ್ರಿಯನೇ || ೫ ||

ಕೃ. ಶ್ರೀ. ಬೆಟಗೇರಿ,
"ಕವಿಭೂಷಣ."

# ವಿಶಯಾನುಕ್ರಮಣಿಕೆ


ಮೊದಲನೆಯ ಅಧ್ಯಾಯ :— ಶ್ರೀ ಲಕ್ಷ್ಮಿಯ ಪ್ರಸನ್ನತೆ . . ೧— ೯

ಎರಡನೆಯ ಅಧ್ಯಾಯ :— ಪರಮೇಶ್ವರನ ಸಂಕೇತ . . ೧೦— ೧೬

ಮೂರನೆಯ ಅಧ್ಯಾಯ :— ಗುರು-ಶಿಷ್ಯರು . . . . ೧೬— ೨೫

ನಾಲ್ಕನೆಯ ಅಧ್ಯಾಯ :— ಕರ್ನಾಟಕದ ಪರಿಸ್ಥಿತಿಯು . . ೨೫— ೩೩

ಐದನೆಯ ಅಧ್ಯಾಯ :— ಪ್ರಣಯಿಗಳು . . . . . ೩೪— ೪೫

ಆರನೆಯ ಅಧ್ಯಾಯ :— ರಾಕ್ಷಸೀ ಮಹತ್ವಾಕಾಂಕ್ಷೆಯು . ೪೫— ೬೪

ಏಳನೆಯ ಅಧ್ಯಾಯ :— ಭವಿಷ್ಯತ್ಕಾಲದ ಛಾಯೆ . . . ೬೪— ೬೭

ಎಂಟನೆಯ ಅಧ್ಯಾಯ :— ದಿಲ್ಲಿಯ ಬಾದಶಹನ ದರಬಾರು . ೬೮— ೮೧

ಒಂಬತ್ತನೆಯ ಅಧ್ಯಾಯ— ಬಹಾಉದ್ದೀನ . . . . ೮೧— ೮೮

ಹತ್ತನೆಯ ಅಧ್ಯಾಯ :— ಕಂಪಿಲದ ರಾಯಿಯು . . . ೮೯— ೯೭

ಹನ್ನೊಂದನೆಯ ಅಧ್ಯಾಯ :— ಆಚಾರ್ಯರ ಆಶ್ರಮ . . ೯೮—೧೦೫

ಹನ್ನೆರಡನೆಯ ಅಧ್ಯಾಯ :— ಕಾಮಾಕ್ಷಿಯ ಕುವಿಚಾರ . . ೧೦೫—೧೧೭

ಹದಿಮೂರನೆಯ ಅಧ್ಯಾಯ :— ಕರ್ನಾಟಕದಲ್ಲಿಯ ಜೋಹಾರ ೧೦೮—೧೨೭

ಹದಿನಾಲ್ಕನೆಯ ಅಧ್ಯಾಯ :— ಆನೆಗುಂದಿಯ ಆಳಿಗಾಲ. . ೧೨೭—೧೩೮

ಹದಿನೈದನೆಯ ಅಧ್ಯಾಯ :— ಅರುಣೋದಯ . . . ೧೨೯—೧೪೧

# ಸಂಪಾದಕರ ಮುನ್ನುಡಿ

ಇತ್ತಲಾಗಿ ಕನ್ನಡಿಗರಲ್ಲಿ ಹಲವು ಕಾರಣಗಳಿಂದ ಜಾಗ್ರುತೆಯುಂಟಾಗಿರುತ್ತದೆಂದು ಬರೆಯಲು ಸಂತೋಷ ಪಡುತ್ತೇನೆ. ವರ್ತಮಾನಪತ್ರಿಕೆಗಳೂ, ಮಾಸಪತ್ರಿಕೆಗಳೂ ವರುಷ ವರುಷಕ್ಕೆ ಹೆಚ್ಚಾಗುತ್ತಲಿವೆ. ಎಲ್ಲಿ ಹೋದರೂ ನಮ್ಮ ತಾಯ್ನುಡಿಯಾದ ಕನ್ನಡದ ದೀನಾವಸ್ಥೆಯ ಬಗ್ಗೆ ಕನಿಕರದ ಮಾತುಗಳು ಕಿವಿಗೆ ಬೀಳುತ್ತಲಿವೆ. ಆದರೆ ಬಾಯಿಯಲ್ಲಿದ್ದ ಈ ಅನುತಾಪವು ಹೃದ್ಗತವಾಗಲಿಕ್ಕೆ ಇನ್ನೂ ಕೆಲವು ವರುಷಗಳು ಬೇಕೆಂದು ತೋರುತ್ತದೆ.

ನಾವೂ ನೀವೂ ನೆಂಟರು, ನಮ್ಮ ಕಂಟಲಿಗೆ ಕೈ ಹಚ್ಚಬೇಡರಿ ಎಂಬ ಗಾದೆಯಂತೆ ಕೈಬಿಚ್ಚಿ ದುಡ್ಡುಕೊಡದೆ ಕನ್ನಡದ ಸೇವೆಯನ್ನು ಮಾಡಲೆಳೆಸುವ ನಮ್ಮ ದೇಶಬಾಂಧವರಲ್ಲಿ ಸ್ವಾರ್ಥತ್ಯಾಗಬುದ್ಧಿಯು ಕೆಲಮಟ್ಟಿಗಾದರೂ ಅಂಕುರಿಸತೊಡಗಿದಂತೆ ನಮ್ಮ ತಾಯ್ನುಡಿಯ ಬೆಳವಣಿಗೆಯು ನಿಜವಾಗಿ ಹೆಚ್ಚುವದೆನ್ನುವದಕ್ಕೆ ಸಂದೇಹವಿಲ್ಲ. ಈ ಉದಾರಬುದ್ಧಿಯನ್ನು ದೇವರು ನಮಗೆ ಎಂದು ಕೊಡುವನೋ ಅದೇ ಸುದಿವಸವು.

ಕಾಲಪ್ರತೀಕ್ಷೆ ಮಾಡುತ್ತ ಕೂಡ್ರದೆ ಕೈಲಾದಮಟ್ಟಿಗೆ ಭಾಷಾಸೇವೆಯನ್ನು ಮಾಡಬೇಕೆಂಬುದ್ದೇಶದಿಂದ ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೆಂಬ ಕೂಟವನ್ನು ಮಾಡಿ, ಕರ್ನಾಟಕ ಸಿಂಹಾಸನ ಸ್ಥಾಪನೆಯೆಂಬ ಈ ಕಾದಂಬರಿಯನ್ನು ಶ್ರೀ ವಿದ್ಯಾರಣ್ಯ ಪುಸ್ತಕಮಾಲೆಯ ಮೊದಲನೆಯ ಪುಷ್ಪವಾಗಿ ಮುದ್ರಿಸಿ, ನಮ್ಮ ಪ್ರಿಯ ಕರ್ನಾಟಕ ಬಂಧುಗಳ ಮುಂದೆ ಇಟ್ಟಿರುತ್ತೇವೆ. ಈ ಪುಸ್ತಕವನ್ನು ಬರೆದು ಅದರ ಎಲ್ಲ ಸ್ವಾತಂತ್ರ್ಯವನ್ನು ನಮಗೆ ಕೊಟ್ಟುದದಕ್ಕೋಸ್ಕರ ಮ. ರಾ. ಶಂಕರ ಅಣ್ಣಾಜಿ ಕುಲಕರ್ಣಿ ಇವರ ಉಪಕಾರವನ್ನು ಮನಃಪೂರ್ವಕವಾಗಿ ಎಣಿಸುತ್ತೇವೆ. ನಮ್ಮ ಉಳಿದ ಕನ್ನಡ ಭ್ರಾತೃಗಳು ಹಣದಿಂದಾಗಲಿ, ಬರಹದಿಂದಾಗಲಿ ಬೇರೆ ತರದಿಂದಾಗಲಿ ಮನಮುಟ್ಟಿ ನೆರವಾಗುವರೆಂದು ಕೋರುತ್ತೇವೆ.

ಈ ಪುಸ್ತಕದಲ್ಲಿದ್ದ ಗುಣದೋಷಗಳನ್ನು ತಿಳಿಸಿದವರ ಪತ್ರಗಳನ್ನು ಆತ್ಯಾದರದಿಂದ ಸ್ವೀಕರಿಸುವೆವು.

ಸಜ್ಜನ ವಿಧೇಯ,

ಮಾಳಮಡ್ಡಿ, ಧಾರವಾಡ<br>
ಚೈತ್ರ ಶುದ್ಧ ಪ್ರತಿಪದೆ ೧೮೪೪<br>
ತಾ. ೨೯—೩—೧೯೨೨.

**ಶ್ರೀಪಾದ ರಾಮಚಂದ್ರ ದೇಶಪಾಂಡೆ,**<br>
ಬಿ. ಎಸ್ಸಿ.

# ಪ್ರಸ್ತಾವನೆ

ಕರ್ನಾಟಕದಲ್ಲಾಗಿ ಹೋದ ಅನೇಕ ಸಾಮ್ರಾಜ್ಯಗಳಲ್ಲಿ ವಿಜಯನಗರದ ಸಾಮ್ರಾಜ್ಯವು ಪ್ರಮುಖವಾದುದೂ ಕಟ್ಟಕಡೆಯದೂ ಆಗಿದೆ. ಇಂದು ಹಂಪಿಯೆಂಬ ಹಾಳುಹಳ್ಳಿಯಾಗಿ ಪರಿಣಮಿಸಿದ ವಿಜಯನಗರವು ಒಂದು ಕಾಲದಲ್ಲಿ—ಸುಮಾರು ಇನ್ನೂರೈವತ್ತು ವರುಷಗಳ ಹಿಂದೆ—ಅತ್ಯಂತ ವೈಭವ ಪೂರ್ಣವಾಗಿತ್ತು; ಹೆಸರುವಾಸಿಯಾದ ಸಾಮ್ರಾಜ್ಯದ ರಾಜಧಾನಿ ಯಾಗಿತ್ತು. ಈಗ ಈ ಹಳ್ಳಿಯನ್ನು ನೋಡಿದರೆ, ಪ್ರಾಚೀನಕಾಲದ ಆ ವೈಭವದ ವಿಷಯವಾಗಿ ಮನಸ್ಸು ಸಾಶಂಕವಾಗದಿರದು. "ಹಂಪಿಗೆ ಹೋಗುವ ದಕ್ಕಿಂತಲೂ ಕೊಂಪಿಯಲ್ಲಿರುವದು ಲೇಸು" ಎಂಬ ನಾಣ್ನುಡಿಯು ವಿಜಯ ನಗರದ ಪ್ರಕೃತದ ಹೀನಾವಸ್ಥೆಯನ್ನು ವ್ಯಕ್ತಮಾಡುತ್ತಲಿದೆ.

೧೬ನೆಯ ಶತಮಾನದ ಅಂತ್ಯಭಾಗದಲ್ಲಿ ತಲೆಯೆತ್ತಿ ಮೆರೆದ ಈ ಸಾಮ್ರಾಜ್ಯದ ಐತಿಹ್ಯವನ್ನು ಕುರಿತು ಮ. ಸಿವೆಲ್ ಸಾಹೇಬರು ಮರೆತು ಹೋದ ಸಾಮ್ರಾಜ್ಯ (Forgotten-Empire) ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರಿಂದ ವಿಸ್ತೃತವೂ ನಿಶ್ಚಿತವೂ ಆದ ಇತಿಹಾಸವು ಗೊತ್ತಾಗದಂತಿದ್ದರೂ, ಇದು ವಿಜಯನಗರದ ಇತಿಹಾಸದ ಬಗ್ಗೆ ಬರೆಯಲ್ಪಟ್ಟ ಮೊದಲನೆಯ ಪುಸ್ತಕವಾದುದರಿಂದ ಮಹತ್ವದ್ದಾಗಿದೆ. ಕನ್ನಡಿಗರ ನಿರಭಿಮಾನ ವೃತ್ತಿಯ ಮೂಲಕ ಕಣ್ಮರೆಯಾಗಿದ್ದ ಇತಿಹಾಸವನ್ನು ಬೈಲಿಗೆಳೆದದ್ದಕ್ಕಾಗಿ, ಸಿವೆಲ್ ಸಾಹೇಬರ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು. ಇವರ ಈ ಮರೆತುಹೋದ ಸಾಮ್ರಾಜ್ಯವೆಂಬ ಹೆಸರಿಗೆ ಉತ್ತರರೂಪವಾಗಿ ಬಿ. ಸೂರ್ಯನಾರಾಯಣಪ್ಪನವರು "ಎಂದೂ ಮರೆಯದ ಸಾಮ್ರಾಜ್ಯ" (Never to be forgotten Empire) ಎಂಬ ಗ್ರಂಥವನ್ನು ಬರೆದುದು ಅಭಿನಂದನೀಯವಾಗಿದೆ.

ಮೇಲ್ಕಾಣಿಸಿದ ಎರಡು ಗ್ರಂಥಗಳಲ್ಲಿಯ ಕೆಲವು ಸಂಗತಿಗಳನ್ನು ತೆಗೆದುಕೊಂಡು, ಕಲ್ಪನೆಯನ್ನು ಸೇರಿಸಿ, ಈ ಪುಸ್ತಕವು ಬರೆಯಲ್ಪಟ್ಟಿದೆ. ಮುಖ್ಯ

ವಾಗಿ ಇದರಲ್ಲಿ ವಿಜಯನಗರದ ಸಿಂಹಾಸನ ಸ್ಥಾಪನೆಯ ವಿಷಯವಾಗಿರುವ ಭಿನ್ನಭಿನ್ನ ಅಭಿಪ್ರಾಯಗಳನ್ನು ಏಕೀಕರಿಸಲು ಯತ್ನಿಸಿದ್ದೇನೆ. ಇದು ಎಷ್ಟು ಮಟ್ಟಿಗೆ ಸಾಧ್ಯವಾಗಿದೆಯೆಂಬುದನ್ನು ನಿರ್ಣಯಿಸುವ ಕೆಲಸವು ವಾಚಕರದು.

ಐತಿಹಾಸಿಕ ಕಾದಂಬರಿಯು ಇತಿಹಾಸವಲ್ಲ; ಇತಿಹಾಸ ಹಾಗೂ ಕಲ್ಪನೆಯ ಸಮ್ಮಿಶ್ರಣವು. ಸತ್ಯವೆಷ್ಟಿರಬೇಕು? ಕಲ್ಪನೆಯೆಷ್ಟಿರಬೇಕು? ಎಂಬ ವಿಷಯದಲ್ಲಿ ನಿರ್ಬಂಧವಿಲ್ಲ. ಈ ದೃಷ್ಟಿಯಿಂದ ಕಾದಂಬರಿಯ ಲೇಖಕನಿಗೆ ತುಂಬಾ ಸ್ವಾತಂತ್ರ್ಯವಿದ್ದರೂ ಇತಿಹಾಸಕ್ಕೆ ವಿಪರೀತವಾಗಿ ಬರೆಯಲಿಕ್ಕೆ ಬರುವಂತಿಲ್ಲ. ಈ ವಿಷಯವಾಗಿ ಮಹಾರಾಷ್ಟ್ರದ ಪ್ರಸಿದ್ಧ ಲೇಖಕರಾದ ಕೇಳಕರರವರು ಶಾಪಿತಮಹಾರಾಷ್ಟ್ರವೆಂಬ ಕಾದಂಬರಿಯ ಪ್ರಸ್ತಾವನೆಯಲ್ಲಿ—"ಚಹಾದಲ್ಲಿ ಹಾಲೆಷ್ಟು? ನೀರೆಷ್ಟು? ಎಂದು ಕೇಳುವುದೂ ಐತಿಹಾಸಿಕ ಕಾದಂಬರಿಯಲ್ಲಿ ಸತ್ಯವೆಷ್ಟು? ಕಲ್ಪನೆಯೆಷ್ಟು? ಎಂದು ಕೇಳುವುದೂ ಒಂದೇಯಾಗಿದೆಯೆಂದು ಮಾರ್ಮಿಕ ರೀತಿಯಿಂದ ಹೇಳಿದ್ದಾರೆ.

ಕರ್ನಾಟಕದ ಸಾದ್ಯಂತವೂ ವಿಸ್ತೃತವೂ ಆದ ಇತಿಹಾಸದ ಅಭಾವದ ಮೂಲಕ ಕಾದಂಬರಿಗಳಲ್ಲಿ ಸತ್ಯವು ಹೆಚ್ಚು ಅಡಕವಾಗಿದ್ದರೆ ಉತ್ತಮವೆಂದರಿತಿದ್ದರೂ ಅನಿವಾರ್ಯದಿಂದ ಕಲ್ಪನೆಗಳನ್ನು ಹೆಚ್ಚಾಗಿ ಸೇರಿಸಬೇಕಾಗುತ್ತಿರುವದು. ಈ ಬಗ್ಗೆ ಸಹೃದಯವಾಚಕರು ಕ್ಷಮಾಪಣೆಯನ್ನು ತೋರಿಸಬೇಕು. ನಾನು ಈ ಕಾದಂಬರಿಯನ್ನು ಸುಮಾರು ಮೂರು ವರುಷಗಳ ಹಿಂದೆ ಬರೆದೆನು. ಸಂಪಾದಕರೊಬ್ಬರು ತಮ್ಮ ಮಾಸಪತ್ರಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಇದನ್ನು ಆಗ್ರಹದಿಂದ ತಕ್ಕೊಂಡರು. ಆದರೆ ಆ ಮಾಸಪತ್ರಿಕೆಯ ಉದಯಾಸ್ತಗಳಲ್ಲಿ ಕೇವಲ ಹನ್ನೊಂದೇ ತಿಂಗಳುಗಳ ಅವಕಾಶ ಉಳಿದುದರಿಂದ ಇದು ಪ್ರಕಾಶವಾಗದೆ ಉಳಿಯಿತು. ಹೀಗೆ ಮೂಲಿಗೆ ಬಿದ್ದ ಈ ಕಾದಂಬರಿಯು ಇಂದು ಪ್ರಕಟವಾಗುವ ಸುಯೋಗವನ್ನು ಹೊಂದಿದೆ. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ 'ಕೇವಲ ಸ್ವದೇಶಕ್ಕಾಗಿ' ಎಂಬ ಬೇರೊಂದು ಕಾದಂಬರಿಯನ್ನು ಬರೆದಿದ್ದೇನೆ. ಒಬ್ಬ ಮಹನೀಯರು ಮೂರು ತಿಂಗಳಲ್ಲಿ ಪ್ರಕಟಿಸುವ ವಚನಕೊಟ್ಟು ತೆಗೆದುಕೊಂಡವರು ದೀಡು ವರುಷವಾದರೂ ತಮ್ಮ ವಚನಕ್ಕೆ ಜಾಗ್ರತರಾಗಲೊಲ್ಲರು! ಭಾಷಾಸೇವೆ

ಗೆಂದು ಮುಂದುವರೆದ ಈ ಮಹಾತ್ಮರ ಅಪ್ರಾಮಾಣಿಕವರ್ತನಕ್ಕಾಗಿ ವಿಷಾದಿಸಬೇಕಾಗಿದೆ.

ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಶ್ರೀ. ದೇಶಪಾಂಡೆಯವರು ಪುಸ್ತಕಪ್ರಕಟನೆಯ ಸ್ತುತ್ಯವಾದ ಕಾರ್ಯವನ್ನು ಕೈಕೊಂಡು, ನನ್ನ ಈ ಪುಸ್ತಕಕ್ಕೆ ಆಶ್ರಯ ಕೊಟ್ಟದ್ದಕ್ಕಾಗಿ ನಾನು ತುಂಬಾ ಉಪಕೃತನಾಗಿದ್ದೇನೆ.

ಗಜೇಂದ್ರಗಡ,
ತಾ. ೪—೮—೧೯೨೧.

ಕನ್ನಡಿಗರ ಸೇವಕ,
**ಶ. ಅ. ಕುಲಕರಣಿ.**

# ಒಪ್ಪೋಲೆ

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೧ | ೧೫ | ಶಾಟೆಯು | ಶಾಟಿಯು |
| ,, | ೧೬ | ಕೃಷ್ಣಾಂಜಿನ | ಕೃಷ್ಣಾಜಿನ |
| ೪ | ೨೬ | ಮುಂದುವರೆದು | ಮುಂದುವರಿದು |
| ೮ | ೧೬ | ನಾನರಿಯುನೆಂದು | ನಾನರಿಯೆನೆಂದು |
| ೯ | ೪ | ಅಂಧಃಕಾರ | ಅಂಧಕಾರ |
| ೧೧ | ೨೧ | ಅಡಚಣಿ | ಅಡಚಣೆ |
| ೧೨ | ೨೨ | ಅಂಧಃಕಾರ | ಅಂಧಕಾರ |
| ೧೪ | ೧೫ | ಸೂತ್ರಾಧಾರ | ಸೂತ್ರಧಾರ |
| ೨೯ | ೧೧ | ಸುದ್ಧಿಯು | ಸುದ್ದಿಯು |
| ೩೬ | ೧೫ | ಮೃದವೂ | ಮೃದುವೂ |
| ೪೪ | ೧೧ | ಸಾಗರನಾಥನನು | ಸಾಗರನಾಥನನ್ನು |
| ೫೫ | ೧೭ | ಇವೆಳೇನು | ಇವಳೇನು |
| ೧೦೮ | ೧೨ | ನಿಷುರವಾಗಿ | ನಿಷ್ಠುರವಾಗಿ |
| ೧೨೦ | ೧೯ | ನಿದ್ರೆಯನ್ನೈದುವ್ಮ | ನಿದ್ರೆಯನ್ನೈದುವ |

# ಮೊದಲನೆಯ ಅಧ್ಯಾಯ

## ಶ್ರೀಲಕ್ಷ್ಮಿಯ ಪ್ರಸನ್ನತೆ

**ಪರತೇಜೋಮದಗರ್ವದುತ್ಕರುಷಮಂ ತೇಜಸ್ವಿ ತಾಂ ಸೈರಿಸಂ ।**
**ಹೊರಗಿಂದಲ್ತವಗಾಗುಣಂ ಪ್ರಕೃತಿಸಿದ್ಧಂ ಧರ್ಮವಾಗಿರ್ಪುದು ॥**

— ಉತ್ತರ ರಾಮಚರಿತ್ರ.

ಕೃಷ್ಣಪಕ್ಷದ ಕಡೆಯ ದಿವಸವು. ಮಧ್ಯರಾತ್ರಿಯ ಸಮಯವು. ಕಗ್ಗತ್ತಲೆಯು ಕವಿದುಬಿಟ್ಟದೆ. ಚರಾಚರವಸ್ತುಗಳೆಲ್ಲವೂ ನಿಶ್ಶಬ್ದವಾಗಿವೆ. ಪ್ರಾಣಿಮಾತ್ರರು ವಿಶ್ರಾಂತಿಗಾಗಿ ನಿದ್ದೆಯಲ್ಲಿ ಮೈಮರೆದಿರುತ್ತಾರೆ. ಪಟ್ಟಣಗಳಲ್ಲಿ ಈ ಸ್ಥಿತಿ ಇರುವಾಗ ಅರಣ್ಯದಲ್ಲಿ ಜನಸಂಚಾರವೆಲ್ಲಿಂದ ಬರಬೇಕು? ಕೆಲವು ಹಿಂಸ್ರಪಶುಗಳು ಬೇಟೆಗಾಗಿ ಅಲೆಯುತ್ತಿರಬಹುದಾಗಿತ್ತು; ಆದರೆ ನಾವು ಈಗ ವರ್ಣಿಸತಕ್ಕ ಸ್ಥಳವು ಇಂತಹ ಕ್ರೂರಪ್ರಾಣಿಗಳ ನಿವಾಸದ ಎಡೆಯಾಗಿದ್ದಿಲ್ಲ; ಏಕೆಂದರೆ ಅದೊಂದು ಪವಿತ್ರತಮ ಸ್ಥಳವಾಗಿತ್ತು. ಒಬ್ಬ ತೇಜಸ್ವಿಯು ತನ್ನ ತಪಃಸಾಮರ್ಥ್ಯದಿಂದ ಆ ಪ್ರದೇಶವನ್ನು ಪುನೀತವಾಗಿ ಮಾಡಿದ್ದನು. ದುಷ್ಟ ಜನರೂ ಹಿಂಸ್ರಪಶುಗಳೂ ಇಂತಹ ಪುಣ್ಯಕರ ಭೂಮಿಯಲ್ಲಿ ತಮ್ಮ ದುಷ್ಟತನವನ್ನು ತೋರಿಸಲು ಹೆದರುತಿದ್ದವು.

ಆ ಪರ್ವತಪ್ರದೇಶದಲ್ಲಿ ಒಂದು ಗುಹೆ ಇತ್ತು. ಅದರದೊಂದು ಮೂಲೆಯಲ್ಲಿ ನಿಗಿನಿಗಿ ಕೆಂಡವು ಕಂಗೊಳಿಸುತ್ತಿತ್ತು. ಇದರ ಸಣ್ಣ ಬೆಳಕಿನಿಂದ ಆ ಗವಿಯ ಕಿಂಚಿನ್ಮಾತ್ರ ಸ್ಥಿತಿಯನ್ನು ಅವಲೋಕಿಸಬಹುದಾಗಿತ್ತು. ಮುಂಭಾಗದಲ್ಲಿ ಒಬ್ಬ ತರುಣನು ಮಲಗಿಕೊಂಡಿದ್ದನು. ಕೃಷ್ಣಾಜಿನವೇ ಅವನ ಹಾಸುಗೆ. ಹೊದ್ದುಕೊಳ್ಳುವದಕ್ಕೊಂದು ಶಾಟಿಯ ವಸ್ತ್ರವು. ಒಳಭಾಗದಲ್ಲಿ ತೇಜಃಪುಂಜನಾದ ಸನ್ಯಾಸಿಯೊಬ್ಬನು ಕೃಷ್ಣಾಂಜಿನದ ಮೇಲೆ ಕುಳಿತುಕೊಂಡಿದ್ದನು. ಅವನು ಯೋಗಸಾಧನೆಯಲ್ಲಿ ತಲ್ಲೀನನಾಗಿ ಹೋದಂತೆ ತೋರುತ್ತಿತ್ತು. ಆದ್ದರಿಂದ ಅವನು ನಿದ್ರೆಯಲ್ಲಿರುವನೋ ಎಚ್ಚತ್ತಿರು

ವನೋ ಎಂಬುದನ್ನು ಅನುಮಾನದಿಂದ ಗೊತ್ತು ಮಾಡಬೇಕಾಗಿತ್ತು. 'ಯಾ ನಿಶಾ ಸರ್ವಭೂತಾನಾಂ ತಸ್ಯಾಮ್ ಜಾಗರ್ತಿ ಸಂಯಮೀ' ಎಂಬ ಭಗವಂತನ ಉಕ್ತಿಯಂತೆ, ಸಕಲ ಪ್ರಾಣಿಗಳು ನಿದ್ರೆಯಿಂದಭಿಭೂತವಾದ ಆ ಘೋರ ನಿಶಾಸಮಯದಲ್ಲಿಯೂ ಆ ತಪಸ್ವಿಯು ಏಕಾಗ್ರಚಿತ್ತನಾಗಿ ಪರಮಾತ್ಮನಲ್ಲಿ ತನ್ನ ಅಂತರ್ದೃಷ್ಟಿಯನ್ನು ಇರಿಸಿದ್ದನು !!

ಒಮ್ಮಿಂದೊಮ್ಮೆ ಆ ಗುಹೆಯಲ್ಲಿ ದಿವ್ಯಪ್ರಕಾಶವು ಬಿದ್ದಿತ್ತು. ಅದರಿಂದ ಆ ಗವಿಯು ಝಗಝಗಿಸ ತೊಡಗಿತು. ಆ ದಿವ್ಯ ಜ್ಯೋತಿಯಲ್ಲಿ ಜ್ಯೋತಿರ್ಮಯಳೂ, ಸರ್ವಾಲಂಕಾರಭೂಷಿತಳೂ ಆದ ರಮಣಿಯೊಬ್ಬಳು ಕಾಣಿಸಿದಳು. ಯೋಗರತನಾದ ಆ ಮಹಾತ್ಮನು ಅಂತರ್ದೃಷ್ಟಿಯಿಂದ ಇದನ್ನು ತಿಳಿದು ಸಮಾಧಿಯಿಂದ ಎಚ್ಚತ್ತನು. ಆದರೂ ಅವನು ಆ ಪ್ರಕಾಶದ ಕಡೆಗಾಗಲಿ, ಆ ದಿವ್ಯ ಸುಂದರಿಯ ಕಡೆಗಾಗಲಿ ಕಣ್ಣೆತ್ತಿ ನೋಡಲಿಲ್ಲ !

ಆ ಪ್ರಕಾಶಮಯಳಾದ ರಮಣಿಯು ಕೆಲಕಾಲ ಸುಮ್ಮನೆ ನಿಂತುಕೊಂಡಳು. ಎದುರಿನಲ್ಲಿರುವ ಮುನೀಯನು ತನ್ನನ್ನು ನೋಡುವದಿಲ್ಲೆಂದು ಭಾವಿಸಿದಳು. ಆಗ ಅವಳು ಪ್ರೇಮಪೂರ್ಣ ಸ್ವರದಿಂದ— "ವತ್ಸ," ಎಂದು ಸಂಬೋಧಿಸಿದಳು.

ಆದರೂ ಆ ಸನ್ಯಾಸಿಯು ಅವಳನ್ನು ನೋಡಲಿಲ್ಲ. ನಿಶ್ಚಲವೃತ್ತಿಯಿಂದ ಕುಳಿತುಕೊಂಡು ಬಿಟ್ಟಿದ್ದನು! ಆ ಸ್ತ್ರೀಯಳು—"ವತ್ಸ, ನಾನು ಬಂದಿರುವೆನು. ನನ್ನ ಕಡೆಗೆ ತುಸು ನೋಡು" ಎಂದಳು.

ಆ ವಿರಕ್ತನು ಒಮ್ಮೆ ಮುಖವೆತ್ತಿ ನೋಡಿದನು. ಪುನಃ ಮೋರೆಯನ್ನು ಬೊಗ್ಗಿಸಿ—"ಅಮ್ಮಾ ನೀನು ಯಾರು? " ಎಂದು ಕೇಳಿದನು.

ಸ್ತ್ರೀಯು—ಮಗು, ನನ್ನನ್ನು ಗುರುತಿಸಲಾರೆಯಾ? ನಾನು ಸಾಕ್ಷಾಲ್ಲಕ್ಷ್ಮಿಯು!

ತಪಸ್ವಿ—ಏನು ! ಲಕ್ಷ್ಮಿಯೋ? ಮತ್ತೇಕೆ ಬಂದೆ?

ಲಕ್ಷ್ಮಿ—ಹೀಗೇಕೆ ಕೇಳುತ್ತಿರುವೆ? ಹಿಂದೊಮ್ಮೆ ನಾನು ನಿನಗೆ ದರ್ಶನ ಕೊಟ್ಟದ್ದೇನೆ. ಆಗ ನೀನು ನನ್ನನ್ನು ಬಹಳವಾಗಿ ಗೌರವಿಸಿದೆ. ಈಗ ಈ ಮೇರೆಗೆ ಅನಾದರವನ್ನೇಕೆ ತೋರಿಸುತ್ತಿರುವೆ? ನಾನು ನಿನ್ನನ್ನು ಅನುಗ್ರಹಿಸಲು ಬಂದಿದ್ದೇನೆ!

ತಪಸ್ವಿ— ಅಮ್ಮಾ, ಆಗ ನನಗೆ ನಿನ್ನ ಅವಶ್ಯಕತೆಯಿತ್ತು. ಅದಕ್ಕೋಸ್ಕರ ನಿನ್ನನ್ನು ಪ್ರಾರ್ಥಿಸಿಕೊಂಡೆನು. ಬಡತನದಿಂದ ಕಂಗೆಟ್ಟ ನಾನು ನಿನಗೆ ಬಹು ಪ್ರಕಾರವಾಗಿ ಹೇಳಿಕೊಂಡೆನು; ಆದರೆ ನೀನು ನನ್ನ ಪ್ರಾರ್ಥನೆಯನ್ನು ಮನ್ನಿಸಲಿಲ್ಲ. ಈಗ ನನಗೆ ನೀನು ಬೇಕಾಗಿಲ್ಲ! ಸನ್ಯಾಸಿಯಾದ ನನಗೆ ನಿನ್ನಿಂದ ಆಗಬೇಕಾದ್ದೇನು? ಈ ಸ್ಥಿತಿಯಲ್ಲಿರುವ ನನ್ನ ಬಳಿಗೆ ನೀನು ಬರುವುದೇಕೆ? ಅಮ್ಮಾ ದಯವಿಟ್ಟು ಬಂದ ದಾರಿಯಿಂದ ತಿರುಗಿ ಹೋಗಿ ಬಿಡು.

ಲಕ್ಷ್ಮಿ— ಬ್ರಾಹ್ಮಣ, ಹಾಗೆನ್ನಬೇಡ. ಆಗ ನಿನಗೆ ದೈವವು ಅನುಕೂಲವಾಗಿದ್ದಿಲ್ಲ. ಆದುದರಿಂದ ನಿನ್ನ ಪ್ರಾರ್ಥನೆಯಂತೆ ನಾನು ಪ್ರಸನ್ನಳಾಗಿದ್ದರೂ ನಿನ್ನ ಇಷ್ಟದಂತೆ ಐಶ್ವರ್ಯವನ್ನು ದಯಪಾಲಿಸಲು ಸಮರ್ಥಳಾಗಿರಲಿಲ್ಲ. ಆದರೆ ಇಂದು ನೀನು ದೈವವನ್ನು ಗೆದ್ದಿರುವೆ; ವಿಮುಖವಾದ ದೈವವನ್ನು ಅನುಕೂಲವಾಗಿ ಮಾಡಿಕೊಂಡಿರುವೆ. ಆದಕಾರಣ ಸದಾ ದಾರಿದ್ರ್ಯದಲ್ಲಿ ಕಾಲ ಕಳೆಯಬೇಕಾಗಿದ್ದ ನೀನು ಐಶ್ವರ್ಯವಂತನಾಗಿ ಸುಖಿಸುವ ಸುಯೋಗವನ್ನು ಹೊಂದಿರುವೆ. ನಾನು ಪ್ರಸನ್ನಹೃದಯಳಾಗಿ ನೀನು ಬೇಡಿದಷ್ಟು ಧನವನ್ನು ಕೊಡಲು ಓಡಿ ಬಂದಿದ್ದೇನೆ. ಅನುಮಾನಿಸಬೇಡ. ನಿನ್ನ ಮನಸ್ಸು ಬಯಸಿದಷ್ಟು ಸಂಪತ್ತಿಯನ್ನು ಕೇಳಿಕೊ. ಈಗಲೇ ನಾನು ಕೊಟ್ಟು ಬಿಡುವೆನು.

ತಪಸ್ವಿ— ಸುಜ್ಞಳೇ, ನೀನು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ! ಮೊದಲು ದೈವಗೇಡಿಯಾಗಿದ್ದ ನಾನು ಈಗತಾನೆ ಸುದೈವಿಯಾದುದು ಹೇಗೆ?

ಲಕ್ಷ್ಮಿ— ದ್ವಿಜೋತ್ತಮನೆ, ಹೇಳುತ್ತೇನೆ ಕೇಳು. ದೈವವು ವಿಚಿತ್ರವಾದುದು. ಒನಪಿನ ತರುಣಿಯರನ್ನು ನೀನು ನೋಡಿರುವೆಯಷ್ಟೆ? ಮಾನವರು ಅವರ ಬೆನ್ನು ಹತ್ತಿದ್ದಾದರೆ, ಆ ಜಂಬದ ಹೆಂಗಸರು ಅವರನ್ನು ತಿರಸ್ಕರಿಸುವರು — ಮೋಹಿತರಾದ ಆ ಜನರನ್ನು ಕಾಲಿನಿಂದೊದೆಯುವುದಕ್ಕೂ ಹಿಂದೆಗೆಯರು! ಅದೇ ಮಾನವರು ಅವರನ್ನು ಉಪೇಕ್ಷಿಸುತ್ತ ಮುಂದೆ ಸಾಗಿದರೆಂದರೆ, ಆ ಗಯ್ಯಾಳಿಯರು ನಾಯಿಯಂತೆ ಅವರ ಬೆನ್ನುಹತ್ತು

ವರು! ಅವರು ಎಷ್ಟೇ ತಿರಸ್ಕಾರ ಮಾಡಿದರೂ ಅದನ್ನು ತಾಳಿಕೊಂಡು, ಅವರ ವಿಷಯದಲ್ಲಿ ಪ್ರಸನ್ನಹೃದಯರಾಗಿರುವರು. ಈ ಒಯ್ಯಾರದ ಹೆಂಗಸರಂತೆ ದೈವವೂ ವಿಪರೀತ ವರ್ತನವುಳ್ಳದ್ದು. ಯಾವನು ಕೇವಲ ದೈವ ದೈವ ಎಂದು ಅದರ ಬೆನ್ನುಹತ್ತುವನೋ ಅವನ ವಿಷಯದಲ್ಲಿ ಆ ಅದೃಷ್ಟವು ವಿಮುಖವಾಗುವದು; ಅವನಿಗೆ ಅಡಿಗಡಿಗೆ ಆಶಾಭಂಗವನ್ನುಂಟು ಮಾಡಿ, ಬಹುದುಃಖವನ್ನು ಕೊಡುವದು. ಅದೇ ಮನುಷ್ಯನು ದೈವ ವನ್ನುಪೇಕ್ಷಿಸಿ, ಕರ್ತವ್ಯಮಾರ್ಗದಲ್ಲಿ ಮುಂದುವರಿದುದಾದರೆ, ಅದು ಅವನ ದಾಸಾನುದಾಸಿಯಾಗಿ ಬೇಡಿದ್ದನ್ನು ಕೊಡಲು ಮುಂದರಿಯುವುದು. ಅವನ ಆಶೆಯನ್ನು ಪೂರ್ತಿಗೊಳಿಸಿ, ಅನಂತಸುಖಗಳನ್ನು ಕೊಡುವುದು.

ತಹ.—ಇಂತಹ ದೈವದ ನೆರವು ಆ ಮನುಷ್ಯನಿಗೆ ಬೇಡಾಗಿದ್ದರೆ?

ಲಕ್ಷ್ಮಿ—ಮಗು, ಹಾಗೆನ್ನಲಿಕ್ಕೆ ಬರುವಂತಿಲ್ಲ. ಮನುಷ್ಯನು ದೈವ ದತ್ತ ಫಲಗಳನ್ನನುಭವಿಸಲೇ ಬೇಕು! ಒಲ್ಲೆನೆಂದರೆ ನಡೆಯದು!

ತಹ.—ಹೀಗೋ! ನಾನು ಇದನ್ನೂ ಪರೀಕ್ಷಿಸಿ ಬಿಡುವೆನು!

ಲಕ್ಷ್ಮಿ—ವತ್ಸ, ಪರೀಕ್ಷಿಸುವುದರಲ್ಲಿ ಸ್ವಾರಸ್ಯವಿಲ್ಲ! ಹಸಿದ ಮನುಷ್ಯನು ಕೈಗೆ ಬಂದ ತುತ್ತನ್ನು ಬಿಸಾಟ ಬಿಡಬಹುದೇ? ಒಂದು ವೇಳೆ ಅವನು ಹಾಗೆ ಮಾಡಿದರೆ ಜಾಣನೆನಿಸಿಕೊಂಡಾನೇ? ಹಟಕ್ಕೊಳಗಾಗಬೇಡ! ನೀನು ಸುಜ್ಞನು! ಅಜ್ಞನಂತೆ ಆಚರಿಸುವುದು ನಿನಗೆ ಭೂಷಣವಲ್ಲ!

ತಹ.—ಅಮ್ಮಾ, ಆ ದೈವವು ಕೊಡಲಿಕ್ಕೆ ಬಂದಾಗ ನೋಡಿದರೆ ಬಂದೀತು! ಈಗ ಆ ಮಾತೇಕೆ?

ಲಕ್ಷ್ಮಿ—ದೈವವು ಪ್ರತ್ಯಕ್ಷವಾಗಿ ಬಂದು, ಫಲವನ್ನೀಯುವದೆಂದು ನೀನು ಎಣಿಸುತ್ತೀಯೇನು?

ತಹ.—ನನಗೇನು ಗೊತ್ತು? ನೀನೇ ಹೇಳಿದೆಯಲ್ಲ!

ಲಕ್ಷ್ಮಿ—ಇಲ್ಲ. ದೈವವು ಮೂರ್ತಿಮಂತಾಗಿ ಬಂದು ನಿಂತು ಎಂದೂ ಫಲವನ್ನು ಕೊಡುವದಿಲ್ಲ. ಅದು ಯಾರ ಮುಖಾಂತರವಾಗಿಯಾದರೂ ಈ ಕೆಲಸವನ್ನು ಮಾಡಿಸುವುದು. ಅದರಂತೆ ನಿನ್ನ ಅಭೀಷ್ಟಪೂರ್ತಿಗೆ ನಾನು ಮುಂದುವರೆದು ಬಂದಿದ್ದೇನೆ.

ತಪ.—ಅದೇಕೆ ?

ಲಕ್ಷ್ಮಿ—ಇದಕ್ಕೂ ಕಾರಣವುಂಟು. ನೀನು ಹಿಂದೆ ಒಮ್ಮೆ ಏಕ ಮನಸ್ಸಿನಿಂದ ನನ್ನನ್ನು ಬೇಡಿಕೊಂಡೆ. ಆಗ ನಾನು ನಿನಗೆ ದರ್ಶನವಿತ್ತೆ ನಾದರೂ, ನಿನ್ನ ಮನೋರಥವನ್ನು ಪೂರ್ಣ ಮಾಡಲಾರದವಳಾಗಿದ್ದೆನು. ಆಗಿನ ನಿನ್ನ ಸ್ಥಿತಿಯನ್ನು ನೋಡಿ, ನನಗೆ ಬಹಳ ಕನಿಕರವುಂಟಾಯಿತು. ನಾನು ಎಂದಾದರೊಂದು ದಿವಸ ನಿನ್ನ ಬಯಕೆಯನ್ನು ಪೂರ್ಣ ಮಾಡ ಬೇಕೆಂದು ನಿರ್ಧರಿಸಿಕೊಂಡಿದ್ದೆನು. ಅದಕ್ಕನುಗುಣವಾಗಿ ಪ್ರಯತ್ನವನ್ನು ಮಾಡಿದೆನು. ಇಂದು ನನ್ನ ಯತ್ನಕ್ಕೆ ಯಶಸ್ಸು ದೊರೆಯಿತು. ಕೂಡಲೇ ಬಡವನಾದ ನಿನ್ನ ಉದ್ಧಾರಕ್ಕಾಗಿ ಆನಂದದಿಂದ ಓಡಿ ಬಂದೆನು.

ತಪ.—ಸದ್ಯಕ್ಕೆ ನೀನು ನನಗೆ ಉಪಕಾರ ಮಾಡಬೇಕೆಂದು ಈಗ ಬಂದಿರುವೆಯಷ್ಟೇ ?

ಲ.—ಹೌದು.

ತ.—ಆದರೆ ನನಗೆ ನಿನ್ನ ಉಪಕಾರವು ಬೇಡ ! ನಾನೀಗ ಬಡವ ನಾಗಿಲ್ಲ. ಅಖಂಡವಾದ ಐಶ್ವರ್ಯದಿಂದ ಮೆರೆಯುತ್ತಿದ್ದೇನೆ. ಈ ಸ್ಥಿತಿ ಯಲ್ಲಿ ನೀನು ನನಗೆ ಸಹಾಯ ಮಾಡುವದೇನು ? ನಾನು ಮಾಡಿಸಿಕೊಳ್ಳುವ ದೇನು? ನಿನ್ನ ಪ್ರಯತ್ನಕ್ಕೆ ಫಲವಿಲ್ಲ. ದಯವಿಟ್ಟು ಸುಮ್ಮನೆ ಹೊರಟು ಹೋಗು.

ಲ.—ಬ್ರಾಹ್ಮಣ, ವಿಚಾರಮಾಡಿ ಮಾತಾಡು. ಒಂದು ಕಾಲದಲ್ಲಿ ಅಶನಾಭಾವದಿಂದ ಬಳಲುತ್ತಿದ್ದೆ ಎಂಬುದನ್ನು ಈಗಾಗಲೇ ಮರೆತೆಯೇನು? ಈಗಲಾದರೂ ನೀನು ಶ್ರೀಮಂತನಾಗಿರುವೆಯೆಂದು ತಿಳಿದಿರುವೆಯೇನು? ಧನವಂತನಾಗಿದ್ದರೆ, ನಿರ್ಜನವಾದ ಈ ಗುಹೆಯಲ್ಲಿ ಕಂದಮೂಲಗಳನ್ನು ತಿಂದು ಇರುತ್ತಿದ್ದೆಯಾ?

ತ.—ಇಷ್ಟರಿಂದಲೇ ನೀನು ನನಗೆ ಬಡವನೆನ್ನುತ್ತಿರುವೆಯೇನು?

ಲ.—ಏಕೆ ಅನ್ನಲಾಗದು ? ಶ್ರೀಮಂತನ ಮನೆಯಲ್ಲಿರುವ ಪದಾರ್ಥ ಗಳಿಗೂ, ನಿನ್ನ ಈ ಗವಿಯಲ್ಲಿರುವ ವಸ್ತುಗಳಿಗೂ ಹೊಂದಿಕೆಯಾಗ ಬಹುದೇನು ? ಧನಿಕನ ಮನೆಯು ಉಪಭೋಗ್ಯವಸ್ತುಗಳ ಆಗರವು.

ನಿನ್ನ ಈ ಗುಹೆಯು ಅಭಾವದ ತವರುಮನೆಯು! ಹೀಗಿದ್ದರೂ ನೀನು ಜಂಬಬಡಿಯುತ್ತಿಯಲ್ಲ! ನಿನಗೆ ಏನೆನ್ನ ಬೇಕು ?

ತ.—ಅಮ್ಮ, ಇನ್ನು ನಾನು ಆ ಉಪಭೋಗ್ಯವಸ್ತುಗಳನ್ನು ಕಟ್ಟಿಕೊಂಡು ಮಾಡುವದೇನು? ವಿರಕ್ತನಾದ ನನ್ನ ಜೀವನಯಾತ್ರೆಯನ್ನು ಸಾಗಿಸಲು, ಈ ಗುಹೆಯೂ ಹೊರಗಿರುವ ಪರ್ವತವೂ ಬದ್ಧಕಂಕಣವಾಗಿವೆ. ನನಗೆ ಈ ವಿಷಯದಲ್ಲಿ ಚಿಂತೆಮಾಡುವ ಕಾರಣವೇ ಉಳಿದಿಲ್ಲ. ವೈರಾಗ್ಯವನ್ನವಲಂಬಿಸಿ, ಸದಾ ಸಂತೋಷಾಮೃತದಿಂದ ತೃಪ್ತನಾಗಿರುವ ನನ್ನಂಥವನಿಗೆ ನಿನ್ನ ಉಪಯೋಗವೇನು? ಬೇರೆಯವರಿಗೆ ನಿನ್ನ ಅವಶ್ಯಕತೆ ಇರಬಹುದು. ಅಲ್ಲಿ ಹೋಗಿ ನೀನು ಚಿನ್ನದ ಮಳೆಗರೆ. ನಾನು ಬೇಡೆನ್ನುವದಿಲ್ಲ. ನನಗೆ ಮಾತ್ರ ನೀನು ಬೇಡ.

ಲ.—ವತ್ಸ, ಹೀಗೆನ್ನಬೇಡ. ಕೇವಲ ಹೊಟ್ಟೆತುಂಬಿಕೊಳ್ಳುವದಕ್ಕಷ್ಟೇ ನನ್ನ ಅವಶ್ಯಕತೆ ಇರುವದೆಂದಲ್ಲ. ಸದ್ಯಕ್ಕೆ ನಾನು ನಿನಗೆ ಅವಶ್ಯವಾಗಿ ಬೇಕಾಗಿದ್ದೇನೆ. ನೋಡು, ವಿಚಾರಮಾಡು.

ತ.—ನನಗದು ತಿಳಿಯದೇನು? ಖಂಡಿತವಾಗಿಯೂ ನೀನು ನನಗೆ ಬೇಡ. ಸುಮ್ಮನೆ ಇಲ್ಲಿಂದ ಹೊರಡು. ನನ್ನ ತಪಶ್ಚರ್ಯಕ್ಕೆ ನಿನ್ನಿಂದ ವಿಘ್ನವಾಗುತ್ತಿರುವುದು!

ಲ.—ಎಲೋ ತಪಸ್ವಿಯೇ, ನಿನಗೆ ಈ ಶಿಷ್ಯರೇಕೆ? ಅಲ್ಲೊಬ್ಬನು ಮಲಗಿರುವನು. ಬೇರೊಬ್ಬನನ್ನು ಆನೆಗುಂದಿಯ ಅರಸನ ಬಳಿಯಲ್ಲಿರಿಸಿರುವೆ. ಇವರನ್ನು ನಿನ್ನಂತೆಯೇ ಸನ್ಯಾಸಿಗಳನ್ನಾಗಿ ಮಾಡುವೆಯೇನು? ಹೀಗಿದ್ದರೆ ಆ ಒಬ್ಬನನ್ನು ರಾಜಧಾನಿಯಲ್ಲೇಕಿಟ್ಟಿರುವೆ?

ತ.—ಅದರ ಗೊಡವೆ ನಿನಗೇಕೆ? ಹೋಗೆಂದ ಕೂಡಲೇ ಹೋಗಿಬಿಟ್ಟರಾಯಿತು! ವ್ಯರ್ಥವಾಗಿ ಪಂಟುಬಡೆಯುವದರಿಂದ ಆಗುವದೇನು?

ಲ.—ಬ್ರಾಹ್ಮಣ, ಈ ಸಂದರ್ಭದಲ್ಲಿ ನಾನು ನಿನಗೆ ಬುದ್ಧಿ ಹೇಳದಿರಲಾರೆನು. ನೀನು ಈ ನಿನ್ನ ಶಿಷ್ಯರಿಂದ ಒಂದು ಪ್ರಬಲವಾದ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಲು ಯೋಚಿಸಿರುವೆ. ಈ ನಿನ್ನ ಪ್ರಯತ್ನವು ಸ್ತುತ್ಯವಾದ್ದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಕಾರ್ಯವು ನನ್ನ

ಸಹಾಯವಿಲ್ಲದೆ ಆಗದು. ಇದನ್ನು ನೀನೆಂದೂ ಮರೆಯಕೂಡದು. ವ್ಯರ್ಥವಾಗಿ ನನ್ನನ್ನು ತಿರಸ್ಕರಿಸಬೇಡ. ನನ್ನ ಅನುಗ್ರಹವನ್ನು ಹೊಂದು. ನಾನು ಕೊಡುತ್ತಿರುವ ಧನವನ್ನು ಶಿಷ್ಯರಿಗೆ ಕೊಡು. ನಿನ್ನ ಶಿಷ್ಯರು ಆ ದ್ರವ್ಯಬಲದಿಂದ ಅನಾಯಾಸವಾಗಿ ಕನ್ನಡಿಗರ ಸಾಮ್ರಾಜ್ಯವನ್ನು ನೆಲೆಗೊಳಿಸುವರು.

ತ.—ಅಮ್ಮಾ, ಈ ವಿಚಾರವನ್ನು ನಾನು ಈ ಮೊದಲೇ ಮಾಡಿದ್ದೇನೆ. ಆದರೂ ನನಗೆ ನಿನ್ನ ಸಹಾಯವು ಬೇಡ. ಆಪತ್ಕಾಲದಲ್ಲಿ ಸಹಾಯ ಮಾಡದೆ, ಬೇಡಾದ ವೇಳೆಯಲ್ಲಿ ಸಹಾಯಕ್ಕಾಗಿ ಓಡಿ ಬರುತ್ತಿರುವ ನಿನ್ನಂತಹ ದೇವಿಯ ಉಪಕಾರವು ನನಗೆ ಬೇಕಾಗಿಲ್ಲ!

ಲ.—ಹಾಗಾದರೆ, ನೀನು ಹೊಸ ರಾಜ್ಯವನ್ನು ಹೇಗೆ ಸ್ಥಾಪಿಸುವೆ? ಇದೊಂದು ಸನ್ಯಾಸಿಯ ಕೆಲಸವೆಂದು ನೀನು ತಿಳಿದಿರುವೆಯೇನು? ಈ ಗುಹೆಯಲ್ಲಿರುವ ವರೆಗೆ ನಿನಗೆ ಧನವು ಬೇಕಾಗಲಿಕ್ಕಿಲ್ಲ. ಬಾಹ್ಯಸೃಷ್ಟಿಯಲ್ಲಿ ಕಾಲಿಟ್ಟೊಡನೆ ಪ್ರತಿಯೊಂದು ಕೆಲಸಕ್ಕೆ ಹಣವು ಬೇಕು. ವಿರಕ್ತನಾದ ನಿನಗೆ ನನ್ನ ಮಹತ್ವವು ತಿಳಿಯುವಂತಿಲ್ಲ. ಆದರೂ ನಿನ್ನ ಹಿತಸಾಧನೆಗೋಸ್ಕರವಾಗಿಯೇ ಬಂದ ನಾನು ನಿನಗಿದನ್ನು ಹೇಳದಿರಲಾರೆನು. ಚೆನ್ನಾಗಿ ವಿಚಾರಮಾಡು. ನೂತನ ರಾಜ್ಯವನ್ನು ಸ್ಥಾಪಿಸುವುದು ಸಾಮಾನ್ಯ ಕೆಲಸವಲ್ಲ. ಜನಬಲವು ಬೇಕು. ಶಸ್ತ್ರಾಸ್ತ್ರಗಳ ಸಂಗ್ರಹವು ಬೇಕು. ಇವೆರಡನ್ನು ದೊರಕಿಸುವುದಕ್ಕೆ ಹಣವು ಅತ್ಯವಶ್ಯವಾಗಿ ಬೇಕು. ಆದುದರಿಂದ ಈ ಪ್ರಸಂಗದಲ್ಲಿ ನೀನು ನನ್ನನ್ನು ಉಪೇಕ್ಷಿಸುವುದು ಸರ್ವಥಾ ಅನ್ಯಾಯವು!

ತ.—ಎಲೌ ಲಕ್ಷ್ಮಿಯೇ, ನಾನು ಇಷ್ಟೊಂದು ತೇಜೋಹೀನನಿರುವೆನೆಂದು ನಿನ್ನ ಭಾವನೆಯೇನು? ಒಂದು ಕಾಲದಲ್ಲಿ ನಾನು ಸಂಸಾರಿಕನಾಗಿದ್ದೆನು. ಪ್ರಪಂಚದ ಬಂಧನಗಳಿಗೊಳಗಾಗಿ ಆತ್ಮತೇಜವನ್ನು ಕಳೆದುಕೊಂಡು, ಶಕ್ತಿಹೀನನಾಗಿದ್ದೆನು. ಈಗ ಆ ಅವಸ್ಥೆಯು ನನಗಿಲ್ಲ. ಇಡೀ ವಿಶ್ವವನ್ನೇ ಗದಗಮಿಸಿ ಬಿಡುವ ಸಾಮರ್ಥ್ಯವು ನನ್ನಲ್ಲುಂಟು. ಮನಸ್ಸು ಮಾಡಿದರೆ, ವಿಶ್ವಾಮಿತ್ರನಂತೆ ಹೊಸ ಸೃಷ್ಟಿಯನ್ನೇ ನಿರ್ಮಿಸಬಲ್ಲೆನು.

ಅಂದ ಬಳಿಕ ಒಂದು ರಾಜ್ಯವನ್ನು ಸ್ಥಾಪಿಸುವುದು ನನಗೆ ಅಸಾಧ್ಯವಾದೀತೇ? ಹೊಸ ರಾಜ್ಯವನ್ನು ನೆಲೆಗೊಳಿಸಲು ಧನವು ಬೇಕೆಂಬುದು ನಿಜವು. ಆದರೆ ಇದಕ್ಕೋಸ್ಕರ ನಿನ್ನಂಥ ನಿರ್ದಯಳನ್ನು ಯಾಚಿಸಲಾರೆನು. ಮಣ್ಣು ಹಿಡಿದು ಹೊನ್ನುಮಾಡುವ ಸಾಮರ್ಥ್ಯವು ನನ್ನಲ್ಲಿದೆ. ಇದರ ಅನುಭವವು ಮುಂದೆ ನಿನಗುಂಟಾಗಬಹುದು. ಈಗ ನೀನು ಯಾವ ವಿಚಾರವನ್ನು ಮಾಡದೆ, ಹೊರಟು ಹೋಗಿ ಬಿಡು.

ಲ.—ವತ್ಸ, ನಿನಗೆ ನನ್ನ ಅವಶ್ಯಕತೆಯಿರಲಿಕ್ಕಿಲ್ಲ. ಆದರೂ ನನ್ನನ್ನು ಜರೆಯಬೇಡ. ಆಯತ್ತವಾಗಿ ಸಾಗಿ ಬಂದ ನನ್ನನ್ನು ಉಪೇಕ್ಷಿಸಬೇಡ. ನಾನು ಕೊಡುವುದನ್ನು ಸ್ವೀಕರಿಸು. ಇಲ್ಲದಿದ್ದರೆ ನೀನು ನನ್ನ ಅಪಮಾನ ಮಾಡಿದಂತಾಗುವದು!

ತ.—ಅಮ್ಮಾ, ಮೊದಲು ನೀನು ನನ್ನ ಅವಮಾನ ಮಾಡಿರುವೆ. ಆದ್ದರಿಂದ ಸ್ವಾಭಿಮಾನ ಪೂರಿತನಾದ ನಾನು ನಿನ್ನ ನೆರವನ್ನು ಉಪೇಕ್ಷಿಸುವುದು ನಿನಗೆ ಅವಮಾನ ಹೇಗೆ? ಬುದ್ಧಿವಂತಳಾಗಿದ್ದರೆ ನೀನು ಇಲ್ಲಿಗೆ ಬರಬಾರದಾಗಿತ್ತು. ನೀನು ಬಂದ ಉದ್ದೇಶವು ನನಗೆ ಸಹಾಯಮಾಡುವುದಲ್ಲ; ನನ್ನನ್ನು ಧನಮೋಹದಲ್ಲಿ ತೊಡಕಿಸಿ, ಪ್ರಾಪಂಚಿಕನಾಗಿ ಮಾಡಬೇಕೆಂಬುದಾಗಿರುವದು. ನಿನ್ನ ಈ ಕಪಟಜಾಲವನ್ನು ನಾನರಿಯನೆಂದು ತಿಳಿದಿರುವೆಯೇನು? ಈಗ ನಾನು ಹಣವನ್ನು ತೆಗೆದುಕೊಂಡು ಮಾಡಲೇನು? ಹುಚ್ಚೀ, ಅಧ್ಯಾತ್ಮನಿರತನಾದ ನಾನು ನಿನ್ನ ಮಾಯೆಗೆ ಒಳಗಾದೇನೇ? ನಡೆಯತ್ತ!

ಲ.—ಬ್ರಾಹ್ಮಣ, ನೀನಿಷ್ಟು ಹಟಮಾರಿಯೆಂದು ನನಗೆ ಮೊದಲೇ ತಿಳಿಯಲಿಲ್ಲ! ಗೊತ್ತಾಗಿದ್ದರೆ, ನಾನು ಈಗ ನಿನ್ನ ಬಳಿಗೆ ಬರುತ್ತಿದ್ದಿಲ್ಲ. ಉಪಾಯವಿಲ್ಲ. ಇನ್ನು ನಾನು ಹೋಗುವೆನು. ಇನ್ನೊಮ್ಮೆ ವಿಚಾರ ಮಾಡು. ನೀನು ಸಂಸಾರಿಕನೇ ಆಗಲೊಲ್ಲೆಯೇಕೆ, ಪಾರಮಾರ್ಥಿಕನೇ ಆಗಲೊಲ್ಲೆಯೇಕೆ, ನಾನು ನಿನಗೆ ಇಂತಹದನ್ನೇ ಅವಲಂಬಿಸೆಂದು ಹೇಳುವುದಿಲ್ಲ. ನಾನು ಅನುಗ್ರಹಿಸಿ ಕೊಡಬಂದ ಧನವನ್ನು ಸ್ವೀಕರಿಸಿದರೆ ಸಾಕು. ಮುಂದೆ ನೀನದನ್ನು ಜನರಲ್ಲಿ ತೂರಿಬಿಟ್ಟರೂ ಸರಿ, ಇಟ್ಟುಕೊಂಡರೂ ಸರಿ. ಏಕೆ? ಏನನ್ನುವೆ?

ತ.—ಅವ್ಮಾ, ಹೋಗಿ ಬನ್ನಿ ನಿನಗೆ ಶತಶಃ ವಂದನೆಗಳು!

ಆ ಕಾಂತಿಮಯ ಮೂರ್ತಿಯು ಕೂಡಲೆ ಅದೃಶ್ಯವಾಗಿ ಹೋಯಿತು. ಅದರೊಡನೆ ಆ ಗುಹೆಯೊಳಗಿನ ಪ್ರಕಾಶವೂ ಹೋಗಿ ಬಿಟ್ಟಿತು. ಗವಿಯು ಮೊದಲಿನಂತೆ ಅಂಧಃಕಾರಮಯವಾಯಿತು. ಸನ್ಯಾಸಿಯು ಹೊರಗೆ ಬಂದು ನೋಡಿದನು. ಬೆಳಗಾಗುವದಕ್ಕೆ ಇನ್ನು ತುಸು ಅವಕಾಶವಿತ್ತು. ಅವನು ಆಕಾಶದ ಕಡೆಗೆ ನೋಡಿದನು. ಕಾರ್ಮೋಡವು ಆಕಾಶವನ್ನು ಮುಚ್ಚಿ ಬಿಟ್ಟಿತ್ತು. ಸಿಡಿಲುಮಿಂಚುಗಳ ಅಬ್ಬರವು ನಡೆದಿತ್ತು. ದೊಡ್ಡ ಮಳೆ ಸುರಿಯುವ ಲಕ್ಷಣಗಳು ತೋರುತಲಿದ್ದವು. ಸನ್ಯಾಸಿಯು ತನ್ನಲ್ಲಿಯೇ “ಅರುಣೋದಯಕ್ಕೆ ಇನ್ನು ಬಹಳ ಕಾಲವಿಲ್ಲ. ಆಕಾಶವಾದರೋ ಹೀಗೆ ಮೇಘಚ್ಛನ್ನವಾಗಿ ಭಯಂಕರತೆಯನ್ನು ಸೂಚಿಸುತ್ತಲಿದೆ. ಕನ್ನಡಿಗರ ಭಾಗ್ಯಾಕಾಶವೂ ಹೀಗೆಯೇ ಇರಬಹುದೇನು? ಕನ್ನಡಿಗರು ಸುಪ್ರಭಾತ ವನ್ನು ಕಾಣುವುದು ನಿಜವು. ಆದರೆ ಮೊದಲು ಅವರು ನೈಸರ್ಗಿಕವಾದ ಈ ಭೀಷಣರೋಷದ ಫಲವನ್ನನುಭವಿಸಲೇ ಬೇಕು! ಹಾಗಾದರೇನೇ ಅವರು ಮುಂದಿನ ವೈಭವಪ್ರಾಪ್ತಿಗೆ ಪಾತ್ರರಾಗಿ ಅದನ್ನು ಬಹುಕಾಲ ಉಪಭೋಗಿ ಸಲು ತಕ್ಕವರಾಗುತ್ತಾರೆ. ಅಂದ ಬಳಿಕ ನಾನು ಈ ಭಯಂಕರವಾದ ಮೇಘವನ್ನು ತಡೆಯಲು ಯತ್ನಿಸಲೇಕೆ? “ಪ್ರಯತ್ನಾಂತೇ ಪರಮೇಶ್ವರಃ” ಎಂಬ ಉಪದೇಶವಾಕ್ಯವು ನಿಜವಾದುದು. ನಾನಿದರ ಅನುಭವವನ್ನು ತೆಗೆದುಕೊಂಡಿದ್ದೇನೆ. ನಿರ್ದಯಳಾದ ಲಕ್ಷ್ಮಿಯು ದಯೆ ತೋರಿಸ ಬಂದಿದ್ದಳು!!! ಈ ದಯೆಯು ಆ ಕಾಲದಲ್ಲಿ ಎಲ್ಲಿ ಹೋಗಿತ್ತೊ? ಇನ್ನು ನನಗೆ ಇಂಥ ಲಕ್ಷ್ಮಿಯಿಂದ ಆಗುವದೇನು? ವಿಶ್ವವನ್ನೇ ಮನಬಂದಂತೆ ಕುಣಿಸುವೆನು!” ಎಂದು ಅಂದುಕೊಂಡು ಒಳಗೆ ಹೋದನು.

# ಎರಡನೆಯ ಅಧ್ಯಾಯ

## ಪರಮೇಶ್ವರನ ಸಂಕೇತ

ಮಾಧವಾಚಾರ್ಯನು ಒಬ್ಬ ಬಡ ಬ್ರಾಹ್ಮಣನಾಗಿದ್ದನು. ಶ್ರೀಮತಿಯು ಅವನ ತಾಯಿಯು, ಮಾಯಣನು ಅವನ ತಂದೆಯು, ಸಾಯಣ ಭೋಗನಾಥ ಎಂಬಿಬ್ಬರು ಅವನ ತಮ್ಮಂದಿರು.† ಅವನ ಕುಟುಂಬವು ದೊಡ್ಡದಾದ್ದರಿಂದಲೂ ಬಡತನವಿದ್ದುದರಿಂದಲೂ ಚಿಕ್ಕಂದಿನಲ್ಲೇ ತಂದೆಯು ತೀರಿದ್ದರಿಂದಲೂ ಸಂಸಾರವನ್ನು ಸರಿಯಾಗಿ ಮಾಡಿಕೊಂಡು ಹೋಗುವುದು ಅವನಿಗೆ ಬಿರಿಯಾಯಿತು. ಆದ್ದರಿಂದ ಅವನು ನಾನಾ ತರದ ಅಡಚಣೆಗಳಿಗೊಳಗಾದನು. ಬಹು ಕಷ್ಟ ಪಡುತ್ತಿದ್ದನು. ಎಷ್ಟು ದುಡಿದರೂ ಬಡತನವು ಹಿಂಗಲಿಲ್ಲ. ಸಂಸಾರವು ದುಃಖಮಯವಾಗಿತ್ತೇ ಹೊರತು ಸುಖಮಯವಾಗಿದ್ದಿಲ್ಲ. ಅವನು ಪ್ರಾಪಂಚಿಕ ತಾಪದಿಂದ ಕಂಗೆಟ್ಟು ಹೋದನು. ದಾರಿದ್ರ್ಯ ವಿಮೋಚನೆಗೆ ಏನು ಪ್ರಯತ್ನ ಮಾಡಬೇಕೆಂದು ಯೋಚಿಸ ತೊಡಗಿದನು.

ಮಾಧವನು ಬಡವನಿದ್ದರೂ ವಿದ್ಯಾಚಾರ ಸಂಪನ್ನನಾಗಿದ್ದನು. ಇವನು ಬ್ರಹ್ಮಚರ್ಯವ್ರತವನ್ನು ಚನ್ನಾಗಿ ಪಾಲಿಸಿ, ದೊರೆಯತಕ್ಕಷ್ಟು ವಿದ್ಯೆಯನ್ನು ಸಂಪಾದಿಸಿಕೊಂಡಿದ್ದನು. ವಿದ್ಯೆಯ ಕಡೆಗೆ ಇವನ ಲಕ್ಷವು ಬಹಳವಾಗಿತ್ತು; ಆದಕಾರಣ ಇವನು ತನ್ನ ತಂದೆಯ ತರುವಾಯ ಕುಟುಂಬವನ್ನು ಸಂರಕ್ಷಿಸುತ್ತಿದ್ದರೂ ವಿದ್ಯಾವ್ಯಾಸಂಗವನ್ನು ಬಿಡಲಿಲ್ಲ— ಸಮಯವು ದೊರೆತಾಗ ಜ್ಞಾನಾರ್ಜನೆಗಾಗಿ ಗ್ರಂಥಾವಲೋಕನವನ್ನು ಮಾಡುತ್ತಿದ್ದನು.

---

† ಶ್ರೀಮತೀ ಜನನೀ ಯಸ್ಯ ಸುಕೀರ್ತಿರ್ಮಾಯಣಃ ಪಿತಾ ।
ಸಾಯಣೋ ಭೋಗನಾಥಶ್ಚ ಮನೋ ಬುದ್ಧೀ ಸಹೋದರೌ ॥
ಯಸ್ಯ ಬೋಧಾಯನಂ ಸೂತ್ರಂ ಶಾಖಾ ಯಸ್ಯ ಚ ಯಾಜುಷೀ ।
ಭಾರದ್ವಾಜಂ ಯಸ್ಯ ಗೋತ್ರಂ ಸರ್ವಜ್ಞಃ ಸಹಿ ಮಾಧವಃ ॥

ಪರಾಶರಮಾಧವೀಯ.

ಸುಮಾರು ಮೂವತ್ತು ವರುಷಗಳ ವರೆಗೆ ಮಾಧವನು ನೈಷ್ಠಿಕಬ್ರಹ್ಮಚಾರಿಯಾಗಿದ್ದನು. ಅವನ ಅವಯವಗಳು ಸದೃಢವಾಗಿದ್ದವು. ಅವನ ಶರೀರವು ಸಶಕ್ತವಾಗಿತ್ತು. ಅವನ ಮೋರೆಯ ಮೇಲೆ ಕಳೆ ಉಕ್ಕುತ್ತಿತ್ತು. ಅವನು ಎಷ್ಟೇ ಕಷ್ಟಪಟ್ಟರೂ ಬೇಸರಿಯುತ್ತಿದ್ದಿಲ್ಲ. ಪ್ರತಿದಿನವೂ ಸಾಕಷ್ಟು ಶಾರೀರಿಕ ಮಾನಸಿಕ ಶ್ರಮವನ್ನು ಅವನು ತಪ್ಪದೇ ಮಾಡುತ್ತಿದ್ದನು. ಇವನ ಕುಟುಂಬದ ಜನರೆಲ್ಲರೂ ಸದ್ಗುಣಿಗಳೂ ಸದಾಚಾರಸಂಪನ್ನರೂ ವಿಧೇಯರೂ ಆಗಿದ್ದರು. ಇವರಿಂದ ಮಾಧವನಿಗೆ ಯಾವ ತರದ ತೊಂದರೆಯು ಆಗುವಂತಿದ್ದಿಲ್ಲ; ಆದರೆ ಹಣವಿಲ್ಲುದರಿಂದ ಮಾತ್ರ ಅವನು ಆಗಿಂದಾಗ ತೊಂದರೆಗೆ ಒಳಗಾಗ ಬೇಕಾಗುತ್ತಿತ್ತು.

ವೈದಿಕ ವಿದ್ಯೆಗೆ ಆ ಕಾಲದಲ್ಲಿ ಮರ್ಯಾದೆಯಿತ್ತು. ಅದರಲ್ಲಿಯೂ ಮಾಧವಾಚಾರ್ಯನಂತಹ ಪಂಡಿತನೂ ಸದಾಚಾರಸಂಪನ್ನನೂ ಆದವನಿಗೆ ಸಮಾಜದಲ್ಲಿ ಬೇಕಾದಷ್ಟು ಗೌರವವು ದೊರೆಯುತ್ತಿತ್ತು. ಮಾಧವನು ಯಾಚನಾವೃತ್ತಿಯನ್ನು ಕೈಕೊಂಡಿದ್ದರೆ, ಬೇಕಾದಷ್ಟು ಹಣ ಗಳಿಸಬಹುದಾಗಿತ್ತು; ಆದರೆ ಅವನಿಗೆ ಒಬ್ಬರನ್ನು ಬೇಡುವುದು ಸೇರುತ್ತಿದ್ದಿಲ್ಲ. ಯಾಚನೆಮಾಡುವುದು ಸರಿಯಲ್ಲೆಂದು ಅವನು ನಂಬಿದ್ದನು. ತಾನು ಎಷ್ಟು ಬಡವನಾಗಿದ್ದರೂ ಹಣಕ್ಕೋಸ್ಕರ ಕಂಡ ಕಂಡವರ ಮನೆ ಅಲೆದು, ಬಿಕ್ಕೆಬೇಡುವುದು ತನಗೆ ಬೇಡವೆಂದು ಅವನು ಸಾರಿ ಹೇಳುತ್ತಿದ್ದನು. ದಾನತೆಗೆದುಕೊಳ್ಳುವ ಅಧಿಕಾರವು ಅವನಿಗಿದ್ದರೂ, ಅವನು ಸ್ವಾಭಿಮಾನಿಯೂ ತೇಜಸ್ವಿಯೂ ಆದ್ದರಿಂದ ಪರರನ್ನು ಬೇಡುವುದು ಅವನಿಗೆ ಸೇರುತ್ತಿದ್ದಿಲ್ಲ. ಪರಪುಷ್ಟ ವೃತ್ತಿಯು ಅತಿಹೇಯವಾದುದೆಂದು ಅವನ ಭಾವನೆಯಿತ್ತು; ಆದಕಾರಣ ಅವನು ಎಂತಹ ಬಿಕ್ಕಟ್ಟಿನ ಅಡಚಣೆ ಬಂದರೂ, ಯಾಚನೆಗಾಗಿ ಮುಂದುವರಿಯುತ್ತಿದ್ದಿಲ್ಲ.

ಮಾಧವನಿಗೆ ಒಂದು ಸಂದರ್ಭದಲ್ಲಿ ಧನವು ಅತ್ಯವಶ್ಯವಾಗಿ ಬೇಕಾಯಿತು. ಮನೆಯಲ್ಲಿ ಹಣವಿದ್ದಿಲ್ಲ. ಧನಿಕನೊಬ್ಬನನ್ನು ಆಶ್ರಯಿಸಿ ಹಣವನ್ನು ದೊರಕಿಸಬೇಕೆಂಬ ಕಲ್ಪನೆಯು ಅವನ ಕನಸು-ಮನಸಿನಲ್ಲಿ ಕೂಡ ಬರುವಂತಿದ್ದಿಲ್ಲ. ಹಣವನ್ನು ಯಾವ ರೀತಿಯಿಂದ ಕೂಡಿಸಬೇಕೆಂಬ

ಯೋಚನೆಯು ಅವನಿಗುಂಟಾಯಿತು. ಕಡೆಗೆ ಅವನು ಒಂದು ಉಪಾಯ ವನ್ನು ಹುಡುಕಿ ತೆಗೆದನು.

ಅಮವಾಸ್ಯೆಯ ದಿವಸವು, ಘೋರವಾದ ಅಂಧಕಾರವು ಹಬ್ಬಿತ್ತು. ಊರೊಳಗಿನ ಜನರೆಲ್ಲರೂ ಮಲಗಿಕೊಂಡಿದ್ದರು. ಇಂತಹ ಸಮಯದಲ್ಲಿ ಮಾಧವನು ಯಾರಿಗೂ ತಿಳಿಯದಂತೆ ಮನೆಯಿಂದ ಹೊರಟನು. ಗ್ರಾಮ ದೇವತೆಯಾದ ಭುವನೇಶ್ವರಿಯ ಮಂದಿರವನ್ನು ಸೇರಿದನು. ಬಾಗಿಲವನ್ನು ಭದ್ರವಾಗಿ ಇಕ್ಕಿಕೊಂಡು, ಗರ್ಭಗುಡಿಯನ್ನು ಹೊಕ್ಕನು. ದೇವತೆಯ ಅಡಿಯಲ್ಲಿ ಆಸನವನ್ನು ಹಾಕಿಕೊಂಡು ಕುಳಿತನು. ತದೇಕಧ್ಯಾನದಿಂದ ದೇವಿಯನ್ನಾರಾಧಿಸಿದನು. ಮಾಧವನ ಅನನ್ಯಭಾವಕ್ಕೂ ದೃಢಸಂಕಲ್ಪಕ್ಕೂ ಮೆಚ್ಚಿದ ದೇವಿಯು ಪ್ರತ್ಯಕ್ಷಳಾದಳು.

ಅಂಧಕಾರಮಯವಾದ ದೇವಾಲಯವು ಕೋಟಿಸೂರ್ಯಪ್ರಭೆಯನ್ನು ಹೊಂದಿತು. ಆ ಪ್ರಕಾಶದಲ್ಲಿ ದೇವಿಯು ಸ್ಪಷ್ಟವಾಗಿ ಕಂಡಳು. ಮಾಧ ವನು ಕಣ್ಣುತೆರೆದು ನೋಡಿದನು. ಬಹು ಆನಂದದಿಂದ ಆ ದೇವತೆಯ ಪಾದಗಳಿಗೆರಗಿದನು.

ದೇವಿಯು ನಿಟ್ಟುಸಿರುಬಿಟ್ಟು—“ವತ್ಸ, ಏನು ಮಾಡಲಿ ? ದೈವವು ನಿನಗೆ ಅನುಕೂಲವಾಗಿಲ್ಲ. ನೀನು ಕಡೆತನಕ ದಾರಿದ್ರ್ಯದಲ್ಲಿಯೇ ಕಾಲಕಳೆಯ ಬೇಕೆಂದು ಅದೃಷ್ಟದ ನಿಯಮವಿರುವುದು. ಆದ್ದರಿಂದ ಸಾಕ್ಷಾಲ್ಲಕ್ಷ್ಮಿಯಾದ ನಾನು ನಿನಗೆ ಧನವನ್ನು ದಯಪಾಲಿಸಲಸಮರ್ಥಳಾಗಿದ್ದೇನೆ! ಉಪಾಯ ವಿಲ್ಲ. ಮನೆಗೆ ಹೋಗು. ಇದ್ದುದರಲ್ಲಿಯೇ ಸಮಾಧಾನದಿಂದ ಯೋಗ ಕ್ಷೇಮವನ್ನು ಸಾಗಿಸು,” ಎಂದು ಹೇಳಿ ಅಂತರ್ಧಾನಳಾದಳು. ಮಾಧ ವನು ಕಣ್ಣು ಒರಿಸಿಕೊಂಡನು. ಆ ದಿವ್ಯ ತೇಜಸ್ಸು ಹೊರಟು ಹೋಗಿತ್ತು. ದೇವಾಲಯವು ಮೊದಲಿನಂತೆ ಅಂಧಃಕಾರದಿಂದ ತುಂಬಿಹೋಗಿತ್ತು. ಮಾಧವನಿಗೆ ಬಹಳ ಸಿಟ್ಟು ಬಂತು. ಅವನು—“ಎಲೌ ಲಕ್ಷ್ಮಿಯೇ, ನಾನು ಯಾರಿಗೂ ಬಾಯಿ ತೆರೆದವನಲ್ಲ! ಇಂದು ಅನಿವಾರ್ಹದಿಂದ ನಿನ್ನ ಬಳಿಗೆ ಬಂದಿದ್ದೆನು. ನಿನ್ನನ್ನೇ ನಂಬಿದ ನನಗೆ ಹೀಗೆ ಹೇಳಿದೆಯಾ ? ಒಳ್ಳೇದು! ನಾನಿದನ್ನು ನಿನಗೆ ಹಂಗಿಸದಿರೆನು!!” ಎಂದು ಅಂದುಕೊಂಡು ರಭಸದಿಂದ

ಗುಡಿಯಿಂದ ಹೊರಬಿದ್ದನು. ಮನೆಗೆ ಹೋಗಲಿಲ್ಲ. ಹಾಗೆಯೇ ಅರಣ್ಯದ ದಾರಿಯನ್ನು ಹಿಡಿದನು.

ಗುಡಿಯಿಂದ ಹೊರಬಿದ್ದ ಮಾಧವಾಚಾರ್ಯನು ಹಂಪಿಯ ಬಳಿಗೆ ಬಂದನು. ಹಂಪಿಯು ದಕ್ಷಿಣಕಾಶಿಯೆಂದು ಹೆಸರಾಗಿರುತ್ತದಷ್ಟೇ. ತನ್ನ ಸುತ್ತಲಿರುವ ಗುಡ್ಡಗಳ ಸಾಲನ್ನೂ, ತುಂಗಭದ್ರೆಯ ಹರವಾದ ಪ್ರವಾಹವನ್ನೂ ನೋಡಿ, ಮಾಧವನು ಸಂತುಷ್ಟನಾದನು. ತನ್ನ ತಪಶ್ಚರ್ಯಕ್ಕೆ ಇದು ಒಳ್ಳೆಯ ಸ್ಥಳವೆಂದು ಭಾವಿಸಿದನು, ನಿರ್ಜನವಾದ ಪ್ರದೇಶದಲ್ಲಿರುವದೊಂದು ಗುಹೆಯನ್ನಾಶ್ರಯಿಸಿ, ಏಕಾಂತವಾಸದಲ್ಲಿದ್ದುಕೊಂಡು, ಕಂದ ಮೂಲಗಳನ್ನು ಸೇವಿಸಿ, ಕೆಲಕಾಲ ಉಗ್ರತಪಸ್ಸನ್ನಾಚರಿಸಿ ಸಿದ್ಧಿಯನ್ನು ಪಡೆದನು.

ಮಾಧವನು ಎಂದಿನಂತೆ ಒಂದು ದಿವಸ ಸಮಾಧಿಸ್ಥನಾಗಿ ಕುಳಿತಿದ್ದನು. ತ್ರಿಶೂಲಧಾರಿಯೂ ಜಟಾಧರನೂ ಪನ್ನಗ ಭೂಷಣನೂ ಆದ ಸಾಕ್ಷಾತ್ ಶಂಕರನು ಎದುರಿನಲ್ಲಿ ಬಂದು ನಿಂತುಕೊಂಡು—"ತಾಪಸಶ್ರೇಷ್ಠನೇ, ನಾನು ಸೃಷ್ಟಿ-ಸ್ಥಿತಿ-ಲಯಕರ್ತನಾದ ಪರಮೇಶ್ವರನು. ಸಮೀಪದಲ್ಲಿಯೇ ವಿರೂಪಾಕ್ಷನೆಂಬ ಹೆಸರಿನಿಂದ ನೆಲಿಸಿದ್ದೇನೆ. ನೀನಾದರೂ ನನ್ನ ಅಂಶವೇ. ನನ್ನ ದೃಶ್ಯಸ್ವರೂಪನಾಗಿ ನೀನು ಹುಟ್ಟಿರುವೆ. ಕನ್ನಡಿಗರ ಕಲ್ಯಾಣಕ್ಕಾಗಿಯೂ, ಹಿಂದೂ ಧರ್ಮದ ಉದ್ಧಾರಕ್ಕಾಗಿಯೂ ನೀನೊಂದು ಕೆಲಸ ಮಾಡಬೇಕಾಗಿದೆ. ಏಳು, ಸನಾತನ ಹಿಂದೂ ಧರ್ಮದ ರಕ್ಷಣೆಗಾಗಿ ಸಿದ್ಧನಾಗು. ಯವನರು ಭಾರತೀಯರನ್ನು ಪೀಡಿಸುತ್ತಲಿದ್ದಾರೆ. ದೇವ ಮಂದಿರಗಳನ್ನು ಕೆಡಹುತ್ತಿದ್ದಾರೆ. ಮೂರ್ತಿಗಳನ್ನು ಒಡೆಯುತ್ತಿದ್ದಾರೆ. ಗೋಮಾತೆಯನ್ನು ಹಿಂಸಿಸುತ್ತಿದ್ದಾರೆ. ಹೀಗೆಯೇ ಬಹು ಕಾಲ ನಡೆದರೆ ವೇದಧರ್ಮವು ನಿರ್ನಾಮವಾಗಿ ಹೋಗುವದು. ನಾನು ಹೀಗಾಗಗೊಡಲಾರೆನು. ಧರ್ಮದ ಅವನತಿಯೂ ಅಧರ್ಮದ ಪ್ರವೃತ್ತಿಯೂ ಹೆಚ್ಚುತ್ತ ನಡೆದ ಕಾಲದಲ್ಲಿ ಧರ್ಮವನ್ನು ಸಂಸ್ಥಾಪಿಸುವುದಕ್ಕಾಗಿಯೂ, ಅಧರ್ಮವನ್ನು ಸಮೂಲವಾಗಿ ನಾಶಕೊಳ್ಳಿಸುವುದಕ್ಕಾಗಿಯೂ ಅವತರಿಸುವೆನೆಂದು ನನ್ನ ಪ್ರಿಯ ಭಕ್ತರಾದ ಭಾರತೀಯರಿಗೆ ಅಭಿವಚನವನ್ನು ಕೊಟ್ಟಿದ್ದೇನೆ.

ಈಗ ಆ ಕಾಲವು ಬಂದಿದೆ. ಈ ಸಂಧಿಕಾಲದಲ್ಲಿ ಭಾರತೀಯರನ್ನುದ್ಧರಿಸುವುದಕ್ಕಾಗಿ ನೀನು ಜನ್ಮವೆತ್ತಿರುವೆ. ನೀನು ಅಧ್ಯಾತ್ಮನಿರತನೆಂದು ಹೆಸರು ಪಡೆಯುವುದಕ್ಕೆ ಮಾತ್ರ ಈ ಭೂಮಿಯಲ್ಲಿ ಅವತರಿಸಿಲ್ಲ; **ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ**ನೆಂಬ ಗೌರವದ ಹೆಸರನ್ನು ಹೊಂದಿ, ಇತಿಹಾಸದಲ್ಲಿಯೂ, ಕನ್ನಡಿಗರ ಸ್ಮೃತಿಪಥದಲ್ಲಿಯೂ ಅಮರನಾಗಿ ಉಳಿಯಬೇಕೆಂದು ಜನಿಸಿರುವೆಂಬುದನ್ನು ಮರೆಯದಿರು. ಇದಕ್ಕಾಗಿ ನೀನು ಒಂದು ಪ್ರಬಲವಾದ ಭಾರತೀಯ ರಾಜ್ಯವನ್ನು ಸ್ಥಾಪಿಸಿ, ಮುಸಲ್ಮಾನರ ಪಾರುಪತ್ಯ ಮಾಡಬೇಕಾಗಿದೆ. ವಿರಕ್ತನಾದ ನೀನು ಜನಸಂಹಾರದ ಯುದ್ಧಕಾರ್ಯವನ್ನು ಕೈಕೊಳ್ಳುವುದೂ, ಕುಟಿಲವಾದ ರಾಜನೀತಿಯನ್ನನುಸರಿಸುವುದೂ ಉಚಿತವಾದ್ದಲ್ಲ. ಕಾರಣ ನೀನು ಈ ಕೆಲಸವನ್ನು ಇತರರಿಂದ ಮಾಡಿಸಬೇಕಾಗಿದೆ. ಅದಕ್ಕಾಗಿ ಯೋಗ್ಯ ಶಿಷ್ಯರನ್ನು ಸಂಪಾದಿಸು. ಅವರಿಂದ ಈ ಕೆಲಸವನ್ನು ಮಾಡಿಸು. ನಾಳೆ ರಾಜಧಾನಿಯಲ್ಲಿ ಅಡ್ಡಾಡು. ಅಲ್ಲಿ ತೇಜಸ್ವಿಗಳಾದ ಇಬ್ಬರು ಬಾಲಕರು ನಿನ್ನ ಕಣ್ಣಿಗೆ ಬೀಳುವರು. ಅವರನ್ನು ಕರೆದುಕೊಂಡು ಬಂದು, ಈ ಪುಣ್ಯಭೂಮಿಯಲ್ಲಿರಿಸಿ, ಸಂರಕ್ಷಿಸು. ಅವರು ಸಕಲವಿದ್ಯಾಸಂಪನ್ನರಾಗುವಂತೆ ಮಾಡು. ಮುಂದೆ ನೀನು ಸೂತ್ರಧಾರನಂತಿದ್ದು, ಅವರಿಂದ ರಾಜ್ಯಸ್ಥಾಪನೆಯ ಕೆಲಸವನ್ನು ಮಾಡಿಸಿ, ಕೀರ್ತಿಯನ್ನು ಹೊಂದು," ಎಂದು ಹೇಳಿದಂತಾಯಿತು.

ಮಾಧವನು ಕಣ್ಣುತೆರೆದು ನೋಡಿದನು. ಎದುರಿನಲ್ಲಿ ಯಾರೂ ಇದ್ದಿಲ್ಲ. ಸಾಕ್ಷಾತ್ ವಿರೂಪಾಕ್ಷನು ಅಂತರ್ಧಾನನಾಗಿ ಹೋಗಿದ್ದನು. ಮಾಧವನು ಯೋಚಿಸ ತೊಡಗಿದನು—"ಪರಮಾತ್ಮನ ದರ್ಶನದಿಂದ ಇಂದು ನಾನು ಧನ್ಯನಾದೆನು. ಇನ್ನು ಮುಂದೆ ನಾನು ಅವನು ಹೇಳಿದ ಕೆಲಸದಲ್ಲಿ ತೊಡಗ ಬೇಕು. ಇದುವರೆಗೆ ಕೇವಲ ಆತ್ಮವಿಚಾರದಲ್ಲಿ ಮಗ್ನನಾಗಿದ್ದೆನು. ಬಾಹ್ಯಸೃಷ್ಟಿಯ ವಿಚಾರವೇ ನನ್ನ ಮನಸ್ಸಿನಲ್ಲಿ ಬಂದಿದ್ದಿಲ್ಲ. ನನ್ನ ಈ ತಪ್ಪನ್ನು ತೋರಿಸಿಕೊಡುವುದಕ್ಕೋಸ್ಕರವೇ ಪರಮೇಶ್ವರನು ಇಂದು ದರ್ಶನಕೊಟ್ಟನು. ಬಾಹ್ಯಸೃಷ್ಟಿಯು ಶಾಂತವಿದ್ದ ಹೊರತು ನಮ್ಮಂಥವರಲ್ಲಿ ಅಂತಸ್ಥ ಶಾಂತತೆಯು ನೆಲೆಗೊಳ್ಳಲಾರದು. ಆದಕ್ಕೋಸ್ಕರ ನಾನಿನ್ನು ವಿರೂಪಾಕ್ಷನ ಅಪ್ಪಣೆಯಂತೆ ಲೋಕಸೇವೆಗೆ ಸಿದ್ಧನಾಗುವೆನು."

ಅಧ್ಯಾತ್ಮೈಶ್ವರ್ಯವುಳ್ಳವನೂ ತೇಜಸ್ವಿಯೂ ಆದ ಮಾಧವನಿಗೆ ತನ್ನ ವಿಚಾರವನ್ನು ಕಾರ್ಯದಲ್ಲಿ ತರುವುದಕ್ಕೆ ಹೆಚ್ಚು ಕಾಲವು ಬೇಕಾಗಲಿಲ್ಲ. ಅವನು ಮರುದಿವಸವೇ ರಾಜಧಾನಿಗೆ ಹೋದನು. ಪ್ರತಿಭಾಶಾಲಿಯಾದ ಇವನನ್ನು ಬಹು ಜನರು ಸತ್ಕರಿಸಿದರು. ಮಾಧವನು ನೆಟ್ಟಗೆ ಅರಮನೆಗೆ ಹೋಗಿ, ಅರಸನ ದರ್ಶನವನ್ನು ತೆಗೆದುಕೊಂಡನು. ವೃದ್ಧ ಮಹಾ ರಾಜನು ಈ ತೇಜಸ್ವಿಯನ್ನು ಆದರದಿಂದ ಬರಮಾಡಿಕೊಂಡು, ಸಾಷ್ಟಾಂಗ ನಮಸ್ಕಾರ ಮಾಡಿದನು. ಮಾಧವನು ಅವನನ್ನು ಹರಸಿದನು. ಸಂತ ದರ್ಶನದಿಂದ ಸಂತುಷ್ಟನಾದ ಮಹಾರಾಜನು ಮಾಧವನಿಗೆ ಕೆಲವು ದಿವಸ ಅರಮನೆಯಲ್ಲಿರುವಂತೆ ಬಿನ್ನವಿಸಿದನು. ಆದರೆ ಮಾಧವನು ಅರಮನೆ ಯಲ್ಲಿ ಒಂದು ದಿವಸ ಕೂಡ ಇರಲಿಕ್ಕೆ ಒಡಂಬಡಲಿಲ್ಲ. ತಾನು ಸಮೀಪ ದಲ್ಲಿಯೇ ವಾಸಿಸುತ್ತಿರುವೆನೆಂದೂ, ಆಗಿಂದಾಗ ದರ್ಶನ ಕೊಡುವೆನೆಂದೂ ಹೇಳಿ, ಅರಸನ ಅಪ್ಪಣೆತೆಗೆದುಕೊಂಡು ಹೊರಟನು. ಬರುವಾಗ ಮಾರ್ಗ ದಲ್ಲಿ ಎರಡು ಹುಡುಗರು ಅವನ ಕಣ್ಣಿಗೆ ಬಿದ್ದರು. ಆ ಅನಾಥರಾದ ಹುಡುಗರನ್ನು ಒಬ್ಬ ಬಡ ಮುದುಕೆಯು ದಯಾಪರವಶಳಾಗಿ ಜೋಪಾನ ಮಾಡುತ್ತಿದ್ದಳು. ಮಾಧವನು ಆ ಮುದುಕೆಯನ್ನೊಡಂಬಡಿಸಿ, ಅವಳನ್ನೂ ಆ ಹುಡುಗರನ್ನೂ ಕರಕೊಂಡು, ತನ್ನ ಗುಹೆಗೆ ಬಂದನು. ಗವಿಯ ಬಾಗಿಲಿನಲ್ಲೊಂದು ಆಕಳು ನಿಂತಿತ್ತು. ಮಾಧವನು ಸಂತುಷ್ಟನಾಗಿ, ಆ ಗೋವಿನ ಹಾಲಿನಿಂದ ಆ ಹುಡುಗರ ಸಂರಕ್ಷಣೆ ಮಾಡ ತೊಡಗಿದನು. ಮುದುಕೆಯು ಒಂದೆರಡು ದಿವಸ ಆ ಗುಹೆಯಲ್ಲಿದ್ದು, ತಿರುಗಿ ತನ್ನ ಮನೆಗೆ ಬಂದಳು. ಮಾಧವನು ಅವಳಿಂದ ಆ ಹುಡುಗರ ಜನ್ಮವೃತ್ತಾಂತವನ್ನು ತಿಳಿದುಕೊಂಡನು. ಆ ಮುದುಕೆಯು ಹುಡುಗರನ್ನು ನೋಡುವುದಕ್ಕೆ ಆಗಿಂ ದಾಗ ಮಾಧವಾಚಾರ್ಯನ ಬಳಿಗೆ ಬರುತ್ತಿದ್ದಳು. ಇವಳಿಂದ ಮಾಧವನಿಗೆ ಹುಡುಗರ ಸಂರಕ್ಷಣೆಯ ಕೆಲಸಕ್ಕೆ ಬಹಳ ಸಹಾಯವಾಗುತ್ತಿತ್ತು. ಒಂದೆ ರಡು ವರುಷಗಳಲ್ಲಿ ಈ ಮುದುಕೆಯು ಸತ್ತುದರಿಂದ ಬಾಲಕರ ಸಂರಕ್ಷ ಣೆಯ ಯಾವತ್ತು ಭಾರವು ಮಾಧವಾಚಾರ್ಯನ ಮೇಲೆಯೇ ಬಿತ್ತು.

ಮಾಧವನು ಆ ಹುಡುಗರನ್ನು ಹದಿನೈದು ವರುಷಗಳ ವರೆಗೆ ತನ್ನ ಬಳಿಯಲ್ಲಿಟ್ಟುಕೊಂಡನು. ಸಾಧ್ಯವಿದ್ದಷ್ಟು ವಿದ್ಯೆಗಳನ್ನು ಕಲಿಸಿದನು.

ತರುವಾಯ ಅವನು ತನ್ನ ಈ ಶಿಷ್ಯರನ್ನು ರಾಜಕಾರಣ-ಜ್ಞಾನಸಂಪಾದನೆ ಗೋಸ್ಕರ **ವರಂಗಲ**ದಲ್ಲಿರಿಸಿ ಬಂದನು. **ವರಂಗಲದ** ಪ್ರತಾಪರುದ್ರದೇವನ ಆಶ್ರಯದಲ್ಲಿ ಮಾಧವನ ಶಿಷ್ಯರು ಒಂದೆರಡು ವರುಷ ಇದ್ದರು. ವರಂಗಲವು ಮುಸಲ್ಮಾನರ ತುತ್ತಿಗೆ ಆಹುತಿಯಾಯಿತು. ಮಾಧವನ ಶಿಷ್ಯರು ಮತ್ತೆ ತಿರುಗಿ ಮಾಧವನ ಬಳಿಗೆ ಬಂದರು. ಮಾಧವಾಚಾರ್ಯನು ಅವರನ್ನು ಕೆಲವು ದಿವಸ ತನ್ನ ಬಳಿಯಲ್ಲಿಟ್ಟುಕೊಂಡನು. ತರುವಾಯ ಅವನು ಹಿರಿಯವನಾದ ಹರಿಹರನನ್ನು **ಆನೆಗುಂದಿಯ** ಅರಸನ ಮನೆಯಲ್ಲಿರಿಸಿದನು. ಚಿಕ್ಕವನಾದ ಬುಕ್ಕನು ಆಚಾರ್ಯನ ಬಳಿಯಲ್ಲಿಯೇ ನಿಂತನು.

ಈ ಸಮಯದಲ್ಲಿ ಮಾಧವನಿಗೆ ಮತ್ತೆ ಲಕ್ಷ್ಮಿಯ ದರ್ಶನವಾಯಿತು. ನಾವು ಈ ಸಂಗತಿಯನ್ನು ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಿದ್ದೇವೆ.

## ಮೂರನೆಯ ಅಧ್ಯಾಯ

### ಗುರು-ಶಿಷ್ಯರು

ಮಾಧವಾಚಾರ್ಯರು ಪ್ರಾತರ್ವಿಧಿಯನ್ನು ತೀರಿಸಿಕೊಂಡು ಒಳಗೆ ಹೋಗಿ, ತಮ್ಮ ಆಸನದ ಮೇಲೆ ಕುಳಿತುಕೊಂಡರು. ಉಚ್ಚಸ್ವರದಿಂದ ಪ್ರಾತಃಸ್ಮರಣೆಯನ್ನಾರಂಭಿಸಿದರು. ಆ ಉಚ್ಚಸ್ವರದ ಮಂತ್ರಘೋಷವು ಗುಹೆಯಲ್ಲಿ ಪ್ರತಿಧ್ವನಿಸತೊಡಗಿತು. ಸಮೀಪದಲ್ಲಿ ಮಲಗಿದ್ದ ಶಿಷ್ಯನು ಎಚ್ಚತ್ತನು. ಕೈಮುಗಿದುಕೊಂಡು ಕುಳಿತು, ಭಕ್ತಿಭಾವದಿಂದ ಆಚಾರ್ಯರ ಮಂತ್ರಘೋಷವನ್ನು ಕೇಳಲಾರಂಭಿಸಿದನು. ಆಚಾರ್ಯರ ಮಂತ್ರಪಠನೆಯು ಮುಗಿಯಿತು. ಶಿಷ್ಯನು ಸ್ನಾನದ ಸಿದ್ಧತೆ ಮಾಡಿಟ್ಟು, ಆಚಾರ್ಯರ ಬಳಿಯಲ್ಲಿ ಬಂದು ನಿಂತನು. ಆಚಾರ್ಯರು ಸ್ನಾನಕ್ಕೆ ಹೊರಡಲು ಸಿದ್ಧರಾದರು. ಇಬ್ಬರೂ ಹೊರಗೆ ಬಂದರು. ಅರುಣೋದಯಕ್ಕೆ ತುಸು ಅವಕಾಶವಿತ್ತು. ಅರಣ್ಯವು ನಿಶ್ಶಬ್ದವಾಗಿತ್ತು. ಪ್ರಭಾತಸಮಯದ ಉತ್ಸಾಹಪ್ರದವಾದ ತಂಗಾಳಿಯು ಮೆಲ್ಲನೆ ಬೀಸುತಲಿತ್ತು.

ಆಚಾರ್ಯರಿಗೆ ಸುಮಾರು ಅರವತ್ತು ವರುಷಗಳಾಗಿರಬಹುದು; ಆದರೆ ವೃದ್ಧಾಪ್ಯವು ಇನ್ನೂ ಅವರನ್ನಾವರಿಸಲು ಸಮರ್ಥವಾಗಿದ್ದಿಲ್ಲ. ನೋಡುವವರಿಗೆ ಅವರು ಮೂವತ್ತು-ಮೂವತ್ತೈದು ವರುಷದ ತರುಣರಂತೆ ಕಾಣಿಸುತ್ತಿದ್ದರು. ಬ್ರಹ್ಮತೇಜಸ್ಸಿನಿಂದೊಡಗೂಡಿದ ಕಾಂತಿಯುಕ್ತವಾದ ಅವರ ಶಾಂತಮೂರ್ತಿಯು ದರ್ಶನ ಮಾತ್ರದಲ್ಲಿ ಭಕ್ತಿಯ ಉದ್ರೇಕವನ್ನುಂಟು ಮಾಡುತಲಿತ್ತು. ಶಿಷ್ಯನಿಗೆ ಸುಮಾರು ಮೂವತ್ತು-ಮೂವತ್ತೆರಡು ವರುಷಗಳಾಗಿದ್ದವು. ಇವನ ಮುಖದಲ್ಲಿ ಕ್ಷಾತ್ರತೇಜಸ್ಸು ಉಕ್ಕುತಲಿತ್ತು. ಸದೃಢಶರೀರವೂ ಆಜಾನುಭಾಹುಗಳೂ ಇವನ ವೀರತ್ವವನ್ನು ಸೂಚಿಸುತಲಿದ್ದವು.

ದ್ರುತಗಮನೆಯಾದ ತುಂಗಭದ್ರೆಯು ಸಮೀಪದಲ್ಲಿಯೇ ಪ್ರವಹಿಸುತಲಿದ್ದಳು. ಗುರುಶಿಷ್ಯರು ನದಿಗೆ ಹೋದರು. ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡರು. ಪುನಃ ಆಶ್ರಮದ ಕಡೆಗೆ ನಡೆದರು.

ಅರುಣೋದಯವಾಯಿತು. ಪೂರ್ವಾಕಾಶವು ಉಜ್ವಲವಾದ ಕೆಂಪು ಪ್ರಕಾಶದಿಂದ ಶೋಭಾಯಮಾನವಾಗಿತ್ತು. ಪಕ್ಷಿಗಳು ಒಂದೊಂದಾಗಿ ಎಚ್ಚತ್ತು, ಮನೋಹರವಾದ ಧ್ವನಿಯಿಂದ ಕೂಗುತ್ತಲಿದ್ದವು. ಬೆಳಗಿನ ಇಂಪಾದ ಗಾಳಿಯು ಸುಳಿದಾಡುತ್ತಿತ್ತು. ಗಿಡದ ಎಲೆಗಳು ಮೆಲ್ಲನೆ ಅಲ್ಲಾಡುತ್ತಿದ್ದವು. ಗಾಳಿಯು ಅರಣ್ಯದಲ್ಲಿರುವ ಅನೇಕ ಸುಗಂಧಪುಷ್ಪಗಳ ಸುವಾಸನೆಯನ್ನು ತಂದು ಗುರುಶಿಷ್ಯರಿಗೆ ಸಮರ್ಪಿಸುತ್ತದೆಯೋ ಏನೋ ಎಂಬಂತೆ ತೋರುತ್ತಿತ್ತು. ಗುರುಶಿಷ್ಯರು ಉಲ್ಲಾಸದಿಂದ ಗುಹೆಯ ಕಡೆಗೆ ಸಾಗಿದ್ದರು.

ಆಚಾರ್ಯರು ಆಶ್ರಮಕ್ಕೆ ಬಂದು, ತಮ್ಮ ಆಸನದ ಮೇಲೆ ಕುಳಿತುಕೊಂಡು ಸಮಾಧಿಸ್ಥರಾದರು. ಶಿಷ್ಯನು ಅವರ ಬಳಿಯಲ್ಲಿ ಕೈಮುಗಿದುಕೊಂಡು ಕುಳಿತನು. ಈ ಸ್ಥಿತಿಯಲ್ಲಿ ಒಂದೆರಡು ತಾಸುಗಳು ಕಳೆದು ಹೋದವು. ಆ ಸಮಯದಲ್ಲಿ ಮತ್ತೊಬ್ಬ ತರುಣನು ಆ ಗುಹೆಯಲ್ಲಿ ಪ್ರವೇಶಿಸಿದನು. ಶಿಷ್ಯನು ಆಗಂತುಕ ತರುಣನಿಗೆ ಕುಳಿತುಕೊಳ್ಳುವಂತೆ ಕೈಸನ್ನೆಯಿಂದ ಸೂಚಿಸಿದನು. ಆಗಂತುಕ ಯುವಕನು ಆಚಾರ್ಯರಿಗೆ

ವಂದಿಸಿ, ಕೂತುಕೊಂಡು ಆಚಾರ್ಯರ ಮುಖಭಾವವನ್ನು ನೋಡತೊಡಗಿದನು. ಆಚಾರ್ಯರ ಎದುರಿಗೆ ಕುಳಿತ ಈ ಇಬ್ಬರು ಸಹೋದರರಾಗಿರುವರೆಂದು ಕೂಡಲೇ ಹೇಳಬಹುದಾಗಿತ್ತು; ಏಕೆಂದರೆ ಇಬ್ಬರ ಮುಖಲಕ್ಷಣವೂ ಒಂದೇಯಾಗಿತ್ತು.

ಆಚಾರ್ಯರು ಸಮಾಧಿಯಿಂದೆಚ್ಚತ್ತರು. ಆಗಂತುಕ ತರುಣನು ಅವರ ಚರಣಕ್ಕೆರಗಿದನು. ಆಚಾರ್ಯರು ಪ್ರೇಮಭರದಿಂದ ಆಶೀರ್ವದಿಸಿ— "ಹರಿಹರ, ನೀನು ಯಾವಾಗ ಬಂದೆ? ರಾಜಧಾನಿಯಲ್ಲಿ ಕ್ಷೇಮವೇ?"

**ಶಿಷ್ಯ**—ಮಹಾರಾಜ ನಾನು ಬಂದು ತುಸು ಹೊತ್ತಾಯಿತು. ರಾಜಧಾನಿಯಲ್ಲಿ ಎಲ್ಲವೂ ಸರಿಯಾಗಿದೆ. ತಮ್ಮ ಕೃಪಾಬಲದಿಂದ ನಾನು ಆನಂದದಿಂದಿದ್ದೇನೆ.

**ಗುರು**—ಇಂದು ನೀನು ಬಂದುದು ಬಹಳ ಒಳಿತಾಯಿತು. ನಾನು ನಿಮ್ಮಿಬ್ಬರಿಗೂ ಕೆಲವು ಮಾತುಗಳನ್ನು ಹೇಳತಕ್ಕದ್ದಿತ್ತು. ಅವನ್ನು ಈಗ ಹೇಳುವೆನು.

**ಹರಿಹರ** (ಕುತೂಹಲದಿಂದ)—ಮಹಾರಾಜ, ಅಪ್ಪಣೆಯಾಗಬೇಕು. ತಮ್ಮ ಅಪ್ಪಣೆಯಂತೆ ನಡೆಯಲು ನಾವಿಬ್ಬರು ಸದಾ ಸಿದ್ಧರಾಗಿದ್ದೇವೆ.

**ಗುರು**—ಪ್ರಿಯ ಶಿಷ್ಯರೆ, ಇನ್ನು ನೀವು ನಿಮ್ಮ ಕರ್ತವ್ಯವನ್ನು ಬಹು ದಕ್ಷತೆಯಿಂದ ಮಾಡಬೇಕಾಗಿದೆ. ಮೊದಲು ನೀವು ಕೆಲವು ಸಂಗತಿಗಳನ್ನರಿತುಕೊಳ್ಳುವುದು ಅವಶ್ಯವಾಗಿದೆ. ನಾನು ಯಾರೆಂಬುದನ್ನು ನೀವು ಬಲ್ಲಿರಾ?

ಶಿಷ್ಯರು ಆಶ್ಚರ್ಯಚಕಿತರಾದರು. ಬಹು ದಿವಸಗಳಲ್ಲಿ ಆಚಾರ್ಯರು ತಮ್ಮ ಚರಿತ್ರೆಯ ವಿಷಯಕ್ಕಾಗಲಿ, ಶಿಷ್ಯರ ಜನ್ಮವೃತ್ತಾಂತದ ಬಗ್ಗೆಯಾಗಲಿ ಮಾತೆತ್ತಿರಲಿಲ್ಲ. ಇಂದು ಆಚಾರ್ಯರು ಸಹಸಾ ಈ ಪ್ರಶ್ನೆ ಮಾಡಿದ್ದನ್ನು ಕೇಳಿ, ಶಿಷ್ಯರು ದಂಗುಬಡೆದು, ಗುರುಗಳ ಮುಖದ ಕಡೆಗೆ ನೋಡಿದರು. ತುಸು ಹೊತ್ತಿನ ಮೇಲೆ,

**ಹರಿಹರನು**—ಗುರುಮಹಾರಾಜ, ನಾವು ತಮ್ಮ ಚರಿತ್ರೆಯನ್ನು ಸಾದ್ಯಂತವಾಗಿ ಅರಿಯೆವು. ನೀವು ಕೇವಲ ಅಧ್ಯಾತ್ಮ ಪ್ರಾಪ್ತಿಗಾಗಿ ಯುಕ್ತಿ

ಸುತ್ತಿರುವ ಮಹಾತ್ಮರಾಗಿರುವಿರೆಂಬುದು ಮಾತ್ರ ನಾವು ಕಣ್ಣಾರೆ ಕಂಡಿದ್ದೇವೆ. ನಾವು ಅನನ್ಯಭಾವದಿಂದ ನಿಮ್ಮನ್ನೇ ನಂಬಿದ್ದೇವೆ. ನಮಗೆ ನೀವೇ ಮಾರ್ಗದರ್ಶಕರು.

ಗುರು — ಪ್ರಿಯ ಶಿಷ್ಯರೇ, ಅದಿರಲಿ. ನನ್ನ ವೃತ್ತಾಂತವು ರಹಸ್ಯಮಯವಾಗಿದೆ. ನಾನೀಗ ಸನ್ಯಾಸಿಯಾಗಿದ್ದರೂ, ಒಂದು ಕಾಲದಲ್ಲಿ ಪ್ರಾಪಂಚಿಕನಾಗಿದ್ದೆನು. ಸಂಸಾರದಲ್ಲಿ ತೊಳಲಿ ಬಳಲಿ, ಬಗೆಬಗೆಯ ತಾಪಕ್ಕೊಳಗಾಗಿ, ಅದಕ್ಕೆ ಹೇಸಿ ಮನೆಮಾರುಗಳನ್ನು ತೊರೆದು, ಅಖಂಡವಾದ ಶಕ್ತಿಯ ಅನುಸಂಧಾನವನ್ನು ಕಯ್ಕೊಂಡು ಕೃತಕೃತ್ಯನಾದೆನು. ಸದ್ಯಕ್ಕೆ ನಾನು ನಿಮ್ಮಿಂದ ಒಂದು ಕೆಲಸವನ್ನು ಮಾಡಿಸಬೇಕಾಗಿದೆ.

ಶಿಷ್ಯರು — ಹೇಳೋಣವಾಗಲಿ.

ಗುರು — ನೀವು ಯಾರೆಂಬದನ್ನು ಬಲ್ಲಿರಾ?

ಶಿಷ್ಯರು — ನಾವು ನಿಮ್ಮ ಕೃಪಾಪಾತ್ರರಾದ ಶಿಷ್ಯರು.

ಗು. — ನಿಮ್ಮ ತಾಯಿ ತಂದೆಗಳಾರೆಂಬುದು ಗೊತ್ತುಂಟೋ?

ಶಿ. — ಮಹಾರಾಜ, ನಾವು ಅರಿಯೆವು. ನಮ್ಮ ಮನಸ್ಸಿನಲ್ಲಿ ಈ ವಿಚಾರವು ಎಷ್ಟೋ ಸಾರಿ ಬಂದಿದೆ. ಆದರೆ ನಿಮ್ಮನ್ನು ಕೇಳುವ ಧೈರ್ಯವು ನಮಗಾಗದ ಮೂಲಕ ಸುಮ್ಮನಿದ್ದೇವೆ.

ಗು. — ಏಕೆ? ನೀವು ನನಗೆ ಇಷ್ಟೊಂದು ಹೆದರುತ್ತಿರುವಿರೇನು?

ಶಿ. — ಮಹಾರಾಜ, ತಂದೆಯಂತಿರುವ ತಮ್ಮ ವಿಷಯದಲ್ಲಿ ಭೀತಿಯನ್ನು ಹೊಂದುವುದೆಂದರೇನು? ಅದು ನಮ್ಮ ಕರ್ತವ್ಯವೇ ಸರಿ. ತಾವು ಮಹಾತ್ಮರು. ದೇವತಾಸ್ವರೂಪರು. ಯಾವ ಸಂಗತಿಯಲ್ಲಿಯೂ ಮುಂದೆ ಹರಿಹಾಯುವುದು ನಮ್ಮಿಂದಾಗುವದಿಲ್ಲ. ತಾವು ಯಾವುದೋ ಒಂದು ಗೂಢ ಉದ್ದೇಶವನ್ನಿಟ್ಟುಕೊಂಡೇ ನಮ್ಮ ಜೀವನಚರಿತ್ರೆಯನ್ನು ಗುಪ್ತವಾಗಿರಿಸಿರುವಿರೆಂಬ ವಿಶ್ವಾಸವು ನಮಗುಂಟು. ಹೀಗಿರಲು ಅದನ್ನು ಹೇಳಿರೆಂದು ಬಾಯಿಬಿಚ್ಚಿ ಕೇಳುವುದು ಸರಿಯಲ್ಲೆಂದು ನಮಗೆ ತೋರಿತು. ಅದಕ್ಕಾಗಿ ನಾವು ಈವರೆಗೆ ಈ ವಿಷಯದಲ್ಲಿ ತಮಗೆ ಯಾವ ಪ್ರಶ್ನೆಯನ್ನೂ ಕೇಳಿಲ್ಲ.

ಗು.—ಪ್ರಿಯ ಶಿಷ್ಯರೇ, ನಿಮ್ಮ ಪೂರ್ವ ಚರಿತ್ರೆಯು ಬಹು ರಹಸ್ಯ ವಾಗಿದೆ. ನೀವು ಯೋಚಿಸಿದಂತೆ ಒಂದು ಗೂಢ ಉದ್ದೇಶವನ್ನಿಟ್ಟುಕೊಂಡೇ ನಾನು ಇದುವರೆಗೆ ಅದನ್ನು ನಿಮ್ಮ ಮುಂದೆ ಬಿಚ್ಚಿ ಹೇಳಿಲ್ಲ. ಈಗಲೂ ಸಂಪೂರ್ಣವಾಗಿ ಹೇಳಲಾರೆನು. ಆದರೂ ಅದನ್ನು ಇಂದು ತುಸು ಮಟ್ಟಿಗೆ ನಿಮಗೆ ತಿಳಿಯಪಡಿಸುವೆನು. ಇದರಲ್ಲಿ ನೀವು ಹೆಚ್ಚಿಗೆ ಮನಸ್ಸು ಹಾಕದಿರುವುದು ಒಳ್ಳೆಯದೇ ಸರಿ.

ಶಿ.—ಮಹಾರಾಜ, ಹಾಗೆಯೇ ಆಗಲಿ. ನಾವು ತಮ್ಮ ಅಪ್ಪಣೆಗೆ ಹೊರತಿಲ್ಲ.

ಗು.—ನೀವು ಕುಲೀನನೂ ಶ್ರೀಮಂತನೂ ಅಧಿಕಾರ ಸಂಪನ್ನನೂ ಆದ ಒಬ್ಬ ಗೃಹಸ್ಥನ ಮಕ್ಕಳು. ಕ್ಷತ್ರಿಯ ವಂಶದಲ್ಲಿ ಹುಟ್ಟಿದವರು. ನಿಮ್ಮ ತಂದೆಗೆ ಇಬ್ಬರು ಹೆಂಡಂದಿರು. ನೀವು ಮೊದಲಿನ ಹೆಂಡತಿಯ ಅವಳಿಜವಳಿ ಮಕ್ಕಳು. ನಿಮ್ಮ ತಂದೆಯು ತನ್ನ ಮೊದಲಿನ ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಅವನಿಗೆ ಬಹು ಕಾಲದ ವರೆಗೆ ಮಕ್ಕಳಾಗಲಿಲ್ಲ. ಕಡೆಯಲ್ಲಿ ನೀವು ಕೆಟ್ಟ ಮುಹೂರ್ತದಲ್ಲಿ ಹುಟ್ಟಿದಿರಿ. ಒಡನೆಯೇ ನಿಮ್ಮ ತಾಯಿಯು ತೀರಿಕೊಂಡಳು. ನಿಮ್ಮ ತಂದೆಯು ಹೆಂಡತಿಯ ಮೇಲಿನ ಮಿತಿಮೀರಿದ ಅಕ್ಕರತೆಯ ಮೂಲಕವಾಗಿ ನಿಮ್ಮ ಹುಟ್ಟೇ ತನ್ನ ಹೆಂಡತಿಯ ಸಾವಿನ ಕಾರಣವೆಂದೆಣಿಸಿ, ನಿಮ್ಮ ಮೇಲೆ ಸಿಟ್ಟಾದನು. ಆ ಭ್ರಾಂತಿಯಿಂದ ಹುಚ್ಚನಂತಾಗಿದ್ದ ನಿಮ್ಮ ತಂದೆಯು ನಿಮ್ಮನ್ನು ಅರಣ್ಯದಲ್ಲಿರಿಸಿಬಿಡುವ ಯೋಚನೆ ಮಾಡಿ ಆಳುಗಳಿಗೆ ಅಪ್ಪಣೆ ಮಾಡಿದನು. ನಿಮ್ಮ ಮನೆಯ ಒಕ್ಕಲಗಿತ್ತಿಯು ಈ ಅಪ್ಪಣೆಯನ್ನು ಕೇಳಿ, ಗದಗದನೆ ನಡಗಿದಳು. ಹಸುಗೂಸಾಗಿರುವ ನಿಮ್ಮನ್ನು ಅಡವಿಯಲ್ಲಿ ಬಿಟ್ಟುಬಿಡುವುದು ಅವಳಿಗೆ ಅಸಹ್ಯವಾಯಿತು. ಅವಳು ದಯಾಪರವಶಳಾಗಿ, ಸೇವಕರನ್ನು ಅಂಗಲಾಚಿ ಬೇಡಿಕೊಂಡು ನಿಮ್ಮನ್ನು ಇಸುಕೊಂಡು ಗೌಪ್ಯವಾಗಿ ತನ್ನ ಮನೆಯಲ್ಲಿರಿಸಿ, ಜೋಪಾನ ಮಾಡಿದಳು. ಮೊದಲಿನ ಹೆಂಡತಿಯನ್ನು ಮರೆಯುವದಕ್ಕೋಸ್ಕರ ನಿಮ್ಮ ತಂದೆಯು ಬೇರೊಂದು ಲಗ್ನ ಮಾಡಿಕೊಂಡನು. ಮುಪ್ಪಿನ ಕಾಲದಲ್ಲಿ ಮಾಡಿಕೊಂಡ ಆ ಎರಡನೆಯ ಮಡದಿಯ

ಹೊಸ ಹೊಸ ಬಯಕೆಗಳನ್ನು ಪೂರೈಸುವ ಕಾರ್ಯದಲ್ಲಿ ಮಗ್ನನಾಗಿ, ತನ್ನ ಮೊದಲಿನ ಹೆಂಡತಿಯನ್ನೂ ನಿಮ್ಮನ್ನೂ ಸಂಪೂರ್ಣವಾಗಿ ಮರೆತುಬಿಟ್ಟನು.

ಆ ಒಕ್ಕಲಗಿತ್ತಿಯು ಕುರುಬರವಳು. ಬಲು ಬಡವಿಯು. ಮನೆಯಲ್ಲಿ ಬೇರೆ ಯಾರೂ ಇದ್ದಿಲ್ಲ. ಆದರೂ ಅವಳು ಸ್ನೇಹಪೂರಿತಳಾಗಿ ನಿಮ್ಮನ್ನು ಎರಡು ಮೂರು ವರುಷ ಜೋಪಾನಮಾಡಿದಳು.

ನಾನು ಈ ಸ್ಥಳದಲ್ಲಿ ಬಹು ಕಾಲದಿಂದ ತಪಸ್ಸು ಮಾಡುತ್ತಿದ್ದೇನೆ. ಒಂದು ದಿನ ನನಗೆ **ಶ್ರೀ ವಿರುಪಾಕ್ಷನು** ಪ್ರತ್ಯಕ್ಷನಾಗಿ, ಕನ್ನಡಿಗರ ಹೊಸ ಸಾಮ್ರಾಜ್ಯವನ್ನು ಸ್ಥಾಪಿಸಲು ಹೇಳಿ, ಅದಕ್ಕೋಸ್ಕರ ನಿಮ್ಮನ್ನು ದೊರಕಿಸಿಕೊಂಡು ಬರುವುದಕ್ಕೆ ಅಪ್ಪಣೆಯನ್ನಿತ್ತನು. ಅದರಂತೆ ನಾನು ಆ ಬಡವಿಯ ಮನೆಗೆ ಹೋಗಿ ನಿಮ್ಮನ್ನು ಬೇಡಿದೆನು. ಅವಳು ತನ್ನ ಕಕ್ಕುಲತೆಯ ಮೂಲಕವಾಗಿ ನಿಮ್ಮನ್ನು ನನಗೆ ಕೊಡಲಿಕ್ಕೆ ಹಿಂದೆಗೆದಳು. ನಾನು ಅವಳಿಗೆ ನಿಮ್ಮ ಭವಿಷ್ಯತ್ ವೈಭವವನ್ನು ವರ್ಣಿಸಿ ಹೇಳಲು, ಅದನ್ನು ಕೇಳಿ ಆನಂದಿತಳಾಗಿ ನಿಮ್ಮನ್ನು ನನಗೆ ಒಪ್ಪಿಸಿಬಿಟ್ಟಳು. ನಾನು ಅವಳೊಡನೆ ನಿಮ್ಮನ್ನು ಕರೆದುಕೊಂಡು ಇಲ್ಲಿಗೆ ಬಂದೆನು. ಅವಳ ಸಾಹಾಯ್ಯದಿಂದ ಕೆಲ ಕಾಲ ನಿಮ್ಮನ್ನು ಸಂರಕ್ಷಿಸಿದೆನು. ಆದರೆ ಆ ಮುದುಕೆಯು ಬಹುಕಾಲ ಬದುಕಲಿಲ್ಲ. ಒಂದೆರಡು ವರುಷಗಳಲ್ಲಿ ತೀರಿಕೊಂಡಳು. ತರುವಾಯ ನಾನೊಬ್ಬನೇ ನಿಮ್ಮ ಸಂರಕ್ಷಣೆಯನ್ನು ಮಾಡಬೇಕಾಯಿತು.

ನಾನು ನಿಮ್ಮನ್ನು ಈ ವರೆಗೆ ಸಾಕಿ ಸಲುಹಿ ಯಾವತ್ತು ವಿದ್ಯೆಗಳನ್ನು ಕಲಿಸಿದೆನು; ರಾಜಕರಣದ ಜ್ಞಾನಸಂಪಾದನೆಗೋಸ್ಕರ ವರಂಗಲದ **ಪ್ರತಾಪರುದ್ರದೇವನ** ಆಶ್ರಯದಲ್ಲಿರಿಸಿದೆನು. ಮುಂದೆ ಆ ಪ್ರತಾಪರುದ್ರನು ಯುದ್ಧಭೂಮಿಯಲ್ಲಿ ಮಡಿದುದರಿಂದ ನೀವು ಮತ್ತೆ ಇಲ್ಲಿಗೆ ಬಂದಿರಿ. ಈ ಎಲ್ಲ ಸಂಗತಿಗಳು ನಿಮಗೆ ಗೊತ್ತಿವೆ."

**ಶಿ.**—ಮಹಾರಾಜ, ತಾವು ನಮ್ಮ ತಾಯಿ-ತಂದೆಗಳ ಹೆಸರನ್ನು ಹೇಳಲಿಲ್ಲ. ನಿಮ್ಮ ಮಾತಿನಿಂದ ನಮ್ಮ ತಂದೆಯು ಜೀವಿಸಿರಬಹುದೆಂದು ತೋರುತ್ತದೆ.

ಗು.—ಪ್ರಿಯ ಶಿಷ್ಯರೆ, ಈ ಬಗ್ಗೆ ನೀವು ಹೆಚ್ಚಿಗೆ ಕೇಳಬೇಡಿರಿ; ಏಕೆಂದರೆ ಅದರಿಂದ ನಿಮಗೆ ಲಾಭವಿಲ್ಲ. ಮುಂದೆ ಈ ಸಂಗತಿಯು ತಿಳಿಯದೇ ಇರದು. ಅಲ್ಲಿಯ ವರೆಗೆ ನೀವು ನಿಮ್ಮ ಕುತೂಹಲವನ್ನು ತಡೆಯಲಿಕ್ಕೆ ಬೇಕು.

ಶಿ.—ಮಹಾರಾಜ, ತಮ್ಮ ಅಪ್ಪಣೆಯು ನಮಗೆ ಶಿರಸಾವಂದ್ಯವು.

ಗು.—ಇನ್ನು ನಾನು ನೀವು ಈಗ ಮಾಡಬೇಕಾಗಿದ್ದ ಕೆಲಸಗಳನ್ನು ಹೇಳುತ್ತೇನೆ, ಕೇಳಿರಿ. ನಾನು ನಿಮ್ಮನ್ನು ಹೊಸ ಭಾರತೀಯ ರಾಜ್ಯವನ್ನು ಸ್ಥಾಪಿಸುವುದಕ್ಕೋಸ್ಕರ ಸಂಗ್ರಹಿಸಿದೆನೆಂದು ಮೇಲೆ ಹೇಳಿದ್ದೇನಷ್ಟೇ. ಯವನರ ಉಪಟಳವು ನಮ್ಮ ನಾಡಿನಲ್ಲಿ ಬಹಳವಾಗಿದೆ. ಅವರ ಧರ್ಮಕ್ಕೂ, ನಮ್ಮ ಸನಾತನ ಆರ್ಯಧರ್ಮಕ್ಕೂ ಹೊಂದಿಕೆಯಿಲ್ಲ. ಅವರ ಆಚಾರವಿಚಾರಗಳು ನಮ್ಮವರ ಆಚಾರವಿಚಾರಗಳೊಡನೆ ಸರಿಹೋಗುವದಿಲ್ಲ. ಇದಲ್ಲದೆ ಅವರು ಗೆಲವಿನಿಂದ ಮದಾಂಧರಾಗಿರುತ್ತಾರೆ. ಆದ್ದರಿಂದ ಸದ್ಯಕ್ಕೆ ಭಾರತೀಯರ ಮತ್ತು ಮುಸಲ್ಮಾನರ ನಡುವೆ ಪ್ರೀತಿಯು ನೆಲೆಗೊಳ್ಳುವಂತಿಲ್ಲ. ನಾವು ಮೂರ್ತಿಪೂಜಕರು. ಅವರು ಮೂರ್ತಿಧ್ವಂಸಕರು. ಧರ್ಮಪ್ರಸಾರಕ್ಕೋಸ್ಕರ ಪರಪೀಡೆಯನ್ನು ಮಾಡುವುದು ನಮಗೆ ಸಮ್ಮತವಿಲ್ಲ; ಅವರು ತಮ್ಮ ಅನುಯಾಯಿಗಳ ಸಂಖ್ಯೆಯನ್ನು ಬೆಳಿಸುವುದಕ್ಕೆ ಅಸಹ್ಯವಾದ ಕೊಲೆಸುಲಿಗೆಗಳನ್ನು ಮಾಡಲು ಮುಂದರಿಸುವರು. ಅವರು ಜಾತ್ಯಾ ಕ್ರೂರ ಸ್ವಭಾವದವರಾಗಿದ್ದಾರೆ. ಅವರ ಪ್ರಾಬಲ್ಯವು ಹೀಗೆಯೇ ಬೆಳೆದರೆ, ವೇದಧರ್ಮವು ಹೇಳ ಹೆಸರಿಲ್ಲದೆ ಹೋಗುವದು; ಭಾರತೀಯರು ನಿರ್ನಾಮರಾಗಬಹುದು. ಹೀಗೆ ಆಗಗೊಡುವುದು ನಮ್ಮಂತಹರಿಗೆ ಸರಿಯಲ್ಲ. ಆದಕ್ಕಾಗಿ ನಾವಿದರ ಪ್ರತೀಕಾರವನ್ನು ಮಾಡಲೇ ಬೇಕಾಗಿದೆ. ಮುಸಲ್ಮಾನರ ಕ್ರೂರಕೃತ್ಯಗಳನ್ನು ನೀವು ಬಲ್ಲಿರಿ! ದಿಲ್ಲಿಯ ಸುಲ್ತಾನನು **ದೇವಗಿರಿಯ** ಅರಸನ ಚರ್ಮ ಸುಲಿಸಿ, ಅವನ ರುಂಡವನ್ನು ರಾಜಧಾನಿಯಲ್ಲಿ ಮೆರಿಸಿದನು!! **ವರಂಗಲದ** ಅರಸನ ಅವಸ್ಥೆ ಏನಾಯಿತೆಂಬುದು ನಿಮಗೆ ಗೊತ್ತುಂಟು. ಅರಸರ ಅವಸ್ಥೆಯೇ ಹೀಗಾಗುತ್ತಿರಲು, ದುರ್ಬಲರಾದ ಪ್ರಜೆಗಳ ಗೋಳು ಕೇಳುವವರಾರು? ಮುಸಲ್ಮಾನರು ಆರ್ಯಾವರ್ತವನ್ನೆಲ್ಲ ಗೊತ್ತಿಗೆಹಚ್ಚಿದರು

(ಹಾಳು ಮಾಡಿದರು). ಈ ದಕ್ಷಿಣ ದೇಶವನ್ನು ಸುಲಿಯ ತೊಡಗಿರುವರು. ಆರ್ಯಾವರ್ತದ ಜನರಿಗಾದ ಹಾಡೇ ನಮಗೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ನಮಗೆ ಈ ತರದ ಶೋಚನೀಯ ಸ್ಥಿತಿಯೊದಗ ಬಾರದೆಂದು **ಶ್ರೀ ವಿರೂಪಾಕ್ಷನ** ಇಚ್ಛೆಯುಂಟು. ಅದಕ್ಕಾಗಿ ನಾನೊಂದು ಪ್ರಬಲವಾದ ಕನ್ನಡಿಗರ ಸಾಮ್ರಾಜ್ಯವನ್ನು ನೆಲೆಗೊಳಿಸಬೇಕಾಗಿದೆ. ಆದರೆ ಸನ್ಯಾಸಿಯಾದ ನಾನು ಈ ಕೆಲಸವನ್ನು ಪ್ರತ್ಯಕ್ಷವಾಗಿ ಮಾಡಲಾರೆನು; ಏಕೆಂದರೆ ಯುದ್ಧಾದಿ ರಾಜಕೀಯ ಕಾರ್ಯಗಳು ನಮ್ಮಂತಹ ವಿರಕ್ತರಿಗೆ ನಿಷಿದ್ಧವಾದವು. ಆದಕಾರಣ ನಾನು ನಿಮ್ಮಿಂದ ಈ ಕೆಲಸ ಮಾಡಿಸಬೇಕೆಂದು ನಿಶ್ಚಯಿಸಿದ್ದೇನೆ.

ನೀವು ಕ್ಷಾತ್ರವಂಶಸಂಭೂತರು. ನನ್ನ ಈ ಪುಣ್ಯಾಶ್ರಮದಲ್ಲಿದ್ದು ಸತ್ಸಮಾಗಮವನ್ನು ಹೊಂದಿದವರು. ಸಕಲ ವಿದ್ಯೆಗಳನ್ನು ಅಭ್ಯಾಸಿಸಿದವರು. ಆದಕಾರಣ ನೀವು ಈ ಕೆಲಸಕ್ಕೆ ತಕ್ಕವರಾಗಿರುವಿರಿ. ಆದುದರಿಂದ ಸಿದ್ಧರಾಗಿರಿ. ಕೆಲಸಕ್ಕೆ ಕಯ್ಗುಚ್ಚಿರಿ. ನಾನು ಹೇಳಿದಂತೆ ಮಾಡಿ, ಗೌರವವನ್ನು ಹೊಂದಿರಿ.

ಸದ್ಯಕ್ಕೆ ಕನ್ನಡಿಗರ ಭಾಗ್ಯಾಕಾಶವು ಘೋರದುರ್ದೈವವೆಂಬ ಕಾರ್ಮೋಡದಿಂದ ವ್ಯಾಪ್ತವಾಗಿದೆ. ಅದು ಭಯಂಕರ ವೃಷ್ಟಿಯನ್ನು ಸುರಿಸತಕ್ಕದ್ದೆ! ಅದರಲ್ಲಿ ಸಿಕ್ಕ ಕನ್ನಡಿಗರು ತಲ್ಲಣಗೊಳ್ಳಲೇ ಬೇಕು! ಅದನ್ನು ತಡೆಯುವುದು ಯಾರಿಂದಲೂ ಆಗದು; ಇದಲ್ಲದೆ ಪ್ರತೀಕಾರ ಮಾಡುವುದು ಉಪಯುಕ್ತವಾದ ಮಾರ್ಗವೂ ಅಲ್ಲ. ದೊಡ್ಡ ಮಳೆಯ ತರುವಾಯ ಆಕಾಶವು ಸ್ವಚ್ಛವಾಗುವಂತೆ ಕನ್ನಡಿಗರ ಹೃದಯವು ಈ ದುರ್ದೈವವೃಷ್ಟಿಯಿಂದ ಸ್ವಚ್ಛವಾಗಿ ತೊಳೆದು ನಿರ್ಮಲವಾಗುವದು. ಅವರಿಗೆ ತಮ್ಮ ನಿಜಸ್ಥಿತಿಯ ಅರಿವು ಹುಟ್ಟಿ ಸ್ವಾರ್ಥತ್ಯಾಗಿಗಳೂ ದೂರದೃಷ್ಟಿಯುಳ್ಳವರೂ ಸ್ವಾತಂತ್ರ್ಯಪ್ರಿಯರೂ ಆಗಿ ನಿಮಗೆ ನೆರವಾಗಲು ಮುಂದುವರಿಯುವ ಈ ಸಂದರ್ಭದಲ್ಲಿ ನೀವು ಅವರ ನಾಯಕರಾಗಿ, ಹೊಸ ರಾಜ್ಯವನ್ನು ಸ್ಥಾಪಿಸಿ, ಕನ್ನಡಿಗರ ಭಾಗ್ಯಾಕಾಶವನ್ನು ತೇಜಸ್ವಿಯಾಗಿ ಮಾಡುವಿರಿ. ಬಹುಕಾಲ ರಾಜ್ಯವಾಳಿ, ಕೀರ್ತಿಶಾಲಿಗಳಾಗಿ ಅಮರರಾಗುವಿರಿ. ಇದು ನಿಮಗೆ ಇಷ್ಟವಾದುವಲ್ಲವೇ ?

ಶಿ. — ಮಹಾರಾಜ, ನಾವು ಮಾತಾಡಲಸಮರ್ಥರಾಗಿರುವೆವು. ತಾವು ಹೇಳಿದಂತೆ ಕೇಳುವುದು ನಮ್ಮ ಕರ್ತವ್ಯವು. ಅದಕ್ಕೋಸ್ಕರ ನಾವು ಆತ್ಮಯಜ್ಞವನ್ನು ಮಾಡಲಿಕ್ಕಾದರೂ ಹಿಂದೆಮುಂದೆ ನೋಡಲಾರೆವು. ತಮ್ಮ ಅಪ್ಪಣೆಯೇ ನಮ್ಮ ಗುರುಮಂತ್ರ.

ಗು. — ಪ್ರಿಯ ಶಿಷ್ಯರೆ, ಹಾಗಾದರೆ ಕೇಳಿರಿ. ನೀವು ಮುಂದೆ ಮಾಡ ತಕ್ಕ ಕಾರ್ಯಗಳಿಗೆ ಈಗಲೇ ಎದೆಗೊಟ್ಟು ನಿಲ್ಲಬೇಕಾಗಿದೆ. ಕನ್ನಡಿಗರ ರಾಜ್ಯಗಳು ದೊಡ್ಡವಿಲ್ಲ. ಇರತಕ್ಕ ಅರಸರಲ್ಲಿ ಒಕ್ಕಟ್ಟಿಲ್ಲ. ಕನ್ನಡಿಗರಲ್ಲಿ ಸ್ವಾತಂತ್ರ್ಯದ ನಿಜಕಲ್ಪನೆಯಿಲ್ಲ. ಈ ಸ್ಥಿತಿಯಲ್ಲಿ ರಾಜ್ಯ ಸ್ಥಾಪನೆಯ ಕೆಲ ಸವು ಬಲು ಬಿಕ್ಕಟ್ಟಾದುದು. ನೀವು ನಾಳಿನಿಂದಲೇ ಈ ಉದ್ಯೋಗಕ್ಕೆ ಹತ್ತಬೇಕು. ಅದಕ್ಕಾಗಿ, ಹರಿಹರ, ನೀನು ಆನೆಗುಂದಿಯಲ್ಲಿರುವಿಯಷ್ಟೇ? ಅಲ್ಲಿಯ ಸೈನಿಕರ ಪ್ರೀತಿಯನ್ನು ಸಂಪಾದಿಸು. ನೀವಿಬ್ಬರು ದೊಡ್ಡ ದೊಡ್ಡ ಮನುಷ್ಯರೊಡನೆ ಸ್ನೇಹವನ್ನು ಬೆಳಿಸಿ, ಅವರನ್ನು ಅನುಕೂಲರಾಗಿ ಮಾಡಿ ಕೊಳ್ಳಿರಿ. ಕೆಟ್ಟ ಜನರ ವ್ಯವಹಾರದ ಮೇಲೆ ದೃಷ್ಟಿಯನ್ನಿರಿಸಿ, ಕಾರ್ಯ-ಸ್ಥಾನವನ್ನರಿತುಕೊಳ್ಳಿರಿ; ಬೇರೆ ಬೇರೆ ಕಡೆಯಲ್ಲಿ ಅಡ್ಡಾಡಿ, ಜನರಿಗೆ ಸ್ವರಾಜ್ಯದಿಂದಾಗುವ ಲಾಭವನ್ನು ತಿಳಿಸಿರಿ; ಮುಸಲ್ಮಾನರನ್ನೆದುರಿಸುವುದಕ್ಕೆ ಜನ ರನ್ನು ಹುರಿದುಂಬಿಸಿರಿ; ಅವರೊಳಗಿದ್ದ ಅಂತಃಕಲಹವನ್ನು ನಾಶ ಮಾಡು ವುದಕ್ಕೆ ಯತ್ನಿಸಿರಿ. ಜನರಲ್ಲಿ ಸ್ವತಂತ್ರವಿಚಾರಗಳ ಬೀಜವನ್ನು ಊರಿರಿ; ಈ ಕೆಲಸದಲ್ಲಿ ಕೆಲಜನರ ಸಹಾಯವನ್ನು ದೊರಕಿಸಿರಿ. ಅವರೆಲ್ಲರ ಪ್ರಯತ್ನ ದಿಂದ ಕನ್ನಡಿಗರು ಸ್ವಾತಂತ್ರ್ಯ-ಪ್ರಾಪ್ತಿಗಾಗಿ ಜೀವದ ಹಂಗು ದೊರೆಯಲು ಸಿದ್ಧರಾದರೆ ಸಾಕು. **ದ್ವಾರಸಮುದ್ರದ** ರಾಜ್ಯದಲ್ಲಿ ತಥ್ಯವಿಲ್ಲ. ಅದು ಮುಸಲ್ಮಾನರ ಉಪಟಳದಿಂದ ನಾಶವಾಗಿ ಹೋಗಿದೆ. ಆದರೂ ಈ ರಾಜ್ಯದ ವಿಷಯವಾಗಿ ಉಪೇಕ್ಷೆಯನ್ನು ಮಾಡಬೇಡರಿ. ಅಲ್ಲಿಯ ಅರಸನ ಸ್ನೇಹವನ್ನು ಸಂಪಾದಿಸಿರಿ; ಅವನಿಗೆ ಸೈನ್ಯ ಕೂಡಿಸುವುದಕ್ಕೆ ಉತ್ತೇಜನ ಕೊಡಿರಿ; ಅವನ ಬಲವು ನಿಮ್ಮ ಹೊತ್ತಿಗೆ ಉಪಯೋಗಿಸುವಂತೆ ಮಾಡಿ ಕೊಳ್ಳಿರಿ. ಇದರಂತೆಯೇ ಬೇರೆ ಬೇರೆ ಸಂಸ್ಥಾನಿಕರೊಡನೆ ಸ್ನೇಹದ ವರ್ತನವನ್ನಿಟ್ಟು ಅವರು ನಿಮಗನುಕೂಲರಾಗುವಂತೆ ಮಾಡಿಕೊಳ್ಳಿರಿ; ಈ ಕೆಲಸದಲ್ಲಿ ನಿಮಗೆ ಪ್ರತಿಕೂಲತೆಯುಂಟಾದಾಗ ನನಗೆ ಬಂದು ಬೆಟ್ಟಿ

ಯಾಗಿರಿ; ಸಾಧ್ಯವಿರದಿದ್ದರೆ ನನ್ನನ್ನು ಸ್ಮರಿಸಿರಿ; ಈ ನಿಮ್ಮ ಗುರುವು ನಿಮಗೆ ಮಾರ್ಗವನ್ನು ತೋರಿಸಲು ಸದಾ ತತ್ಪರನಾಗಿರುವನು. ಬುಕ್ಕ, ನೀನೂ ಪ್ರವಾಸಕ್ಕೆ ಹೊರಡು. ಸದ್ಯದಲ್ಲಿಯೇ ದಿಲ್ಲಿಯ ಬಾದಶಹನು ಆನೆಗುಂದಿಯ ಮೇಲೆ ಸಾಗಿಬರುವ ಲಕ್ಷಣಗಳು ತೋರುತ್ತಲಿವೆ. ನೀನು ದಿಲ್ಲಿಯಲ್ಲಿ ಗೌಪ್ಯವಾಗಿದ್ದು, ಅಲ್ಲಿಯ ರಹಸ್ಯಗಳನ್ನರಿತುಕೊ. ಅವಶ್ಯ ಕಂಡಾಗ ಅಲ್ಲಿಯ ಸಂಗತಿಗಳನ್ನು ನನಗಾಗಲಿ, ಈ ನಿನ್ನ ಅಣ್ಣನಿಗಾಗಲಿ ತಿಳಿಸುತ್ತಿರು. ಸಂಕಟ ಸಮಯದಲ್ಲಿ ನನ್ನನ್ನು ನೆನೆ. ನಾನು ನಿನಗೊದಗಿದ ವಿಪತ್ತುಗಳನ್ನು ದೂರ ಮಾಡುವೆನು. ಮುಖ್ಯವಾಗಿ ನೀವಿಬ್ಬರೂ ಮುಂದಿನ ರಾಜ್ಯಸ್ಥಾಪನೆಯ ಪೂರ್ವ ಸಿದ್ಧತೆಗೆ ಟೊಂಕ ಕಟ್ಟಬೇಕಾಗಿದೆ. ಇದರಲ್ಲಿ ನನ್ನ ಸಾಹಾಯ್ಯವು ನಿಮಗೆ ಸಂಪೂರ್ಣವಾಗಿರುವದು. ನೀವು ನಿರ್ಭಯರಾಗಿ ಮುಂದೆ ಕಾಲಿಡಿರಿ. ನಿಶ್ಚಯವಾಗಿಯೂ ಯಶಸ್ವಿಗಳಾಗುವಿರಿ.

**ಹರಿಹರ**— ಮಹಾರಾಜ, ತಮ್ಮ ಅಪ್ಪಣೆಯಂತೆ ನಾಳಿನಿಂದಲೇ ಕೆಲಸವನ್ನಾರಂಭಿಸುವೆವು.

**ಗುರು**— ಇನ್ನು ನೀವು ಹೊರಗೆ ಹೋಗಬಹುದು. ಮುಂದಿನ ಕೆಲಸಗಳ ಬಗ್ಗೆ ಆಲೋಚಿಸಿ, ಗೊತ್ತು ಮಾಡಿಕೊಳ್ಳಿರಿ.

ಶಿಷ್ಯರು ಭಕ್ತಿಪೂರ್ವಕವಾಗಿ ಗುರುಗಳ ಚರಣಕ್ಕೆರಗಿದರು. ಆಚಾರ್ಯರು ಪ್ರೇಮಭರದಿಂದ ಅವರನ್ನೆಬ್ಬಿಸಿ, ಮೈಮೇಲೆ ಕೈಯಾಡಿಸಿದರು. ಅಣ್ಣತಮ್ಮಂದಿರು ಹೊರಬಿದ್ದರು. ಆಚಾರ್ಯರು ಪುನಃ ಸಮಾಧಿಸ್ಥರಾದರು.

# ನಾಲ್ಕನೆಯ ಅಧ್ಯಾಯ

## ಕರ್ನಾಟಕದ ಪರಿಸ್ಥಿತಿಯು

ಸುವರ್ಣ ಭೂಮಿಯಾದ ಭಾರತವು, ತನ್ನಲ್ಲಿರುವ ಅಗಣಿತ ಸಂಪತ್ತಿನಿಂದ ದಿಗ್ವಿಜಯಿಗಳಾದ ಬಹು ವೀರರ ಲೋಲುಪದೃಷ್ಟಿಯನ್ನಾಕರ್ಷಿಸಿದೆ. ಜಗತ್ತಿನ ಬೇರೆ ಬೇರೆ ಜನಾಂಗದ ಅನೇಕ ಧೀರರು ದೈವಪರೀಕ್ಷೆಗಾಗಿ ಈ ದೇಶಕ್ಕೆ ಬಂದಿದ್ದಾರೆ. ಇವರಲ್ಲಿ ಹಲವರು ಬಹುಕಾಲ ಈ ದೇಶದಲ್ಲಿ ವಾಸಿಸಿ, ಆರ್ಯರ ಸಂಸ್ಕೃತಿಯನ್ನು ಹೊಂದಿ, ಹಿಂದುಗಳಾಗಿ ನಮ್ಮಲ್ಲಿ ಕಲಿತು ಹೋಗಿದ್ದಾರೆ. ಬೇರೆ ಕೆಲವರು ವಿಜಯವನ್ನೂ ಧನವನ್ನೂ ಸಂಪಾದಿಸಿ, ತಮ್ಮ ದೇಶಕ್ಕೆ ತಿರುಗಿ ಹೋಗಿದ್ದಾರೆ. ಮತ್ತೆ ಕೆಲವರು ಭಾರತೀಯರ ಆಚಾರವಿಚಾರಗಳಿಗೆ ಪೂರ್ಣವಾಗಿ ಒಳಗಾಗದೆ, ತಮ್ಮ ಮತವನ್ನು ಕೆಲಮಟ್ಟಿಗೆ ಕಾಯ್ದುಕೊಂಡು, ಈ ದೇಶದಲ್ಲಿ ಬಹುಕಾಲ ರಾಜ್ಯವಾಳಿದ್ದಾರೆ. ಹೀಗೆ ಇಲ್ಲಿ ಉಳಿದವರೇ ಮುಸಲ್ಮಾನರು.

ಈ ಮುಸಲ್ಮಾನರು ವಾಯುವ್ಯದ ಮಾರ್ಗದಿಂದ ನಮ್ಮ ದೇಶಕ್ಕೆ ಬಂದು, ಅನೇಕ ಸಾರಿ ದಾಳಿ ಮಾಡಿದ್ದಾರೆ. ಈ ಮೇರೆಗೆ ನಮ್ಮನ್ನು ಸುಲಿದವರಲ್ಲಿ **ಗಜನಿ ಮಹಮ್ಮದನೇ** ಪ್ರಮುಖನು; ಆದರೆ ರಾಜ್ಯಗಳಿಸುವ ಇಚ್ಛೆಯು ಇವನಿಗಿರಲಿಲ್ಲ; ಆದಕಾರಣ ಇವನು ಅನೇಕ ಸಾರಿ ಈ ದೇಶಕ್ಕೆ ದಂಡೆತ್ತಿ ಬಂದು, ಜಯಶಾಲಿಯಾದರೂ, ರಾಜ್ಯ ಸ್ಥಾಪನೆಯ ವಿಚಾರವನ್ನು ಮಾಡಲಿಲ್ಲ. ದೊರಕಿದ ಅಗಣಿತ ಐಶ್ವರ್ಯದಿಂದ ಸಂತುಷ್ಟನಾಗಿ, ತನ್ನ ದೇಶಕ್ಕೆ ತಿರುಗಿ ಹೋಗಿಬಿಡುತ್ತಿದ್ದನು (೧೦೦೧-೧೧೨೬). ಇವನ ತರುವಾಯ **ಘೋರಿ ಮಹಮ್ಮದನು** ಈ ದೇಶದ ಮೇಲೆ ದೌಡು ಮಾಡಿದನು. ಇವನು ಕೇವಲ ಸುಲಿಗೆಯಿಂದ ತೃಪ್ತನಾಗಲಿಲ್ಲ. ತನ್ನದೊಂದು ರಾಜ್ಯವನ್ನು ನೆಲೆಗೊಳಿಸುವ ಯೋಚನೆ ಮಾಡಿದನು; ಆದರೆ ತಾನೇ ಇಲ್ಲಿ ನಿಂತುಕೊಂಡು ಆಳುವ ಇಚ್ಛೆಯು ಇವನಿಗಿರಲಿಲ್ಲ; ಆ ತರದ ಅನುಕೂಲತೆಯೂ ಇದ್ದಿಲ್ಲ. ಕಾರಣ ಇವನು ದಿಲ್ಲಿಯ ಸುತ್ತುಮುತ್ತಲಿನ

ಕೆಲವು ಪ್ರದೇಶವನ್ನು ತೆಗೆದುಕೊಂಡು, ಮುಸಲ್ಮಾನರ ರಾಜ್ಯವನ್ನು ಸ್ಥಾಪಿಸಿ, ಅದಕ್ಕೆ ತನ್ನೊಬ್ಬ ಗುಲಾಮನನ್ನು ಅರಸನನ್ನಾಗಿ ಮಾಡಿ, ತಾನು ತನ್ನ ದೇಶಕ್ಕೆ ಹೊರಟು ನಡೆದನು; ಆದರೆ ದುರ್ಭಾಗ್ಯನಾದ ಇವನು ಹಾದಿಯಲ್ಲಿಯೇ ಮಡಿದು ಹೋದನು (೧೧೮೬-೧೨೦೬).

ಮಹಮ್ಮದ ಘೋರಿಯ ಗುಲಾಮನ ಹೆಸರು **ಕುತುಬುದ್ದೀನನು.** ಇವನ ತರುವಾಯ ಈ ವಂಶದ ಒಂಬತ್ತು ಮಂದಿ ಅರಸರು ದಿಲ್ಲಿಯಲ್ಲಿ ಆಳಿದರು. ಇವರಿಗೆ ಗುಲಾಮಿ ವಂಶದ ಅರಸರೆಂದು ಹೆಸರು. ದಿಲ್ಲಿಯ ರಾಜ್ಯವು ಸುಮಾರು ಎಂಬತ್ತುನಾಲ್ಕು ವರುಷ ಇವರ ಅಂಕೆಯಲ್ಲಿತ್ತು (೧೨೦೬-೧೨೯೦). ಇವರ ತರುವಾಯ **ಖಿಲಜಿ** ಮನೆತನದ ಅರಸನು ಪಟ್ಟವೇರಿದನು. ಈ ಅರಸನೂ ಮುಸಲ್ಮಾನನೇ. ಈ ವಂಶದಲ್ಲಿ **ಅಲ್ಲಾವುದ್ದೀನ**ನೆಂಬವನು ಬಹುಪರಾಕ್ರಮಿಯೂ, ಕ್ರೂರನೂ ಆಗಿದ್ದನು. ಇವನು ಸುಮಾರು ಇಪ್ಪತ್ತು ವರುಷ ರಾಜ್ಯವಾಳಿದನು (೧೨೯೫-೧೩೧೫). ಈ ಅವಧಿಯಲ್ಲಿ ತನ್ನ ಹಿಂದೂ ಪ್ರಜೆಗಳನ್ನು ಬಹು ಪರಿಯಾಗಿ ಪೀಡಿಸಿದನು. ಇವನ ಆಳಿಕೆಯಲ್ಲಿ ಮುಸಲ್ಮಾನರ ಅಧಿಕಾರವೂ ದಿಲ್ಲಿಯ ರಾಜ್ಯ ವಿಸ್ತಾರವೂ ಬಹಳ ಹೆಚ್ಚಿತು.

ಮುಸಲ್ಮಾನರು ಈ ದೇಶಕ್ಕೆ ಬಂದ ಕಾಲದಲ್ಲಿ, ಭರತಖಂಡವು ಒಬ್ಬ ಅರಸನ ಅಂಕೆಗೊಳಗಾಗಿದ್ದಿಲ್ಲ. ಈ ದೇಶದಲ್ಲಿ ಅನೇಕ ಸಣ್ಣ ಸಣ್ಣ ರಾಜ್ಯಗಳಿದ್ದು, ಅವು ಬೇರೆ ಬೇರೆ ಅರಸರ ಆಧೀನವಾಗಿದ್ದವು. ಈ ಅರಸರಲ್ಲಿ ಒಕ್ಕಟ್ಟಿದ್ದಿಲ್ಲ. ಪ್ರಜೆಗಳು ಅಂತಃಕಲಹದಲ್ಲಿ ತೊಡಗಿದ್ದರು. ಆದಕಾರಣ ಮುಸಲ್ಮಾನರು ಅಲ್ಪಕಾಲದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸುವುದಕ್ಕೆ ಸಮರ್ಥರಾದರು. ಮೊದಲು ಮೊದಲು ಈ ಮುಸಲ್ಮಾನರ ಸಂಖ್ಯೆಯು ಅಲ್ಪವಿದ್ದುದರಿಂದ ಇವರು ಇಡೀ ಭರತಖಂಡವನ್ನು ಆಕ್ರಮಿಸಲು ಸಮರ್ಥರಾಗಲಿಲ್ಲ; ಆದರೆ ಮುಂದೆ ಈ ದೇಶದಲ್ಲಿ ನಮ್ಮ ಜನರನ್ನು ಒತ್ತಾಯದಿಂದ ಕುಲಗೆಡಿಸಿದ್ದರಿಂದ ಇವರ ಸಂಖ್ಯೆಯು ಬೆಳೆಯುತ್ತ ನಡೆದು, ಇವರು ತಮ್ಮ ಕಾಲುಗಳನ್ನು ಹೆಚ್ಚು ಹೆಚ್ಚಾಗಿ ಚಾಚಹತ್ತಿದರು. ಈ ಮೇರೆಗೆ ಇವರು ಸುಮಾರು ಒಂದು ನೂರು ವರುಷಗಳಲ್ಲಿಯೇ ಉತ್ತರ

ಹಿಂದುಸ್ತಾನದ ದೊಡ್ಡ ಭಾಗವನ್ನು ಗೆದ್ದುಕೊಂಡರು. ಬಳಿಕ ದಕ್ಷಿಣ ಹಿಂದುಸ್ತಾನದ ಮೇಲೆ ದಂಡೆತ್ತಿ ಬರತೊಡಗಿದರು. ಎಲ್ಲಕ್ಕೂ ಮೊದಲು ದಕ್ಷಿಣಕ್ಕೆ ದಂಡೆತ್ತಿ ಬಂದವನೇ **ಅಲ್ಲಾವುದ್ದೀನ ಖಿಲಜಿಯು.** ಇವನು ಸನ್ ೧೨೯೪ರಲ್ಲಿ **ದೇವಗಿರಿ**ಯನ್ನು ಮುತ್ತಿ ಅಲ್ಲಿ ಆಳುತ್ತಿದ್ದ ಯಾದವ ಅರಸನನ್ನು ಸೋಲಿಸಿ, ಅಗಣಿತ ಸುಲಿಗೆಯನ್ನು ತೆಗೆದುಕೊಂಡು ತಿರುಗಿ ದಿಲ್ಲಿಗೆ ಹೋದನು. **ದೇವಗಿರಿಯು** ದಿಲ್ಲಿಯ ಬಾದಶಹನ ಮಾಂಡಲಿಕ ರಾಜ್ಯವಾಯಿತು. ಮುಂದೆ ನಾಲ್ಕು ವರುಷಗಳ ಮೇಲೆ ಅಲ್ಲಾವುದ್ದೀನನು **ಗುಜರಾಥ**ನ್ನು ಒಳನುಗ್ಗಿ ಜಯಶಾಲಿಯಾದನು. ಮತ್ತೆ ಆರು ವರುಷಗಳಾದ ಬಳಿಕ ಇವರು **ವರಂಗಲ**ದ ಮೇಲೆ ಸಾಗಿ ಹೋದನು; ಆದರೆ ಆಗ ಜಯವು ದೊರೆಯಲಿಲ್ಲ. ಇವನು ಸನ್ ೧೩೦೭ರಲ್ಲಿ ಮತ್ತೆ ದೇವಗಿರಿಯ ಮೇಲೆ ದಂಡೆತ್ತಿ ಹೋಗಿ, ವಿಜಯವನ್ನು ಸಂಪಾದಿಸಿದನು.

ಅಲ್ಲಾವುದ್ದೀನನ ಸೇನಾಪತಿಯ ಹೆಸರು **ಮಲಿಕಕಾಫರ.** ಇವನಾದರೂ ಅಲ್ಲಾವುದ್ದೀನನಂತೆ ಶೂರನೂ, ಕ್ರೂರನೂ ಆಗಿದ್ದನು. ಇವನು ಸನ್ ೧೩೧೦ರಲ್ಲಿ ದೊಡ್ಡ ಸೈನ್ಯದೊಡನೆ ದಕ್ಷಿಣಕ್ಕೆ ಬಂದನು. ವರಂಗಲವನ್ನು ಗೆದ್ದುಕೊಂಡು, **ದ್ವಾರಸಮುದ್ರ** (ಹಳೆಬೀಡು)ದ ಬಲ್ಲಾಳ ಅರಸನ ಮೇಲೆ ದಾಳಿ ಮಾಡಿ ಅವನ ರಾಜಧಾನಿಯಾದ ದ್ವಾರಸಮುದ್ರ ಅಥವಾ ಹಳೇಬೀಡು ಎಂಬದನ್ನು ಕೈವಶ ಮಾಡಿಕೊಂಡು, ಹಾಗೇ ದಕ್ಷಿಣಕ್ಕೆ ನಡೆದು ಮಲಬಾರದ ವರೆಗೆ ಹೋಗಿ, ಅಲ್ಲಿ ತನ್ನ ವಿಜಯಸೂಚಕಾರ್ಥವಾಗಿ ಒಂದು ಮಸೀದೆಯನ್ನು ಕಟ್ಟಿಸಿದನು. ಸುಲಿಗೆಯಲ್ಲಿ ಸಿಕ್ಕ ಅತುಲೈಶ್ವರ್ಯವನ್ನು ದೋಚಿಕೊಂಡು, ಅಲ್ಲಾವುದ್ಧೀನನ ಬಳಿಗೆ ಬಂದನು. ಇವನ ಸ್ವಾರಿಯಿಂದ **ದೇವಗಿರಿ, ದ್ವಾರಸಮುದ್ರ, ವರಂಗಲ** ರಾಜ್ಯಗಳು ವಿಪತ್ತಿಗೊಳಗಾದರೂ, ಸಂಪೂರ್ಣವಾಗಿ ನಷ್ಟವಾಗಲಿಲ್ಲ. ಪ್ರಭಾತಕಾಲದ ನಕ್ಷತ್ರಗಳಂತೆ ಕ್ಷೀಣತೇಜವಾದ ಈ ರಾಜ್ಯಗಳ ಅಸ್ತಿತ್ವವು ಮುಂದೆ ತುಸು ಕಾಲದ ವರೆಗೆ ಹಾಗೂ ಹೀಗೂ ಉಳಿಯಿತು.

ದೇವಗಿರಿಯ **ಹರಪಾಲನೆಂಬ** ಅರಸನು ದಿಲ್ಲಿಯ ಅರಸನೊಡನೆ ವಿರೋಧ ಬಳೆಸಿದನು. ಆಗ **ಮುಬಾರಿಕನು** ದಿಲ್ಲಿಯ ಅರಸನಾಗಿದ್ದನು.

ಇವನು ದೇವಗಿರಿಯ ಮೇಲೆ ದಂಡೆತ್ತಿ ಬಂದು, ಈ ರಾಜ್ಯವನ್ನು ಸಂಪೂರ್ಣ ವಾಗಿ ಹಾಳು ಮಾಡಿದನು; ಹರಪಾಲನನ್ನು ಹಿಡಿದು, ಮೈದೊಗಲು ಸುಲಿಸಿದನು! ಅವನ ರುಂಡವನ್ನು ಅಗಸೆಯ ಬಾಗಿಲಿಗೆ ಕಟ್ಟಿಸಿದನು! ರಾಜ ಕುಟುಂಬವನ್ನು ಸೆರೆಹಿಡಿದು, ತನ್ನೊಡನೆ ದಿಲ್ಲಿಗೆ ತೆಗೆದುಕೊಂಡು ಹೋದನು.

ಪ್ರತಾಪರುದ್ರದೇವನು ವರಂಗಲದಲ್ಲಿ ಆಳುತ್ತಿದ್ದಾಗ, ಮುಸಲ್ಮಾನರು ವರಂಗಲದ ಮೇಲೆ ಸಾಗಿಬಂದರು (೧೩೨೩). ರಾಜಧಾನಿಯು ಹಾಳಾಯಿತು. ವರಂಗಲವು ಸಂಪೂರ್ಣವಾಗಿ ನಷ್ಟವಾಗಿ ಹೋಯಿತು.

ಮುಂದೆ ಎರಡು ವರುಷಗಳಾದ ಮೇಲೆ **ಮಹಮ್ಮದ ತಗಲಖನು** ದಿಲ್ಲಿಯ ಅರಸನಾದನು. ಇವನು ವಿಚಿತ್ರಮನುಷ್ಯನಾಗಿದ್ದನು. ಇವನ ಕ್ರೂರತನಕ್ಕೂ ಮಹತ್ವಾಕಾಂಕ್ಷೆಗೂ ಮೇರೆಯಿರಲಿಲ್ಲ. ಇವನ ಅಮಾನುಷಕೃತ್ಯಗಳ ಸುದ್ಧಿಯು ಜನರಲ್ಲಿ ಹಬ್ಬಿ, ಬಹುಭಯವನ್ನುಂಟು ಮಾಡಿದವು. ತಲೆತಿರುಕನಾದ ಈ ಅರಸನು ಇತಿಹಾಸದಲ್ಲಿ **ಹುಚ್ಚ ಮಹಮ್ಮದ**ನೆಂದು ಹೆಸರಾಗಿದ್ದಾನೆ.

ಮೇಲಿನ ವಿವರಣೆಯಿಂದ ನೋಡಲು, ನಮ್ಮ ಕಥಾನಕದ ಪ್ರಾರಂಭದ ಕಾಲಕ್ಕೆ ಅಂದರೆ ೧೩೩೦ನೆಯ ಇಸವಿಯ ಸುಮಾರಿನಲ್ಲಿ ಮುಸಲ್ಮಾನರು ವಿಂಧ್ಯಪರ್ವತದ ವರೆಗಿನ ಹಿಂದುಸ್ತಾನವನ್ನು ಗೆದ್ದುಕೊಂಡು, ದಕ್ಷಿಣದಲ್ಲಿ ಕಾಲುಚಾಚುತ್ತ ನಡೆದಿದ್ದರೆಂಬುದು ಸ್ಪಷ್ಟವಾಗಿ ಗೊತ್ತಾಗುವಂತಿದೆ. ಕೃಷ್ಣೆಯ ದಕ್ಷಿಣ ಪ್ರದೇಶವೆಲ್ಲ ಇನ್ನೂ ವರೆಗೆ ಹಿಂದೂ ರಾಜರ ಕೈಯಲ್ಲಿಯೇ ಇತ್ತು; ಆದರೆ ಉತ್ತರದಿಂದ ಬರುತ್ತಿರುವ ಮುಸಲ್ಮಾನರ ಈ ಒತ್ತರದ ಪ್ರವಾಹದ ದಡಿಕೆಯನ್ನು ತಾಳಲಾರದೆ, ದಕ್ಷಿಣದ ಸಂಸ್ಥಾನಗಳು ನೆಲೆಗೆಟ್ಟು ಅದುರಲಾರಂಭಿಸಿದ್ದವು. ಮುಸಲ್ಮಾನರ ಘೋರ ಮತ್ತು ಕ್ರೂರವಾದ ಕೃತ್ಯಗಳಿಂದ ಭಾರತೀಯರೆಲ್ಲರೂ ಗದಗದನೆ ನಡುಗ ತೊಡಗಿದ್ದರು. **ಹಿಂದುಸ್ತಾನದೊಳಗಿನ ಬೇರೆ ಬೇರೆ ರಾಜ್ಯಗಳೂ ರಾಜಮನೆತನಗಳೂ ಹಿಂದೂಧರ್ಮವೂ ದೇವಾಲಯಗಳೂ ಮುಸಲ್ಮಾನರ ಕ್ರೂರಕೃತ್ಯಗಳಿಗೆ ಆಹುತಿಯಾಗಿ, ಹಾಳಾಗಿ ಹೋಗುವ ಭೀತಿಯು ಎಲ್ಲರಲ್ಲಿಯೂ ಹುಟ್ಟಿತ್ತು.**

ದಕ್ಷಿಣ ಹಿಂದುಸ್ತಾನದ ಸ್ವತಂತ್ರ ಸಂಸ್ಥಾನಗಳಲ್ಲಿ **ಆನೆಗುಂದಿಯು** ಒಂದಾಗಿತ್ತು. ಈಗ ಆನೆಗುಂದಿಯೆಂದು ಹೆಸರು ಹೊಂದಿರುವ ಗ್ರಾಮವು

ಮಹಾಭಾರತ ಕಾಲದಲ್ಲಿ **ದಕ್ಷಿಣ ಹಸ್ತಿನಾವತಿ**ಯೆಂದು ಪ್ರಸಿದ್ಧವಾಗಿತ್ತು. ಪಾಂಡವರು ವಿರಾಟನ ರಾಜಧಾನಿಯಲ್ಲಿ ಒಂದು ವರುಷ ಅಜ್ಞಾತವಾಸ ದಿಂದಿದ್ದ ಬಳಿಕ, ಈ ಪಟ್ಟಣಕ್ಕೆ ಬಂದು, ಇಲ್ಲಿ ಕೆಲವು ದಿವಸ ರಾಜ್ಯವಾಳಿ ದರೆಂದೂ, ಇದಕ್ಕೆ ಹಸ್ತಿನಾವತಿಯೆಂದು ಹೆಸರಿಟ್ಟರೆಂದೂ ಜನರು ಹೇಳು ತ್ತಾರೆ. ಇದಕ್ಕೆ ಈಗಿರುವ ಆನೆಗುಂದಿಯೆಂಬ ಹೆಸರು ಪ್ರಬಲವಾದ ಸಾಕ್ಷಿಯಾಗಿದೆ; ಏಕೆಂದರೆ ಹಸ್ತಿನಾವತಿಯೆಂಬ ಸಂಸ್ಕೃತ ಶಬ್ದದ ಅರ್ಥ ವನ್ನೇ ಆನೆಗುಂದಿಯೆಂಬ ಕನ್ನಡ ಶಬ್ದವು ಸೂಚಿಸುತ್ತಲಿದೆ.

ಈಗ ಆನೆಗುಂದಿಯಿರುವ ಸ್ಥಳದಲ್ಲಿ ರಾಮಾಯಣ ಕಾಲದಲ್ಲಿ ಬಲಾಢ್ಯ ಅರಸನಾದ ವಾಲಿಯ **ಕಿಷ್ಕಿಂಧೆ**ಯೆಂಬ ರಾಜಧಾನಿಯು ಇತ್ತು. ಆ ಕಾಲ ದಲ್ಲಿ ಇಲ್ಲಿ ವಾನರರೆಂಬ ಜನರು ವಾಸಿಸುತ್ತಿದ್ದರು. ರಾಮಭಕ್ತನೂ, ಆದರ್ಶಬ್ರಹ್ಮಚಾರಿಯೂ ಆದ ಹನುಮಂತನು ಈ ವಾನರ ಜನಾಂಗಕ್ಕೆ ಸೇರಿದವನು. ಆನೆಗುಂದಿಯ ನೆರೆಯಲ್ಲಿರುವ **ವಾಲಿಯ ಭಾಂಡಾರ**ವೆಂದು ಈಗ ತೋರಿಸಲ್ಪಡುವ ಎರಡು ದೊಡ್ಡ ಬಂಡೆಗಳೂ, ಎಲುವಿನ ರಾಶಿಯಂತೆ ಕಾಣುವ ವಾಲಿಕಾಷ್ಠವೆಂಬ ದಿನ್ನೆಯೂ, ಅಂಜನೇಯ, ಮಾಲ್ಯವಂತ, ಋಷ್ಯಮೂಕ, ಮಾತಂಗ ಮೊದಲಾದ ಗುಡ್ಡಗಳೂ, **ಪಂಪಾ ಸರೋವರ** ವೆಂಬ ಜಲಾಶಯವೂ ರಾಮಾಯಣ ಗ್ರಂಥದಲ್ಲಿ ವರ್ಣಿಸಲ್ಪಟ್ಟಂತೆಯೇ ಈಗಲೂ ದೃಷ್ಟಿಗೋಚರವಾಗುತ್ತವೆ. ಪಂಪಾಪತಿಯಾದ ವಿರೂಪಾಕ್ಷನ ದೇವಾಲಯವೂ ನಮ್ಮ ಕಥಾನಕ ಕಾಲದಲ್ಲಿತ್ತು.

ಒಂದು ಹಿಂದು ರಾಜಮನೆತನವು ಸುಮಾರು ಏಳುನೂರು ವರುಷ ಗಳಿಂದ ಆನೆಗುಂದಿಯಲ್ಲಿ ಆಳುತ್ತಿದ್ದಿತು. ಈಗಲಾದರೂ ಈ ಸಂಸ್ಥಾನ ವಿದ್ದು, ಇದನ್ನೊಬ್ಬ ಸಣ್ಣ ಹಿಂದೂ ಸಂಸ್ಥಾನಿಕನು ಆಳುತ್ತಿರುವನು. ಇಲ್ಲಿಯ ಸಂಸ್ಥಾನಿಕರು ಬಹು ಕಾಲದ ವರೆಗೆ ಜಾಗ್ರತೆಯಿಂದ ಕಾದಿಟ್ಟ ರಾಜವಂಶಾವಳಿಯೆಂಬ ಪುರಾತನ ಗ್ರಂಥದಿಂದ ಈ ರಾಜ್ಯವನ್ನಾಳಿದ ಪ್ರಾಚೀನಪುರುಷರ ಹೆಸರುಗಳು ನಮಗೆ ಗೊತ್ತಾಗುವಂತಿವೆ. ನಂದ ಮಹಾರಾಜನೆಂಬವನು ಆನೆಗುಂದಿಯಲ್ಲಿ ಕ್ರಿ. ಶ.ದ ೧೦೧೪ರಿಂದ ೧೦೭೬ರ ವರೆಗೆ ಆಳಿದನು. ಇವನ ರಾಜ್ಯವು ಬಹು ವಿಸ್ತಾರವಾಗಿತ್ತೆಂದು ಕಂಡು

ಬರುತ್ತದೆ. ಇವನ ಮಗನಾದ ಚಾಲುಕ್ಯನು ಸುಮಾರು ನಾಲ್ವತ್ತು ವರುಷಗಳ ವರೆಗೆ ರಾಜ್ಯವಾಳಿದನು. ಇವನಿಗೆ ಮೂವರು ಮಕ್ಕಳಿದ್ದರು. ಇವರಲ್ಲಿಯ ಹಿರಿಯವನಾದ ಬಿಜ್ಜಳನು ಕಲ್ಯಾಣಕ್ಕೆ ಹೋಗಿ, ಹೊಸ ರಾಜ್ಯ ವನ್ನು ಸ್ಥಾಪಿಸಿದನು. ಎರಡನೆಯ ಮಗನಾದ ವಿಜಯಧ್ವಜನು ತಂದೆಯ ತರುವಾಯ ಮೂವತ್ತುಮೂರು ವರುಷ ರಾಜ್ಯವಾಳಿದನು. ಇವನು ತನ್ನ ಆಳಿಕೆಯ ಕಾಲದಲ್ಲಿ ಅಂದರೆ ಕ್ರಿ. ಶ.ದ ೧೧೩೦ನೆಯ ಇಸವಿಯ ಸುಮಾ ರಕ್ಕೆ ತುಂಗಭದ್ರೆಯ ದಕ್ಷಿಣ ತೀರದಲ್ಲಿ ವಿಜಯನಗರವೆಂಬ ಹೊಸ ಪಟ್ಟಣ ವನ್ನು ಕಟ್ಟಿಸಿ, ಅದನ್ನು ಕೋಟೆಗಳಿಂದ ಭದ್ರಪಡಿಸಿದನು; ಆದರೆ ವಿಜಯ ಧ್ವಜನು ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಲಿಲ್ಲ. ತಾನು ಆನೆಗುಂದಿಯಲ್ಲಿಯೇ ಇರುತ್ತಿದ್ದನು. ಕೇವಲ ಯುದ್ಧದ ಸಮಯದಲ್ಲಿ ಉಪಯೋಗವಾಗಬೇಕೆಂದು ವಿಜಯನಗರದ ನಿರ್ಮಾಣವಾಯಿತೆಂದು ತೋರುತ್ತದೆ. ಮುಸಲ್ಮಾನರು ಈ ರಾಜ್ಯದ ಮೇಲೆ ಆಗಿಂದಾಗ ದಂಡೆತ್ತಿ ಬರುವ ಸಂಭವವಿತ್ತು. ಆನೆಗುಂದಿಯು ಶತ್ರುಗಳನ್ನು ತಡೆದು ನಿಲ್ಲಿಸುವ ದಕ್ಕೆ ಅನುಕೂಲವಾದ ಪಟ್ಟಣವಾಗಿದ್ದಿಲ್ಲ. ವೈರಿಗಳು ಸುಲಭವಾಗಿ ಈ ರಾಜಧಾನಿಯನ್ನು ಹಿಡಿದುಕೊಳ್ಳುವಂತಿತ್ತು. ಆದಕಾರಣ ವಿಜಯಧ್ವಜನು ವಿಜಯನಗರವನ್ನು ಕಟ್ಟಿಸಿ, ಅದನ್ನು ದುರ್ಭೇದ್ಯವಾದ ಕೋಟೆಗಳಿಂದ ಭದ್ರಪಡಿಸಿ, ಅಲ್ಲಿ ಯುದ್ಧೋಪಯುಕ್ತವಾದ ಸಾಮಾನುಗಳನ್ನಿರಿಸಿದನೆಂದು ಹೇಳುತ್ತಾರೆ.

ತರುವಾಯ ಇವನ ಮಗನಾದ ಅನುಮೇಯನು ಸುಮಾರು ಇಪ್ಪತ್ತು ಮೂರು ವರುಷ ರಾಜ್ಯವಾಳಿದನು. ಬಳಿಕ ಇವನ ಮಗನಾದ ನರಸಿಂಗ ದೇವರಾಯನು ಸುಮಾರು ಅರವತ್ತೇಳು ವರುಷ ರಾಜ್ಯಭಾರವನ್ನು ಮಾಡಿ ದನು. ಇವನು ಅತಿಶಯ ಪ್ರಬಲನಾದ ಅರಸನು. ಇವನ ಕಾಲದಲ್ಲಿ ಈ ರಾಜ್ಯದ ವಿಸ್ತಾರವೂ ವೈಭವವೂ ಬಹಳ ಬೆಳೆಯಿತು. ಮುಸಲ್ಮಾನರು ಇವನ ರಾಜ್ಯಕ್ಕೆ ನರಸಿಂಗನ ರಾಜ್ಯವೆಂದು ಹೇಳತೊಡಗಿದರು.

ತರುವಾಯ ಇವನ ಮಗನಾದ ರಾಮದೇವರಾಯನು ಇಪ್ಪತ್ತೈದು ವರುಷ ಆಳಿದನು. ಆ ಮೇಲೆ ಬಂದ ಪ್ರತಾಪರಾಯನಾದರೂ ಸುಮಾರು

ಇಷ್ಟೇ ವರುಷ ರಾಜ್ಯವಾಳಿದನು. ಬಳಿಕ ಇವನ ಮಗನಾದ **ಜಂಬು ಕೇಶ್ವರರಾಯನು** ಸಿಂಹಾಸನಕ್ಕೆ ಬಂದನು. ನಮ್ಮ ಕಥಾನಕ ಕಾಲದಲ್ಲಿ ಇವನೇ ಆನೆಗುಂದಿಯ ಅರಸನಾಗಿದ್ದನು. ಈ ಸಮಯದಲ್ಲಿ ಇವನು ಮುದುಕನಾಗಿದ್ದನು. ಇವನಿಗೆ ಗಂಡು ಮಕ್ಕಳಿರಲಿಲ್ಲ. **ಲಲಿತಾಂಬಿಕೆ** ಯೆಂಬೊಬ್ಬ ಹೆಣ್ಣು ಮಗಳು ಮಾತ್ರ ಇದ್ದಳು. ಜಂಬುಕೇಶ್ವರನು ಶೂರನೂ, ಧಾರ್ಮಿಕನೂ ಆಗಿದ್ದನು. ಆದರೆ ಗಂಡು ಮಕ್ಕಳಿಲ್ಲದ ಚಿಂತೆಯ ಮೂಲಕವಾಗಿಯೂ ವೃದ್ಧಾಪ್ಯದ ಮೂಲಕವಾಗಿಯೂ ಮಹತ್ವಾಕಾಂಕ್ಷೆಯನ್ನು ಬಿಟ್ಟುಬಿಟ್ಟಿದ್ದನು. ಪಾರಮಾರ್ಥ ಸಾಧನೆಯ ಯೋಗಿಯಂತೆ, ಕೇವಲ ಧಾರ್ಮಿಕ ಕೆಲಸಗಳಲ್ಲಿ ತನ್ನ ಆಯುಷ್ಯವನ್ನು ಕಳೆಯುತ್ತಿದ್ದನು.

ಆನೆಗುಂದಿಯ ಪೂರ್ವಕ್ಕೆ ಸುಮಾರು ಎಂಟು ಮೈಲುಗಳ ಮೇಲೆ **ಕಂಪಿಲ**ವೆಂಬ ಸಂಸ್ಥಾನವಿತ್ತು. ಇದು ಗುಡ್ಡಗಳ ಮಧ್ಯದಲ್ಲಿದ್ದಿಲ್ಲ; ಇದರ ಹಿಂಭಾಗದಲ್ಲಿ ಎತ್ತರವಾದ ದಿನ್ನೆಗಳ ಗುಂಪು ಇತ್ತು. ಆದುದರಿಂದ ಇದು ಒಂದು ಕಡೆಯಲ್ಲಿ ಸ್ವಾಭಾವಿಕವಾಗಿಯೇ ನಿರ್ಭೇದ್ಯವಾಗಿತ್ತು. ಪಟ್ಟಣಕ್ಕೆ ಬಲವಾದ ಕೋಟೆಯೂ ಇತ್ತು. ಕಾರಣ ಇದು ಶತ್ರುಗಳ ಹಾವಳಿಯಿಂದ ತನ್ನ ಸಂರಕ್ಷಣೆ ಮಾಡಿಕೊಳ್ಳಲು ಸಮರ್ಥವಾಗಿತ್ತು. ಇದಕ್ಕೀಗ ಕಂಪಲಿಯೆಂಬ ಹೆಸರಿದೆ. ನಮ್ಮ ಕಥಾನಕ ಕಾಲದಲ್ಲಿ ಇಲ್ಲಿ ರಾಯಿಯೆಂಬ ಬಿರುದುಳ್ಳ ಸಂಸ್ಥಾನಿಕನಿದ್ದನು. ಇವನು ಬಹು ಶೂರನೂ, ಧಾರ್ಮಿಕನೂ ಆಗಿದ್ದನು. ಇವನು ಆನೆಗುಂದಿಯ ಅರಸನ ಮಾಂಡಲಿಕನಾಗಿದ್ದು, ಅವನಿಗೆ ಕಪ್ಪಕಾಣಿಕೆ ಕೊಡುತ್ತಿದ್ದನು; ಮತ್ತು ಅವನೊಡನೆ ಬಹು ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದನು.

ಇದೇ ಮೇರೆಗೆ ಕರ್ನಾಟಕದಲ್ಲಿ ಅನೇಕ ಸಂಸ್ಥಾನಗಳಿದ್ದರೂ, ನಾವು ನಮ್ಮ ಕಥಾನಕ್ಕೆ ನಿಕಟಸಂಬಂಧವಿರುವ ಮೇಲಿನ ಎರಡು ಸಂಸ್ಥಾನಗಳನ್ನು ಕುರಿತು ಮಾತ್ರ ಬರೆದಿದ್ದೇವೆ. ಒಂದೇ ಕರ್ನಾಟಕದಲ್ಲಿ ಸ್ವತಂತ್ರವಾದ ಅನೇಕ ಸಂಸ್ಥಾನಗಳಿದ್ದು ಅವು ತಂತಮ್ಮೊಳಗೆ ಜಗಳಾಡುತ್ತಿದ್ದುದರಿಂದ ಕರ್ನಾಟಕವು ಪ್ರಬಲವಾದ ರಾಷ್ಟ್ರವಾಗಿದ್ದಿಲ್ಲ. ಈ ಸಂಸ್ಥಾನಿಕರು

ಒಕ್ಕಟ್ಟಿನಿಂದ ನಡೆದಿದ್ದರೆ ಹಗೆಗಳ ಕಾಟಕ್ಕೆ ಒಳಗಾಗುತ್ತಿದ್ದಿಲ್ಲ; ಆದರೆ ಇವರಲ್ಲಿ ಒಡಕು ಹಬ್ಬಿತ್ತು. ಒಬ್ಬನ ಉನ್ನತಿಯನ್ನು ನೋಡಿ, ಬೇರೊಬ್ಬನಿಗೆ ಸಹನವಾಗುತ್ತಿದ್ದಿಲ್ಲ. ಸಮೀಪದ ಸಂಸ್ಥಾನಿಕನು ಹಾಳಾದರೆ ತಮಗೆ ಲೇಸೆಂದು ಉಳಿದವರು ತಿಳಿಯುತ್ತಿದ್ದರು. ಆದಕಾರಣ ಮುಸಲ್ಮಾನರು ಕರ್ನಾಟಕದ ಒಂದೊಂದೇ ರಾಜ್ಯಗಳನ್ನು ನಾಶಮಾಡಲು ಸಮರ್ಥರಾದರು. ಉತ್ತರದಲ್ಲಿರುವ ಮುಸಲ್ಮಾನರು ದೂರದಲ್ಲಿಯ ಬಲ್ಲಾಳರ ಮೇಲೆ ದಂಡೆತ್ತಿ ಬಂದರು. ದಕ್ಷಿಣದ ಸಂಸ್ಥಾನಿಕರೆಲ್ಲರೂ ಒಕ್ಕಟ್ಟಾಗಿ ಅವರನ್ನೆದುರಿಸಿದ್ದರೆ, ಮುಸಲ್ಮಾನರ ಆಟವು ಎಷ್ಟು ಮಾತ್ರವೂ ನಡೆಯುವಂತಿದ್ದಿಲ್ಲ. ಆದರೆ ಕರ್ನಾಟಕದಲ್ಲಿ ನಮ್ಮ ದುರದೃಷ್ಟದಿಂದ ಹೊಟ್ಟೆಕಿಚ್ಚು ಹಬ್ಬಿತ್ತು. ಬಲ್ಲಾಳ ಅರಸನಿಗೆ ಉಳಿದವರು ಯಾರೂ ನೆರವಾಗಲಿಲ್ಲ. ಆದ್ದರಿಂದ ಮುಸಲ್ಮಾನರು ಅವನನ್ನು ಸುಲಭವಾಗಿ ಸೋಲಿಸಿಬಿಟ್ಟರು; ಬಹು ದೂರದಲ್ಲಿರುವ ಮಲಬಾರದ ವರೆಗೆ ಹೋಗಿ, ಅನೇಕ ದೇವಾಲಯಗಳನ್ನು ನೆಲಸಮ ಮಾಡಿ, ಅಲ್ಲೊಂದು ಮಸೀದೆಯನ್ನು ಕಟ್ಟಿಸಿದರು. ಈ ಮೇರೆಗೆ ಒಕ್ಕಟ್ಟಿನ ಅಭಾವದ ಮೂಲಕ ಕನ್ನಡಿಗರು ಮುಸಲ್ಮಾನರಿಂದ ಬಹು ದುಃಖವನ್ನನುಭವಿಸಬೇಕಾಯಿತು. ಒಂದೊಂದೇ ಹಿಂದೂ ರಾಜ್ಯಗಳು ಅವರ ತುತ್ತಾಗತೊಡಗಿದವು. ದೇವಗಿರಿಯು ಹೋಯಿತು. ವರಂಗಲವು ನಾಶವಾಯಿತು. ಕಂಪಿಲವು ನಿರ್ಮೂಲವಾಯಿತು. ಆನೆಗುಂದಿಯ ರಾಜಮನೆತನವು ಹೇಳ ಹೆಸರಿಲ್ಲದಾಗಿ ಹೋಯಿತು. ಆದರೆ ಕನ್ನಡಿಗರ ಸುದೈವದಿಂದ ಶ್ರೀವಿದ್ಯಾರಣ್ಯರಂತಹ ಮಹಾತ್ಮರ ಪ್ರಯತ್ನದಿಂದ ಒಂದು ಪ್ರಬಲವಾದ ಹಿಂದೂ ರಾಜ್ಯವು ಆನೆಗುಂದಿಯ ಬಳಿಯಲ್ಲಿಯೇ ಸ್ಥಾಪಿತವಾಯಿತು. ಅದು ಕನ್ನಡಿಗರ ದುಃಖವನ್ನು ತಪ್ಪಿಸಿ, ಅವರ ಪುಣ್ಯ ತೀರುವ ವರೆಗೆ ತಲೆಯೆತ್ತಿ ಮೆರೆಯಿತು. ಇದು ಹೇಗೆ ಹುಟ್ಟಿ ಬೆಳೆಯಿತೆಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸುವೆವು.

# ಐದನೆಯ ಅಧ್ಯಾಯ

## ಪ್ರಣಯಿಗಳು

ಆ ಕಾಲಕ್ಕೆ ಆನೆಗುಂದಿಯು ತುಂಗಭದ್ರೆಯ ದಂಡೆಯಲ್ಲಿರುವದೊಂದು ಸುಂದರವಾದ ಪಟ್ಟಣವು. ಈಗ ಇದರ ವೈಭವವೂ ಮೋಹಕತ್ವವೂ ಅಷ್ಟೊಂದಿಲ್ಲ; ಆದರೆ ನಮ್ಮ ಕಥಾನಕ ಕಾಲದಲ್ಲಿ ಇದು ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ ಎಣಿಸಲ್ಪಡುತ್ತಿತ್ತು. ಏಕೆಂದರೆ ಬಹು ಪುರಾತನ ಕಾಲದಿಂದ ಇದು ರಾಜಧಾನಿಯು ಸ್ಥಳವಾಗಿತ್ತು. ಪುರಾಣಕಾಲದಲ್ಲಿ ಅಂದರೆ ಮಹಾಭಾರತ-ರಾಮಾಯಣ ಕಾಲಗಳಲ್ಲಿ ಇದು ರಾಜಧಾನಿಯು ಸ್ಥಳವಾಗಿತ್ತೆಂದು ನಾವು ಹಿಂದೆ ಸೂಚಿಸಿದ್ದೇವೆ ಪುರಾಣಕಾಲದ ತರುವಾಯದಲ್ಲಿಯೂ ಇದರ ಗೌರವವು ನಷ್ಟವಾಗಲಿಲ್ಲವೆಂದು ತರ್ಕಿಸಬಹುದಾಗಿದೆ. ಹನ್ನೊಂದನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗಿನ ಅಲ್ಲಿಯ ರಾಜರ ಹೆಸರುಗಳನ್ನು ಹಿಂದೆ ಹೇಳಿದ್ದೇವೆ. ಪುರಾಣಕಾಲದಿಂದ ಈವರೆಗಿನ ಯಾವತ್ತು ಅರಸರ ಇತಿಹಾಸವು ಇನ್ನೂ ದೊರೆತಿಲ್ಲ. ಇಷ್ಟರಿಂದ ಈ ಮಧ್ಯಕಾಲದಲ್ಲಿ ಇದು ರಾಜಧಾನಿಯು ಸ್ಥಳವಿದ್ದಿಲ್ಲವೆಂದು ಹೇಳಲಾಗದು. ಆನೆಗುಂದಿಯು ಬಹುಕಾಲ ರಾಜಧಾನಿಯಾಗಿದ್ದು ಗೌರವ ಹೊಂದಿರುವುದಲ್ಲದೆ ಸಮೀಪದಲ್ಲಿ ಅನೇಕ ತೀರ್ಥಕ್ಷೇತ್ರಗಳನ್ನೊಳಗೊಂಡು ಹೆಸರುವಾಸಿಯಾಗಿದೆ. ಆದುದರಿಂದ ಎಷ್ಟೋ ಜನ ಪ್ರಯಾಣಸ್ಥರು ಇದನ್ನು ನೋಡುವುದಕ್ಕೆಂದು ಈಗಲೂ ಹೋಗುತ್ತಲಿದ್ದಾರೆ. ಭಾವಿಕರೂ ಇತಿಹಾಸಭಕ್ತರೂ ಆದ ಕನ್ನಡಿಗರೆಲ್ಲರೂ ಇದನ್ನೊಮ್ಮೆಯಾದರೂ ಕಣ್ಣು ಮುಟ್ಟಿ ನೋಡಬೇಕೆಂದು ನಾವು ಹೇಳದಿರಲಾರೆವು.

ನದಿಯ ತೀರದಲ್ಲಿಯೇ ಜಂಬುಕೇಶ್ವರರಾಯನ ಅರಮನೆಯು. ಇದು ಮೂರಂತಸ್ತಿನದಾಗಿತ್ತು. ಎಲ್ಲಕ್ಕೂ ಮೇಲಿನ ಉಪ್ಪರಿಗೆಯ ಚಂದ್ರಶಾಲೆಯಲ್ಲಾಗಲಿ, ಕೋಣೆಗಳ ಕಿಡಕಿಯಲ್ಲಾಗಲಿ ಕುಳಿತು ನೋಡಿದರೆ, ಸಮೀಪದಲ್ಲಿಯೇ ಸೆಳವಿನಿಂದ ಹರಿಯುತ್ತಿರುವ ತುಂಗಭದ್ರೆಯೂ ತಲೆಯೆತ್ತಿ

ಕನ್ನಡಿಗರ ಹಿಂದಿನ ಕಾಲದ ಕೀರ್ತಿಯನ್ನು ಸಾರುತ್ತಲಿರುವ ಪರ್ವತ ಮಾಲೆಯೂ ಅತ್ಯಂತ ಮನೋಹರವಾಗಿ ಕಾಣುತ್ತಿದ್ದವು. ತುಂಗಭದ್ರೆಯು ಗುಡ್ಡಗಾಡು ಪ್ರದೇಶದಲ್ಲಿ ಹರಿಯುತ್ತಿರುವುದರಿಂದಲೂ ಆನೆಗುಂದಿಯು ಪರ್ವತಮಯ ಪ್ರದೇಶದಲ್ಲಿ ಪ್ರವಹಿಸುತ್ತಿದ್ದುದರಿಂದಲೂ ಅದರ ವೇಗವು ಇಲ್ಲಿ ಹೆಚ್ಚಾಗಿತ್ತು; ಆದಕಾರಣ ಆನೆಗುಂದಿಯ ಬಳಿಯಲ್ಲಿ ಅದರ ಅಬ್ಬರವು ವಿಶೇಷವಾಗಿತ್ತು. ತುಂಗಭದ್ರೆಯ ಈ ಅರ್ಭಟವನ್ನು ನೋಡಿದರೆ, ಅತ್ಯಂತ ವಿರಹಾಕುಲಳಾದ ರಮಣಿಯು ಬಹುಕಾಲ ಪ್ರಿಯತಮನ ಮಾರ್ಗವನ್ನು ಪ್ರತೀಕ್ಷಿಸಿ ನಿರಾಶಳಾಗಿ, ಎಡರುಗಳನ್ನೆಷ್ಟು ಮಾತ್ರವೂ ಎಣಿಸದೆ, ತಾನೇ ಎದೆಗೊಂಡು ತನ್ನ ನಲ್ಲನನ್ನು ಹುಡುಕಿಕೊಂಡು ಬರಲಿಕ್ಕೆ ಮುಂದಕ್ಕೆ ಸಾಗಿರುವಳೆಂಬಂತೆ ಭಾಸವಾಗುತ್ತಿತ್ತು.

ಸುಮಾರು ಒಂದು ತಾಸು ರಾತ್ರಿಯಾಗಿರಬಹುದು. ಶ್ರಾವಣ ಮಾಸದ ಶುಕ್ಲಪಕ್ಷಾಂತ್ಯದ ದಿವಸವು. ಆಕಾಶದಲ್ಲಿ ಭಗವಾನ್ ರಜನೀ ನಾಥನೂ ತಾರಿಕೆಗಳೂ ಉದಯವಾಗಿವೆ; ಆದರೆ ಇವು ಸ್ಥಿರವಾಗಿದ್ದಿಲ್ಲ. ಕ್ಷಣಕಾಲದಲ್ಲಿ ಪ್ರಬಲವಾದುದೊಂದು ಮೋಡವು ಇವುಗಳನ್ನು ಮರೆ ಮಾಡುತ್ತಿತ್ತು; ಮತ್ತೊಂದು ಕ್ಷಣದಲ್ಲಿ ಇವು ಮೇಘದ ಮುತ್ತಿಗೆಯನ್ನೆಬ್ಬಿಸಿ ತಲೆಯೆತ್ತಿ ಮೆರೆಯಲಾರಂಭಿಸುತ್ತಿದ್ದವು. ಮತ್ತೆ ಮೋಡವು ಇವುಗಳನ್ನು ಮುಸಕುತ್ತಿತ್ತು. ಪುನಃ ಚಂದ್ರ-ನಕ್ಷತ್ರಗಳು ಜಗತ್ತಿನಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಈ ಕ್ರಮವು ಎಷ್ಟೋ ಕಾಲದ ವರೆಗೆ ನಡೆದಿತ್ತು. ನೋಡುವವರಿಗೆ ಆಕಾಶವೆಂಬ ರಂಗಸ್ಥಲದಲ್ಲಿ ಚಂದ್ರ-ತಾರಿಕಾ-ಮೇಘಗಳ ಕಡಿದಾಟವು ನಡೆದಿದೆಯೆಂದೂ ಜಗತ್ತಿನಲ್ಲಿಯು ಮಾನವೀಕಲಹವು ಇದೇ ಮೇರೆಗೆ ಇರುವದೆಂದೂ ಬೋಧವಾಗುತ್ತಿತ್ತು. ತತ್ವಜ್ಞಾನಿಯು ಇದನ್ನು ನೋಡಿ, ಮಾನವೀಜೀವಿತವು ಇಂತು ಅಸ್ಥಿರವಾಗಿದೆಯೆಂದೂ, ಮನುಷ್ಯನು ಚಂದ್ರನಕ್ಷತ್ರಗಳಂತೆ ಅಸ್ತೋದಯವನ್ನು ಹೊಂದಬೇಕಾಗುವದೆಂದೂ ಗ್ರಹಿಸಬಹುದಾಗಿತ್ತು.

ಈ ಮೇರೆಗೆ ಆಕಾಶವು ತನ್ನ ರಂಗಭೂಮಿಯಲ್ಲಿ ಬೇರೆ ಬೇರೆ ನೋಟಗಳನ್ನು ತೋರಿಸುತ್ತಿತ್ತು. ಮಳೆಯಾಗುತ್ತಿರಲಿಲ್ಲ. ಬೀದಿಗಳಲ್ಲಿ ಜನರು

ಆಡ್ಡಾಡುತಲಿದ್ದರು. ರಾಜಮಾರ್ಗದೊಳಗಿನ ದೀಪಗಳು ಅಲ್ಲಲ್ಲಿ ಪ್ರಕಾಶಿಸುತಿದ್ದವು. ಅವುಗಳ ಮಂದಪ್ರಕಾಶವು ಮಾರ್ಗದಲ್ಲಿ ಬಿದ್ದಿತ್ತು. ಮನೆ ಬಿಟ್ಟು ಹೊರಬಿದ್ದವರು ತಮ್ಮ ತಮ್ಮ ಮನೆಗಳಿಗೆ ನಡೆದಿದ್ದರು. ಇವರಲ್ಲಿ ಕೆಲವರು ವಿನೋದದ ಮಾತುಗಳನ್ನಾಡುತ್ತ ಸಾಗಿದ್ದರು. ಬೇರೆ ಕೆಲವರು ತಮ್ಮ ಅಂದಿನ ಕಾರ್ಯಗಳ ಸುದ್ದಿಯನ್ನು ಮಾತಾಡುತ್ತ ಹೋಗುತ್ತಿದ್ದರು. ಮತ್ತೆ ಕೆಲವು ನಿರುದ್ಯೋಗಿಗಳು ಹಾಳಹರಟೆಕೊಚ್ಚುತ್ತ ಮುಂದೆ ಸಾಗಿದ್ದರು. ಒಬ್ಬಿಬ್ಬರು ಸೃಷ್ಟಿನಿರೀಕ್ಷಕರು ಮೇಲಿರುವ ಆಕಾಶದ ಮನೋಹರವಾದ ಬೇರೆ ಬೇರೆ ವೇಷಾಂತರಗಳನ್ನು ನೋಡಿ, ಈ ವಿಷಯುವಾಗಿ ಚರ್ಚೆಮಾಡುತ್ತ ನಡೆದಿದ್ದರು.

ಅರಮನೆಯ ಮೇಲ್ಭಾಗದಲ್ಲಿರುವದೊಂದು ಪ್ರಶಸ್ತವಾದ ಕೋಣೆಯಲ್ಲಿ ಒಬ್ಬ ತರುಣನು ಕುಳಿತಿದ್ದಾನೆ. ಕೋಣೆಯು ಉತ್ತಮ ರೀತಿಯಿಂದ ಶೃಂಗರಿಸಲ್ಪಟ್ಟದೆ. ಸುಗಂಧಪೂರಿತವಾದ ಎಣ್ಣೆಯ ಎರಡು ದೀಪಗಳು ಉರಿಯುತ್ತಲಿವೆ. ಇವುಗಳ ಸುವಾಸನೆಯು ಕೋಣೆಯಲ್ಲಿ ಹರಡಿದೆ. ಬೆಲೆಯುಳ್ಳದ್ದೊಂದು ರತ್ನಗಂಬಳಿಯನ್ನು ಹಾಸಿದ್ದಾರೆ. ಇದು ಕೋಣೆಯ ನೆಲವನ್ನೆಲ್ಲ ವ್ಯಾಪಿಸಿಬಿಟ್ಟದೆ. ಎತ್ತರವೂ ಮೃದವೂ ಆದ ಸಣ್ಣ ಗಾದೆಗಳುಳ್ಳ ಮೂರು ನಾಲ್ಕು ಆಸನಗಳು ಇಟ್ಟವೆ. ಇವುಗಳಿಗೆ ಹೊಂದಿ ಮಕಮಲದ ತೆಕ್ಕೆಗಳು ಇಟ್ಟವೆ. ಅವುಗಳ ಮುಂದಿಟ್ಟ ಮತ್ತು ಊದಿನ ಕಡ್ಡಿಗಳನ್ನು ಚುಚ್ಚಿದ ಬೆಳ್ಳಿಬಂಗಾರದ ಚಿತ್ರವಿಚಿತ್ರವಾದ ಗಿಡಗಳು ಮಕರಂದವನ್ನು ಬೀರುತ್ತಿವೆ. ಈ ಆಸನಗಳಲ್ಲೊಂದರ ಮೇಲೆ, ನಾವು ಮೇಲೆ ಸೂಚಿಸಿದ ತರುಣನು ಕುಳಿತುಕೊಂಡಿದ್ದನು. ಒಬ್ಬ ದಾಸಿಯು ಯುವಕನ ಆಜ್ಞೆಯ ಮಾರ್ಗಪ್ರತೀಕ್ಷೆ ಮಾಡುತ್ತ ಬಾಗಿಲು ಸಂದಿಯಲ್ಲಿ ನಿಂತುಕೊಂಡಿದ್ದಳು. ತರುಣನು ಇಂದು ವಿಶೇಷ ಆನಂದದಲ್ಲಿರುವಂತೆ, ಅವನ ಮುಖಭಾವದಿಂದ ವ್ಯಕ್ತವಾಗುತ್ತಿತ್ತು.

ಶೀತಲವೂ ಸುಗಂಧಯುಕ್ತವೂ ಆದ ಸಾಯಂಕಾಲದ ಗಾಳಿಯು ಕೋಣೆಯನ್ನು ಪ್ರವೇಶಿಸುತ್ತಿದ್ದಿತು. ತುಂಗಭದ್ರೆಯ ಕಲನಾದವು ಇಂಪಾಗಿ ಕೇಳಬರುತ್ತಿತ್ತು. ತರುಣನು ಇವುಗಳಿಂದ ಆನಂದ ಹೊಂದಿರಬಹು

ದೇನು? ಇವುಗಳ ಕಡೆಗೆ ಆ ಯುವಕನ ಲಕ್ಷ್ಯವು ಇರಲಿಲ್ಲ. ಅವನು ಯಾವದೋ ವಿಚಾರದಲ್ಲಿ ಮಗ್ನನಾಗಿ ಹೋಗಿದ್ದನು. ಅವನು ಮನಸ್ಸಿನಲ್ಲಿಯೇ ಅಂದುಕೊಂಡನು—“ನಾನಿಲ್ಲಿಗೆ ಬಂದು ಬಹಳ ದಿವಸವಾಗಿಲ್ಲ; ಒಂದೆರಡು ವರುಷವಾಗಿರಬಹುದು. ಇಷ್ಟೇ ಅವಧಿಯಲ್ಲಿ ಈ ಅರಮನೆಯು ನನ್ನದಾಗಿ ಹೋಗಿದೆ. ಇಲ್ಲಿ ಈಗ ನನಗೆ ಪರಕೀಯತ್ವವು ಎಷ್ಟು ಮಾತ್ರವೂ ಭಾಸವಾಗುವದಿಲ್ಲ. ಪ್ರಾರಂಭದ ಸಮಯದಲ್ಲಿ ನನಗೀ ಅರಮನೆಯಲ್ಲಿ ಇರುವುದು ಜೀವದ ಸುತ್ತು ಬಂದಿತ್ತು; ಏಕೆಂದರೆ ಇಲ್ಲಿ ನನ್ನವರೆನ್ನುವವರಾರೂ ಇರಲಿಲ್ಲ. ಕೇವಲ ಗುರುಗಳ ಆಜ್ಞೆಯಂತೆ ನಾನಿಲ್ಲಿರುವುದಕ್ಕೆ ಒಡಂಬಟ್ಟೆನು. ಗುರುಗಳ ಹೇಳಿಕೆಗೆ ಮಹಾರಾಜರು ಸಮ್ಮತಿಸಿ, ನನ್ನನ್ನು ತಮ್ಮಲ್ಲಿಟ್ಟುಕೊಳ್ಳಲು ಒಪ್ಪಿಕೊಂಡರು. ಮೊದಲು ಮೊದಲು ಬಹು ಸಂಕೋಚದಿಂದ ಕಾಲಕಳೆದೆನು. ಒಂದೊಂದು ದಿನವನ್ನು ಕಳೆಯುಬೇಕಾದರೆ, ಕಷ್ಟವಾಗುತ್ತಿತ್ತು. ಈಗ ಆ ಸ್ಥಿತಿಯಿಲ್ಲ. ಈಗ ಮನೆಯಲ್ಲಿಯು ಎಲ್ಲವರೂ ನನ್ನವರಾಗಿದ್ದಾರೆ. ವೃದ್ಧಮಹಾರಾಜರೂ ಮಹಾರಾಣಿಯುವರೂ ನನ್ನನ್ನು ತಮ್ಮ ಮಗನೆಂದು ತಿಳಿದು ಪ್ರೀತಿಸುತ್ತಿರುವರು. ಇದರಿಂದ ಅರಮನೆಯೊಳಗಿನ ಇತರ ಜನರು ನನ್ನ ಸಂಗಡ ಪ್ರೇಮದಿಂದ ನಡೆದುಕೊಳ್ಳುತ್ತಿರುವರು. ರಾಜಪುತ್ರಿಯಂತೂ ನನ್ನನ್ನು ಅತಿಶಯವಾಗಿ ಭಕ್ತಿಯಿಂದ ಗೌರವಿಸುತ್ತಿರುವಳು. ಅವಳು ನನ್ನನ್ನು ನಿಜವಾಗಿಯೂ ಪ್ರೀತಿಸುತ್ತಿರಬಹುದೇನು? ಎಂತಹ ಗೂಢವಾದ ಪ್ರಶ್ನೆಯಿದು!

ರಾಜಕುಮಾರಿಯು ದರ್ಶನವು ಒಂದೆರಡು ದಿವಸ ಇಲ್ಲದಂತಾದರೆ, ನನ್ನ ಮನಸ್ಸಿಗೆ ಸಮಾಧಾನವೇ ಆಗುವಂತಿಲ್ಲ. ಅವಳ ಸಹವಾಸದಲ್ಲಿ ಕಾಲವು ಬಹು ಸಂತೋಷದಿಂದ ಕಳೆದುಹೋಗುತ್ತದೆ. ಅವಳು ಲಾವಣ್ಯಮಣಿಯಾಗಿರುವಂತೆ, ಗುಣಮಣಿಯೂ ಆಗಿದ್ದಾಳೆ. ಇಂತಹ ರಮಣೀರತ್ನವನ್ನು ಪ್ರೀತಿಸದವರಾರು? ನನ್ನ ಹೃದಯದ ಆರಾಧ್ಯದೇವತೆಯೇ ಅವಳು ಆಗಿದ್ದಾಳೆ. ಆದರೆ ಅವಳು ನನ್ನವಳಾಗುವ ಬಗೆ ಯಾವುದು? ನನ್ನ ತಾಯಿತಂದೆಗಳಾರೆಂಬದು ಇನ್ನೂ ವರೆಗೆ ನನಗೆ ಗೊತ್ತಿಲ್ಲ. ನಾನು ಕುಲೀನನೂ ಶ್ರೀಮಂತನೂ ಆದವನ ಮಗನೆಂದು ಆಚಾರ್ಯರು ಹೇಳುತ್ತಿರುವರು. ಅವರ ಮಾತುಗಳಿಂದ ತಂದೆಯು ಜೀವಿಸಿರಬಹುದೆಂದು

ತರ್ಕಿಸಲಿಕ್ಕೆ ಬರುವಂತಿದೆ; ಆದರೆ ಅವರು ನನ್ನ ತಂದೆಯು ಯಾರೆಂಬು ದನ್ನು ಸ್ಪಷ್ಟವಾಗಿ ಹೇಳಲೊಲ್ಲರು; ಆದಕಾರಣ ನಾನು ನನ್ನ ತಂದೆಯು ಶೋಧಮಾಡಲು ಅಸಮರ್ಥನಾಗಿದ್ದೇನೆ. ಆಚಾರ್ಯರು ನನ್ನ ಜೀವನ ರಹಸ್ಯವನ್ನು ಹೀಗೆ ಗುಪ್ತವಾಗಿರಿಸಲಿಕ್ಕೆ ಏಕೆ ಯತ್ನಿಸುತ್ತಿರಬಹುದು? ಅವರು ಕೇವಲ ಅಧ್ಯಾತ್ಮನಿರತರು; ಶಿಷ್ಯವತ್ಸಲರು. ಅವರು ನನ್ನ ವಿಷಯ ದಲ್ಲಿ ಕಪಟಾಚರಣೆಯನ್ನೆಂದೂ ಆಚರಿಸುವ ಸಂಭವವಿಲ್ಲ. ಅವುದೋ ಒಂದು ಪ್ರಬಲ ಕಾರಣಕ್ಕಾಗಿ ಅವರು ನನ್ನ ಜನ್ಮ-ರಹಸ್ಯವನ್ನು ಹೇಳದಿರ ಬಹುದು; ಆದರೆ ಇದರಿಂದ ನನಗೆ ಹೇಗೆ ಸಮಾಧಾನವಾಗಬೇಕು? ನಾನೇನು ಹುಡುಗನೇ? ತಾರುಣ್ಯದ ಮೇರೆಯಲ್ಲಿ ಕಾಲಿಟ್ಟು ಎಷ್ಟೋ ವರುಷಗಳಾದವು. ಈ ವಯಸ್ಸಿನಲ್ಲಿ ನನಗೆ ನನ್ನ ತಾಯಿತಂದೆಗಳಾ ರೆಂಬುದು ಗೊತ್ತಿರದಿರುವುದು ಆಶ್ಚರ್ಯದ ಸಂಗತಿಯಲ್ಲವೇ? ಈ ಸ್ಥಿತಿ ಯಲ್ಲಿರುವ ನಾನು ರಾಜಕುಮಾರಿಯನ್ನು ಪ್ರೀತಿಸಬಹುದೇನು? ನನ್ನ ಪ್ರೇಮಕ್ಕೆ ತಕ್ಕ ಪ್ರತಿಫಲವು ದೊರೆತೀತೇನು? ಏಕೆ ದೊರೆಯಬಾರದು? ನಾನು ಯಾವದೇ ವಂಶದಲ್ಲಿ ಹುಟ್ಟಿರಲೊಲ್ಲನೇಕೆ; ನನ್ನ ತಾಯಿತಂದೆ ಗಳೆಂತಹರೇ ಇರಲೊಲ್ಲರೇಕೆ; ಆಚಾರ್ಯರ ಮತ್ತು ಮಹಾರಾಜರ ಅತ್ಯಂತ ಪ್ರೀತಿಪಾತ್ರನಾದ ನಾನು ಕಡಮೆಯ ಯೋಗ್ಯತೆಯವನೇ? ಹೀಗಿರಲು ಅವಳು ನನ್ನನ್ನೇಕೆ ವರಿಸಬಾರದು?"

ಕೋಣೆಯ ಬಾಗಿಲದ ಬಳಿಯಲ್ಲಿ ಮೃದುವಾದ ಶಬ್ದವಾಯಿತು. ತರುಣನು ತನ್ನ ವಿಚಾರತರಂಗವನ್ನು ತಡೆದು ನಿಲ್ಲಿಸಿ, ಮುಖವೆತ್ತಿ ನೋಡಿ ದನು. ರಾಜಕುಮಾರಿಯು ತನ್ನ ಬಳಿಗೆ ಬರುತ್ತಿರುವುದನ್ನು ನೋಡಿ, ಹಿರಿಹಿರಿ ಹಿಗ್ಗಿದನು!!

ಕೋಣೆಯಲ್ಲಿ ಕಾಲಿಟ್ಟ ಕುಮಾರಿಗೆ ಸುಮಾರು ಹದಿನಾರು ವರುಷ ಗಳಾಗಿರಬಹುದು. ಅವಳು ಹರೆಯದ ಮೇರೆಯನ್ನು ಪ್ರವೇಶಿಸಿದ್ದಳೆಂದು ಹೇಳಲು ಅಡ್ಡಿಯಿಲ್ಲ. ಅವಳು ಅತ್ಯಂತ ಸುಂದರಿಯು. ಯೌವನದ ಸಾಹ ಚರ್ಯದಿಂದ ಅವಳು ಮತ್ತಿಷ್ಟು ಮೋಹಕರಳಾಗಿ ತೋರುತ್ತಿದ್ದಳು. ದಿನ ದಿನಾಲು ತುಂಬಿಬರುತ್ತಿರುವ ಅವಯವಗಳಿಂದ ಬೆಳೆಯುತ್ತಿರುವ ತರು

ಣಿಯ ಸೌಂದರ್ಯವು ಪೂರ್ವಪರಿಚಿತ ಯುವಕನ ಮನಸ್ಸನ್ನು ಕ್ರಮವಾಗಿ ಹೆಚ್ಚು ಹೆಚ್ಚು ಆಕರ್ಷಿಸುತ್ತ ನಡೆದಿತ್ತು.

ತರುಣಿಯು ಗಜಗಮನದಿಂದ ಬಂದು, ಯುವಕನ ಎದುರಿನಲ್ಲಿ ನಿಂತು ಕೊಂಡಳು. ಅವನು ಕೆಲಹೊತ್ತು ಅನಿಮಿಷನೇತ್ರನಾಗಿ ಆಕೆಯ ಮನ ಮೋಹನ ರೂಪವನ್ನು ನೋಡಿದನು. ನೋಡಿನೋಡಿದಂತೆ ಅವನ ರೂಪ ತೃಷ್ಣೆಯು ಬೆಳೆಯುತ್ತ ನಡೆಯಿತು. ಅದನ್ನು ಕೆಲಮಟ್ಟಿಗೆ ತಡೆದು ಅವನು ತನ್ನ ದೃಷ್ಟಿಯನ್ನು ತಿರುಗಿಸಿ—“ರಾಜಕುಮಾರಿ, ಹೀಗೆ ನಿಂತೆ ಏಕೆ? ಇಲ್ಲಿ ಕುಳಿತುಕೊ,” ಎಂದು ಹೇಳಿದನು.

ತರುಣಿಯು ಆಸನದ ಬಳಿಯಲ್ಲಿ ಕುಳಿತುಕೊಂಡಳು. ಇದನ್ನು ನೋಡಿ ಯುವಕನು—“ಅಲ್ಲಿ ಕೆಳಗೆ ಏಕೆ ಕುಳಿತುಕೊಂಡೆ? ಹೀಗೆ ಬಾ. ಗಾದಿಯ ಮೇಲೆ ಕುಳಿತುಕೊಳ್ಳು,” ಎಂದು ಆಗ್ರಹದಿಂದ ಹೇಳಿದನು.

ಬಾಲಿಕೆಯು ಮಂದಸ್ಮಿತಳಾಗಿ—“ಕುಮಾರ, ಎಲ್ಲಿ ಕುಳಿತುಕೊಂಡ ರೇನಿದೆ? ಎಲ್ಲವೂ ಒಂದೇ. ತಮ್ಮಂತಹ ವೀರಪುರುಷನ ಕೆಳಗಡೆಯಲ್ಲಿ ಕುಳಿತುಕೊಳ್ಳುವುದೇ ನನಗೆ ಭೂಷಣವು. ನಾನು ನಿಮ್ಮ ಆಸನದ ಮೇಲೆ ಕುಳಿತುಕೊಳ್ಳುವ ಯೋಗ್ಯತೆಯು ನನಗೆ ಇನ್ನೂ ಬಂದಿಲ್ಲ,” ಎಂದು ಹೇಳಿದಳು.

ಕೋಣೆಯಲ್ಲಿರುವ ದಾಸಿಯು ತರುಣ-ತರುಣಿಯರ ಮನೋಭಾವ ವನ್ನು ತಿಳಿದು, ಹೊರಟುಹೋದಳು. ಇದನ್ನು ನೋಡಿ, ಯುವಕನ ಮೊಗ್ಗುಳಿಯು ಮುರಿಯಿತು. ಅವನು ಪ್ರಸನ್ನಮುಖನಾಗಿ—“ಲಲಿತೇ, ನಿನ್ನಲ್ಲಿ ಹೀಗೆ ಪರಕೀಯತ್ವದ ಭಾವನೆಯೇಕೆ? ಇದು ನಿನ್ನಂತಹ ಕೋಮ ಲೆಗೆ ಒಪ್ಪುವುದಿಲ್ಲ. ನಮ್ಮಿರ್ವರ ಪರಿಚಯವಾಗಿ ಬಹು ದಿವಸಗಳಾಗ ದಿದ್ದರೂ, ನಾವು ಈಗ ಏಕಹೃದಯರಾಗಿದ್ದೇವೆ. ಈ ಸ್ಥಿತಿಯಲ್ಲಿ ‘ನೀನು ಹೆಚ್ಚು, ನಾನು ಹೆಚ್ಚು’ ಎಂಬ ಕಲ್ಪನೆಗೆ ಅನುವೇ ಇಲ್ಲ. ವಿಚಾರಮಾಡಿ ನೋಡು. ನೀನು ನನ್ನ ಒಡತಿಯು. ನಾನೊಬ್ಬ ಅಜ್ಞಾತಕುಲಶೀಲ ನಾದ ಮನುಷ್ಯನು. ಆಶ್ರಯದ ಆಶೆಯಿಂದ ಮಹಾರಾಜರ ಬಳಿಗೆ ಬಂದೆನು. ಅವರು ದಯಮಾಡಿಟ್ಟು ನನ್ನನ್ನಿಟ್ಟುಕೊಂಡರು. ನಾನು ಮಹಾ

ರಾಜರ ಸೇವಕನು. ನೀನು ಅವರ ಏಕಮಾತ್ರ ಪ್ರಿಯಕನ್ಯೆಯು. ಆದ್ದರಿಂದ ನಾನು ನಿನ್ನ ಸೇವಕನು ಆದಂತಾಯಿತು. ನಾನು ಈ ಸ್ಥಳದಲ್ಲಿ ಕುಳಿತುಕೊಳ್ಳಲು ಯೋಗ್ಯನಲ್ಲ. ನೀವೆಲ್ಲರೂ ಪ್ರೇಮಭರದಿಂದ ನನ್ನನ್ನು ಇಲ್ಲಿ ಕುಳ್ಳಿರಿಸಿದ್ದೀರಿ. ಹೀಗಿರಲು, ನೀನು ಇಲ್ಲಿ ಕೂಡಲಿಕ್ಕೆ ಅಡ್ಡಿ ಏನು? ನಿನಗೆ ಸರಿಬಾರದಿದ್ದರೆ ನಾನು ಕೆಳಗೆ ಕೂಡುವೆನು. ಇಲ್ಲಿ ಕೂಡುವುದು ನಿನ್ನ ಯೋಗ್ಯತೆ ಅಲ್ಲೆಂದು ಹೇಳುವುದು ಸರಿಯೇ?

ಲಲಿತೆ.—ಕುಮಾರ, ನೀವು ಹೀಗೇಕೆ ಹೇಳುವಿರಿ? ನಾನು ಈ ದೃಷ್ಟಿಯಿಂದ ಮಾತಾಡಲಿಲ್ಲ. ನೀವು ಪ್ರತಾಪಶಾಲಿಗಳಾದ ಮಹಾಪುರುಷರು. ನಾನು ಅಬಲೆಯು. ಆದುದರಿಂದ ನೀವು ನನಗಿಂತ ಹೆಚ್ಚಿನವರೆಂಬುದರಲ್ಲಿ ಸಂದೇಹವಿಲ್ಲ. ತಮ್ಮಂತಹ ವೀರಶ್ರೇಷ್ಠರ ಅರ್ಧಾಸನದಲ್ಲಿ ಕುಳಿತುಕೊಳ್ಳುವಷ್ಟು ಭಾಗ್ಯವು ಯಾವ ಪುಣ್ಯವಂತಳಿಗಿರುವದೋ ದೇವರೇ ಬಲ್ಲ.

ಹರಿಹರ.—ಪ್ರಿಯೇ, ನೀನು ಅದೇ ಮಾತಾಡುವೆಯಲ್ಲ! ನಾವಿಬ್ಬರೂ ಸ್ನೇಹಬದ್ಧರಾಗಿದ್ದೇವೆ. ಆ ಪ್ರೇಮವು ನಮ್ಮಲ್ಲಿಯ ಭೇದಭಾವನೆಯನ್ನು ತೆಗೆದುಹಾಕಿಬಿಟ್ಟದೆ. ಆದುದರಿಂದಲೇ ನಾನೊಬ್ಬ ಕ್ಷುದ್ರ ಮನುಷ್ಯನಾಗಿದ್ದರೂ, ರಾಜವೈಭವದಿಂದ ಈ ಪ್ರಾಸಾದದಲ್ಲಿ ವಾಸಿಸುತ್ತಿದ್ದೇನೆ. ಈಗ ನನಗೆ ನನ್ನ ಗತಜೀವನದ ನೆನಪು ಕೂಡ ಆಗುವಂತಿಲ್ಲ. ಮಹಾರಾಜರನ್ನು ತಂದೆಯಂತೆ ತಿಳಿದು, ಈ ವೈಭವವು ನನ್ನದೆಂದೇ ಭಾವಿಸಿದ್ದೇನೆ. ಹೀಗೆ ನನ್ನ ತಿಳಿವಳಿಕೆಯಾಗುವುದಕ್ಕೆ ಯಾವ ಕಾರಣವಿದೆಯೆಂಬುದನ್ನು ನೀನು ಬಲ್ಲೆಯಾ? ಕೇವಲ ಮಹಾರಾಜರ ಪ್ರೀತಿಯೂ ನಿನ್ನ ಪ್ರೇಮವೂ ಇದಕ್ಕೆ ಕಾರಣವಾಗಿವೆ. ಒಂದು ಕಾಲದಲ್ಲಿ ನನಗೆ ಈ ಜಗತ್ತಿನಲ್ಲಿ ನನ್ನವರೆನ್ನುವವರು ಯಾರೂ ಇರಲಿಲ್ಲ. ಈಗ ನನ್ನಲ್ಲಿ ಬಳಗಸ್ತನಾಗಿರುವೆನೆಂಬ ಭಾವನೆಯು ನೆಲೆಗೊಂಡಿದೆ. ಇದರಿಂದ ನಾನು ಆನಂದದಿಂದ ಕಾಲಕಳೆಯುತ್ತಿದ್ದೇನೆ. ಭವಿಷ್ಯತ್ಕಾಲದಲ್ಲಿ ಇದಕ್ಕೂ ಹೆಚ್ಚು ಸಂತೋಷಕಾರಕವಾದ ದಿವಸಗಳು ಒದಗುತ್ತವೆಂದು ಕಲ್ಪಿಸುತ್ತಿದ್ದೇನೆ. ಆ ಕಾಲ್ಪನಿಕ ಸುಖದಲ್ಲಿ ತಲ್ಲೀನನಾಗಿರುತ್ತೇನೆ. ನೀನು ನನ್ನನ್ನು ಪ್ರೀತಿಸಿದರೆ ಮಾತ್ರ ನನ್ನ ಈ ಕಲ್ಪನೆಯು ಕಾರ್ಯಕಾರಿಯಾಗಿ ಪರಿಣಮಿಸಬಹುದು. ಇಲ್ಲವಾದರೆ, ಕಾಲ್ಪನಿಕ ಸುಖ

ಸಾಮ್ರಾಜ್ಯದ ಸಿಂಹಾಸನವನ್ನೇರಿದ ನನ್ನನ್ನು ಯಾರಾದರೂ ಕೈಹಿಡಿದು ಜಗ್ಗಿ ಆಳವಾದುದೊಂದು ಹಾಳುಪ್ರದೇಶದಲ್ಲಿ ನುಗಿಸಬಹುದು ಎಂಬ ಸಂದೇಹವು ಒಮ್ಮೊಮ್ಮೆ ಉಂಟಾಗುತ್ತಿರುವದು. ಈ ವಿಚಾರ ಬಂದಾಗ ತುಸು ಮಟ್ಟಿಗೆ ಕಳವಳವೂ ಆಗುತ್ತಿರುವದು. ಆದರೆ ಉತ್ತರಕ್ಷಣದಲ್ಲಿ ನಿನ್ನ ದರ್ಶನದಿಂದ ಆ ಅಸಮಾಧಾನವು ಸಹಸಾ ನಾಶವಾಗಿ, ಪುನಃ ಭಾವೀ ಸುಖಕಲ್ಪನೆಗಳಲ್ಲಿ ಮುಳುಗುವೆನು. ಮನೋಹರೆ, ಹೆಚ್ಚಿಗೆ ಹೇಳಲೇನು? ನನ್ನ ಭವಿಷ್ಯತ್ಸುಖವು ಕೇವಲ ನಿನ್ನನ್ನವಲಂಬಿಸಿರುವದು. ನನ್ನ ಪ್ರೇಮವು ನಿನ್ನ ಮೇಲೆ ಪೂರ್ಣವಾಗಿರುತ್ತದೆ. ನೀನು ನನ್ನನ್ನು ನಿಜವಾಗಿ ಪ್ರೀತಿಸಿದರೆ ನನ್ನ ಸುಖಕ್ಕೆ ಎಣೆಯಿಲ್ಲ.

ಲಲಿತೆ.—ಕುಮಾರ, ತಾವೇನನ್ನುತ್ತಿರುವಿರೋ ಅದು ನನಗೆ ಚೆನ್ನಾಗಿ ತಿಳಿಯದು! ನಾನಿನ್ನೂ ಅಪ್ರಬುದ್ಧಳಾದ ಬಾಲಿಕೆಯು. ಸಾರಾಸಾರ ವಿಚಾರವು ಇನ್ನೂ ನನಗೆ ಬಂದಿಲ್ಲ. ಆದರೂ ತಮ್ಮಂತಹ ವೀರರ ಭವಿತವ್ಯವು ನನ್ನಂತಹ ಏನೂ ತಿಳಿಯದ ಬಾಲಿಕೆಯನ್ನವಲಂಬಿಸಿದೆಯೆಂಬುದನ್ನು ನಾನು ಒಪ್ಪಲಾರೆನು. ವೀರರಿಗೆ ಎಲ್ಲಿ ಹೋದರೂ ಮಾನವುಂಟು, ಮರ್ಯಾದೆಯುಂಟು. ಅವರು ತಮ್ಮಲ್ಲಿದ್ದ ಶಕ್ತಿಯಿಂದ ಬೇಕಾದ್ದನ್ನು ದೊರಕಿಸಬಹುದು; ಸದಾ ಸುಖಿಗಳಾಗಿರಬಹುದು. ಹೀಗಿರಲು ತಮ್ಮ ಭಾವೀ ಸುಖವು ಕೇವಲ ನನ್ನನ್ನವಲಂಬಿಸಿದೆಯೆಂಬ ಮಾತಿನಲ್ಲಿ ಹೇಗೆ ನಂಬಿಗೆಯನ್ನಿಡಲಿ? ನೀವು ನನ್ನ ಮೇಲೆ ಅನೇಕ ಉಪಕಾರಗಳನ್ನು ಮಾಡಿದ್ದೀರಿ. ಇಂದು ಬೇಟೆಗೆ ಹೋದಾಗ ತಮ್ಮ ಸಾಹಾಯ್ಯವು ನನಗೆ ದೊರೆಯದಿದ್ದರೆ, ನಾನು ನಿಶ್ಚಯವಾಗಿಯೂ ಹುಲಿಯ ಬಾಯಿಗೆ ತುತ್ತಾಗುತ್ತಿದ್ದೆನು! ನಾನು ಈ ನಿಮ್ಮ ಉಪಕಾರವನ್ನು ಮರೆಯುವುದು ಹೇಗೆ? ನಿಮ್ಮ ವಿಷಯದಲ್ಲಿ ಚಿರ ಕೃತಜ್ಞತೆಯನ್ನು ತಾಳುವುದು ನನ್ನ ಕರ್ತವ್ಯವಾಗಿದೆ. ಮೇಲಾಗಿ ನಿಮ್ಮ ಉದಾತ್ತವಾದ ವಿಚಾರಗಳೂ ಉತ್ತಮವಾದ ಆಚರಣೆಯೂ ನನಗೆ ಅತ್ಯಂತ ಸಮಾಧಾನವನ್ನುಂಟುಮಾಡುತ್ತಿರುವವು. ತಾವು ನನ್ನನ್ನು ತಮ್ಮ ದಾಸಿಯಾಗಿ ಸ್ವೀಕರಿಸಿದರೆ ನಾನು ಕೃತಕೃತ್ಯಳಾಗುವೆನು. ಇದಕ್ಕಾಗಿ ನೀವು ಸಂಕೋಚಮಾಡಿಕೊಳ್ಳುವ ಕಾರಣವಿಲ್ಲ. ನನ್ನನ್ನು ಪರಿಗ್ರಹಿಸಿ ಉದ್ಧಾರಮಾಡಿರಿ.

**ಹರಿಹರ.**—ಲಲಿತೇ, ಆಮ್ರವೃಕ್ಷವು ಲತೆಯ ಸಹಾಯವಿಲ್ಲದೆ ತನ್ನ ಸಂರಕ್ಷಣೆಯನ್ನು ಮಾಡಿಕೊಳ್ಳಲಾರದೇನು ? ತನ್ನ ಕರ್ತವ್ಯವನ್ನು ಮಾಡ ಲಾರದೇನು ? ಹೀಗಿದ್ದರೂ ಅದು ಲತೆಯನ್ನಪ್ಪಿಕೊಳ್ಳುತ್ತಿರುವದೇಕೆ ? ಆದರ ಸಾಹಚರ್ಯವನ್ನು ಬಯಸುತ್ತಿರುವದೇಕೆ ? ಆ ಲತೆಯಿಂದ ಮಾತ್ರ ಅದಕ್ಕೆ ಪೂರ್ಣತೆ ಉಂಟಾಗುತ್ತದೆಂದಲ್ಲವೇ ? ನಾನು ಎಷ್ಟು ಶೂರನಾದರೂ ನಿನ್ನಂತಹ ಸಹಧರ್ಮಿಣಿ ಇಲ್ಲದೆ ಸುಖಿಯಾಗಲಾರೆನು.

**ಲಲಿತೆ.**—ಕುಮಾರ, ನಾವು ಮನುಷ್ಯರು. ಅದು ಗಿಡವು. ಅದು ಮಾಡಿದಂತೆ ನಾವೂ ಮಾಡಬೇಕೇನು ? ನಿರುದ್ಯೋಗಿಯಾದ ಆ ವೃಕ್ಷವು ಸದಾ ಲತೆಯ ಸಹವಾಸದಲ್ಲಿರಲೊಲ್ಲದೇಕೆ; ಕರ್ತವ್ಯ ಪರಾಯಣರಾದ ನಿಮಗೆ ನನ್ನಂತಹ ಅಬಲೆಯ ಸಂಗದಿಂದ ಉಪಯೋಗವೇನು ?

**ಹರಿಹರ.**—ಪ್ರಿಯತಮೆ, ಹಾಗೆನ್ನಬೇಡ. ಈ ಪ್ರಪಂಚದಲ್ಲಿ ಸಕಲ ಪ್ರಾಣಿಗಳು ಸಹವಾಸಪ್ರಿಯವಾಗಿವೆ. ಈ ಸಹವಾಸದಲ್ಲಿ ದಾಂಪತ್ಯ ಮಿಲನವು ಅತಿ ಮಹತ್ವದ್ದು. ಶೂರನೇ ಇರಲಿ, ಧೀರನೇ ಇರಲಿ, ದಾಂಪತ್ಯ ಪ್ರೇಮದಿಂದ ಅವನು ಕುಂದಣ ಹಾಕಿದ ವಜ್ರದಂತೆ ಒಪ್ಪುತ್ತಾನೆ. ಅಂತೆಯೇ ನಾನು ನಿನ್ನ ಚಿರಸಹವಾಸಕ್ಕೆ ಆತುರನಾಗಿದ್ದೇನೆ. ಸುಗುಣೆಯೂ ಸುಂದರಿಯೂ ಆದ ನೀನು ನನ್ನನ್ನು ವರಿಸಿದರೆ, ನಾನು ಧನ್ಯನೆಂದು ತಿಳಿದುಕೊಳ್ಳುವೆನು. ಕರ್ತವ್ಯ ಮಾರ್ಗದಲ್ಲಿ ಅತಿ ಉತ್ಸಾಹದಿಂದ ಮುಂದಡಿಯನ್ನಿಡುವೆನು. ಅದಕ್ಕಾಗಿ ನನ್ನಲ್ಲಿ ನಿನ್ನ ಪ್ರೇಮವನ್ನಿರಿಸಿರುವೆ ಎಂದು ಒಮ್ಮೆ ಹೇಳಿಬಿಡು.

**ಲಲಿತೆ.**—ಕುಮಾರ, ಪ್ರೇಮವನ್ನಿರಿಸುವುದೆಂದರೇನು ? ಅದನ್ನು ನಾನರಿಯೆ. ತಮಗೆ ನನ್ನ ತನುಮನಧನವನ್ನು ಅರ್ಪಿಸಿರುತ್ತೇನೆ. ನನ್ನ ಸರ್ವಸ್ವವು ತಮ್ಮದೇ.

**ಹರಿಹರ.**—ಮನೋಹರೆ, ಪ್ರೇಮವು ಅನುಭವದಿಂದ ತಿಳಿಯತಕ್ಕದ್ದು. ಅದನ್ನು ವರ್ಣಿಸಿ ಹೇಳಲಿಕ್ಕೆ ಬರುವಂತಿಲ್ಲ. ತೋರಿಸಿಕೊಡಲಿಕ್ಕೆ ಬರುವಂತಿಲ್ಲ. ಕಾರಣ ನನ್ನಲ್ಲಿ ಪ್ರೇಮವನ್ನಿರಿಸು. ಅಂದರೆ ಪ್ರೇಮವೆಂದರೇನೆಂಬುದು ನಿನಗೆ ತಾನೇ ತಾನಾಗಿ ತಿಳಿಯುವದು.

**ಲಲಿತೆ.**—ಕುಮಾರ, ನಿಮಗೆ ಪ್ರೇಮದ ಅನುಭವವುಂಟೇನು ?

**ಹರಿಹರ.**—ಪ್ರಿಯತಮೆ, ನನಗೂ ಆದರ ಅನುಭವವಿಲ್ಲ. ಆದರೂ ಪ್ರೇಮವು ಮಾನವೀಜೀವಿತದ ಸಾರವೆಂದು ಬಲ್ಲವರು ಹೇಳುತ್ತಿರುವುದನ್ನು ಕೇಳಿದ್ದೇನೆ. ಪ್ರೇಮವು ಜಗತ್ತಿನ ಆಧಾರವು; ಇದರಿಂದಲೇ ಜಗತ್ತಿನ ಸಕಲ ಕಾರ್ಯಗಳು ನಡೆದಿವೆ; ಪ್ರೇಮವಂಚಿತನ ಬಾಳು ಬಾಳಲ್ಲ; ಪ್ರೇಮಹೀನನಿಗೆ ಈ ಲೋಕವು ನಿಸ್ಸಾರವೂ ದುಃಖದಾಯಕವೂ ಎಂದು ತೋರುತ್ತದೆ; ಪ್ರೇಮಬದ್ಧನು ಇಂತಹ ಅಸಾರವಾದ ಸಂಸಾರವನ್ನು ನಂದನವನವೆಂದು ಭಾವಿಸಿ, ಸಂತೋಷದಿಂದ ಕಾಲಕಳೆಯುವನು; ಇಂತಹ ಪ್ರೇಮವನ್ನು ಉಪಭೋಗಿಸುವ ಇಚ್ಛೆಯು ನನಗುಂಟು. ಕಾರಣ ನಿನ್ನ ಪ್ರಣಯ ಸಂಪಾದನೆಗಾಗಿ ಹಾತೊರೆಯುತ್ತಿದ್ದೇನೆ.

**ಲಲಿತೆ.**—ಕುಮಾರ, ನೀವು ನನ್ನನ್ನು ಪ್ರೀತಿಸುವಿರಾ ? ಹೇಳಿರಿ, ನೋಡೋಣ.

**ಹರಿಹರ.**—ಕೋಮಲೆ, ನಾನು ಪ್ರೀತಿಸದಿದ್ದರೆ, ಈ ಮಾತು ಕೇಳುತ್ತಿರಲೇ ಇಲ್ಲ. ನಾನು ಮನಃಪೂರ್ವಕವಾಗಿಯೂ ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನ ಹೃದಯಮಂದಿರದೊಳಗಿನ ಆರಾಧ್ಯದೇವತೆಯಾಗಿ ಬಹಳ ದಿವಸಗಳಾದವು.

**ಲಲಿತೆ.**—ಕುಮಾರ, ತಮ್ಮ ವಿಷಯದಲ್ಲಿ ನನಗೆ ಅತ್ಯಾದರವೂ ಪ್ರೀತಿಯೂ ಉಂಟೆಂದು ಈ ಮೊದಲೇ ನಾನು ಹೇಳಿದೆನಲ್ಲ! (ಎಂದು ಆ ತರುಣಿಯು ನಾಚಿಕೆಯಿಂದ ಮೋರೆಯನ್ನು ಕೆಳಗೆ ಮಾಡುತ್ತಾಳೆ).

ಹರಿಹರನು ಅವಳ ಕೈಹಿಡಿದು, ಬಳಿಯಲ್ಲಿ ಕುಳ್ಳಿರಿಸಿಕೊಂಡು, ಹಾರಾಡುತ್ತಿರುವ ಆಕೆಯ ಮುಂಗುರುಳುಗಳನ್ನು ಸರಿಪಡಿಸಿ, ಮುದ್ದಿಟ್ಟು ಪ್ರೇಮಪೂರ್ಣವಾಗಿ ಮೃದುಸ್ವರದಿಂದ—“ ಲಲಿತೆ, ನಮ್ಮಿಬ್ಬರ ಈ ಪ್ರೇಮಕ್ಕೆ ಮೂರ್ತಸ್ವರೂಪವು ಬರುವದಾವಾಗ ? ”

**ಲ.**—ಕುಮಾರ, ದೇವರ ದಯೆಯಿಂದ ಅದು ಒಂದಿಲ್ಲೊಂದು ದಿನ ಆಗುವದು. ಅದಕ್ಕಾಗಿ ನಾವೀಗ ಯೋಚಿಸುವ ಕಾರಣವಿಲ್ಲ. ಅಪ್ಪನಿದ್ದಾನೆ. ಅವನು ನನ್ನ ಇಚ್ಛೆಯಂತೆ ನಮ್ಮಿಬ್ಬರ ವಿವಾಹವನ್ನು ಮಾಡಿಬಿಡುವನು.

ಹ.—ಕೋಮಲೆ, ಹಾಗಂದರೆ ಹೇಗೆ? ಅಲ್ಲಿ ನೋಡು. ತುಂಗಭದ್ರೆಯು ನಿಜನಾಥನನ್ನು ಸೇರುವುದಕ್ಕೆ ಹೇಗೆ ಅರ್ಭಟಿಸಿ ಬರುತ್ತಿರುವಳು.

ಲ.—ತುಂಗಭದ್ರೆಯ ಪ್ರಿಯನಾರು?

ಹ.—ಸಮುದ್ರನಾಥನು.

ಲ.—ಇವಳಂತೆಯೇ ಆ ಸಮುದ್ರರಾಜನೂ ಇವಳ ಸಮಾಗಮಕ್ಕಾಗಿ ಬರುತ್ತಿರುವನೇನು? ಸಮುದ್ರನಾಥನು ಅತ್ಯಂತ ಗಂಭೀರನಾಗಿರುವನೆಂದು ನಾನು ಕೇಳುತ್ತೇನೆ.

ಹ.—ಅಹುದು. ನೀನೆನ್ನುವುದು ನಿಜವು.

ಲ.—ಕುಮಾರ, ನನ್ನ ಮನಸ್ಸಾದರೂ ನಿಮ್ಮ ಚಿರಸಮಾಗಮಕ್ಕಾಗಿ ಹಾತೊರೆಯುತ್ತದೆ. ಆದರೆ ಅದಕ್ಕೆ ಅನುಕೂಲಕಾಲವು ಬೇಕು. ನೀವು ಸಮುದ್ರರಾಜನಂತೆ ಶಾಂತರಾಗಿರಿ. ತುಂಗಭದ್ರೆಯು ಸಾಗರನಾಥನನು ಸೇರುವಂತೆ, ನಾನೂ ನಿಮ್ಮ ಪಾಣಿಗ್ರಹಣ ಮಾಡುವೆನು. ತುಂಗಭದ್ರೆಯ ಮಾರ್ಗವು ಪ್ರತಿಬಂಧಮಯವಾಗಿರುವುದನ್ನು ನೀವು ನೋಡುತ್ತಿರುವಿರಿ. ಆದರೂ ಸಾಹಸಿಕಳಾದ ಅವಳು ತನ್ನ ಹಾದಿಯಲ್ಲಿಯ ಪರ್ವತಪ್ರದೇಶವನ್ನು ಸವಿಸಿ, ರಭಸದಿಂದ ಹೋಗುತ್ತಿರುವಳು. ಇಷ್ಟೊಂದು ಧೈರ್ಯವು ಅಬಲೆಯಾದ ನನಗೆಲ್ಲಿಂದ ಬರಬೇಕು? ಆದುದರಿಂದ ಕಾಲವಿಲಂಬವು ಅನಿವಾರ್ಯವಾದುದು!

ಹ.—ತುಂಗಭದ್ರೆಗೆ ಪ್ರಬಲನಾದ ಪರ್ವತರಾಜನು ತಡೆಯಾಗಿರುವುದು ನಿಜವು; ಆದರೆ ನಮ್ಮ ವಿವಾಹಕ್ಕೆ ವಿಘ್ನಮಾಡತಕ್ಕವರಾರು?

ಲ.—ಕುಮಾರ, ಹಾಗೆ ತಿಳಿಯಬೇಡರಿ. ನಮ್ಮಿರ್ವರ ಮದುವೆಗೆ ತಡೆಯೊಂದಿರುವದು.

ಹ.—ಅದಾವುದು?

ಲ.—ತಮ್ಮ ಅಜ್ಞಾತಕುಲವು.

ಕುಮಾರನು ಅಸಮಾಧಾನಕ್ಕೊಳಗಾದನು. ರಮಣಿಯು ಹೇಳುತ್ತಿರುವುದು ನಿಜವೆಂದು ಅವನಿಗೆ ಮನವರಿಕೆಯಾಯಿತು. ಅವನು ನಿಟ್ಟುಸಿರುಬಿಟ್ಟು—“ಹಾಗಾದರೆ ಈಗ ನಾನು ಮಾಡಬೇಕಾದ್ದೇನು?” ಎಂದು ಕೇಳಿದನು.

ಲ.—ಈ ವಿಷಯದಲ್ಲಿ ತಾವು ಏನೂ ಮಾಡುವ ಕಾರಣವಿಲ್ಲ. ಆಚಾರ್ಯರು ನಿಮ್ಮ ಜೀವನ-ವೃತ್ತಾಂತವನ್ನು ಸಂಪೂರ್ಣವಾಗಿ ಬಲ್ಲರು. ಅವರು ಇದನ್ನು ಒಂದಿಲ್ಲೊಂದು ದಿನ ಹೇಳುವರು. ಅಂದು ನಮ್ಮ ಲಗ್ನವಾಗುವದು. ಅವರಲ್ಲಿ ನಮ್ಮಪ್ಪನ ಪೂರ್ಣ ವಿಶ್ವಾಸವುಂಟು. ಅವರು ಹೇಳಿದಂತೆ ಅವನು ನಡೆಯುವನು.

ಹ.—ಹಾಗೆಯೇ ಆಗಲಿ, ನೀನು ನನ್ನನ್ನು ಪ್ರೀತಿಸುವೆನೆಂದು ಇನ್ನೊಮ್ಮೆ ಹೇಳು. ಎಷ್ಟು ಸಾರಿ ಕೇಳಿದರೂ ನನಗೆ ತೃಪ್ತಿಯಾಗಲೊಲ್ಲದು!

ಲ.—ಕುಮಾರ, ನಿಮಗೆ ನನ್ನ ಮಾತಿನಲ್ಲಿ ಸಂದೇಹವುಂಟಾಗುತ್ತಿರುವದೇನು? ತುಂಗಭದ್ರೆಯು ಸಾಕ್ಷಿಯಾಗಿಯೂ ಹೇಳುವೆನು—ನಾನು ನಿಮ್ಮನ್ನೇ ವರಿಸುವೆನು.

ಕುಮಾರನು ಅತಿಶಯವಾಗಿ ಹಿಗ್ಗಿದನು. ಬಾಗಿಲಿನಲ್ಲಿ ಯಾರೋ ನಡೆದು ಹೋದ ಸಪ್ಪಳವಾಯಿತು. ಲಲಿತಾಂಬಿಕೆಯು ಹೊತ್ತಾಯಿತೆಂದು ಎದ್ದು ನಡೆದಳು. ಹರಿಹರನು ದಂಗುಬಡೆದು ಕುಳಿತುಕೊಂಡನು.

## ಆರನೆಯ ಅಧ್ಯಾಯ

### ರಾಕ್ಷಸೀ ಮಹತ್ವಾಕಾಂಕ್ಷೆಯು

ಕ್ರಮವಾಗಿ ರಾತ್ರಿಯು ಹೆಚ್ಚಾಗುತ್ತ ನಡೆದಿದೆ. ಆಕಾಶವು ಹೆಚ್ಚೆಚ್ಚು ಸ್ವಚ್ಛವಾಗುತ್ತಲಿದೆ. ಚಂದ್ರನ ಕಿರಣಗಳು ಉಜ್ವಲವಾಗಿ ಕಾಣತೊಡಗಿದ್ದವು. ನಮ್ಮ ಪೂರ್ವಪರಿಚಿತನಾದ ತರುಣನು ಇನ್ನೂ ಅದೇ ಕೋಣೆಯಲ್ಲಿ ಕುಳಿತುಕೊಂಡಿದ್ದನು. ಅವನು ವಿಚಾರಿಸುತಿದ್ದುದೇನಂದರೆ:—“ಈ ಸುಂದರಿಯ ಪ್ರೇಮವು ನನ್ನ ಮೇಲಿರುವುದು ನಿಶ್ಚಯದ ಮಾತಾಗಿದೆ. ಮಹಾರಾಜರಿಗೆ ಇವಳೊಬ್ಬಳೇ ಮಗಳು; ಆದುದರಿಂದ ಅವರು ಇವಳನ್ನು ಬಹಳವಾಗಿ

ಪ್ರೀತಿಸುತ್ತಿದ್ದಾರೆ. ಮಹಾರಾಜರು ಮುದುಕರಾಗಿದ್ದಾರೆ. ಗಂಡು ಮಕ್ಕಳಿರದ ಮೂಲಕ ಅವರಿಗೆ ಈ ಸುಂದರಿಯೇ ಜೀವನಸರ್ವಸ್ವಳು. ಆದ ಕಾರಣ ಅವರು ತನ್ನ ಮಗಳು ವರಿಸಿದ ವರನನ್ನೇ ಅಳಿಯನನ್ನಾಗಿ ಮಾಡಿಕೊಳ್ಳುವುದರಲ್ಲಿ ಸಂದೇಹವಿಲ್ಲ. ವೃದ್ಧಮಹಾರಾಜರು ನನ್ನ ಗುಣಗಳಿಗೆ ಲುಬ್ಧರಾಗಿ, ನನ್ನನ್ನು ಬಹಳವಾಗಿ ಗೌರವಿಸುತ್ತಿದ್ದಾರೆ. ಈ ಸ್ಥಿತಿಯಲ್ಲಿ ಅವರಿಂದ ನನ್ನ ಮನಸ್ಸಿಗೆ ವಿರುದ್ಧವಾಗಿ ಕಾರ್ಯಮಾಡುವುದಾಗದು. ಇದರಿಂದ ನನ್ನ ಪ್ರೇಮಕ್ಕೆ ಮಹಾರಾಜರಿಂದ ವಿಘ್ನವುಂಟಾಗದು. ನನ್ನ ಈ ಪ್ರಣಯಕ್ಕೆ ಅಡ್ಡಿಯಾಗಿ ನಿಂತುಕೊಳ್ಳತಕ್ಕ ಇತರ ಜನರಂತೂ ಇಲ್ಲವೇ ಇಲ್ಲ. ಕಾರಣ ನಾನು ಒಂದಿಲ್ಲೊಂದು ದಿನ ಈ ಮೋಹಿನಿಯ ಕೈಹಿಡಿದು ಕೃತಾರ್ಥನಾಗುವೆನು."

ಹೀಗೆ ಆ ತರುಣನು ಭಾವೀ ಸುಖಕಲ್ಪನೆಯಲ್ಲಿ ಮಗ್ನನಾಗಿ ಹೋಗಿದ್ದನು. ಈ ಸಮಯದಲ್ಲಿ ಒಬ್ಬ ದಾಸಿಯು ಒಳಗೆ ಬಂದು, ತರುಣನ ಬಳಿಯಲ್ಲಿ ವಿನಯದಿಂದ ನಿಂತುಕೊಂಡಳು. ಯುವಕನು ತನ್ನ ವಿಚಾರ ತಂದ್ರಿಯಿಂದೆಚ್ಚತ್ತು ನೋಡಿದನು. ಅಪರಿಚಿತಳಾದೊಬ್ಬ ಹೆಂಗಸು ತನ್ನ ಹತ್ತರ ನಿಂತುಕೊಂಡಿರುವುದು ತಿಳಿಯಬಂದಿತು. ತರುಣನು ಕುತೂಹಲದಿಂದ—"ಅಮ್ಮಾ ನೀನು ಯಾರು? ಇಲ್ಲಿಗೇಕೆ ಬಂದೆ?" ಎಂದು ಕೇಳಿದನು.

ದಾಸಿಯು (ಕೈಜೋಡಿಸಿ ವಿನಯದಿಂದ)—ನನ್ನ ಒಡತಿಯು ತಮ್ಮನ್ನು ನೋಡಲಪೇಕ್ಷಿಸಿದ್ದಾಳೆ. ಇದಕ್ಕೆ ತಮ್ಮ ಒಪ್ಪಿಗೆಯು ಇದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಬರುವುದಕ್ಕೆ ಅವಳು ನನ್ನನ್ನು ಕಳಿಸಿದ್ದಾಳೆ.

**ಹರಿಹರ**—ನಿನ್ನ ಯಜಮಾನಿಯು ಯಾರು?

ದಾಸಿ—ಈ ರಾಜ್ಯದ ಮುಖ್ಯ ಮಂತ್ರಿಗಳಾದ **ಸಂಗಮಮಹಾರಾಜ**ರನ್ನು ನೀವು ಬಲ್ಲಿರಷ್ಟೆ? ನನ್ನ ಒಡತಿಯು ಅವರ ಹೆಂಡತಿಯು.

**ಹ.**—ನೀನು **ಕಾಮಾಕ್ಷೀದೇವಿಯ** ದಾಸಿಯೇನು?

ದಾ.—ಹೌದು.

**ಹ.**—ಅವರಿಗೆ ನನ್ನ ಬಳಿಯಲ್ಲಿ ಕೆಲಸವೇನು?

ದಾ. — ಮಹಾರಾಜ, ಅದನ್ನು ನಾನರಿಯೆನು.

ಹ. — ಇಲ್ಲಿ ನಿಮ್ಮ ಧನಿಯಳು ಬಂದಿರುವಳೇನು ?

ದಾ. — ಇಲ್ಲ, ಅವಳು ತಮ್ಮನ್ನೇ ಅಲ್ಲಿಗೆ ಕರೆದುಕೊಂಡು ಬರುವುದಕ್ಕೆ ಹೇಳಿದ್ದಾಳೆ.

ಹರಿಹರನು ವಿಚಾರಕ್ಕೊಳಗಾದನು. ಕಾಮಾಕ್ಷಿಗೂ ತನಗೂ ವಿಶೇಷ ಪರಿಚಯುವಿರಲಿಲ್ಲ. ಹೀಗಿರಲು ಅವಳು ಇಷ್ಟು ರಾತ್ರಿಯಲ್ಲಿ ನನ್ನನ್ನೇಕೆ ಕರೆಯಿಸಿರಬಹುದು? ಎಂಬ ವಿಚಾರವು ಅವನನ್ನು ತಲ್ಲಣಗೊಳಿಸಿತು. ಕಾಮಾಕ್ಷಿಯು ಸಾಹಸಿಕಳಾದ ಹೆಂಗಸಾಗಿರುವಳೆಂದೂ ಸಂಗಮನು ಅವಳಿಚ್ಛೆಯಂತೆಯೇ ನಡೆದುಕೊಳ್ಳುವನೆಂದೂ ಅವನು ಕೇಳಿದ್ದನು. ಇಂತಹ ಸ್ತ್ರೀಯಳ ಏಕಾಂತದರ್ಶನವನ್ನು ಇಂತಹ ವೇಳೆಯಲ್ಲಿ ತೆಗೆದುಕೊಳ್ಳಬಹುದೇ ಹೇಗೆ ? ಎಂದು ಅವನು ಯೋಚಿಸತೊಡಗಿದನು. ಅವಳು ಯಾವದಕ್ಕೇ ಕರೆಯಿಸಿರಲೊಲ್ಲಳೇಕೆ, ಹೋದ ಬಳಿಕ ಎಲ್ಲವೂ ತಿಳಿಯುವದು ಎಂದು ಅಂದುಕೊಂಡು ಹೊರಡುವುದಕ್ಕೆ ಸಿದ್ಧನಾಗಿ, ದಾಸಿಯನ್ನು ಕುರಿತು— "ಅಮ್ಮಾ, ನಡೆ ಬರುತ್ತೇನೆ. ನನ್ನನ್ನು ನಿನ್ನ ಯಜಮಾನಿಯ ಬಳಿಗೆ ಕರೆದುಕೊಂಡು ಹೋಗು," ಎಂದು ಹೇಳಿದನು.

ದಾ. — ಮಹಾರಾಜ, ನನ್ನ ಒಡೆಯಳು ಈಗಲೇ ತಮ್ಮ ದರ್ಶನವನ್ನು ತೆಗೆದುಕೊಳ್ಳುವಂತಿಲ್ಲ. ಇನ್ನು ಒಂದೆರಡು ತಾಸುಗಳಾದ ಬಳಿಕ ಮತ್ತೆ ನಾನು ನಿಮ್ಮನ್ನು ಕರೆಯಲಿಕ್ಕೆ ಬರುವೆನು. ಆಗ ತಾವು ನನ್ನೊಡನೆ ಬಂದರೆ, ಅವಳ ದರ್ಶನವು ತಮಗಾಗುವದು.

ಹ. — ಅದೇಕೆ ? ಈಗಲೇ ಏಕೆ ಬರಕೂಡದು ? ಅಷ್ಟೊಂದು ರಾತ್ರಿಯಲ್ಲಿ ಮನೆಬಿಟ್ಟು ಹೊರಬೀಳುವ ಇಚ್ಛೆಯು ನನಗಿಲ್ಲ. ಬೇಕಾದರೆ ಈ ಸಂಗತಿಯನ್ನು ನಿನ್ನ ಒಡತಿಗೆ ತಿಳಿಸಿಬಂದು ಹೇಳು.

ದಾ. — ಹಾಗಾದರೆ ಮಹಾರಾಜರ ಚಿತ್ತ. ನಾನು ಕೇವಲ ಸೇವಕಳು. ಯಜಮಾನಿಯು ಹೇಳಿದಂತೆ ಮಾಡುವುದು ನನ್ನ ಕೆಲಸವು. ನನ್ನ ಯಜಮಾನಿಯಳ ಅಭಿಪ್ರಾಯವನ್ನು ನಿಮಗೆ ತಿಳಿಸಿದೆನು. ಈಗ ಅವಳಿಗೆ ಕೆಲಸವಿದೆಯಂತೆ. ಏಕಾಂತದಲ್ಲಿ ತಮ್ಮ ದರ್ಶನ ತೆಗೆದುಕೊಳ್ಳಬೇಕಾಗಿದೆಯಂತೆ.

ಆದುದರಿಂದವಳು ಮಧ್ಯರಾತ್ರಿಯ ಸುಮಾರಕ್ಕೇ ತಮ್ಮನ್ನು ಕಾಣಲು ಇಚ್ಛಿಸಿದ್ದಾಳೆ. ನೀವು ಸಮ್ಮತಿಸಿದರೆ, ಅವಳ ಇಷ್ಟವು ಕೈಗೂಡಬಹುದಾಗಿದೆ. ನಿಮ್ಮ ಮನಸ್ಸು ಬಂದಂತೆ ಮಾಡಬಹುದು.

ಹರಿಹರನು ಪುನಃ ವಿಚಾರಕ್ಕೊಳಗಾದನು—ಮಧ್ಯರಾತ್ರಿಯಲ್ಲಿ ನನ್ನ ಏಕಾಂತದರ್ಶನ ತೆಗೆದುಕೊಳ್ಳುವುದರಲ್ಲಿ ಅವಳ ಉದ್ದೇಶವೇನಿರಬಹುದು? ಅವಳು ರಾಜಕಾರಣದಲ್ಲಿ ಮನಸ್ಸು ಹಾಕುವಳು. ಆದಕಾರಣ ಆವುದೋ ಒಂದು ರಾಜಕೀಯ ವಿಚಾರದ ವಿಮರ್ಶೆಗಾಗಿ ನನ್ನನ್ನು ಕರೆಯಿಸುವ ಸಂಭವವುಂಟು! ಪ್ರಕೃತದಲ್ಲಿ ಅಂತಹ ರಾಜಕೀಯ ಸಂಗತಿಯಾದರೂ ಯಾವುದಿದೆ? ನನ್ನಿಂದ ಅವಳ ಮಹತ್ವಾಕಾಂಕ್ಷೆಗೆ ತೊಂದರೆಯಾಗುವುದೆಂದು ಭಾವಿಸಿ, ಅವಳು ನನ್ನ ನಾಶಕ್ಕಾಗಿ ಪ್ರಯತ್ನಿಸುತ್ತಿರಬಹುದೇನು? ನಾನು ಯಾರು? ಅವಳು ಯಾರು? ನನ್ನಿಂದ ಅವಳ ಕಾರ್ಯಗಳಿಗೆ ಅಡ್ಡಿಯಾಗುವದೆಂತು? ಹಾಗಾದರೆ ಮತ್ತೇತಕ್ಕೆ ಕರೆಯಿಸಿರಬಹುದು? ಯಾವದಾದರೊಂದು ಕೆಟ್ಟ ವಿಚಾರದಿಂದ ನನ್ನನ್ನು ಬರಮಾಡಿಕೊಳ್ಳಲು ಇಚ್ಚಿಸಿರಬಹುದೇನು? ಹೀಗಿದ್ದರೆ ನಾನು ಮಾಡಬೇಕಾದುದೇನು? ಹೇಗೇ ಇರಲಿ, ಹೋದಬಳಿಕ ತಾನೇ ಗೊತ್ತಾಗುವದು. ನಾನು ಶೂರ ಮನುಷ್ಯನಾಗಿದ್ದು, ಒಬ್ಬ ಕುಲಮಹಿಳೆಯ ಆಮಂತ್ರಣವನ್ನು ಅಲ್ಲಗಳೆಯುವುದು ತರವಲ್ಲ. ಅವಳು ತನಗೊದಗಿದ ಆಪತ್ತಿನಿಂದ ರಕ್ಷಣೆ ಹೊಂದುವುದಕ್ಕಾಗಿಯೂ ನನ್ನನ್ನು ಕರೆಯಿಸುವ ಸಂಭವವುಂಟು. ಅಬಲೆಯರನ್ನು ಸಂರಕ್ಷಿಸುವುದು ವೀರರ ಕರ್ತವ್ಯವು. ಒಂದು ವೇಳೆ ನಾನು ಈಗ ಅವಳ ವಿಜ್ಞಾಪನೆಯನ್ನು ಅಲ್ಲಗಳೆಯುವೆನಾದರೆ, ಆ ರಮಣಿಯು ಸಾಹಾಯಕ್ಕಾಗಿ ಪ್ರಾರ್ಥಿಸಿಕೊಂಡ ಸಮಯದಲ್ಲಿ ಹಿಂದೆಗೆದ ಪಾಪಕ್ಕೆ ಗುರಿಯಾಗಬೇಕಾಗುವದು. ಅವಳು ಕೆಟ್ಟ ಉದ್ದೇಶದಿಂದ ನನ್ನನ್ನು ಕರೆದೊಯ್ದರೆ, ಅವಳ ಉದ್ದೇಶವಾದರೂ ನನಗೆ ತಿಳಿಯುವದು. ಈ ವೇಳೆಯಲ್ಲಿ ಯಾವುದೊಂದು ಗುಪ್ತಕಾರಸ್ಥಾನವು ಹೊರಬೀಳುವ ಸಂಭವವೂ ಉಂಟು. ನಾನು ವಿಪತ್ತಿನಲ್ಲಿ ಸಿಲ್ಕುವೆನಾದರೆ, ದೇವರು ನನಗೆ ಸಾಹಾಯ ಮಾಡದಿರನು; ಏಕೆಂದರೆ ನನ್ನಲ್ಲಿ ಕೆಟ್ಟ ಉದ್ದೇಶವಿಲ್ಲ. ನಾನು ಭವಿಷತ್ಕಾಲದಲ್ಲಿ ಉನ್ನತಪದವಿಗೇರುವೆನೆಂದು ಆಚಾರ್ಯರು ಹೇಳಿದ್ದಾರೆ. ಈ ಯೋಗ್ಯತೆಯು ನನ್ನ

ಲ್ಲುಂಟಾಗಬೇಕಾದರೆ, ನಾನು ಸಾಹಸದ ಕಾರ್ಯಗಳನ್ನು ಕೈಕೊಳ್ಳಲೇ ಬೇಕು. ಈ ರಾಜ್ಯದ ಸಣ್ಣ ಪುಟ್ಟ ಸಂಗತಿಗಳನ್ನು ಸಹ ಅರಿತುಕೊಳ್ಳ ಬೇಕು. ಆದುದರಿಂದ ಆ ರಮಣಿಯ ಆಮಂತ್ರಣವನ್ನು ಸ್ವೀಕರಿಸುವದೇ ಒಳಿತಾದುದು.

ಹರಿಹರನು ಹೀಗೆ ವಿಚಾರಮಗ್ನನಾಗಿರುವುದನ್ನು ನೋಡಿ, ದಾಸಿಯು— ತಾವು ಬಹಳ ವಿಚಾರಕ್ಕೊಳಗಾದಂತೆ ತೋರುತ್ತದೆ. ಒಬ್ಬ ಹೆಂಗಸಿನ ದರ್ಶನ ತೆಗೆದುಕೊಳ್ಳಲು ತಾವು ಹೆದರುತ್ತಿರುವಿರೇನು? ಧೈರ್ಯಶಾಲಿ ಗಳಾದ ವೀರರೆಂದು ತಮ್ಮ ಖ್ಯಾತಿಯುಂಟು!— ಎಂದು ಉಪಹಾಸಸೂಚಕ ಸ್ವರದಿಂದ ಅಂದಳು.

ಹರಿಹರನಿಗೆ ತುಸು ನಾಚಿಕೆಯುಂಟಾಯಿತು. ಒಬ್ಬ ದಾಸಿಯು ಈ ರೀತಿ ಅಪಮಾನಕಾರಕ ಮಾತುಗಳನ್ನಾಡುತ್ತಿರುವುದನ್ನು ಕೇಳಿ, ಅವನಿಗೆ ಸಿಟ್ಟೂ ಬಂತು. ಆದರೂ ಅವನು ಆತ್ಮಸಂಯಮನ ಮಾಡಿಕೊಂಡು— ಅಮ್ಮಾ ಹೆಂಗಸರೊಡನೆ ವಿಶೇಷ ವ್ಯವಹಾರಮಾಡಿ ನನಗೆ ಗೊತ್ತಿಲ್ಲ. ಒಬ್ಬ ವೀರನು ಯುದ್ಧಕ್ಕೆ ಕರೆದಿದ್ದರೆ, ನಾನು ಹೋಗುವುದಕ್ಕೆ ಹಿಂದೆಗೆಯು ತ್ತಿದ್ದಿಲ್ಲ. ರಮಣಿಯರ ಏಕಾಂತದರ್ಶನವೆಂದರೆ ನನ್ನ ಮನಸ್ಸು ಹಿಂಜರಿ ಯುತ್ತದೆ. ಆದುದರಿಂದ ವಿಚಾರಕ್ಕೊಳಗಾಗಬೇಕಾಯಿತು— ಎಂದು ಹೇಳಿದನು.

ದಾ.— ವೀರನಿಗಿಂತಲೂ ಅಬಲೆಯ ಸಾಮರ್ಥ್ಯವು ಹೆಚ್ಚೆಂದು ತಮ್ಮ ಭಾವನೆಯೇನು? (ಎಂದು ಆ ದಾಸಿಯು ಉಪಹಾಸದಿಂದ ಕೇಳಿದಳು).

ಹ.— ನನ್ನ ಅಭಿಪ್ರಾಯವು ಹಾಗಿಲ್ಲ. ನಿಜವಾದ ವೀರನಲ್ಲಿ ಮೋಸದ ಲೇಶವೂ ಇರುವುದಿಲ್ಲ; ಅವನು ಪರರೊಡನೆ ಸರಳತೆಯಿಂದ ವ್ಯವಹರಿಸು ತ್ತಿರುವನು. ಇಂತಹ ಶೂರರೊಡನೆ ಸಂಕೋಚವಿಲ್ಲದೆ ನಡೆಯುಬಹುದು; ಏಕೆಂದರೆ ನಾನೊಬ್ಬ ವೀರನಾಗಿದ್ದು, ಆತ್ಮರಕ್ಷಣೆ ಮಾಡಿಕೊಳ್ಳಲು ಸಮರ್ಥ ನಿದ್ದೇನೆ. ವಂಚನೆಯ ವ್ಯವಹಾರದಲ್ಲಿ ನನಗೆ ಅಭ್ಯಾಸವಿಲ್ಲ. ಸ್ತ್ರೀಯರ ಬಳಿಯಲ್ಲಿ ಸರಳವ್ಯವಹಾರವು ಕಡಿಮೆಯೆಂದು ನಾನು ಕೇಳಿದ್ದೇನೆ. ಆದು ದರಿಂದ—

ಡಾ.— ಮಹಾರಾಜ, ತಾವು ಹೆಂಗಸರೆಲ್ಲರೂ ಕಪಟಾಚರಣೆಯವರೇ ಎಂದು ತಿಳಿದಿರುವಿರೇನು? (ಎಂದು ದಾಸಿಯು ಸಿಟ್ಟಿನ ಆವಿರ್ಭಾವದಿಂದ ಕೇಳಿದಳು).

ಹ.— ಅಮ್ಮಾ ಹೀಗೆ ಸಿಟ್ಟಿಗೆ ಬರಬೇಡ. ರಮಣಿಯರೆಲ್ಲರೂ ಮೋಸಗಾರ್ತಿಯರೆಂದು ನಾನು ಹೇಳುವುದಿಲ್ಲ. ಆದರೂ ಹೆಂಗಸರೊಡನೆ ವರ್ತಿಸಬೇಕಾಗಿದ್ದ ಪ್ರಸಂಗದಲ್ಲಿ ಒಮ್ಮೊಮ್ಮೆ ವಂಚನೆಯ ಬಲಿಯಲ್ಲಿ ಸಿಗಬೀಳಬೇಕಾಗುತ್ತಿರುವುದು ಸುಳ್ಳಲ್ಲ! ಆದುದರಿಂದ ಸ್ತ್ರೀಯರೊಡನೆ ಮಾಡಬೇಕಾಗಿದ್ದ ವ್ಯವಹಾರವನ್ನು ಬಹು ವಿಚಾರಪೂರ್ವಕವಾಗಿ ಮಾಡಬೇಕಾಗುತ್ತದೆ. ಅದು ಹೇಗೇ ಇರಲಿ. ನಾನು ನಿಮ್ಮ ಒಡೆಯಳ ಬೆಟ್ಟಿಗೆ ಸಿದ್ಧನಾಗಿ ಕುಳಿತುಕೊಳ್ಳುವೆನು. ನೀನು ಬೇಕಾದಾಗ ಬಂದು ನನ್ನನ್ನು ಕರೆದುಕೊಂಡು ಹೋಗು.

ಡಾ.— ಬಾಗಿಲು ಕಾಯುವವರಿಗೆ ಸೂಚನೆ ಕೊಟ್ಟು ಇಡಿರಿ. ನಾನು ಮಧ್ಯರಾತ್ರಿಯ ಸುಮಾರಕ್ಕೆ ಬರುವೆನು, ಎಂದು ಹೇಳಿ ದಾಸಿಯು ಹೊರಟು ಹೋದಳು. ಹರಿಹರನು ಪ್ರಕೃತ ಸಂಗತಿಯ ಬಗ್ಯೆ ವಿಚಾರ ಮಾಡುತ್ತ ಕುಳಿತುಕೊಂಡನು.

* * * * *

ರಾತ್ರಿಯ ಊಟವಾಯಿತು. ಹರಿಹರನು ಮತ್ತೆ ತನ್ನ ಕೋಣೆಯಲ್ಲಿ ಬಂದು ಕುಳಿತನು. ದಾಸಿಯು ವೀಳೆಯನ್ನು ತಂದುಕೊಟ್ಟಳು. ಹರಿಹರನು ಸುಖಾಸನದಲ್ಲಿ ಕುಳಿತು, ತಾಂಬೂಲವನ್ನು ಸವಿದನು. ತುಸು ಹೊತ್ತಿನ ಮೇಲೆ ಅವನು ಕೋಣೆಯಲ್ಲಿ ಇತ್ತಿಂದತ್ತ ಅಡ್ಡಾಡತೊಡಗಿದನು. ಈ ವೇಳೆಯಲ್ಲಿ ಅವನ ಮನಸ್ಸಿನಲ್ಲಿ ನಾನಾ ತರದ ವಿಚಾರಗಳು ಬಂದವು.

ಸುಮಾರು ಐದು ತಾಸು ರಾತ್ರಿಯಾಗಿರಬಹುದು. ಆಕಾಶವು ನಿರಭ್ರವಾಗಿದೆ. ಭಗವಾನ್ ಕುಮುದಿನೀನಾಥನು ಷೋಡಶಕಲೆಗಳಿಂದ ಪ್ರಕಾಶಿಸುತ್ತಿದ್ದಾನೆ. ಅವನ ಪ್ರಶಾಂತವಾದ ಕಿರಣಗಳು ಕಿಡಕಿಯ ಮಾರ್ಗವಾಗಿ ಕೋಣೆಯಲ್ಲಿ ಪ್ರವೇಶಿಸಿವೆ. ಬೇರೆ ಕೆಲವು ಕಿರಣಗಳು ತುಂಗಭದ್ರೆಯಲ್ಲಿ ಪ್ರತಿಫಲಿತವಾಗಿ, ವಿಲಕ್ಷಣ ಶೋಭೆಯನ್ನುಂಟುಮಾಡಿವೆ. ಸ್ವಚ್ಛವಾದ ನೀರಿ

ನಲ್ಲಿ ಯಾವತ್ತು ಆಕಾಶದ ದೃಶ್ಯವು ಕಾಣಿಸುತ್ತಿದೆ. ನೋಡುವವರಿಗೆ ತುಸು ಹೊತ್ತಿನ ವರೆಗೆ ಎರಡು ಆಕಾಶಗಳಿರುವವೇನೋ ಎಂದು ಭ್ರಾಂತಿಯಾಗುತ್ತಲಿದೆ.

ಹರಿಹರನು ತುಸುಹೊತ್ತು ಅಡ್ಡಾಡಿ, ಕಿಡಕಿಯ ಬಳಿಯಲ್ಲಿ ನಿಂತು, ಹೊರಗೆ ಕಾಣುತ್ತಲಿರುವ ಸೃಷ್ಟಿಸೌಂದರ್ಯವನ್ನವಲೋಕಿಸ ತೊಡಗಿದನು. ಪ್ರಕೃತಿಯ ಮನೋಮುಗ್ಧಕರವಾದ ಬಾಹ್ಯಸೌಂದರ್ಯವನ್ನು ನೋಡಿ, ಸಂತೋಷ ಹೊಂದಿದನು.

ಹರಿಹರನು ಮತ್ತೆ ತನ್ನ ಆಸನದ ಮೇಲೆ ಕುಳಿತುಕೊಂಡು, ದಾಸಿಯ ಮಾರ್ಗಪ್ರತೀಕ್ಷೆ ಮಾಡತೊಡಗಿದನು. ದಾಸಿಯು ನಿಯಮಿತ ವೇಳೆಗೆ ಬಂದಳು. ಹರಿಹರನು ದಾಸಿಯೊಡನೆ ಹೊರಡಲು ಸಿದ್ಧನಾದನು. ದಾಸಿಯು ಮುಂದೆ ಮುಂದೆ ನಡೆದಳು. ಹರಿಹರನು ಅವಳನ್ನು ಹಿಂಬಾಲಿಸಿ ನಡೆದನು. ಮಧ್ಯರಾತ್ರಿಯಾದುದರಿಂದ ಜನರೆಲ್ಲರೂ ಮಲಗಿಕೊಂಡಿದ್ದರು. ಮಾರ್ಗವು ಜನಹೀನವಾಗಿತ್ತು. ಎಲ್ಲ ಕಡೆಯಲ್ಲಿಯೂ ಸ್ತಬ್ಧತೆಯು ಪಸರಿಸಿತ್ತು. ತುಸು ಹೊತ್ತಿನಲ್ಲಿ ಇಬ್ಬರೂ ಪಟ್ಟಣವನ್ನು ದಾಟಿ ಬಂದರು. ಬಳಿಯಲ್ಲಿಯೇ ತುಂಗಭದ್ರೆಯು ಪ್ರವಹಿಸುತಲಿತ್ತು. ಪ್ರವಾಹವೇಗವು ಅರ್ಭಟಿಸಿ ಕೇಳಬರುತಲಿತ್ತು. ಹರಿಹರನಿಗೆ ಆ ಕಡೆಗೆ ದೃಷ್ಟಿಯಿರಲಿಲ್ಲ.

ದಾಸಿಯು ಯಾವ ಮಾತನ್ನೂ ಆಡದೆ ಮುಂದೆ ಸಾಗಿದ್ದಳು. ಪಟ್ಟಣವನ್ನು ಬಿಟ್ಟುಬಂದುದನ್ನು ನೋಡಿ, ಹರಿಹರನಿಗೆ ಆಶ್ಚರ್ಯವಾಯಿತು; ಏಕೆಂದರೆ ಅವನು ಕಾಮಾಕ್ಷಿಯ ದರ್ಶನವು ಅವಳ ಮನೆಯಲ್ಲಿಯೇ ಆಗಬಹುದೆಂದು ತಿಳಿದುಕೊಂಡಿದ್ದನು; ಆದರೆ ಪ್ರಕೃತಕ್ಕೆ ದಾಸಿಯು ಹಿಡಿದ ಹಾದಿಯನ್ನು ನೋಡಿ, ಅವನು ತನ್ನ ತಿಳಿವಳಿಕೆಯು ತಪ್ಪಾಯಿತೆಂದು ಭಾವಿಸಿ ಕುತೂಹಲದಿಂದ—ಅಮ್ಮಾ, ಈಗ ನಾವು ಹೋಗಬೇಕಾದದ್ದೆಲ್ಲಿಗೆ? ಎಂದು ಕೇಳಿದನು.

ದಾ.—ನಾನು ನಿರ್ದಿಷ್ಟ ಸ್ಥಳಕ್ಕೆ ನಿಮ್ಮನ್ನು ಕರೆದುಕೊಂಡು ಹೋಗುವೆನು. ನೀವು ಯಾವ ಮಾತನ್ನೂ ಆಡದೆ, ನನ್ನನ್ನು ಹಿಂಬಾಲಿಸಿ ಬರ್ರಿ.

ಹ.—ನಾನು ಈಗ ಎಲ್ಲಿಗೆ ಹೋಗಬೇಕಾಗಿರುವುದು? ಕಾಮಾಕ್ಷಿಯ ದರ್ಶನವು ನನಗೆ ಎಲ್ಲಿ ಆಗಬಹುದು? ಎಂಬದನ್ನು ತಿಳಿದುಕೊಂಡ ಹೊರತು

ಮುಂದೆ ಬರಲಾರೆನು. ನೀನು ಇದನ್ನು ಇಲ್ಲಿಯೇ ಹೇಳಲಿಕ್ಕೆ ಬೇಕು; ಇಲ್ಲದಿದ್ದರೆ ನಾನು ತಿರುಗಿ ಹೋಗುವೆನು.

ದಾ. — ಯಾಕೆ, ನನ್ನೊಡನೆ ಬರಲು ಭಯಪಡುತ್ತಿರುವಿರೇನು?

ಹ. — ಭಯವನ್ನು ನಾನಿದೂವರೆಗೆ ಅರಿಯೆನು. ಆದರೆ ಎಲ್ಲಿಗೆ ಹೋಗ ಬೇಕಾಗಿದೆಯೆಂಬದನ್ನರಿಯದೆ, ಇಂತಹ ವೇಳೆಯಲ್ಲಿ ಅಪರಿಚಿತಳಾದ ನಿನ್ನೊ ಡನೆ ಮುಂದೆ ಸಾಗಲು ನನ್ನ ಮನಸ್ಸು ಒಪ್ಪದು!

ದಾ. — ತಾವು ನನ್ನೊಡೆಯಳ ದರ್ಶನಕ್ಕೆ ಹೋಗಬೇಕಾಗಿರುವದೆಂಬ ದನ್ನು ಮರೆತಿರೇನು?

ಹ. — ಅದನ್ನು ಮರೆಯುವುದು ಹೇಗೆ? ನಿನ್ನ ಯಜಮಾನಿಯು ಈಗ ಎಲ್ಲಿರುವಳೆಂಬದು ನನಗೆ ಗೊತ್ತಾಗಬಾರದೇನು? ನೀನು ನನ್ನನ್ನು ಪಟ್ಟ ಣದ ಹೊರಗೆ ಕರೆದುಕೊಂಡು ಹೊರಟಿರುವೆ. ನಿನ್ನ ಒಡೆಯಳ ಬಳಿಗೆ ಹೋಗಬೇಕಾದರೆ ಪಟ್ಟಣದ ಹೊರಗೆ ಬಂದುದೇಕೆ? ಅವಳು ಈಗ ಮನೆ ಯಲ್ಲಿಲ್ಲವೇನು?

ದಾ. — ಇಲ್ಲ. ಅವಳು ಈಗ ಮನೆಯಲ್ಲಿಲ್ಲ. ತಮ್ಮ ಏಕಾಂತ ದರ್ಶನದ ಇಚ್ಛೆಯಿಂದ ನದೀತೀರಕ್ಕೆ ಬಂದಿದ್ದಾಳೆ. ಅವಳು ತಮ್ಮನ್ನು ಅಲ್ಲಿಗೆ ಕರೆದು ಕೊಂಡು ಬರುವಂತೆ ಆಜ್ಞಾಪಿಸಿದ್ದಾಳೆ. ಅವಳ ಹೇಳಿಕೆಯಂತೆ ನಾನು ತಮ್ಮನ್ನು ಕರೆದುಕೊಂಡು ಹೊರಟಿದ್ದೇನೆ. ಇನ್ನು ಸುಮ್ಮನೆ ಮುಂದೆ ಸಾಗಿರಿ.

ದಾಸಿಯು ನದಿಯ ದಂಡೆಯನ್ನು ಹಿಡಿದು ಮುಂದೆ ನಡೆದಳು. ಹರಿ ಹರನು ವಿಚಾರಗ್ರಸ್ತನಾಗಿ ಅವಳ ಬೆನ್ನುಹತ್ತಿ ನಡೆದನು. ತುಸು ದಾರಿ ಯನ್ನು ನಡೆದು ಹೋದಬಳಿಕ ಮಂಜುಲವಾದ ಸ್ವರದಿಂದ ಹೊರಟ 'ಕುಮಾರ' ಎಂಬ ಶಬ್ದವು ಹರಿಹರನಿಗೆ ಕೇಳಿಸಿತು. ಹರಿಹರನು ಮುಖ ವೆತ್ತಿ ನೋಡಿದನು. ಆಶ್ಚರ್ಯಾನ್ವಿತನಾಗಿ ಹೋದನು.

ಸಮೀಪದಲ್ಲಿಯೇ ಒಂದು ಘಾಟವಿತ್ತು. ಇದು ಸ್ಫಟಕಶಿಲೆಗಳಿಂದ ಕಟ್ಟಲ್ಪಟ್ಟಿರುವುದರಿಂದ ಬಹು ಸುಂದರವಾಗಿತ್ತು. ಸಾಂದ್ರವಾದ ಚಂದ್ರ ಕಿರಣಗಳು ಪಸರಿಸಿದ್ದುದರಿಂದ ಸೋಪಾನ-ಪಙ್ಕ್ತಿಗಳ ನೋಟವು ಸ್ಪಷ್ಟವಾಗಿ ಕಾಣುತಲಿತ್ತು. ಕೆಳಗಿನ ಪಾವಟಿಗೆಯ ಮೇಲೆ ಒಬ್ಬ ಯುವತಿಯು ಕುಳಿತು ಕೊಂಡಿದ್ದಳು. ಅವಳು ತನ್ನ ಎರಡೂ ಕಾಲುಗಳನ್ನು ನೀರಲ್ಲಿಳಿಬಿಟ್ಟು

ಕೊಂಡು ಕ್ರೀಡಿಸುತಲಿದ್ದಳು. ಈ ಸಮಯದಲ್ಲಿ ಅವಳು ನೀಲರೇಶ್ಮೆಯ ಸೂಕ್ಷ್ಮವಸ್ತ್ರವನ್ನುಟ್ಟುಕೊಂಡಿದ್ದು, ಹಸರುಬಣ್ಣದ ಬೆಲೆಯುಳ್ಳ ಶಾಲನ್ನು ಹೊತ್ತುಕೊಂಡಿದ್ದಳು. ಅವಳ ಮುಂಗುರುಳುಗಳು ಗಾಳಿಯಿಂದ ಹಾರಾಡು ತಲಿದ್ದು, ಮೋರೆಯ ಚೆಲುವಿಕೆಗೆ ಒಂದು ತರದ ಶೋಭೆಯನ್ನುಂಟುಮಾಡಿ ದ್ದವು. ಮೊದಲೇ ಗೊತ್ತಿರದಿದ್ದರೆ, ಹರಿಹರನು ಇವಳೇನು ಸ್ವರ್ಗಲೋಕದ ಅಪ್ಸರೆಯಾಗಿರಬಹುದೇನು? ಎಂದು ಭ್ರಾಂತಿಗೊಳಗಾಗಬಹುದಾಗಿತ್ತು. ಆದರೆ ಈವರೆಗಿನ ದಾಸಿಯ ಭಾಷಣದಿಂದ ಇವಳೇ ಕಾಮಾಕ್ಷಿಯೆಂದು ಅವನು ನಿಶ್ಚಯಿಸಿದನು. ಆ ಘಾಟಿನ ಕಡೆಗೆ ನಡೆದನು. ಆ ತರುಣಿಯು ಎದ್ದುಬಂದು, ಹರಿಹರನ ಕೈ ಹಿಡಿದು ಕರೆದೊಯ್ದು, ತನ್ನ ಬದಿಯಲ್ಲಿ ಕೂಡ ಹೇಳಿ ತಾನೂ ಮೊದಲು ಕುಳಿತ ಸ್ಥಳದಲ್ಲಿ ಕುಳಿತುಕೊಂಡಳು. ಹರಿಹರ ನಿಗೆ ಬಹಳ ಸಂಕೋಚವಾಯಿತು. ಅಪರಾತ್ರಿಯ ಸಮಯವು. ಏಕಾಂತದ ಸ್ಥಳವು. ತಾನು ಅಲ್ಲಿಗೆ ಹೋದುದು ಸರಿಯಾಗಲಿಲ್ಲೆಂದು ಅವನು ಭಾವಿಸಿ ದನು. ನಿರ್ವಾಹವಿಲ್ಲದೆ, ಯುವತಿಯು ತೋರಿಸಿದ ಸ್ಥಳದಲ್ಲಿ ಅವನತ ಮುಖನಾಗಿ ಕುಳಿತುಕೊಂಡನು.

ಪುನಃ ಆ ತರುಣಿಯು — "ಕುಮಾರ" ಎಂದು ಸಂಬೋಧಿಸಿದಳು.

ಕುಮಾರನು ಮುಖವೆತ್ತಿ ನೋಡಿದನು. ಆ ಯುವತಿಯು — ಇಂದು ನಾನು ಈ ವೇಳೆಯಲ್ಲಿ ಇಂತಹ ನಿರ್ಜನಸ್ಥಳದಲ್ಲಿ ದರ್ಶನ ತೆಗೆದುಕೊಂಡು ದರ ಉದ್ದೇಶವನ್ನು ನೀನು ಬಲ್ಲೆಯೇನು? ಎಂದು ಕೇಳಿದಳು.

ಹರಿಹರನು ಕಾಮಾಕ್ಷಿಯ ಉದ್ದೇಶವನ್ನರಿತಿರಲಿಲ್ಲ. ಆದರಿಂದವನು — ಅಮ್ಮಾ, ಅದು ನನಗೆ ಹೇಗೆ ಗೊತ್ತಾಗಬೇಕು? ನಿಮ್ಮ ದಾಸಿಯು ನನ್ನನ್ನಿ ಲ್ಲಿಗೆ ಕರೆದುಕೊಂಡು ಬಂದಳು. ಅವಳು ನನಗೆ ನಿಮ್ಮ ಉದ್ದೇಶವನ್ನು ತಿಳಿಸಲಿಲ್ಲ, ಎಂದು ಹೇಳಿದನು.

**ಕಾ.** — ಒಂದು ಮಹತ್ವದ ಕೆಲಸಕ್ಕಾಗಿ ನಾನು ನಿನ್ನನ್ನು ಕರೆಯಿಸಿದ್ದೇನೆ.

**ಹ.** — ಅಂತಹ ಕೆಲಸವಿದ್ದ ಹೊರತು ತಾವು ನನ್ನನ್ನು ಕರೆಯಿಸಿರ ಲಿಕ್ಕಿಲ್ಲವೆಂಬುದನ್ನು ನಾನು ಬಲ್ಲೆನು. ಹೇಳೋಣವಾಗಲಿ. ನಾನು ಇಲ್ಲಿ ಬಹಳ ಹೊತ್ತು ಕುಳಿತುಕೊಳ್ಳುವಂತಿಲ್ಲ.

**ಕಾ.**—ಕುಮಾರ, ಇಷ್ಟೊಂದು ಅವಸರವೇಕೆ? ಸಾವಕಾಶವಾಗಿ ನಾಲ್ಕು ಮಾತುಗಳನ್ನಾಡಬೇಕೆಂದೇ ಈ ಹೊತ್ತಿನಲ್ಲಿ ಈ ನಿರ್ಜನಸ್ಥಳದಲ್ಲಿ ನಿನ್ನ ದರ್ಶನ ತೆಗೆದುಕೊಂಡಿದ್ದೇನೆ. ನಾನೇನಾದರೂ ಮೋಸಮಾಡಬಹುದೆಂಬ ಹೆದರಿಕೆಯು ನಿನಗಿದೆಯೇನು? ಇಲ್ಲವಾದರೆ, ಈ ಮೇರೆಗೆ ಸಂಕೋಚವೃತ್ತಿಯೇಕೆ?

**ಹ.**—ಅಮ್ಮಾ, ನಿಮ್ಮಿಂದ ನನಗೆ ಮೋಸವಾಗುವದೆಂದರೇನು? ಈ ರಾಜ್ಯಕ್ಕೆ ಆಧಾರಸ್ತಂಭದಂತಿರುವ ಪ್ರಧಾನರ ಹೆಂಡಂದಿರು ತಾವು! ಪ್ರಧಾನರು ನಿಮ್ಮ ಹೇಳಿಕೆಯಂತೆ ನಡೆಯುವರೆಂದು ನಾನು ಕೇಳಿದ್ದೇನೆ. ನೀವು ಮನಸ್ಸು ಮಾಡಿದರೆ, ನನ್ನ ಅಹಿತವನ್ನು ಸಹಜವಾಗಿ ಮಾಡಬಲ್ಲಿರಿ! ಇದಕ್ಕೆ ಈ ತರದ ಏಕಾಂತತೆಯ ಅವಶ್ಯಕತೆಯಿರಲಿಲ್ಲ. ನಾನು ನಿಮ್ಮ ಆಶ್ರಿತನು. ನಿಮ್ಮ ದಯೆಯಿರುವ ವರೆಗೆ ಮಾತ್ರ ಈ ಪಟ್ಟಣದಲ್ಲಿರಬಲ್ಲೆನು. ಇಂತಹ ಸ್ಥಿತಿಯಲ್ಲಿ ನಿಮ್ಮ ವಿಷಯದಲ್ಲಿ ಸಂದೇಹ ತೆಗೆದುಕೊಳ್ಳಲಿಕ್ಕೆ ಬಂದೀತೇ?

**ಕಾ.** (ಅಧಿಕಾರ ಸೂಚಕಸ್ವರದಿಂದ)—ಹಾಗಾದರೆ ಈ ವರೆಗಿನ ಸಂಕೋಚವೃತ್ತಿಯನ್ನು ಬಿಟ್ಟುಬಿಡು. ನನ್ನೊಡನೆ ಮನಬಿಚ್ಚಿ ಮಾತಾಡು.

**ಹ.**—ಹೆಚ್ಚು ಪರಿಚಯವಿಲ್ಲದ ಕುಲಮಹಿಳೆಯರೊಡನೆ ಹೇಗೆ ವರ್ತಿಸಬೇಕೆಂಬುದನ್ನು ನಾನರಿಯೆನು. ಪರಸ್ತ್ರೀಯರೊಡನೆ ಹೀಗೆ ಏಕಾಂತದಲ್ಲಿ ಮಾತಾಡುತ್ತ ಕುಳಿತುಕೊಳ್ಳುವುದು ಸಮಾಜದ ದೃಷ್ಟಿಯಿಂದ ಸರಿಯಾದ್ದಲ್ಲ. ಆದುದರಿಂದ ನೀವು ಈಗಿದ್ದ ಕೆಲಸವನ್ನು ಆದಷ್ಟು ಬೇಗನೆ ಮುಗಿಸಿಬಿಡುವುದು ಒಳ್ಳೆಯದು.

**ಕಾ.**—ಕುಮಾರ, ಸಮಾಜದ ನಿಯಮಗಳನ್ನು ತೆಗೆದುಕೊಂಡು ನಾವು ಮಾಡುವದೇನು? ಮನುಷ್ಯನು ಸುಖಸಂಪಾದನೆಗಾಗಿ ಹುಟ್ಟಿದ್ದಾನೆ. ಅವನು ಯಾವದೇ ರೀತಿಯಿಂದಾಗಲಿ ಸಿಕ್ಕಷ್ಟು ಸುಖವನ್ನು ಉಪಭೋಗಿಸಲೇ ಬೇಕು; ಅಲ್ಲದೆ ಸಮಾಜದ ನಿಯಮಗಳಿಗೆ ವಿಪರೀತವಾದುದೆಂದು ಬಡಬಡಿಸುತ್ತ, ಸುಸಂಧಿಯನ್ನು ವ್ಯರ್ಥವಾಗಿ ಕಳೆದುಕೊಳ್ಳಬಾರದು. ಈ ಮನೋಹರವಾದ ಸೃಷ್ಟಿಸೌಂದರ್ಯವನ್ನು ನೋಡು. ಆಕಾಶದಲ್ಲಿ ಥಳಥಳಿಸುತ್ತಿರುವ ಚಂದ್ರಮನನ್ನು ನೋಡು. ಈ ತುಂಗಭದ್ರೆಯನ್ನು ಅವಲೋಕಿಸು. ಇವಳು

ಕಲನಾದದಿಂದ ರಜನೀನಾಥನನ್ನು ಮೋಹಿಸುತ್ತಿದ್ದಾಳೆ. ಮುಗ್ಧನಾದ ಕುಮುದಿನೀಕಾಂತನು ತನ್ನ ಕಿರಣಗಳೆಂಬ ಕರಗಳನ್ನು ಚಾಚಿ, ಇವಳೊಡನೆ ಸ್ವಚ್ಛಂದದಿಂದ ಕ್ರೀಡಿಸುತ್ತಿದ್ದಾನೆ! ಇವನೇನು ಸಮಾಜದ ನಿಯಮಗಳನ್ನು ಲೆಕ್ಕಿಸುತ್ತಿರುವನೇ ?

**ಹ.** — ಅಮ್ಮಾ ಅದಿರಲಿ, ಈ ಮಾತುಗಳಿಗೂ ಪ್ರಕೃತ ವಿಷಯಕ್ಕೂ ಸಂಬಂಧವೇನು? ಸಮಾಜದ ನಿಯಮಗಳೊಡನೆ ಮನುಷ್ಯನ ಸಂಬಂಧ ವೆಂತಹದಿರುವುದೆಂಬುದನ್ನು ಚರ್ಚಿಸುತ್ತ ಕುಳಿತುಕೊಳ್ಳುವ ಸಮಯವಿದಲ್ಲ! ಹೇಳತಕ್ಕುದನ್ನು ಸ್ಪಷ್ಟವಾಗಿ ಹೇಳಿ, ಬೇಗನೆ ನನಗೆ ಅಪ್ಪಣೆಕೊಟ್ಟು ಬಿಡಿರಿ.

**ಕಾ.** — ನಾನಾಡಿದ ಮಾತು ನಿನಗೆ ಸೇರಲಿಲ್ಲೆಂದು ತೋರುತ್ತದೆ. ಆದ ಕಾರಣ ಈಗ ನಾನು ಬೇರೊಂದು ಮಾತೆತ್ತುವೆನು. ಅದಕ್ಕೆ ಸರಿಯಾದ ಉತ್ತರ ಕೊಡುವೆಯಾ ?

**ಹ.** — ಅಮ್ಮಾ, ಬೇಕಾದುದನ್ನು ಕೇಳಿರಿ; ನಿಜವಾದ್ದನ್ನು ಹೇಳುವೆನು.

**ಕಾ.** — ನೀನು ರಾಜಕುಮಾರಿಯನ್ನು ಪ್ರೀತಿಸುವೆಯಲ್ಲವೇ ?

ಹರಿಹರನು ಗೊಂದಲದಲ್ಲಿ ಬಿದ್ದನು. ತಾನು ರಾಜಕುಮಾರಿಯನ್ನು ಪ್ರೀತಿಸುವದೇನೋ ನಿಜವಾಗಿತ್ತು. ಆದರೆ ಅದನ್ನು ಇವಳ ಮುಂದೆ ಹೇಳ ಬೇಕೋ ಹೇಳಬಾರದೋ? ಎಂಬ ಗುಂಬಬಿತ್ತು. ಇದಲ್ಲದೆ, ತನ್ನ ಪ್ರೀತಿಯ ಸಂಗತಿಯನ್ನು ತೆಗೆದುಕೊಂಡು ಇವಳೇನು ಮಾಡುವಳು? ಇವಳಿಗೆ ಅದು ಏಕೆ ಬೇಕಾಯಿತು? ಎಂಬ ವಿಚಾರಗಳು ಹರಿಹರನ ಮನಸನ್ನು ನುಗ್ಗಿ ದವು. ಆದ್ದರಿಂದ ಅವನು ತುಸುಹೊತ್ತು ಸುಮ್ಮನೆ ಬಿರಿಬಿರಿ ಆಕೆಯನ್ನು ನೋಡುತ್ತ ಕುಳಿತನು.

**ಕಾ.** — ಏಕೆ, ಸುಮ್ಮನೆ ಕುಳಿತಿಯಲ್ಲ! ಉತ್ತರ ಕೊಡುವುದಕ್ಕೆ ಸಂಕೋಚವಾಗುತ್ತಿರುವದೇನು?

**ಹ.** — ಅಮ್ಮಾ, ನೀವು ನನ್ನ ಹಿತಚಿಂತಕರೆಂದೇ ಭಾವಿಸಿ, ನಾನು ನಿಜ ಸಂಗತಿಯನ್ನು ಹೇಳುತ್ತೇನೆ. ಈ ಸಂಗತಿಯನ್ನು ಈಗಲೇ ಪ್ರಕಾಶಪಡಿಸುವ ಇಷ್ಟವು ನನಗಿರಲಿಲ್ಲ. ಅನಿವಾರ್ಯಕಕ್ಕಾಗಿ ನಿಮ್ಮ ಮುಂದೆ ಹೇಳಬೇಕಾಗಿದೆ. ನಾನು ರಾಜಕುಮಾರಿಯನ್ನು ಪ್ರೀತಿಸುವದೇನೋ ನಿಜವು.

ಕಾ. — ಸರಿ, ಅವಳು ನಿನ್ನನ್ನು ಪ್ರೀತಿಸುತ್ತಿರುವಳೇನು ?

ಹ. — ಅದನ್ನು ನಾನು ಹೇಗೆ ಹೇಳಲಿ ?

ಕಾ. — ಏಕೆ, ಇದು ನಿನಗೆ ಗೊತ್ತಿಲ್ಲವೇ? ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಕೊಡುವೆನೆಂದು ವಚನಕೊಟ್ಟುದನ್ನು ಈಗಾಗಲೇ ಮರೆತುಬಿಟ್ಟಿಯೇನು ?

ಹ. — ನಾನು ಸರಿಯಾಗಿಯೇ ಹೇಳಿದೆನಲ್ಲ! ನನ್ನಲ್ಲಿ ಮೋಸವು ಎಷ್ಟು ಮಾತ್ರವೂ ಇಲ್ಲ.

ಕಾ. — ಹಾಗಾದರೆ, ರಾಜಕುಮಾರಿಯು ನಿನ್ನನ್ನು ಪ್ರೀತಿಸುವದಿಲ್ಲವೇ?

ಹ. — ಅದನ್ನು ನಾನು ಹೇಳಲಾರೆನು.

ಕಾ. — ಅದೇಕೆ ?

ಹ. — ಅವಳು ನನ್ನನ್ನು ಪ್ರೀತಿಸುವಳೋ ಇಲ್ಲವೋ ಎಂಬದರ ನಿರ್ಧಾರವಿನ್ನೂ ಆಗಿಲ್ಲ.

ಕಾ. — ಕುಮಾರ, ಈ ವಿಷಯದಲ್ಲಿ ನೀನು ಸುಳ್ಳು ಹೇಳುತ್ತಿರುವೆ!

ಹ. — ಇಲ್ಲ, ನಾನೆಂದಿಗೂ ಸಟೆಯಾಡತಕ್ಕವನಲ್ಲ!

ಕಾ. — ಹಾಗಾದರೆ, ನಾನು ಕೇಳಿದ್ದು ಸುಳ್ಳೇನು ? ಅಥವಾ ಜನರ ಮಾತುಗಳು ನನಗೆ ವಿಪರೀತವಾಗಿ ಕೇಳಿಸುತ್ತಿರಬಹುದೇನು ?

ಹ. — ಹಾಗೆಂದರೇನು ? ತಾವು ಕೇಳಿದ್ದಾದರೂ ಏನು ?

ಕಾ. — ಕುಮಾರ, ನೀನು ಮುಚ್ಚಿಡುವದರಲ್ಲಿ ಯಾವ ಅರ್ಥವೂ ಇಲ್ಲ! ಇಂದು ಸಾಯಂಕಾಲದಲ್ಲಿ ನಿಮ್ಮಿಬ್ಬರೊಳಗಾದ ಸಂಭಾಷಣವನ್ನು ನಾನು ಕೇಳಿದ್ದೇನೆ !

ಹ. (ದಿಗಿಲುಗೊಂಡು) — ಕೇಳಿರಬಹುದು. ಸ್ತ್ರೀಯರ ಪ್ರಣಯವು ಸ್ಥಿರವಾದುದಲ್ಲವೆಂದು ಶಾಸ್ತ್ರಕಾರರು ಹೇಳುತ್ತಿದ್ದಾರೆ. ಆದುದರಿಂದ ರಮಣಿಯರ ಪ್ರೇಮವನ್ನು ನಂಬಲಿಕ್ಕೆ ಬರುವಂತಿಲ್ಲ. ರಾಜಕುಮಾರಿಯು ನನ್ನನ್ನು ಪ್ರೀತಿಸುವಳೆಂದು ನಾನು ಎದೆತಟ್ಟಿ ಹೇಳಲಾರೆನು. ಅದಿರಲಿ, ನೀವು ನಮ್ಮ ಮಾತುಗಳನ್ನೇಕೆ ಕೇಳಿದಿರಿ ? ಪ್ರಣಯಿಗಳ ಗುಪ್ತಸಂಭಾಷಣೆಯನ್ನು ಕೇಳುವುದು ನಿಮ್ಮಂತಹ ಕುಲಮಹಿಳೆಯರಿಗೆ ಯೋಗ್ಯವಾದುದಲ್ಲ !

ಕಾ. — ಯೋಗ್ಯಾಯೋಗ್ಯದ ಮಾತು ಒತ್ತಟ್ಟಿಗಿರಲಿ. ನೀನು ನಿಜವಾಗಿಯೂ ರಾಜಕುಮಾರಿಯ ಪ್ರಣಯದಲ್ಲಿ ಸಂದೇಹಪಡುತ್ತಿರುವೆಯಾ? ಇದನ್ನು ನನಗೆ ಮೊದಲು ಹೇಳು.

ಹ. — ಈ ಬಗ್ಗೆ ನಾನು ಈಗ ಯಾವ ಉತ್ತರವನ್ನೂ ಹೇಳಲಾರೆನು.

ಕಾ. — ನೀನು ರಾಜಕುಮಾರಿಯನ್ನು ಪ್ರೀತಿಸುವುದು ಯೋಗ್ಯವೆಂದು ತಿಳಿದಿರುವೆಯೇನು? ನಾನಂತೂ ನಿನ್ನ ಈ ಕೆಲಸವನ್ನು ಹಳಿಯದೆ ಇರಲಾರೆನು.

ಹರಿಹರನು ವಿಚಾರಕ್ಕೊಳಗಾದನು. ಕಾಮಾಕ್ಷಿಯು ಈ ಪ್ರಕಾರ ಮಾತಾಡುತ್ತಿರುವುದರ ಕಾರಣವೇನಿರಬಹುದೆಂಬುದನ್ನು ಅವನು ಯೋಚಿಸತೊಡಗಿದನು. ಅವನು ಈ ಬಗ್ಗೆ ಎಷ್ಟೋ ಕಾಯಾಸ ಕಟ್ಟಿದನು; ಆದರೆ ಅವುಗಳಲ್ಲಿ ಯಾವುದು ನಿಜವಿರಬಹುದೆಂಬುದನ್ನು ಗೊತ್ತುಮಾಡುವುದು ಅವನಿಂದಾಗಲಿಲ್ಲ. ಕಾಮಾಕ್ಷಿಯ ಗುಟ್ಟನ್ನು ತಿಳಿದುಕೊಳ್ಳುವದಕ್ಕಾಗಿ ಅವನು — ಅಮ್ಮಾ, ಇದರಲ್ಲಿ ನನ್ನ ತಪ್ಪೇನು? ಎಂದು ಕೇಳಿದನು.

ಕಾ. — ತಪ್ಪು ಅಂತಿಂತಹದಲ್ಲ! ಘೋರವಾದ ಅಪರಾಧವನ್ನು ಮಾಡುತ್ತಿರುವೆ! ಇದರಿಂದ ನಿನ್ನ ಕಲ್ಯಾಣವಾಗುವದಿಲ್ಲವಿಷ್ಟೇ ಅಲ್ಲ; ದೊಡ್ಡ ಸಂಕಟಕ್ಕೊಳಗಾಗುವೆ.

ಹ. — ಅದೇಕೆ? ಅನುರೂಪರಾದ ತರುಣತರುಣಿಯರು ಒಬ್ಬರನ್ನೊಬ್ಬರು ಪ್ರೀತಿಸುವುದು ದೊಡ್ಡ ಅಪರಾಧವೇ?

ಕಾ. — ಏನು! ನೀವಿಬ್ಬರೂ ಅನುರೂಪರಾಗಿರುವಿರಾ?

ಹ. — ಏಕಾಗಬಾರದು? ನಾನು ರಾಜಕುಮಾರಿಗೆ ತಕ್ಕ ವರನಲ್ಲವೆಂದು ನಿಮ್ಮ ಗ್ರಹಿಕೆಯೇನು?

ಕಾ. — ನಿಶ್ಚಯವಾಗಿಯೂ ನೀನು ರಾಜಕುಮಾರಿಯ ಕೈ ಹಿಡಿಯುವದಕ್ಕೆ ಯೋಗ್ಯನಲ್ಲ!

ಹರಿಹರನಿಗೆ ಆಶ್ಚರ್ಯವಾಯಿತು. ಸಿಟ್ಟೂ ಬಂದಿತು. ಅವನು ಕಠೋರಸ್ವರದಿಂದ — ಅದೇಕೆ? ಎಂದು ಕೇಳಿದನು.

ಕಾ.—ಕುಮಾರ, ನಿನ್ನ ಜಾತಿ ಯಾವುದೆಂಬುದನ್ನು ಬಲ್ಲೆಯಾ? ನಿನ್ನ ಯೋಗ್ಯತೆಯು ನಿನಗೆ ಗೊತ್ತಿದೆಯೇ?

ಹ.—ನಾನು ನನ್ನ ಕುಲವೃತ್ತವನ್ನು ಸಂಪೂರ್ಣವಾಗಿ ಅರಿಯೆನು; ಆದರೂ ನಾನೊಬ್ಬ ಶ್ರೇಷ್ಠವಂಶೀಯನೆಂದೂ ದೈವದುರ್ವಿಲಾಸದಿಂದ ಪರ ದೇಶಿಯಾದೆನೆಂದೂ ಆಚಾರ್ಯರಿಂದ ಕೇಳಿದ್ದೇನೆ.

ಕಾ.—ನೀನು ಶ್ರೇಷ್ಠವಂಶದಲ್ಲಿ ಹುಟ್ಟಿದವನಲ್ಲ. ನೀನೊಬ್ಬ ಕುರುಬನು. ಹೀನವಂಶದಲ್ಲಿ ಹುಟ್ಟಿದ ನೀನು ಚಂದ್ರವಂಶೀಯರಾದ ಮಹಾರಾಜರೊಡನೆ ಸಂಬಂಧವನ್ನು ಬಳೆಯಿಸಬೇಕೆಂಬುದು ಸರಿಯಾದೀತೇ? ವಿಚಾರ ಮಾಡಿ ನೋಡು! ನಿನ್ನ ಈ ಬಯಕೆಯು ಎಂದಿಗೂ ಪೂರ್ಣವಾಗದು!

ಹ.—ನಾನು ಕುರುಬನೇ? ಎಂದಿಗೂ ಅಲ್ಲ! ನಿರಪೇಕ್ಷಿಗಳಾದ ಆಚಾರ್ಯರು ಸುಳ್ಳು ಹೇಳುವುದುಂಟೇ? ನಾನು ಕುರುಬನಾಗಿದ್ದರೆ, ಮಹಾರಾಜರು ನನ್ನನ್ನು ತಮ್ಮ ಮನೆಯಲ್ಲಿಟ್ಟುಕೊಂಡು, ಮಗನಂತೆ ನೋಡಿಕೊಂಡು ಹೋಗುತ್ತಿದ್ದರೆ? ನೀವು ಯಾವುದೋ ಉದ್ದೇಶದಿಂದ ಹೀಗೆ ಸಟೆಯಾಡುತ್ತಿರುವಿರಿ!

ಕಾ.—ಕುಮಾರ, ನಾನು ಮೊದಲೇ ಹೇಳಲಿಲ್ಲವೇ? ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನು ಸ್ವ-ಸುಖಕ್ಕಾಗಿಯೂ ಸ್ವಂತದ ಲಾಭಕ್ಕಾಗಿಯೂ ಪ್ರತಿಯೊಂದು ಕೆಲಸ ಮಾಡುತ್ತಿರುವನು. ಇದನ್ನನುಸರಿಸಿ ಶಾಸ್ತ್ರಕಾರರು 'ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ' ಎಂದು ಹೇಳಿದ್ದಾರೆ. ಸಂಸಾರವನ್ನು ತೊರೆದು ಕೇವಲ ವಿರಕ್ತರಂತೆ ನಟಿಸುವವರಿಗೂ ಕೂಡ ಈ ಸುಖಲಾಲಸೆಯು ಬಿಟ್ಟದ್ದಲ್ಲ! ಆಚಾರ್ಯರು ತಮ್ಮ ಕಾರ್ಯ ಸಾಧನೆಗಾಗಿ ಮಹಾರಾಜರಿಗೆ ಸುಳ್ಳು ಹೇಳಿ ನಿನ್ನನ್ನಿಲ್ಲಿರಿಸಿ ಹೋಗಿದ್ದಾರೆ. ಜಗತ್ತಿನ ನಿಜರಹಸ್ಯವನ್ನರಿಯದ ಮಹಾರಾಜರು ಆವುದನ್ನೂ ಅರಿಯದೆ, ಆಚಾರ್ಯರ ಮಾತುಗಳನ್ನು ನಂಬಿ, ನಿನ್ನನ್ನು ತಮ್ಮ ಮನೆಯಲ್ಲಿಟ್ಟುಕೊಂಡಿದ್ದಾರೆ! ಆದರೆ ಒಂದಿಲ್ಲೊಂದು ದಿನ ಈ ಗುಟ್ಟು ಹೊರಬೀಳದಿರದು! ಅಂದು ನೀನು ಘೋರ ವಿಪತ್ತಿಗೊಳಗಾಗುವೆ! ನಿನ್ನ ಮನೋರಥವು ಸಂಪೂರ್ಣವಾಗಿ ನಾಶವಾಗುವದು! ಆದಕ್ಕಾಗಿಯೇ ನೀನು ರಾಜಕುಮಾರಿಯನ್ನು ಪ್ರೀತಿಸು

ವುದು ತರವಲ್ಲೆಂದು ಹೇಳಿದೆನು. ಇನ್ನಾದರೂ ವಿಚಾರಮಾಡು. ಸೂಜ್ಞ ನಾಗಿ ನಡಕೊ!

ಹರಿಹರನು ವಿಷಮಸಮಸ್ಯೆಯಲ್ಲಿ ಬಿದ್ದನು. ಆಚಾರ್ಯರಿಂದ ಅವನು ತನ್ನ ವಂಶಪರಿಚಯವನ್ನು ಕೆಲಮಟ್ಟಿಗೆ ಅರಿತವನಾಗಿದ್ದನು; ಆದರೆ ಇಷ್ಟ ರಿಂದ ಅವನಿಗೆ ಸಮಾಧಾನವಾಗಿರಲಿಲ್ಲ. ತನ್ನ ತಂದೆ ಯಾರು? ತಾಯಿ ಯಾರು? ಯಾವ ವಂಶದವರು? ಜೀವಿಸಿರುವರೋ ಹೇಗೆ? ಎಂಬುದನ್ನ ವನು ತಿಳಿದಿರಲಿಲ್ಲ. ಆಚಾರ್ಯರು ಈ ಸಂಗತಿಗಳನ್ನೇಕೆ ತಿಳಿಸಿರಲಿಕ್ಕಿಲ್ಲ? ಇದರಲ್ಲೇನಾದರೂ ಗೂಢವಿರಬಹುದು! ನಾನು ಕೆಲವು ದಿವಸಗಳ ವರೆಗೆ ಕುರುಬರ ಮನೆಯಲ್ಲಿದ್ದೆನೆಂದು ಆಚಾರ್ಯರೂ ಹೇಳುತ್ತಿರುವರು. ಇವಳ ಹೇಳಿಕೆಯಂತೆ ನಾನು ನಿಜವಾಗಿಯೇ ಕುರುಬನಾಗಿರಬಹುದೇನು? ಆಚಾ ರ್ಯರ ವಿಷಯದಲ್ಲಿ ಸಂದೇಹ ತೆಗೆದುಕೊಳ್ಳುವುದು ಮಹಾ ಪಾಪವು! ಅವರು ನನ್ನ ಕಲ್ಯಾಣಕ್ಕೋಸ್ಕರವೇ ನನ್ನ ತಾಯಿ-ತಂದೆಗಳ ವೃತ್ತಾಂತವನ್ನು ಗುಪ್ತವಾಗಿರಿಸಿರಬಹುದು. ನೀನು ಶ್ರೇಷ್ಠವಂಶೀಯನೆಂದು ಅವರು ನಿರ್ಧಾರ ದಿಂದ ಹೇಳಿದ್ದಾರೆ. ಅಂದಬಳಿಕ ಇವಳ ಮಾತಿಗಾಗಿ ನಾನು ಅಸಮಾಧಾನ ಹಚ್ಚಿಕೊಳ್ಳುವುದು ತರವಲ್ಲ. ಜಗತ್ತಿನಲ್ಲಿ ಪ್ರತಿಯೊಬ್ಬನು ಸ್ವಾರ್ಥದ ಬೆನ್ನು ಹತ್ತಿರದಿದ್ದರೂ, ಇವಳು ಮಾತ್ರ ಕೇವಲ ಸ್ವಾರ್ಥಕ್ಕಾಗಿ ಹೋರಾಡುತ್ತಿರು ವುದು ಸುಳ್ಳಲ್ಲ! ಅದಕ್ಕಾಗಿಯೇ ಇವಳು ಇಂತಹ ವೇಳೆಯಲ್ಲಿ ಈ ಸ್ಥಳದಲ್ಲಿ ಪ್ರಯತ್ನಪೂರ್ವಕವಾಗಿ ನನ್ನನ್ನು ಕರೆಯಿಸಿಕೊಂಡಿರಬಹುದು. ಇವಳ ಕಾರ್ಯಸಾಧನೆಯಾದರೂ ಯಾವುದಿರಬಹುದು? ಇವಳ ಉದ್ದೇಶವಂತೂ ಒಳ್ಳೆಯದಾಗಿಲ್ಲವೆಂಬುದು ಒಡೆದು ಕಾಣುತ್ತದೆ! ಈ ಸಂದರ್ಭದಲ್ಲಿ ನಾನು ಅಸಮಾಧಾನ ಹೊಂದುವುದಾಗಲಿ, ಸಿಟ್ಟಿಗೇಳುವುದಾಗಲಿ ಸಮಂಜಸವಾಗ ಲಾರದು. ಶಾಂತತೆಯಿಂದ ಮಾತಾಡಿದರೆ, ನಿಜರಹಸ್ಯವೆಷ್ಟು ಹೊರಬೀಳು ವುದೋ ನೋಡಬೇಕು," ಹೀಗೆ ಎಣಿಕೆಹಾಕಿ ಹರಿಹರನು—ಅಮ್ಮಾ ನಾನು ಯಾವ ಜಾತಿಯವನೇ ಆಗಲೊಲ್ಲೆನೇಕೆ, ಈಗ ಆ ಜಾತಿಯ ವಿಚಾರವನ್ನು ತೆಗೆದುಕೊಂಡು ಮಾಡುವುದೇನು? ಬೇರೆ ಕೆಲಸವೇನಾದರೂ ಇದೆಯೇ ಹೇಗೆ? ಇದ್ದರೆ ಲಗು ಹೇಳಿ ಬಿಡಿರಿ, ಎಂದು ಅಂದನು.

ಕಾ.—ಕುಮಾರ, ಹೀಗೆ ಅವಸರ ಮಾಡಬೇಡ. ನಾನು ಹೇಳುವುದನ್ನು ಸಾವಧಾನತೆಯಿಂದ ಕೇಳು. ತಾರುಣ್ಯದ ಭರದಲ್ಲಿ ಮನುಷ್ಯನಿಗೆ ಹಿತಾಹಿತಗಳ ಜ್ಞಾನವಿರುವುದಿಲ್ಲ! ಆದರಿಂದವನು ತನ್ನ ಯೋಗ್ಯತೆಯನ್ನರಿಯದೆ, ದುರ್ಲಭವಾದ ವಸ್ತುವನ್ನು ದೊರಕಿಸಲು ಪ್ರಯತ್ನಿಸುವನು! ಮುಂದೆ ಅವನು ನಿರಾಶನಾಗಿ ದುಃಖಕ್ಕೊಳಗಾಗುವನು! ನೀನು ನಮ್ಮ ಆಶ್ರಿತನಾದುದರಿಂದ ನಿನಗೆ ಈ ಅವಸ್ಥೆಯುಂಟಾಗಬಾರದೆಂದು, ನಾನು ಉಪದೇಶ ಮಾಡುತ್ತಿದ್ದೇನೆ. ನೀನು ಬುದ್ಧಿವಂತನಾದರೆ, ನನ್ನ ಹೇಳಿಕೆಯಂತೆ ರಾಜಕುಮಾರಿಯ ಬಯಲಾಶೆಯನ್ನು ಬಿಟ್ಟುಬಿಡು.

ಹರಿಹರನಿಗೆ ಕಾಮಾಕ್ಷಿಯ ಉಪದೇಶವನ್ನು ಕೇಳಿ ನಗೆ ಬಂದಿತು; ಎಷ್ಟು ಉದ್ದಾಮತನದಿಂದ ವರ್ತಿಸುತ್ತಿರುವಳೆಂಬುದನ್ನು ನೋಡಿ ಸಿಟ್ಟೂ ಬಂತು. ಆದರೂ ಅವನು ಈ ವಿಕಾರಗಳನ್ನು ಒತ್ತಿಟ್ಟು ಹೊರಗೆ ತೋರ್ಪಡಿಸದೆ—ಅಮ್ಮಾ, ನಿಮ್ಮ ಹೇಳಿಕೆಯಂತೆ ನಡೆದುಕೊಳ್ಳುವೆನು. ಈಗಲಾದರೂ ಆಯಿತೇ? ಎಂದು ಕೇಳಿದನು.

ಕಾಮಾಕ್ಷಿಗೆ ಬಹಳ ಸಂತೋಷವಾಯಿತು. ಆನಂದಭರದಿಂದವಳು ಹರಿಹರನ ಕೈ ಹಿಡಿದು ಅಪ್ಪಿಕೊಳ್ಳ ಬಂದು—ಕುಮಾರ, ವಚನಕೊಡು. ಅಂದರೆ ನಾನು ನಿನ್ನ ಮಾತಿನಲ್ಲಿ ವಿಶ್ವಾಸವಿಡುವೆನು, ಎಂದು ಅಂದಳು.

ಹರಿಹರನು ಹಿಂದಕ್ಕೆ ಸರಿದು ಕೈ ಬಿಡಿಸಿಕೊಂಡು—ಅಮ್ಮಾ, ಈಗಲೇ ನಾನು ವಚನ ಕೊಡುವಂತಿಲ್ಲ. ಈ ಬಗ್ಗೆ ನಾನು ಬಹಳ ವಿಚಾರ ಮಾಡಬೇಕಾಗಿದೆ. ಆದುದರಿಂದ ನೀವು ಈಗ ಹಟಕ್ಕೊಳಗಾಗಬೇಡರಿ. ಇಂದು ಈ ವಿಷಯವನ್ನು ಇಲ್ಲಿಗೆ ಮುಗಿಯಿಸಿ ಬಿಡಿರಿ. ಇನ್ನು ನಾನೊಂದು ಮಾತು ಕೇಳುತ್ತೇನೆ. ಉಪದೇಶ ಮಾಡುವುದರಲ್ಲಿ ನಿಮ್ಮ ಉದ್ದೇಶವೇನಿರುವದು? ಇದನ್ನು ನನಗೆ ಹೇಳುವಿರಾ?

ಕಾ.—ಕುಮಾರ, ಬೇರೆ ಉದ್ದೇಶವೇನಿರಬೇಕು? ಚಂದ್ರವಂಶೀಯರಾದ ಮಹಾರಾಜರು ಹೀನಜಾತಿಯವನೊಡನೆ ಶರೀರಸಂಬಂಧವನ್ನು ಬಳೆಯಿಸುವದು ತರವಲ್ಲ. ಇದರಿಂದ ಅವರ ವಂಶಗೌರವಕ್ಕೆ ದೊಡ್ಡ ಕಲಂಕವು ತಗಲುವದು. ಈ ದೋಷವು ಅವರಿಗೆ ಉಂಟಾಗದಂತೆ ಮಾಡುವುದು ಅವರ

ರಾಜನಿಷ್ಠ ಪ್ರಜೆಗಳಲ್ಲೊಬ್ಬಳಾದ ನನ್ನ ಶ್ರೇಷ್ಠಕರ್ತವ್ಯವೆಂದು ನಾನು ತಿಳಿಯುತ್ತೇನೆ.

ಹ. (ಔಪರೋಧಿಕಸ್ವರದಿಂದ)—ನಿಮ್ಮ ಈ ಪ್ರಯತ್ನವು ಸ್ತುತ್ಯವಾದ್ದೆಂಬುದರಲ್ಲಿ ಸಂದೇಹವಿಲ್ಲ; ಆದರೆ ನಿಮ್ಮ ಈ ಪ್ರಯತ್ನವು ಫಲಕಾರಿಯಾಗುವದೆಂದು ಮಾತ್ರ ತಿಳಿಯಬೇಡರಿ. ಸತ್ಯಕ್ಕೆ ಸಾವಿಲ್ಲ. ಎಷ್ಟೇ ಪ್ರಯತ್ನ ಮಾಡಿ ಸತ್ಯವನ್ನು ಮುಚ್ಚಹೋದರೂ, ಅದು ಒಂದಿಲ್ಲೊಂದು ದಿನ ತಲೆಯೆತ್ತಿ ಮೆರೆಯುವುದನ್ನು ಬಿಡದು. ನಾನು ನಿಜವಾಗಿಯೂ ಕುರುಬನಾಗಿರುವಲ್ಲಿ ಅದು ಎಂದಾದರೂ ತಪ್ಪದೆ ಹೊರಬೀಳುವದು. ಹೀಗಿದ್ದು ನೀವು ಪ್ರಯತ್ನ ಮಾಡುತ್ತಿರುವುದೇಕೆ ?

ಕಾ.—ನೀನು ಕುರುಬನಾಗಿರುವದು ಮಹಾರಾಜರಿಗೆ ಗೊತ್ತಿಲ್ಲ. ರಾಜಕುಮಾರಿಗೆ ಗೊತ್ತಿಲ್ಲ. ರಾಜ್ಯದೊಳಗಿನ ಪ್ರಮುಖಜನರಿಗೆ ಗೊತ್ತಿಲ್ಲ. ಎಲ್ಲರೂ ಅಂಧವಿಶ್ವಾಸಕ್ಕೊಳಗಾಗಿ ಮೋಸ ಹೋಗಿದ್ದಾರೆ. ಈ ಸ್ಥಿತಿಯಲ್ಲಿ ಆಚಾರ್ಯರ ಮೋಸವನ್ನು ಬೈಲಿಗೆಳೆಯುವುದು ಯೋಗ್ಯವೆಂದು ನನಗೆ ತೋರುತ್ತದೆ. ಈ ಕೆಲಸವನ್ನು ನಾನು ಮಾಡದೆ ಬಿಡೆನು.

ಹ.—ನಿಮ್ಮ ಇಷ್ಟವಿದ್ದಂತೆ ಮಾಡಬಹುದು. ನಿಮ್ಮ ಕೆಲಸವಾಯಿತಷ್ಟೇ ? ನಾನಿನ್ನು ಹೋಗಿ ಬರುವೆನು.

ಕಾ.—ತುಸು ತಡೆ. ನಾನು ಇನ್ನು ಕೆಲವು ಸಂಗತಿಗಳನ್ನು ಕೇಳತಕ್ಕದ್ದಿದೆ. ಇವುಗಳಿಗೆ ನೀನು ಸರಿಯಾದ ಉತ್ತರವನ್ನು ಕೊಡುವೆಯಾ ?

ಹ.—ಕೇಳಬಹುದು.

ಕಾ.—ಮಹಾರಾಜರು ಮುದುಕರು. ಗಂಡು ಮಕ್ಕಳಿಲ್ಲದ ಮೂಲಕ ಉದಾಸೀನರು. ಪ್ರಧಾನರೂ ಮುದುಕರೇ. ಇವರಿಗಂತೂ ಯಾವ ಆಶೆಯೂ ಇಲ್ಲ. ಇದರಿಂದ ರಾಜ್ಯವ್ಯವಸ್ಥೆಯಲ್ಲಿ ಸಡಿಲುಂಟಾಗುವುದು ಸ್ವಾಭಾವಿಕವು. ಕೆಲವು ದುಷ್ಟರು ಇದರ ಉಪಯೋಗ ಮಾಡಿಕೊಂಡು ರಾಜ್ಯವನ್ನಪಹರಿಸಲು ಸಂಚು ನಡೆಯಿಸಿರುವರೆಂದು ಕೇಳಿದ್ದೇನೆ.

ಹ.—ಇರಬಹುದು. ನನಗಿದು ಗೊತ್ತಿಲ್ಲ.

ಕಾ.—ಈ ಸಂದರ್ಭದಲ್ಲಿ ನೀನು ಯಾವ ಪಕ್ಷದಲ್ಲಿ ಸೇರುವೆ ?

ಹು.—ಬಣಗಳು ಎಷ್ಟಿವೆ? ಅವು ಯಾವವು? ಎಂಬುದೇ ಗೊತ್ತಿರದಿರುವಾಗ ನಾನು ಇಂತಹದೊಂದು ಪಕ್ಷದಲ್ಲಿ ಸೇರುವೆನೆಂದು ಹೇಗೆ ಹೇಳಲಿ?

ಕಾ.—ನಾನು ಈ ಕಾರಸ್ಥಾನಗಳನ್ನು ಬೈಲಿಗೆ ತರುವ ಯತ್ನದಲ್ಲಿದ್ದೇನೆ. ಈ ಪ್ರಸಂಗದಲ್ಲಿ ರಾಜಕ್ರಾಂತಿಯಾಗುವುದು ಯುಕ್ತವೆಂದು ನಿನಗೆ ತೋರುತ್ತಿದೆಯೇನು?

ಹು.—ನೀವು ಬಹು ಸೋಜಿಗದ ಪ್ರಶ್ನೆ ಮಾಡಿದಿರಿ!

ಕಾ.—ಅದೇಕೆ?

ಹು.—ನನ್ನ ರಾಜನಿಷ್ಠೆಯ ವಿಷಯದಲ್ಲಿ ನಿಮಗೆ ಸಂದೇಹವಿದೆಯೇನು?

ಕಾ.—ದುಷ್ಟರ ಸಂಘದಲ್ಲಿ ಸೇರುವುದರಿಂದ ಅರಸೊತ್ತಿಗೆಯು ಪ್ರಾಪ್ತವಾಗುವಂತಿದ್ದರೆ?

ಹು.—ಕ್ಷುದ್ರವಾದ ಸ್ವಾರ್ಥಕ್ಕೊಳಗಾಗುವವನು ನಾನಲ್ಲ! ಪ್ರಭುದ್ರೋಹದಿಂದ ಬರಿ ಆನೆಗುಂದಿಯ ರಾಜ್ಯವೇ ಏಕೆ, ಇಡೀ ಭರತಖಂಡದ ರಾಜ್ಯವು ದೊರೆಯುವಂತಿದ್ದರೂ ನನಗದು ಬೇಡ!!

ಕಾ.—ಇದರಲ್ಲಿ ಕೇವಲ ರಾಜ್ಯದ ಪ್ರಶ್ನೆಯೊಂದೇ ಇರುವದೆಂದಲ್ಲ; ನೀನು ನಿಜವಾಗಿ ಕುರುಬನಾಗಿದ್ದರೂ, ರಾಜಕುಮಾರಿಯ ಪ್ರಾಪ್ತಿಯನ್ನು ಹೊಂದುವಂತಿದ್ದರೆ?

ಹು.—ಪ್ರಣಯಸಾಫಲ್ಯಕ್ಕೆ ಕೇವಲ ರಾಜದ್ರೋಹವೊಂದೇ ಸಾಧನವಾಗಿರುವದಾದರೆ, ನಾನು ಆ ಪ್ರೇಮಕ್ಕೆ ಜಲಾಂಜಲಿಯನ್ನು ಕೊಡಬಲ್ಲೆನು! ಅಲ್ಲದೆ, ಸ್ವಾಮಿದ್ರೋಹಿಯು ನಾನೆಂದೂ ಆಗಲಾರೆನು!!

ಕಾ.—ಕುಮಾರ, ನಿನ್ನ ಈ ರಾಜನಿಷ್ಠೆಯನ್ನು ನೋಡಿ, ನನಗೆ ಅತ್ಯಂತ ಆನಂದವಾಗುತ್ತದೆ. ಸೇವಕರಿದ್ದರೆ, ನಿನ್ನಂಥವರೇ ಇರಬೇಕು; ಆದರೆ ನಮ್ಮ ದುರ್ದೈವದಿಂದ ಇಂದು ಈ ರಾಜ್ಯದಲ್ಲಿ ನಿನ್ನಂತಹ ಸ್ವಾಮಿನಿಷ್ಠರು ವಿರಳರಾಗಿದ್ದಾರೆ. ಆದರೂ ಚಿಂತೆಯಿಲ್ಲ. ನೀನು ಕರ್ತೃತ್ವಶಾಲಿಯಾದುದರಿಂದ ಈ ರಾಜ್ಯಕ್ಕೆ ಒದಗಬಹುದಾಗಿದ್ದ ಗಂಡಾಂತರವನ್ನು ತಪ್ಪಿಸುವೆ

ಯೆಂದು ನನಗೆ ನಂಬಿಗೆಯಿದೆ. ನಾನು ಈ ಕೆಲಸದಲ್ಲಿ ನಿನಗೆ ನೆರವಾಗುವೆನು.

ಹ.—ಒದಗಬಹುದಾಗಿದ್ದ ಅಂತಹ ಸಂಕಟವಾದರೂ ಯಾವುದು? ಅದನ್ನು ತರತಕ್ಕವರಾರು?

ಕಾ.—ಅದನ್ನು ಇಂದೇ ಹೇಳಲಿಕ್ಕೆ ಬರುವಂತಿಲ್ಲ.

ಹ.—ನಾನು ಇದರ ಶೋಧವಮಾಡುವೆನು. ಈಗ ನನಗೆ ಅಪ್ಪಣೆ ಕೊಟ್ಟು ಬಿಡಿರಿ. ನಾನು ಇಲ್ಲಿಗೆ ಬಂದು ಬಹಳ ಹೊತ್ತಾಯಿತು.

ಹರಿಹರನು ಎದ್ದು ನಿಂತನು. ಕಾಮಾಕ್ಷಿಯು ಇನ್ನು ತುಸುಹೊತ್ತು ಕುಳಿತುಕೊಳ್ಳುವುದಕ್ಕೆ ಒತ್ತಾಯ ಮಾಡಿದಳು. ಆದರೂ ಹರಿಹರನು ಅವಳ ಮಾತು ಕೇಳದೆ ಹೊರಟು ನಡೆದನು. ಕಾಮಾಕ್ಷಿಯು ವಿಚಾರಪರಳಾಗಿ ಕುಳಿತಳು—ಇಂದು ನಾನು ಒಡ್ಡಿದ ಬಲಿಯು ವ್ಯರ್ಥವಾಯಿತು. ನಾನು ಇವನನ್ನು ನನ್ನ ಪ್ರಣಯಜಾಲದಲ್ಲಿ ಹಿಡಿಯಬೇಕೆಂದೂ, ಇವನ ಸಾಹಾಯ ದಿಂದ ನನ್ನ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳಬೇಕೆಂದೂ ಮಾಡಿದ್ದೆನು. ರಾಜನಿಷ್ಠನಾದ ಇವನಿಂದ ನನಗೆ ಸಾಹಾಯ ದೊರೆಯುವ ಸಂಭವವಿಲ್ಲ. ಆದರೂ ನಾನು ನಿರಾಶಳಾಗುವದಿಲ್ಲ. ಇವನನ್ನು ನನ್ನ ಪ್ರೇಮಪಾಶದಲ್ಲಿ ಕೆಡವಲು ಪ್ರಯಾಸಬಡುವೆನು. ಇವನು ಒಮ್ಮೆ ನನ್ನ ಪ್ರಣಯಜಾಲದಲ್ಲಿ ಸಿಕ್ಕನೆಂದರೆ ತೀರಿತು! ಇವನ ರಾಜನಿಷ್ಠೆಯನ್ನು ಹೋಗಲಾಡಿಸುವುದು ಕಠಿನವಲ್ಲ! ಹೇಗೇ ಆಗಲಿ, ನಾನು ನನ್ನ ಮಹತ್ವಾಕಾಂಕ್ಷೆಯನ್ನು ಪೂರ್ಣ ಮಾಡಿಕೊಳ್ಳಲೇ ಬೇಕು! ನಾನು ಈ ರಾಜ್ಯದ ಮಹಾರಾಣಿಯಾಗಲೇ ಬೇಕು! ಇಲ್ಲದಿದ್ದರೆ ಪ್ರಯತ್ನಪೂರ್ವಕವಾಗಿ ವೃದ್ಧ ಮಂತ್ರಿಯನ್ನು ಲಗ್ನ ಮಾಡಿಕೊಂಡದ್ದರ ಉಪಯೋಗವೇನು? ನನ್ನನ್ನು ಲಗ್ನಮಾಡಿಕೊಳ್ಳಿರೆಂದು ಮಹಾರಾಜರಿಗೆ ಮೊದಲೇ ಹೇಳಿಕೊಂಡೆನು. ಅವರು ನನ್ನ ಬೇಡಿಕೆಯನ್ನು ಪೂರ್ಣಮಾಡಲಿಲ್ಲ. ಬಡವನ ಮಗಳೆಂದು ತಿರಸ್ಕರಿಸಿಬಿಟ್ಟರು. ನಾನಿದರ ಸೇಡು ತೀರಿಸಿಕೊಳ್ಳಲೇ ಬೇಕು. ಮಹಾರಾಜರನ್ನು ಪಟ್ಟದಿಂದ ತಳ್ಳಿ—ಸುಲಭ ರೀತಿಯಿಂದ ಸಾಧ್ಯವಾಗದಿದ್ದರೆ ಕೊಂದಾದರೂ ನನ್ನ ಗಂಡನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಬೇಕು. ನಾನು ಮಹಾರಾಣಿಯಾಗಬೇಕು.

ಈ ಕೆಲಸಕ್ಕೆ ನನ್ನ ಚತುರಳಾದ ದಾಸಿಯಿಂದ ಬಹಳ ಸಾಹಾಯುವಾಗು ವಂತಿದೆ.

ಕಾಮಾಕ್ಷಿಯ ವಿಚಾರತರಂಗಗಳು ನಡೆದಿರುವಾಗ ದಾಸಿಯು ಅಲ್ಲಿಗೆ ಬಂದಳು. ಕಾಮಾಕ್ಷಿಯು ಅವಳೊಡನೆ ತುಸು ಹೊತ್ತು ಮಾತಾಡುತ್ತ ಕುಳಿತು, ತರುವಾಯ ಮನೆಗೆ ನಡೆದಳು.

## ಏಳನೆಯ ಅಧ್ಯಾಯ

### ಭವಿಷ್ಯತ್ಕಾಲದ ಛಾಯೆ

ಸುಮಾರು ರಾತ್ರಿಯ ಎರಡು ಗಂಟೆಯಾಗಿರಬಹುದು. ಸ್ವಚ್ಛವಾದ ಬೆಳದಿಂಗಳು ಬಿದ್ದಿತ್ತು. ತಣ್ಣಗಿನ ಗಾಳಿಯು ಬೀಸುತಲಿತ್ತು. ಮಾರ್ಗ ದಲ್ಲಿ ಪ್ರಾಣಿಮಾತ್ರರ ಸದ್ದು ಇದ್ದಿಲ್ಲ. ಜನರೆಲ್ಲರು ನಿದ್ರಾದೇವಿಯ ಗಾಢಾ ಲಿಂಗನದಲ್ಲಿ ಮೈಯ್ಮರೆದಿದ್ದರು. ಬಳಿಯಲ್ಲಿ ಪ್ರವಹಿಸುತಲಿರುವ ತುಂಗ ಭದ್ರೆಯ ಎದುರಿನಲ್ಲಿ ತಲೆಯೆತ್ತಿ ನಿಂತುಕೊಂಡಿರುವ ಪರ್ವತರಾಜಿಯ ನೋಟವು ಪ್ರೇಕ್ಷಣೀಯವಾಗಿತ್ತು. ಆ ಗುಡ್ಡಗಳ ಸಾಲಿನ ಮೇಲೆ ಅಲ್ಲಲ್ಲಿ ಬೆಳೆದ ಗಿಡಗಂಟೆಗಳಿಂದ ಪರ್ವತರಾಜನು ಹಸರು ಶಾಲನ್ನು ಹೊದ್ದುಕೊಂಡು ನಿದ್ರಿಸುತ್ತಿರುವಂತೆ ಭಾಸವಾಗುತ್ತಿತ್ತು. ಗುಡ್ಡದ ಮೇಲಿನ ದೊಡ್ಡ ದೊಡ್ಡ ಬಂಡೆಗಳು ಆನೆಗುಂದಿಯ ವೈಭವವನ್ನು ಮೌನದಿಂದ ಸೂಚಿಸುತಲಿರುವಂತೆ ತೋರುತ್ತಿದ್ದವು. ಒಂದು ಶಿಲಾಖಂಡದ ಮೇಲೆ ಕುಳಿತ ಗೂಗೆಯು ಕರ್ಕಶ ಸ್ವರದಿಂದೊದರಿ, ಭವಿಷ್ಯತ್ಕಾಲದ ವಿಪತ್ತನ್ನು ಸೂಚಿಸುತಲಿತ್ತು.

ಹರಿಹರನು ವಿಚಾರಪರನಾಗಿ ಅರಮನೆಗೆ ಬಂದು, ತನ್ನ ದಿವಾಣಖಾನೆ ಯನ್ನು ಪ್ರವೇಶಿಸಿದನು. ದೀಪವು ಉರಿಯುತಲಿತ್ತು. ಹಾಸುಗೆಯು ಸಿದ್ಧ ವಾಗಿತ್ತು. ಅವನು ಅರಿವೆಗಳನ್ನು ತೆಗೆದು ಮಲಗಿಕೊಂಡನು. ಆದರೆ ನಿದ್ದೆಯು ಬರಲಿಲ್ಲ. ಪೂರ್ವರಾತ್ರಿಯಿಂದ ಈ ವರೆಗೆ ನಡೆದ ಒಂದೊಂದೇ ಸಂಗತಿಯು ಅವನ ಮನಸ್ಸಿನಲ್ಲಿ ಎಡೆಬಿಡದೆ ಬರತೊಡಗಿತು. ಮೊದಲು

ಪ್ರಣಯಿನಿಯ ವಿಚಾರವು. ರಾಜಕುಮಾರಿಯ ಸರಳವರ್ತನ, ತನ್ನ ಮೇಲಿರುವ ಅಕೃತ್ರಿಮಪ್ರೇಮ ಇವುಗಳ ನೆನಪಿನಿಂದ ಅವನು ತಲ್ಲೀನನಾದನು. ಈ ಸುಖಕಲ್ಪನೆಯಲ್ಲಿ ಅವನು ತುಸು ಹೊತ್ತು ಕಳೆದ ತರುವಾಯ ಅವನ ಮನಸ್ಸಿನಲ್ಲಿ ಕಾಮಾಕ್ಷಿಯ ಸಂಬಂಧದ ವಿಚಾರಗಳು ಬರತೊಡಗಿದವು. ಇದರಿಂದ ಅವನ ಮನಸ್ಸು ವ್ಯಗ್ರವಾಯಿತು. ಅವನು ಅನೇಕ ರೀತಿಯಿಂದ ಯೋಚಿಸಹತ್ತಿದ್ದನು— ದೇವಸೃಷ್ಟಿಯಲ್ಲಿ ಒಂದೇ ಪಡಿಯಚ್ಚಿನಿಂದ ನಿರ್ಮಿತವಾದ ಎರಡು ವಸ್ತುಗಳು. ಇಬ್ಬರೂ ಸ್ತ್ರೀಯರು, ಸುಂದರಿಯರು, ಹೀಗಿದ್ದರೂ ಇವರಿಬ್ಬರ ನಡೆನುಡಿಗಳಲ್ಲಿ ಎಷ್ಟೊಂದು ಅಂತರವು! ಒಬ್ಬಳು ಲಜ್ಜಾವತಿಯು. ಇನ್ನೊಬ್ಬಳು ಗಂಡಸರನ್ನು ನಾಚಿಸುವಂತಹ ದಿಟ್ಟೆಯು. ಒಬ್ಬಳು ಮರ್ಯಾದಾಶಾಲಿನಿಯು; ಬೇರೊಬ್ಬಳು ಸಮಾಜದ ಬಂಧನಗಳನ್ನು ಹರಿದೊಗೆದ ರಾಕ್ಷಸಿಯು! ಈ ವ್ಯತ್ಯಾಸವನ್ನು ನೋಡಿದರೆ, ಸೃಷ್ಟಿಯು ವಿವಿಧತಾ ಪೂರ್ಣವಾಗಿದೆಯೆಂದೂ, ಬೆಳ್ಳಗಿರುವದೆಲ್ಲ ಹಾಲೆಂದು ಭಾವಿಸಲಿಕ್ಕೆ ಆಸ್ಪದವಿಲ್ಲೆಂದೂ ವ್ಯಕ್ತವಾಗುತ್ತಲಿದೆ.

ಕಾಮಾಕ್ಷಿಯ ಉದ್ದೇಶವೇನಿರಬಹುದು? ಅವಳು ನನ್ನನ್ನೇತಕ್ಕೆ ಕರೆಯಿಸಿಕೊಂಡಳು? ನಾನು ಎಷ್ಟೋ ಹೊತ್ತು ಅವಳೊಡನೆ ಮಾತಾಡಿದೆನಾದರೂ, ಅವಳ ರಹಸ್ಯವನ್ನರಿತುಕೊಳ್ಳಲಸಮರ್ಥನಾದೆನು. ಅಪರಾತ್ರಿಯ ಸಮಯದಲ್ಲಿ ನನ್ನಂತಹ ಪರಕೀಯ ತರುಣನೊಡನೆ ಮರ್ಯಾದೆಮೀರಿ ಮಾತುಬಳೆಸಿದ ಅವಳ ಸಾಹಸವು ಸಾಮಾನ್ಯವಾದುದಲ್ಲ! ಹಾವಭಾವಗಳಿಂದಂತೂ ಅವಳು ಅಧಮಸ್ತ್ರೀಯಾಗಿರುವಳೆಂಬುದು ಒಡೆದು ಕಾಣುವಂತಿತ್ತು! ಅವಳು ನನ್ನನ್ನು ತನ್ನ ಪ್ರಣಯಜಾಲದಲ್ಲಿ ಕೆಡಹುವ ಮನಸ್ಸು ಮಾಡಿರಬಹುದೇನು? ಇರಬಹುದು! ಇದಕ್ಕಾಗಿಯೇ ಅವಳು ನಾನು ರಾಜಕುಮಾರಿಯ ಪಾಣಿಗ್ರಹಣ ಮಾಡಲಾಗದೆಂದು ಆಗ್ರಹದಿಂದ ಹೇಳಿದಳು. ನಾನು ಕುರುಬನಂತೆ! ರಾಜಕುಮಾರಿಗೆ ನಾನು ಅನನುರೂಪನಂತೆ! ರಾಜಕುಮಾರಿಯ ಕಡೆಗೆ ಒಲೆದಿರುವ ನನ್ನ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳುವದಕ್ಕಾಗಿ ಈ ಮೇರೆಗೆ ಪಂಟುಬಡೆದಿರಬಹುದು! ಎಂತಹ ದುಷ್ಟೆಯು ಅವಳು! ವಿಧಿಪೂರ್ವಕ ಕೈ ಹಿಡಿದ ಗಂಡನನ್ನು ತಿರಸ್ಕರಿಸಿ, ಪರಪುರುಷರ ಆಶೆಯನ್ನು ಮಾಡುವ ಅವಳಿಗೆ ಶತಧಿಕ್ಕಾರವಿರಲಿ!!

ಪಟ್ಟಣದಲ್ಲಿ ರಾಜಕ್ರಾಂತಿಯ ಒಳಸಂಚುಗಳು ನಡೆದಿವೆಯಂತೆ! ಎಲ್ಲಿ? ಎಲ್ಲವೂ ಸುಳ್ಳು! ಮಹಾರಾಜರು ಧರ್ಮಾತ್ಮರು. ಅವರ ಮೇಲೆ ಕೈಯೆತ್ತುವವರಾರೂ ಇಲ್ಲ. ಪ್ರಧಾನಿಗಳಾದರೂ ಒಳ್ಳೆಯವರು. ಪ್ರಜೆಗಳಿಗೆ ಇವರಿಂದ ತುಸುವಾದರೂ ಕಷ್ಟವಿಲ್ಲ. ಹೀಗಿರಲು ಜನರು ಕಾರಸ್ಥಾನಗಳನ್ನು ನಡೆಯಿಸುತ್ತಿರುವದೇಕೆ? ಕಾಮಾಕ್ಷಿಯು ಹೇಳುತ್ತಿರುವಂತೆ ಮಹಾರಾಜರ ಉದಾಸೀನತೆಯ ಮೂಲಕವಾಗಿಯೂ, ಪ್ರಧಾನರ ಆಲಸ್ಯದುರ್ಲಕ್ಷ್ಯಗಳ ಮೂಲಕವಾಗಿಯೂ ನಾಡಿನಲ್ಲಿ ಸುವ್ಯವಸ್ಥೆಯು ಇಲ್ಲದಿರುವುದು ನಿಜವು. ಈ ಸ್ಥಿತಿಯ ಉಪಯೋಗವನ್ನು ಸ್ವತಃ ಕಾಮಾಕ್ಷಿಯೇ ಮಾಡಿಕೊಳ್ಳಲಿಚ್ಛಿಸಿರಬಹುದೇನು? ವೃದ್ಧರಾದ ಪ್ರಧಾನಿಗಳ ಮನಸ್ಸಿನಲ್ಲಿ ಏನಾದರೊಂದು ಕುಕಲ್ಪನೆಯನ್ನು ಹುಟ್ಟಿಸಿ, ಈ ರಾಜ್ಯಕ್ಕೆ ಸಂಕಟವನ್ನುಂಟುಮಾಡಬಹುದೇನು? ಎಷ್ಟಾದರೂ ಹೆಂಗಸು ಅವಳು! ಅವಳಿಂದೇನಾಗುವದು?

ನಿದ್ರಾದೇವಿಯು ಮೆಲ್ಲಮೆಲ್ಲನೆ ಹರಿಹರನ ಕಡೆಗೆ ಬರುತಲಿದ್ದಳು. ರಾತ್ರಿಯ ಕಡೆಯ ಜಾವದಲ್ಲಿ ಹರಿಹರನಿಗೆ ನಿದ್ದೆಯು ಹತ್ತಿತು. ಬೆಳಗು ಮುಂಜಾವಿನಲ್ಲಿ ಅವನಿಗೊಂದು ಕನಸು ಬಿತ್ತು. ಸುಖಮಯವಾದ ಈ ಸ್ವಪ್ನದ ಮೂಲಕ ನಿದ್ರೆಯಲ್ಲಿರುವ ಅವನ ಮುಖದ ಮೇಲೆ ಮಂದಹಾಸವು ತೋರಹತ್ತಿತು. ಅಲ್ಪ ವೇಳೆಯಲ್ಲಿ ಈ ನಗೆಯು ಇಲ್ಲದಂತಾಗಿ, ಆ ಸ್ಥಳದಲ್ಲಿ ಸಿಟ್ಟಿನ ಲಕ್ಷಣವು ತೋರತೊಡಗಿತು.

ತುಂಗಭದ್ರೆಯ ತೀರದಲ್ಲಿರುವದೊಂದು ಉಪವನವು. ಇದರಲ್ಲಿರುವ ಸಂಗಮರವರಿಕಲ್ಲಿನ ಜಗುಲಿಯ ಮೇಲೆ ಹರಿಹರನು ಕುಳಿತುಕೊಂಡು, ಉದ್ಯಾನದ ಶೋಭೆಯನ್ನು ನೋಡುತಲಿದ್ದನು. ಈ ತೋಟವು ಅನೇಕ ಫಲ-ಪುಷ್ಪಗಳಿಂದಲೂ ಗಿಡಬಳ್ಳಿಗಳಿಂದಲೂ ತುಂಬಿ ತುಳುಕುತ್ತಿತ್ತು. ಒಂದೆಡೆಯಲ್ಲಿ ತರತರ ಮಲ್ಲಿಗೆಯ ಬಳ್ಳಿಗಳು. ಬೇರೊಂದು ಕಡೆಯಲ್ಲಿ ಗುಲಾಬಿಯ ಗಿಡಗಳು. ಇನ್ನೊಂದು ಕಡೆಯಲ್ಲಿ ಮಾವು, ಪೇರಲ, ಕಿತ್ತಳೆ, ದ್ರಾಕ್ಷ, ಅಂಜೀರಗಳ ಗಿಡಗಳು. ಮತ್ತೊಂದು ಸ್ಥಳದಲ್ಲಿ ಸಂಪಿಗೆ, ಮಾಲತಿ ಮೊದಲಾದ ಹೂಗಿಡಗಳು. ಈ ಎಲ್ಲ ಗಿಡಬಳ್ಳಿಗಳು ಹೂಕಾಯಿಗಳಿಂದ ಶೋಭಾಯಮಾನವಾಗಿದ್ದವು. ಅರಳಿದ ಕೆಲವು ಹೂಗಳೂ, ಪಾಡಾದ ಕಾಯಿಗಳೂ

ಕೆಳಗೆ ಬಿದ್ದಿದ್ದವು ಮತ್ತು ಬೀಳುತಲಿದ್ದವು. ಉಪವನದ ಈ ಶೋಭೆಯನ್ನು ನೋಡಿ ಹರಿಹರನಿಗೆ ಬಹಳ ಆನಂದವಾಯಿತು. ಗುಲಾಬಿಯ ಗಿಡದಲ್ಲಿರುವದೊಂದು ಕೆಂಪು ಹೂವು ಸಂಪೂರ್ಣವಾಗಿ ಅರಳಿ ಹೆಚ್ಚು ಸುಂದರವಾಗಿ ಕಾಣುತಲಿತ್ತು. ತುಷಾರಸಿಕ್ತವಾದ ಈ ಹೂವನ್ನು ಉಷಃಕಾಲದ ತಂಗಾಳಿಯು ಮೆಲ್ಲಮೆಲ್ಲನೆ ಅಲ್ಲಾಡಿಸುತಲಿತ್ತು. ಹರಿಹರನು ಮನೋಮುಗ್ಧಕರವಾದ ಈ ನೋಟವನ್ನು ನೋಡಿ, ಆ ಹೂವಿನ ಕಡೆಗೆ ಹೋದನು. ಇನ್ನು ಆ ಪುಷ್ಪವನ್ನು ತೆಗೆದುಕೊಳ್ಳತಕ್ಕವನಿದ್ದನು. ಇಷ್ಟರಲ್ಲಿ ಕರ್ಕಶಸ್ವರದಿಂದುಚ್ಚರಿತವಾದ—ಎಲೋ ಕಾಫರ, ನಿಲ್ಲು, ಮುಂದೆ ಬರಬೇಡ! ಈ ಪುಷ್ಪವು ನನ್ನ ಉಪಭೋಗ್ಯ ವಸ್ತುವು. ಇದರ ಮೇಲೆ ನಿನ್ನ ಒಡೆತನವೆಷ್ಟು ಮಾತ್ರವೂ ಇಲ್ಲ! ಎಂಬ ಶಬ್ದಗಳು ಕೇಳಿಸಿದವು. ಹರಿಹರನು ಆ ಕಡೆಗೆ ನೋಡಿದನು. ಒಬ್ಬ ಯುವನನು ತನ್ನೆದುರಿಗೆ ನಿಂತುಕೊಂಡಿರುವುದು ಅವನಿಗೆ ಕಂಡುಬಂತು. ಅವನು ಕ್ರೋಧದಿಂದ—ಆದೇಕೆ? ಈ ತೋಟವು ನನ್ನದು; ವಿದೇಶೀಯನಾದ ನಿನಗೆ ಈ ಪುಷ್ಪದ ಸ್ವಾಮಿತ್ವವು ಹೇಗೆ ದೊರೆದೀತು? ಸುಮ್ಮನೆ ಬಂದ ಹಾದಿಯಿಂದ ತಿರುಗಿ ಹೋಗು! ಎಂದು ಗದ್ದರಿಸಿದನು. ಇದಕ್ಕೆ ಆ ಯುವನನು ಹಿಂಜರಿಯದೆ ಉಪಹಾಸದಿಂದ—ನೀನು ಕನಸಿನಲ್ಲಿರುವಂತೆ ತೋರುತ್ತಿದೆ. ಎಚ್ಚರಾಗಿ ನೋಡು. ಹಿಂದುಸ್ತಾನವು ನಮ್ಮದಾಗಿ ಹೋಗಿದೆ. ಹಿಂದುಸ್ತಾನದೊಳಗಿನ ಪ್ರತಿಯೊಂದು ಸುಂದರ ವಸ್ತುವು ಮುಸಲ್ಮಾನರ ಸ್ವಾಮಿತ್ವಕ್ಕೊಳಗಾಗಿದೆ. ನಮಗೆ ಬೇಡಾದ ವಸ್ತುಗಳನ್ನು ಮಾತ್ರ ಕಾಫರರಾದ ನೀವು ಉಪಭೋಗಿಸಬಹುದು, ಎಂದು ಹೇಳಿದನು. ಹರಿಹರನು ಆ ಯುವನನ ಮಾತಿನ ಕಡೆಗೆ ಲಕ್ಷ್ಯಗೊಡದೆ ಆ ಹೂವನ್ನು ತೆಗೆದುಕೊಂಡು—ನಾನು ಕನಸಿನಲ್ಲಿಲ್ಲ. ಸಾಮರ್ಥ್ಯವಿದ್ದರೆ, ಈ ಹೂವನ್ನು ಕಸಿದುಕೊಂಡು ಹೋಗು. ಇಲ್ಲವಾದರೆ ಇದು ನನ್ನದು, ಎಂದು ಅಂದನು. ಇಬ್ಬರಿಗೂ ಬಡೆದಾಟ ನಡೆಯಿತು. ಈ ಗೊಂದಲದಿಂದ ಹರಿಹರನಿಗೆ ಎಚ್ಚರಿಕೆಯಾಯಿತು. ಅವನು ಸುತ್ತಲೂ ನೋಡಿದನು. ಆ ಯುವನನಿಲ್ಲ. ಕೈಯಲ್ಲಿ ಗುಲಾಬಿಯ ಹೂವಿಲ್ಲ. ತುಸು ಹೊತ್ತಿನ ಮೇಲೆ ಅವನಿಗೆ ತಾನಿದುವರೆಗೆ ಕನಸಿನಲ್ಲಿದ್ದೆನೆಂಬುದರ ಮನವರಿಕೆಯಾಯಿತು. ಅವನು ತನ್ನ ಚಿತ್ತಚಂಚಲತೆಗೆ ನಾಚಿಕೊಂಡು, ಹಾಸಿಗೆ ಬಿಟ್ಟೆದ್ದನು.

# ಎಂಟನೆಯ ಅಧ್ಯಾಯ

## ದಿಲ್ಲಿಯ ಬಾದಶಹನ ದರಬಾರು

ಸುಮಾರು ಒಂದು ತಾಸು ಹೊತ್ತೇರಿರಬಹುದು. ರವಿಯು ಹೊಂಬಣ್ಣದ ಕಿರಣಗಳು ಜಗತ್ತಿನಲ್ಲಿ ಪಸರಿ, ಮನೋಹರವಾದ ದೃಶ್ಯವನ್ನುಂಟು ಮಾಡಿವೆ. ಅಂತಸ್ತುಗಳ ಮೇಲೂ ಗುಡಿ-ಮಸೀದೆಗಳ ಮೇಲೂ ಈ ಕಿರಣಗಳು ಬಿದ್ದು, ನೋಡುವವರ ಮನಾನಂದವನ್ನುಂಟುಮಾಡುತ್ತಲಿವೆ. ಜನರು ತಮ್ಮ ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು, ನಿತ್ಯದ ಕಾರ್ಯಗಳಲ್ಲಿ ತೊಡಗುತಲಿದ್ದಾರೆ. ವಿಚಿತ್ರ ವೇಷಭೂಷಣಗಳಿಂದ ಶೃಂಗಾರಾದ ಅಮೀರ-ಉಮರಾವರು ದರಬಾರಿಗೆ ಹೊರಟಿದ್ದಾರೆ.

ದಿಲ್ಲಿಯ ರಾಜಸಭಾಗೃಹವು ಸುಮಾರು ಐದುನೂರು ಜನರು ಸಂಕೋಚವಿಲ್ಲದೆ ಕುಳಿತುಕೊಳ್ಳುವಷ್ಟು ವಿಸ್ತೃತವಾಗಿತ್ತು. ಈ ಗೃಹದಲ್ಲಿ ಬೇರೆ ಬೇರೆ ಜನರು ತಮ್ಮ ತಮ್ಮ ಯೋಗ್ಯತೆಯಂತೆ ಕುಳಿತುಕೊಳ್ಳುವುದಕ್ಕಾಗಿ ಅನೇಕ ತರದ ನೂರಾರು ಆಸನಗಳು ಸಿದ್ಧವಾಗಿದ್ದವು. ಆ ಸ್ಥಾನವು ನಾನಾ ರೀತಿಯಿಂದ ಶೃಂಗರಿಸಲ್ಪಟ್ಟಿತ್ತು. ದ್ವಾರಪಾಲಕರು ಬಾಗಿಲು ಕಾಯುತ್ತ ಕುಳಿತುಕೊಂಡಿದ್ದರು.

ಸಭಾಮಂದಿರದಲ್ಲಿ ಜನರು ಕೂಡ ಹತ್ತಿದರು. ಬರಬರುತ್ತ ಆ ಸ್ಥಾನವು ಜನಸಮೂಹದಿಂದ ತುಂಬಿಹೋಯಿತು. ಇನ್ನೂ ಬಾದಶಹನ ಆಗಮನವಾಗಿರಲಿಲ್ಲ. ಯಾವತ್ತರೂ ಆ ಕಾಲಕ್ಕಿದ್ದ ಬಾದಶಹನ ಹಾದಿ ನೋಡುತ್ತ ಕುಳಿತುಕೊಂಡಿದ್ದರು.

ಬಾದಶಹನು ವಜೀರರಿಂದ ಕೂಡಿಕೊಂಡು, ಬಹು ವಿಜೃಂಭಣೆಯಿಂದ ದರಬಾರಿನ ಬಾಗಿಲಿನ ಬಳಿಗೆ ಬಂದನು. ಬಾಗಿಲು ಕಾಯುವವರು ನೆಲ ಮುಟ್ಟಿ ಸಲಾಮ್ ಮಾಡಿದರು. ಬಾದಶಹನು ಸಭಾಗೃಹವನ್ನು ಪ್ರವೇಶಿಸಿದನು. ಒಳಗಿರುವವರೆಲ್ಲರೂ ಎದ್ದುನಿಂತು, ಬಾದಶಹನಿಗೆ ಸಲಾಮ್ ಮಾಡಿದರು. ಬಾದಶಹನು ಅವರ ಸಲಾಮ್ ಸ್ವೀಕರಿಸುತ್ತ ನಡೆದು, ಗದ್ದಿಗೆಯು

ಮೇಲೆ ಕುಳಿತುಕೊಂಡನು. ವಜೀರರು ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ತರುವಾಯ ಇತರರು ಕುಳಿತುಕೊಂಡರು.

ಬಾದಶಹನು ಇಂದು ವಿಶೇಷ ಸಂತೋಷದಲ್ಲಿದ್ದನು. ದರಬಾರಿನ ಕೆಲಸವೂ ವಿಶೇಷವಾಗಿರಲಿಲ್ಲ. ಆದುದರಿಂದವನು ನೃತ್ಯ-ಗಾಯನಗಳು ನಡೆಯಲೆಂದು ಮುಖ್ಯ ವಜೀರನಿಗೆ ಅಪ್ಪಣೆ ಮಾಡಿದನು. ವಜೀರನ ಅಪ್ಪಣೆಯಿಂದ ಎಂಟು ಜನ ನರ್ತಕಿಯರು ಬಂದು, ಬಾದಶಹನಿಗೆ ವಿನಯದಿಂದ ಸಲಾಮ್ ಮಾಡಿ, ನಿಂತುಕೊಂಡರು.

ನರ್ತಕಿಯರೆಲ್ಲರು ತರುಣಿಯರು; ಸಮಾನ ವಯಸ್ಕರು; ಅತೀವ ಸುಂದರಿಯರು; ಮೇಲೆ ಒಂದೇ ವಿಧವಾದ ಬೆಲೆಯುಳ್ಳ ಸುಂದರ ವಸ್ತ್ರಾಲಂಕಾರಗಳಿಂದ ಭೂಷಿತರಾದವರು. ಕುಳಿತ ಜನರು ನಿಸ್ತಬ್ಧರಾಗಿ ನರ್ತಕಿಯರ ಕಡೆಗೆ ಎವೆಯಿಕ್ಕದೆ ನೋಡುತ್ತ ಕುಳಿತುಕೊಂಡರು.

ಬಾದಶಹನು ನೃತ್ಯಗೀತಗಳನ್ನಾರಂಭಿಸುವುದಕ್ಕೆ ಸನ್ನೆ ಮಾಡಿದನು. ನರ್ತಕಿಯರು ಹಾಡತೊಡಗಿದರು; ಅದರೊಡನೆ ಕುಣಿತವನ್ನು ಆರಂಭಿಸಿದರು. ಅವರ ಹಾವಭಾವಗಳು ಜನರ ಮನಸ್ಸನ್ನಾಕರ್ಷಿಸಿದವು. ಬಾದಶಹನೂ ಇತರರೂ ಗಾಯನದಲ್ಲಿ ತಲ್ಲೀನರಾಗಿ ಹೋದರು. ಈ ದೃಶ್ಯವು ಬಹು ಪ್ರೇಕ್ಷಣೀಯವಾಗಿದ್ದಿತು.

ನೃತ್ಯಗೀತಗಳು ಮುಗಿದವು. ಬಾದಶಹನು ಸಂತುಷ್ಟನಾಗಿ ಅವರಿಗೆ ಬಹುಮಾನವನ್ನಿತ್ತು ಕಳುಹಿಸಿದನು. ಈ ಸಮಯದಲ್ಲೊಬ್ಬ ಫಕೀರನು ಎದ್ದುನಿಂತು— ಜಹಾಪಾನಾ, ದೀನದುನಿಯಾರ ಮಾಲಿಕ, ಅರಸನು ದೇವರ ಅವತಾರನೆಂದು ಕಾಫರರು ಹೇಳುತ್ತಾರೆ; ಮತ್ತು ಅದರಂತೆ ಅರಸನಿಗೆ ಮರ್ಯಾದೆಯನ್ನು ಕೊಡುತ್ತಾರೆ. ಅವರ ಈ ಕಲ್ಪನೆಯು ಸಮಂಜಸವಾದ್ದೆಂಬುದರಲ್ಲಿ ಸಂದೇಹವಿಲ್ಲ. ತಾವು ಕೇವಲ ಅಲ್ಲಾನ ಅವತಾರವೆಂದೇ ನಾನು ನಂಬಿರುವೆನು! ಎಂದು ಹೇಳಿದನು.

ಬಾದಶಹನ ದರಬಾರಿಗೆ ಬರುವುದಕ್ಕೆ ಫಕೀರರಿಗೆ ಪ್ರತಿಬಂಧವಿರಲಿಲ್ಲ; ಏಕೆಂದರೆ ಫಕೀರರ ಮೇಲೆ ಬಾದಶಹನ ವಿಶ್ವಾಸವು ಬಹಳವಾಗಿತ್ತು. ಆದುದರಿಂದವನು ಫಕೀರರಿಗೆ ಬಹಳ ಮರ್ಯಾದೆಯನ್ನು ಕೊಡುತ್ತಿದ್ದನು;

ಮತ್ತು ಅವರೊಡನೆ ಭಕ್ತಿಯಿಂದ ನಡೆಯುತ್ತಿದ್ದನು. ಇದಕ್ಕಾಗಿ ಅವನು ಫಕೀರರು ಅಪ್ಪಣೆಯಿಲ್ಲದೆ, ದರಬಾರನ್ನು ಪ್ರವೇಶಿಸಬಹುದೆಂದು ನಿಯಮ ಮಾಡಿದ್ದನು. ಆದಕಾರಣ ದ್ವಾರಪಾಲಕರು ಫಕೀರರನ್ನು ತಡೆಯುತ್ತಿರಲಿಲ್ಲ.

ಫಕೀರನ ಈ ಮುಖಸ್ತುತಿಯ ಮಾತನ್ನು ಕೇಳಿ, ಬಾದಶಹನಿಗೆ ಅತ್ಯಂತ ಸಂತೋಷವಾಯಿತು. ಅವನು ನಗೆಮೋರೆಯನ್ನು ತಾಳಿ, ಗಡ್ಡದ ಮೇಲೆ ಕೈಯಾಡಿಸುತ್ತ—ಫಕೀರಸಾಹೇಬ ನಿಮ್ಮ ಹೇಳಿಕೆಯು ಸುಳ್ಳಲ್ಲ. ನಮ್ಮಂತಹ ಬಾದಶಹರ ಕೈಯಲ್ಲಿ ದೇವರಿಗಿರುವಷ್ಟೇ ಅಧಿಕಾರವಿರುವದು. ಅಂದ ಬಳಿಕ ದೇವರಿಗೂ ನಮಗೂ ಭೇದವೆಲ್ಲಿಯದು? ಕೇವಲ ಕಾಫರರಷ್ಟೇ ಏಕೆ; ಎಲ್ಲರೂ ಇದನ್ನು ಮನ್ನಿಸಲೇ ಬೇಕು.

ವಜೀರನು (ಎದ್ದುನಿಂತು ಮಂದಹಾಸದಿಂದ)—ಖಾವಿಂದ, ತಮ್ಮ ಮಾತು ಸತ್ಯವಾದುದು. ದೇವರಾದರೋ ನಮ್ಮ ಕಣ್ಣಿಗೆ ಕಾಣಬರುವದಿಲ್ಲ. ಆದ್ದರಿಂದವನಲ್ಲಿ ಇಂತಿಷ್ಟೇ ಶಕ್ತಿಯಿದೆಯೆಂದು ಹೇಳಲಿಕ್ಕೆ ಬರುವಂತಿಲ್ಲ; ಆದರೆ ಬಾದಶಹರಾದ ತಮ್ಮ ಕೈಯಲ್ಲಿ ಬೇಕಾದ ಶಕ್ತಿಯಿದೆ; ತಾವು ಬೇಕಾದ್ದನ್ನು ಸಹಜವಾಗಿ ಮಾಡಬಲ್ಲಿರಿ. ಇದನ್ನು ನೋಡಿ, ತಾವು ದೇವರಿಗಿಂತಲೂ ಹೆಚ್ಚಿನವರೆಂದು ನಾನು ತಿಳಿಯುವೆನು.

ಬಾದಶಹನು 'ಬಹುತ ಅಚ್ಛಾ' ಎಂದು, ತನ್ನ ಉದ್ದವಾದ ಗಡ್ಡಗಳ ಮೇಲೆ ಕೈಯೆಳೆದುಕೊಂಡನು. ಈ ಸಮಯದಲ್ಲಿ ಬಾದಶಹನಿಗೆ ಹಲ್ಲು ಚುಚ್ಚಿದಂತಾಯಿತು. ಅದರಿಂದವನಿಗೆ ತುಸು ನೋವೂ ಆದಂತೆ ಬೋಧೆಯಾಯಿತು. ಅವನು ಬಾಯಿಯಲ್ಲಿ ಬೆರಳುಗಳನ್ನು ಸೇರಿಸಿ ನೋಡಿಕೊಂಡನು. ಬಲದವಡೆಯ ಒಂದು ಹಲ್ಲು ಅಲ್ಲಾಡುತ್ತಿರುವುದೆಂದು ಅವನಿಗೆ ತಿಳಿಯಿತು. ಅವನು ಒಂದೆರಡು ಸಾರಿ ಆ ಹಲ್ಲನ್ನು ಅಲ್ಲಾಡಿಸಿದನು. ಕೂಡಲೇ ಆ ಹಲ್ಲು ಕಿತ್ತಿ, ಕೈಯಲ್ಲಿ ಬಂದಿತು. ಅವನದನ್ನು ಹೊರಗೆ ತೆಗೆದು ತುಸು ಹೊತ್ತು ನೋಡಿದನು. ತರುವಾಯ ಅವನು ವಜೀರನನ್ನು ಕುರಿತು—ವಜೀರ, ನೋಡಿದೆಯಾ? ಇಂದು ಅಕಸ್ಮಾತ್ತಾಗಿ ನನ್ನದೊಂದು ಹಲ್ಲು ಬಿದ್ದಿತು. ಇದೇನು ಶುಭವೋ, ಅಶುಭವೋ ನಾನರಿಯೆನು. ಬಹಳ ಮಾಡಿ ಇದೊಂದು ಉತ್ತಮ ಲಕ್ಷಣವಿರಬೇಕೆಂದು ನಾನು ತರ್ಕಿಸುವೆನು.

ಇದು ಹೇಗೇ ಇರಲಿ. ಮುಂದೆ ಇದರ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂಬುದನ್ನು ಹೇಳು.

ವಜೀರನಿಗೆ ಏನು ಮಾತಾಡಬೇಕೆಂಬುದು ತೋಚಲಿಲ್ಲ. ಆದ್ದರಿಂದವನು ಎಣಿಕೆಗೊಳಗಾದನು. ಇಷ್ಟರಲ್ಲಿ ಮತ್ತೊಬ್ಬ ಫಕೀರನು ಎದ್ದು ನಿಂತು— ಜಹಾಪನಾ, ಹಲ್ಲು ಬಿದ್ದುದು ಶುಭಶಕುನವಲ್ಲದೆ ಬೇರೆಯಿಲ್ಲ. ಪ್ರತ್ಯಕ್ಷ ದೇವರಾದ ತಮ್ಮ ಹಲ್ಲು, ತಮ್ಮಂತೆಯೇ ಬಹುಮಾನವನ್ನು ಹೊಂದುವುದು ಯೋಗ್ಯವು. ಅದಕ್ಕಾಗಿ ಖಾವಿಂದರವರು ತಮಗೆ ಸರಿಕಂಡ ಯಾವದಾದರೊಂದು ವ್ಯವಸ್ಥೆಯನ್ನು ಮಾಡಬಹುದು.

ಬಾದಶಹ— ವಜೀರ, ಫಕೀರನು ಚೆನ್ನಾಗಿ ಹೇಳಿದನು. ಈ ಹಲ್ಲನ್ನು ರತ್ನಖಚಿತವಾದ್ದೊಂದು ಸುವರ್ಣಪಾತ್ರೆಯಲ್ಲಿರಿಸಿ, ಅದನ್ನು ಬಹು ಸಡಗರದಿಂದ ಪಟ್ಟಣದಲ್ಲಿ ಮೆರೆಯಿಸುವ ವ್ಯವಸ್ಥೆ ಮಾಡು. ತರುವಾಯ ಉತ್ತಮವಾದ್ದೊಂದು ಗೋರಿಯನ್ನು ಕಟ್ಟಿಸಿ, ಅದರಲ್ಲಿ ಪಾತ್ರೆಸಹಿತವಾದ ಹಲ್ಲನ್ನಿರಿಸಿಬಿಡು. ಅಂದರೆ ಈ ಹಲ್ಲು ತಕ್ಕ ಸನ್ಮಾನವನ್ನು ಹೊಂದಿದಂತಾಗುವದು.

ವಜೀರ— ದೀನದುನಿಯಾರ ಮಾಲಿಕ, ತಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆನು (ಎಂದು ಹೇಳಿ, ವಜೀರನು ನೆಲಮುಟ್ಟಿ ಸಲಾಮ್ ಮಾಡಿ, ವಿನೀತ ಭಾವದಿಂದ ಕರವಸ್ತ್ರದಲ್ಲಿ ಆ ಹಲ್ಲನ್ನಿಸುಕೊಂಡನು).

ಸೇವಕರು ಸುವರ್ಣದ ಪಾತ್ರೆಯಲ್ಲಿ ನೀರನ್ನು ತಂದುಕೊಟ್ಟರು. ಬಾದಶಹನು ಬಾಯಿಯನ್ನು ತೊಳೆದುಕೊಂಡು ಬಂದು, ಪುನಃ ಸಿಂಹಾಸನದ ಮೇಲೆ ಕುಳಿತುಕೊಂಡನು.

ಬಾದಶಹನ ಪ್ರಸನ್ನವೃತ್ತಿಯನ್ನು ಕಂಡು, ವಾಚಾಲನಾದ ಸಭಿಕನೊಬ್ಬನು ಎದ್ದು ನಿಂತು— ಖಾವಿಂದ, ಈ ಪ್ರಸಂಗದಲ್ಲಿ ನಾನೊಂದು ಸೂಚನೆ ಮಾಡುವೆನು. ದೊರೆಗಳವರು ಆ ಬಗ್ಗೆ ವಿಚಾರಮಾಡಿ, ಸರಿಕಂಡರೆ ಅದರಂತೆ ಮಾಡಿಸಬೇಕು. ಈ ಹಲ್ಲನ್ನು ಸುವರ್ಣಪಾತ್ರೆಯಲ್ಲಿರಿಸಿ ಮೆರೆಸುವುದರಿಂದ ಅದು ಜನರಿಗೆ ಕಾಣಿಸುವದಿಲ್ಲ. ಆದಕಾರಣ ಜನರು ಇದೇನೆಂದು ಆಗಾಗ ಕೇಳಬಹುದು. ಅವರಿಗೆ ಉತ್ತರ ಕೊಡಬೇಕಾದರೆ ಸಾಕುಬೇಕಾಗಿ ಹೋದೀತು. ಇದನ್ನು ಬಂಗಾರದ ಪಾತ್ರೆಯಲ್ಲಿರಿಸಿ ಮೆರೆಯಿಸುವದಕ್ಕಿಂತ

ಕಾಚಿನ ಪಾತ್ರೆಯಲ್ಲಿರಿಸಿ ಮೆರೆಯಿಸುವುದು ಒಳಿತೆಂದು ನನ್ನ ಅಲ್ಪ ಬುದ್ಧಿಗೆ ತೋರುತ್ತದೆ, ಎಂದು ಹೇಳಿದನು.

ಬಾದಶಹ (ಮುಗುಳು ನಗೆಯಿಂದ)—ವಜೀರ, ಈ ಜಾಣನು ಹೇಳು ತ್ತಿರುವುದು ಸರಿಯಾಗಿ ತೋರುತ್ತಿದೆ. ಇವನು ಹೇಳಿದಂತೆ ವ್ಯವಸ್ಥೆ ಮಾಡು.

ವಜೀರ—ಬಾದಶಹರವರ ಅಪ್ಪಣೆಯಂತೆ ವರ್ತಿಸುವೆನು, (ಎಂದು ಹೇಳಿ, ವಜೀರನು ಪುನಃ ಸಲಾಮ್ ಮಾಡಿದನು).

ಈ ವೇಳೆಯಲ್ಲಿ ಮೊದಲು ಮಾತಾಡಿದ ಫಕೀರನು ಎದ್ದುನಿಂತು— ಗರೀಬ ಪರವರದಿಗಾರ, ತಮ್ಮದೊಂದು ಹಲ್ಲು ಇಷ್ಟೊಂದು ಮರ್ಯಾದೆ ಯನ್ನು ಹೊಂದುತ್ತಿರಲು, ತಮಗೆ ಎಲ್ಲಿ ನೋಡಿದರೂ ಗೌರವವು ದೊರೆಯು ತ್ತಿರುವದು ಅವಶ್ಯಕವು. ಆದರೆ—

ಬಾದಶಹ (ಕುತೂಹಲದಿಂದ) — ಆದರೆ ಎಂದು ಹೇಳಿದೆಯಲ್ಲ; ಅದೇಕೆ? ಈ ಬಾದಶಹರಿಗೆ ಅಪಮಾನ ಮಾಡುತ್ತಿರುವವರು ಯಾರಾದರೂ ಇರುವರೇನು? ನಮ್ಮ ಅಪಮಾನವನ್ನು ಮಾಡಲೆಳಸುವ ಗಟ್ಟಿಗರಾರೂ ಇದ್ದಂತೆ ನಮಗೆ ತೋರುವದಿಲ್ಲ. ನಿನಗೆ ಗೊತ್ತಿದ್ದರೆ ಹೇಳು. ನಾವು ಅವ ರನ್ನು ಕ್ಷಣಕಾಲದಲ್ಲಿ ಧ್ವಂಸಮಾಡಿ ಬಿಡುವೆವು.

ಫಕೀರ—ಖಾವಿಂದ, ಹೇಳುವುದಕ್ಕೆ ಸಂಕೋಚವಾಗುತ್ತಿದೆ. ಆದರೂ ಘನವಂತರಾದ ತಮ್ಮ ಆಳಿಕೆಯಲ್ಲಿ ಫಕೀರರಿಗೆ ಸದಾ ಅಭಯವಿರುವುದೆಂದು ನಾನು ಕೇಳಿದ್ದೇನೆ. ಅದಕ್ಕಾಗಿಯೇ ನಾನಿಂದು ನಿಜಸಂಗತಿಯನ್ನು ಹೇಳಲು ಎದೆಗೊಳ್ಳುತ್ತೇನೆ. ತಮ್ಮನ್ನು ತಿರಸ್ಕರಿಸುತ್ತಿರುವವರು ಇದ್ದಾರೆ. ಅವರನ್ನು ನಾನು ಸ್ವತಃ ನೋಡಿದ್ದೇನೆ.

ಬಾದಶಹ (ಸಿಟ್ಟಿನಿಂದ)—ಏನು! ನನ್ನನ್ನು ತಿರಸ್ಕರಿಸುವವರುಂಟೇ? ಯಾರು ಹೇಳು,, ನೋಡುವಾ. ಅವರನ್ನೀಕ್ಷಣವೇ ಶಿಕ್ಷಿಸಿ, ಬಾದಶಹರ ದ್ರೋಹಿಗಳ ಪರಿಣಾಮವೇನಾಗುವದೆಂಬುದನ್ನು ಪ್ರಜೆಗಳಿಗೆ ತೋರಿಸಿ ಕೊಡುವೆನು.

ಸಭೆಯಲ್ಲಿ ನೆರೆದ ಜನರೆಲ್ಲರು ದಿಗಿಲುಗೊಂಡು, ಮುಂದಿನ ಸಂಗತಿ ಯನ್ನು ಕೇಳುವ ಕುತೂಹಲದಿಂದ ನಿಸ್ತಬ್ಧರಾಗಿ ಕುಳಿತುಕೊಂಡಿದ್ದರು.

ಆದರಿಂದ ಸಭೆಯು ಗಾಢವಾದ ಶಾಂತತೆಯನ್ನು ಹೊಂದಿತ್ತು. ಫಕೀರನು ತುಸುಹೊತ್ತು ಸುಮ್ಮನೆ ನಿಂತು, ಏನೋ ಆಲೋಚಿಸಿ, ಶಾಂತತೆಯನ್ನು ಭಂಗಮಾಡಿ ಹೇಳತೊಡಗಿದನು—ದಿಲ್ಲಿಯ ಸಾರ್ವಭೌಮರೆ, ನಿಮ್ಮನ್ನು ತಿರಸ್ಕರಿಸುತ್ತಿರುವವರು ಸಮೀಪದಲ್ಲಿಲ್ಲ. ಆದಕಾರಣ ನೀವು ಇಂದೇ ಅವರನ್ನು ಶಿಕ್ಷಿಸಲಾರಿರಿ. ಆದರೂ ತಾವು ಬಾದಶಹರ ಅಪಮಾನ ಮಾಡಿದವರಿಗೆ ಕಠೋರ ಶಿಕ್ಷೆಯಾಗುವದೆಂಬುದನ್ನು ಜನರ ನಿದರ್ಶನಕ್ಕೆ ತಂದುಕೊಡಲೇಬೇಕು. ಆದುದರಿಂದ ತಾವು ಈ ಕೆಲಸವನ್ನು ತಪ್ಪದೆ ಮಾಡುವಿರೆಂಬುದರಲ್ಲಿ ಸಂದೇಹವಿಲ್ಲ.

ಬಾದಶಹ (ಹೆಚ್ಚು ಮುನಿದು)—ಫಕೀರ, ಒಣಹರಟೆಯನ್ನು ಹೊಡೆಯುತ್ತಿರುವೆಯಲ್ಲ; ನಡೆದ ಸಂಗತಿಯನ್ನು ಬೇಗ ಹೇಳು.

ಫಕೀರ (ದಿಟ್ಟತನದಿಂದ)—ಜಹಾಪನಾ, ಹೀಗೆ ತಾವು ನನ್ನ ಮೇಲೆ ಸಿಟ್ಟಾಗುವುದೇಕೆ? ನಾನೇನು ತಪ್ಪುಗಾರನೇ? ದೇವರು ದೀನದಯಾಳುವು. ಅವನ ಅವತಾರಿಗಳಾದ ತಾವು ನಮ್ಮಂಥ ದರಿದ್ರ ಫಕೀರರ ವಿಷಯದಲ್ಲಿ ಕ್ರೋಧವನ್ನು ತೋರ್ಪಡಿಸುವುದು ತರವಲ್ಲ. ಮೇಲಾಗಿ ಮಹಾತ್ಮರ ಕೋಪವು ಅತ್ಯಲ್ಪ ಕಾಲವಿರುವದೆಂದು ಬುದ್ಧಿವಂತರು ಹೇಳುತ್ತಾರೆ; ನೀವು ಈಗಲೇ ಸಿಟ್ಟಿಗೇಳುವಿರಾದರೆ, ತಮಗುಂಟಾದ ಈ ಕೋಪವನ್ನು ತಾವು ವೈರಿಗಳ ನಾಶಕ್ಕೆ ಉಪಯೋಗಿಸಲಿಕ್ಕಿಲ್ಲ. ಆದುದರಿಂದ ತಾವು ಈಗ ನಾನು ಹೇಳುತ್ತಿರುವುದನ್ನು ಶಾಂತತೆಯಿಂದ ಕೇಳಿಕೊಳ್ಳಿರಿ. ವೈರಿ-ಶಿಕ್ಷೆಯ ಕಾಲದಲ್ಲಿ ಈ ಸಿಟ್ಟನ್ನು ತಂದುಕೊಳ್ಳುವಿರಾದರೆ, ನೆಟ್ಟಗಾಗುವದು.

ಬಾ.—ಫಕೀರ, ನಿನ್ನ ಜಾಣತನಕ್ಕೆ ಬೆಲೆಯಿಲ್ಲ. ನಾವಿನ್ನು ಶಾಂತರೀತಿಯಿಂದ ನೀನು ಹೇಳುವುದನ್ನು ಕೇಳುತ್ತೇವೆ. ಇನ್ನು ನೀನು ಹೇಳತಕ್ಕದ್ದನ್ನು ಹೇಳು.

ಫ.—ಸಾಮ್ರಾಟರೆ, ನಾನು ಮೊದಲಿನಿಂದಲೂ ದಿಲ್ಲಿಯ ನಿವಾಸಿಯಾಗಿದ್ದರೂ, ಈಗ ಕೆಲವು ವರುಷಗಳ ಹಿಂದೆ ದಕ್ಷಿಣ ಹಿಂದುಸ್ತಾನದ ಪ್ರವಾಸಕ್ಕೆ ಹೋಗಿದ್ದೆನು. ಆ ಪ್ರವಾಸವನ್ನು ಮುಗಿಸಿಕೊಂಡು ಮೊನ್ನೆ ಇಲ್ಲಿಗೆ ಬಂದೆನು.

ಬಾ.—ಇರಬಹುದು. ಇದರಲ್ಲೇನಿದೆ? ಇದೇ ಏನು ನೀನು ಹೇಳ ತಕ್ಕದ್ದು?

ಫ.—ಖಾವಿಂದ, ನಾನು ಹೇಳುತ್ತಿರುವುದನ್ನು ಸಂಪೂರ್ಣವಾಗಿ ಕೇಳಿರಿ. ನಡುವೇ ಬಾಯಿಹಾಕಿ ಹೀಗೆ ಕೇಳಿದರೆ ನಾನೇನು ಹೇಳಲಿ?

ಬಾ.—ಹಾಗಾದರೆ ಹೇಳು ನೋಡೋಣ.

ಫ.—ನಾನು ಪ್ರವಾಸದಲ್ಲಿರುವಾಗ ಒಂದು ದಿವಸ ಆನೆಗುಂದಿಯ ಸಂಸ್ಥಾನಕ್ಕೆ ಹೋಗಿದ್ದೆನು.

ಬಾ.—ಅದೆಲ್ಲಿರುವದು? ಈ ಹೆಸರನ್ನು ನಾನಿದುವರೆಗೆ ಕೇಳಿರಲಿಲ್ಲ.

ಫ.—ಆನೆಗುಂದಿಯು ದಕ್ಷಿಣ ಹಿಂದುಸ್ತಾನದಲ್ಲಿ ತುಂಗಭದ್ರಾ ನದಿಯ ಥಡದಲ್ಲಿರುವದು. ಇದೊಂದು ಬಹು ಸುಂದರವಾದ ಪಟ್ಟಣವಾಗಿದ್ದು, ಇಲ್ಲಿ ಒಬ್ಬ ಕಾಫರನು ರಾಜ್ಯವಾಳುತ್ತಿರುವನು.

ಬಾ.—ಏನು! ಅದು ಕಾಫರರ ರಾಜ್ಯವೇ? ಇನ್ನೂ ಕಾಫರರು ರಾಜ್ಯ ವಾಳುತ್ತಿರುವರೇನು? ನನ್ನ ಆಳಿಕೆಯಲ್ಲಿ ಹೀಗೆಂದಿಗೂ ಆಗಕೂಡದು.

ಫ.—ದೊರೆಗಳವರ ಚಿತ್ತ. ಈ ರೀತಿ ವ್ಯವಸ್ಥೆ ಮಾಡುವುದಕ್ಕೆ ತಮಗೆ ತಡವಾಗಲಿಕ್ಕಿಲ್ಲ. ಆದರೆ ಸದ್ಯಕ್ಕೆ ದಕ್ಷಿಣ ಹಿಂದುಸ್ತಾನದಲ್ಲಿ ನಾಲ್ಕೆಂಟು ಹಿಂದೀ ರಾಜ್ಯಗಳಿರುವದೇನೋ ಸುಳ್ಳಲ್ಲ. ಈ ನಾಲ್ಕೆಂಟು ರಾಜ್ಯಗಳಲ್ಲಿ ಆನೆ ಗುಂದಿಯು ಒಂದಾಗಿದೆ. ಇಲ್ಲಿಯ ಕಾಫರ ಜಾತಿಯ ಅರಸನು ಮುದುಕ ನಾಗಿದ್ದು, ಅವನಿಗೆ ಒಬ್ಬ ಬಹು ಸುಂದರಿಯಾದ ಮಗಳುಂಟು. ಅವಳ ಸೌಂದರ್ಯವನ್ನು ವರ್ಣಿಸುವುದು ನನ್ನಿಂದಾಗದು.

ಬಾ.—ನಿಜವಾಗಿಯೂ ಹಿಂದುಗಳಲ್ಲಿ ಸುಂದರಿಯರು ಹೆಚ್ಚು. ಅವಳ ಸೌಂದರ್ಯವನ್ನಷ್ಟು ವರ್ಣಿಸಿ ಹೇಳು. ಕೇಳಿ ಆನಂದ ಪಡುವೆನು.

ಫ.—ಖಾವಿಂದ, ನಾನು ಕವಿಯಲ್ಲ. ಆದುದರಿಂದವಳ ಅಪ್ರತಿಮ ರೂಪದ ಯಥಾರ್ಥ ವರ್ಣನೆಯನ್ನು ಮಾಡಲಸಮರ್ಥನಾಗಿದ್ದೇನೆ. ಹಿಂದಕ್ಕೆ ಚಿತೋಡದಲ್ಲಿ ಪದ್ಮಿನಿಯೆಂಬ ಅಪ್ಸರಾಸಮಾನಳಾದ ರಮಣಿಯಿದ್ದ ಳೆಂದು ನೀವು ಕೇಳಬಲ್ಲಿರಷ್ಟೇ? ಆ ಪದ್ಮಿನಿಗಾಗಿಯೇ ಅಲ್ಲಾವುದ್ದೀನರು ಚಿತೋಡದ ಮೇಲೆ ದಂಡೆತ್ತಿ ಹೋದರು; ಮತ್ತು ಬಹು ಶ್ರಮಬಟ್ಟರು.

ಆ ಪದ್ಮಿನಿಗಿಂತಲೂ ಇವಳು ಹೆಚ್ಚು ಸುಂದರಿಯೆಂದು ಜನರು ಮಾತಾಡು ತ್ತಿರುವರು. ನಾನು ಇವಳನ್ನು ಪ್ರತ್ಯಕ್ಷವಾಗಿ ನೋಡಿ ಬಂದಿದ್ದೇನೆ.

ಬಾ.—ಹೇಗೆ ನೋಡಿ ಬಂದೆ? ಬೇಕಾದವರು ಅಂತಃಪುರವನ್ನು ಪ್ರವೇಶಿಸಬಹುದೇನು? ಅಥವಾ ಕಾಫರರ ಅರಸುಮನೆತನದ ಹೆಂಗಸರು ಬಾಜಾರದಲ್ಲಿ ಓಡಿಯಾಡುತ್ತಾರೇನು?

ಫ.—ಹಾಗೇನೂ ಇಲ್ಲ. ಜನರ ಬಾಯಿಂದ ಕೇಳಿದ ಅವಳ ಅನುಪಮ ಸೌಂದರ್ಯವನ್ನು ಕಣ್ತುಂಬ ನೋಡುವ ಕೋರಿಕೆಯಿಂದ, ನಾನು ಚಿತ್ರ ಮಾರುವವಳ ವೇಷವನ್ನು ಹಾಕಿಕೊಂಡು, ಬಹು ಶ್ರಮಬಟ್ಟು ಅವಳ ದರ್ಶನವನ್ನು ತೆಗೆದುಕೊಂಡೆನು. ಅವಳ ರೂಪವನ್ನು ನೋಡಿ ಅತ್ಯಂತ ಸಂತುಷ್ಟನಾಗಿ ಹೋದೆನು. ಆ ಸಮಯದಲ್ಲಿ ನನ್ನ ಬಳಿಯಲ್ಲಿ ಅನೇಕ ಚಿತ್ರ ಗಳಿದ್ದವು. ಅವುಗಳಲ್ಲಿ ದಿಲ್ಲಿಯ ಶ್ರೇಷ್ಠ ಸಾರ್ವಭೌಮರಾದ ತಮ್ಮ ಚಿತ್ರವೂ ಇದ್ದಿತು. ತಮ್ಮ ಈ ಸುಂದರ ರೂಪವನ್ನು ಪ್ರೀತಿಸಿ, ರಾಜಕುಮಾರಿಯು ತಮ್ಮ ಚಿತ್ರವನ್ನು ತೆಗೆದುಕೊಳ್ಳಬಹುದೆಂದು ಭಾವಿಸಿ, ನಾನವಳಿಗೆ ಆ ಚಿತ್ರ ವನ್ನು ತೋರಿಸಿದೆನು.

ಬಾ. (ಆನಂದದಿಂದ)—ನೆಟ್ಟಗೆ ಮಾಡಿದೆ. ರಾಜಕುಮಾರಿಯು ನಮ್ಮನ್ನು ಬಹಳವಾಗಿ ಪ್ರೀತಿಸಿರಬಹುದಲ್ಲವೆ?

ಫ.—ಗರೀಬ ಪರವರದಿಗಾರ, ಹೇಳುವುದಕ್ಕೆ ದುಃಖವಾಗುತ್ತಿರುವದು. ಆದರೂ ನಿಜಸಂಗತಿಯನ್ನು ಹೇಳಿದ ಹೊರತು ಗತ್ಯಂತರವಿಲ್ಲ. ರಾಜ ಕುಮಾರಿಯು ತಮ್ಮ ಚಿತ್ರವನ್ನು ಪ್ರೀತಿಸಲಿಲ್ಲವಿಷ್ಟೇ ಅಲ್ಲ; ಅತೀವ ತಿರ ಸ್ಕಾರದಿಂದದನ್ನು ಬಿಸಾಡಿಬಿಟ್ಟಳು. ಅದು ಒಂದು ಕಲ್ಲಿಗೆ ಅಪ್ಪಳಿಸಿ, ಹರಿದು ಹೋಯಿತು.

ಬಾ.—ಏನು! ನಮ್ಮ ಚಿತ್ರಕ್ಕೆ ಇಷ್ಟೊಂದು ಅಪಮಾನವೇ? ಬಾದ ಶಹರಿದನ್ನೆಂದಿಗೂ ಸಹಿಸರು! ವಜೀರ, ಕೇಳಿದೆಯಾ ಈ ಸಂಗತಿಯನ್ನು? ಫಕೀರ, ಈ ಕೆಲಸವನ್ನು ಪ್ರತ್ಯಕ್ಷನೋಡಿದ ನೀನು, ಆ ದುಷ್ಟೆಯನ್ನು ಶಿಕ್ಷಿಸ ಲಿಲ್ಲವೇಕೆ? ಇದೊಂದು ನಿನ್ನ ದೊಡ್ಡ ತಪ್ಪು. ಇದಕ್ಕಾಗಿ ನಾವು ಮೊದಲು ನಿನ್ನನ್ನು ದಂಡಿಸುವೆವು.

ಬಾದಶಹನ ದರ್ಪವು ಬಹಳ. ಅವನು ಯಾವ ಕಾಲಕ್ಕೆ ಏನು ಮಾಡುವನೆಂಬುದರ ನಿಯಮವಿದ್ದಿಲ್ಲ. ಆದ್ದರಿಂದ ಯಾವತ್ತು ಪ್ರಜೆಗಳು ಅವನನ್ನು ಕಂಡರೆ, ಗದಗದನೆ ನಡುಗುತ್ತಿದ್ದರು. ಫಕೀರನಿಗೆ ಈ ಸಂಗತಿಯು ಗೊತ್ತಿತ್ತು. ಆದಕಾರಣ ಅವನು ತನ್ನ ಅವಸ್ಥೆಯು ಏನಾಗುವದೋ ಎಂದು ಬಹಳವಾಗಿ ಹೆದರಿದನು. ಆದರೂ ತುಸು ಧೈರ್ಯವನ್ನು ತಂದುಕೊಂಡು ಅಂದುದು:—ಕರುಣಾಶಾಲಿಗಳಾದ ಬಾದಶಹರೆ, ನನ್ನ ಕಡೆಗೆ ಯಾವ ಅಪರಾಧವೂ ಇಲ್ಲ. ಬಡವನನ್ನು ಶಿಕ್ಷಿಸಬಾರದು. ಆ ಸುಂದರಿಯನ್ನು ದಂಡಿಸಲು ನನಗೆ ಸಾಮರ್ಥ್ಯವೆಲ್ಲಿ ?

ಬಾ.—ವಜೀರ, ಇವನು ತಾನು ನಿರ್ದೋಷಿಯೆಂದು ಹೇಳುತ್ತಿರುವನು, ಕೇಳಿದಿಯಾ ? ನನ್ನ ಅಪಮಾನವನ್ನು ಪ್ರತ್ಯಕ್ಷವಾಗಿ ನೋಡಿದ್ದು ಸಾಮಾನ್ಯ ತಪ್ಪೆ ?

ವಜೀರನು ಏನೂ ಮಾತಾಡಲಿಲ್ಲ. ಫಕೀರನು—ಮಹಾರಾಜ, ನನಗಾದರೋ ಆ ಸಮಯದಲ್ಲಿ ಬಹಳ ಸಿಟ್ಟು ಬಂದಿತ್ತು; ಆದರೆ ಸೇಡು ತೀರಿಸಿಕೊಳ್ಳಲಿಕ್ಕೆ ಬರುವಂತಿದ್ದಿಲ್ಲ. ಏನಾದರೂ ಮಾತಾಡಿದ್ದರೆ, ನಾನು ಪ್ರಾಣಕ್ಕೆ ಎರವಾಗಬೇಕಾಗುತ್ತಿತ್ತು. ಹೀಗಿರುವದರಿಂದಲೇ ನಾನು ಸುಮ್ಮನಿದ್ದೆನಲ್ಲದೆ ಬೇರೆಯಿಲ್ಲ.

ಬಾ.—ನೀನು ಸತ್ತರೇನಾಗುತ್ತಿತ್ತು? ದಿಲ್ಲಿಯ ಈ ಪ್ರತಾಪಿಗಳಾದ ಬಾದಶಹರ ಅಪಮಾನಕ್ಕಿಂತಲೂ ನಿನ್ನ ಜೀವವು ಹೆಚ್ಚಿನದೇನು ? ಬೇಕಾದರೆ ನಮಗೆ ಹೇಳಿ ಕಳುಹಿಸಬೇಕಾಗಿತ್ತು.

ಫ.—ಮಹಾರಾಜ, ಹೇಳಿ ಕಳುಹಿಸುವುದಕ್ಕೆ ತಿರುಕನಾದ ನನಗೆ ಸೇವಕರೆಲ್ಲಿ ಸಿಗಬೇಕು ? ಅದಕ್ಕಾಗಿಯೇ ನಾನೇ ತಮ್ಮ ಬಳಿಗೆ ಬಂದಿದ್ದೇನೆ. ತಮ್ಮ ಮಾನಭಂಗ ಮಾಡಿದ ಆ ದುಷ್ಟ ಸ್ತ್ರೀಯಳಿಗೆ ತಕ್ಕ ದಂಡನೆಯನ್ನು ವಿಧಿಸಬೇಕು. ನಾನೂ ತಮ್ಮೊಡನೆ ಬರುವೆನು.

ಬಾ.—ಫಕೀರ, ಇನ್ನು ಹೆಚ್ಚಾಗಿ ಮಾತಾಡಬೇಡ. ನಮಗೆ ನಿನ್ನ ಸಹಾಯವು ಬೇಕಾಗಿಲ್ಲ. ನೀನು ಫಕೀರನಾದ್ದರಿಂದ ಶಿಕ್ಷಿಸುವುದನ್ನು ಬಿಟ್ಟಿದ್ದೇವೆ. ಇಲ್ಲವಾದರೆ ನಿನ್ನನ್ನು ಆನೆಯ ಕಾಲಿಗೆ ಕಟ್ಟಿ, ತುಳಿಸಿ ಬಿಡುತ್ತಿದ್ದೆವು.

ಏನೇ ಆಗಲಿ, ಬಾದಶಹನ ದಂಡನೆಯಿಂದ ಪಾರಾದೆನೆಂದು ಫಕೀರನಿಗೆ ಆನಂದವಾಯಿತು. ಅವನು ಯಾವ ಮಾತನ್ನೂ ಆಡದೆ, ಸುಮ್ಮನೆ ಕುಳಿತು ಕೊಂಡನು. ಈ ಫಕೀರನ ಎದುರಿನಲ್ಲಿ ಬೇರೊಬ್ಬ ಫಕೀರನು ಕುಳಿತು ಕೊಂಡಿದ್ದನು. ಅವನಿಗೆ ಈ ಫಕೀರನ ರಹಸ್ಯವು ತಿಳಿಯಿತು. ಆದ್ದರಿಂದ ಅವನು ಕೆಲಹೊತ್ತು ವಿಚಾರಮಾಡಿ, ಎದ್ದು ನಿಂತು ಹೇಳತೊಡಗಿದನು.

೨ನೆಯ ಫಕೀರ — ಜಹಾಪನಾ, ಈ ಫಕೀರನು ಹೇಳುತ್ತಿರುವುದು ನಿಜವೋ ಸುಳ್ಳೋ ಎಂಬುದನ್ನು ನಾನು ನಿಶ್ಚಯಾತ್ಮಕವಾಗಿ ಹೇಳಲಾರೆನು. ಆದರೂ ಇವನು ಈ ಸಂಗತಿಯನ್ನು ಕಲ್ಪಿಸಿಕೊಂಡು ಹೇಳಿರಬಹುದೆಂದು ನನಗೆ ಸಂಶಯ ಬರುತ್ತದೆ. ಇದರಲ್ಲಿ ಇವನ ಗೂಢವಾದ ಉದ್ದೇಶವೇನಿರುವುದೋ ನಾನರಿಯೆನು. ನಾನಾದರೂ ದಕ್ಷಿಣ ಹಿಂದುಸ್ತಾನದಲ್ಲಿ ಬಹಳ ದಿವಸಗಳ ವರೆಗೆ ಅಡ್ಡಾಡಿದ್ದೇನೆ. ಅಲ್ಲಿಯ ಸ್ಥಿತಿಯನ್ನು ಸಂಪೂರ್ಣವಾಗಿ ಅರಿತು ಕೊಂಡಿದ್ದೇನೆ. ಆನೆಗುಂದಿಯ ರಾಜಕುಮಾರಿಯ ದರ್ಶನವು ಇತರರಿಗೆ ಆಗಃವಂತಿಲ್ಲ. ಏಕೆಂದರೆ ಅಂತಃಪುರದಲ್ಲಿ ಪ್ರವೇಶಿಸುವುದಕ್ಕೆ ಯಾರಿಗೂ ಅಪ್ಪಣೆಯಿಲ್ಲ. ನಾನು ಜನರ ಮುಖದಿಂದ ಕೇಳಿದ ರಾಜಕುಮಾರಿಯ ಸೌಜನ್ಯವನ್ನೂ ಸೌಂದರ್ಯವನ್ನೂ ಪ್ರತ್ಯಕ್ಷವಾಗಿ ನೋಡಬೇಕೆಂದು ಬಹಳ ಪ್ರಯಾಸಬಟ್ಟೆನು; ಆದರೆ ನನಗವಳನ್ನು ನೋಡುವ ಸುಯೋಗವು ದೊರೆ ಯಲಿಲ್ಲ. ಈ ಫಕೀರನಿಗೂ ಅವಳ ದರ್ಶನವಾಗಿರಲಿಕ್ಕಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ಫಕೀರನು ಯಾವದೋ ಒಂದು ಕೆಟ್ಟ ಉದ್ದೇ ಶದಿಂದ ಈ ಸುದ್ದಿಯನ್ನು ಹುಟ್ಟಿಸಿರಬಹುದೆಂದು ನಾನು ಭಾವಿಸುತ್ತೇನೆ.

ಬಾ. — ಫಕೀರ, ನೀನು ಹೇಳುತ್ತಿರುವುದು ನಿಜವಾಗಿ ತೋರುತ್ತಿದೆ. ಒಬ್ಬ ಹೆಂಗಸಂದರೇನು ? ಅವಳು ಪ್ರಚಂಡ ಪರಾಕ್ರಮಿಗಳಾದ ಬಾದಶಹರ ಮಾನಭಂಗ ಮಾಡುವದೆಂದರೇನು ? ಇದು ಅಸಂಭವವು. (೧ನೆಯ ಫಕೀ ರನ ಕಡೆಗೆ ಮೋರೆ ತಿರುವಿ)—ಫಕೀರ, ನಿಜವಾಗಿ ಹೇಳು, ಇಲ್ಲವಾದರೆ ಘೋರ ಶಿಕ್ಷೆಗೆ ಗುರಿಯಾಗುವೆ.

೧ನೆಯ ಫ. — ಖಾವಿಂದ, ಅಲ್ಲಾನ ಸಾಕ್ಷಿಯಾಗಿಯೂ ನಾನು ಹೇಳು ತ್ತಿರುವದು ದಿಟವು. ಇದಕ್ಕಿಂತಲೂ ಹೆಚ್ಚಾಗಿ ನಾನೇನು ಹೇಳಲಿ ?

ಬಾ. (ಎರಡನೆಯ ಫಕೀರನನ್ನುದ್ದೇಶಿಸಿ) — ಕೇಳಿದಿಯಾ? ನಿಮ್ಮಲ್ಲಿ ಯಾರ ಮಾತು ನಿಜವೆಂದು ನಾವು ನಂಬಬೇಕು?

೨ನೆಯ ಫ. — ಮಹಾರಾಜ, ಈ ಬಗ್ಗೆ ನಾನು ನಿಶ್ಚಯಾತ್ಮಕವಾಗಿ ಹೇಳಲಾರೆನೆಂದು ಮೊದಲೇ ಹೇಳಲಿಲ್ಲವೇ? ಆನೆಗುಂದಿಯ ಅರಸನ ಮಗಳು ತಮ್ಮ ಅಪಮಾನವನ್ನು ಮಾಡಿರಬಹುದೆಂದು ಸದ್ಯಕ್ಕೆ ಗ್ರಹಿಸಿ, ನಾನು ಮುಂದೆ ಹೇಳತಕ್ಕದ್ದನ್ನು ಹೇಳುವೆನು.

ಬಾ. — ನಿನಗೆ ಈ ಅಪಮಾನವು ಸಾಮಾನ್ಯವಾಗಿ ಕಂಡಿತೇನು? ದಿಲ್ಲಿಯ ಸಾಮ್ರಾಟರ ಅಪಮಾನವು ಒಬ್ಬ ಹೆಂಗಸಿನಿಂದ ಆಗಬೇಕೇ? ನೀನೇನೋ ಇದನ್ನು ಸಾಹಜಿಕವಾಗಿ ಮಾತಾಡುತ್ತಿರುವೆಯಲ್ಲ!

೨ನೆಯ ಫ. — ಮಹಾರಾಜ, ನಾನು ರಾಜಕುಮಾರಿಯ ಅಪರಾಧವು ಸಾಮಾನ್ಯವಾದುದೆಂದು ಹೇಳಲಿಲ್ಲ. ಅವಳು ಈ ರೀತಿ ತಮ್ಮ ಮಾನಭಂಗ ಮಾಡಿದ್ದು ನಿಜವಿದ್ದರೆ, ನಿಶ್ಚಯವಾಗಿಯೂ ಶಿಕ್ಷಾರ್ಹಳು. ಆದರೆ ನಾನು ಇದಕ್ಕಿಂತಲೂ ಮಹತ್ವದ ಬೇರೊಂದು ಸಂಗತಿಯನ್ನು ಹೇಳತಕ್ಕವನಿದ್ದೇನೆ.

ಬಾ. — ಅದೇನು ಹೇಳು.

೨ನೆಯ ಫ. — ಶ್ರೇಷ್ಠ ಸಾರ್ವಭೌಮರೆ, ತಮ್ಮ ಅಣ್ಣಂದಿರ ಮಕ್ಕಳಾದ ಬಹಾಉದ್ದೀನರು ಬಂಗಾಲದ ಸುಭೇದಾರರಾಗಿರುವುದು ತಮಗೆ ಅರಿಯದ ವಿಷಯವಲ್ಲ. ನಾನು ಪ್ರವಾಸಮಾಡುತ್ತ ಮಾಡುತ್ತ ಅವರ ರಾಜಧಾನಿಗೆ ಹೋದೆನು; ಮತ್ತು ಪ್ರಯತ್ನಪೂರ್ವಕವಾಗಿ ಅವರ ದರ್ಶನ ತೆಗೆದು ಕೊಂಡೆನು. ಆ ಸಮಯದಲ್ಲಿ ನಾನು ತಮ್ಮ ಸದ್ಗುಣಗಳ ಕೀರ್ತನೆಯನ್ನು ಮಾಡಿದೆನು. ಇದು ಅವರಿಗೆ ಸಹನವಾಗಲಿಲ್ಲ. ಆಗಲವರು ನನ್ನನ್ನೂ ತಮ್ಮನ್ನೂ ಬಹಳವಾಗಿ ತಿರಸ್ಕರಿಸಿದರು. ಅವರು ಅಂದ ಮಾತುಗಳನ್ನು ತಮ್ಮ ಮುಂದೆ ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತಿರುವದು.

ಬಾ. — ಏನು! ನಮ್ಮ ಬಹಾಉದ್ದೀನನು ನನ್ನನ್ನು ತಿರಸ್ಕರಿಸಿದನೇ? ಬಹಾಉದ್ದೀನ, ನೀನಿಷ್ಟು ನೀಚನಿದ್ದೀ ಎಂದು ನಾನು ತಿಳಿದಿರಲಿಲ್ಲ! ನನ್ನ ಅನುಗ್ರಹದಿಂದಲೇ ನೀನು ಬಂಗಾಲದ ನಬಾಬನಾಗಿರುವೆಯಲ್ಲ! ಹೀಗಿದ್ದೂ ನೀನು ನನ್ನ ದ್ವೇಷ ಮಾಡುತ್ತೀಯಾ? ಇದಕ್ಕೆ ತಕ್ಕ ಶಿಕ್ಷೆಯನ್ನು ತೀವ್ರವೇ

ಹೊಂದುವೆಯೆಂಬುದನ್ನು ಮರೆಯುದಿರು! (ಎಂದು ಬಾದಶಹನು ಸಿಟ್ಟಿನಿಂದ ಗದ್ದರಿಸಿ ಫಕೀರನನ್ನು ಕುರಿತು)—ನೀನು ಸುಮ್ಮನೆ ಇದ್ದು ನಮ್ಮ ನಿಂದೆಯನ್ನು ಕೇಳಿದಿಯಾ ?

ಫ. (ಧಿಟ್ಟತನದಿಂದ)--ಮಹಾರಾಜ, ತಮ್ಮ ನಿಂದೆಯನ್ನು ಕೇಳಿ, ನಾನೆಂದಾದರೂ ಸಹಿಸಬಹುದೇ? ಆಗ ನಾನು ಜೀವದ ಹಂಗುದೊರೆದು, ನಿರ್ದಾಕ್ಷಿಣ್ಯದಿಂದ ಅವರನ್ನು ಹಳಿದೆನು. ಅನ್ನವಿತ್ತು ಸಲಹಿದ ಹಿರಿಯರನ್ನು ತಿರಸ್ಕರಿಸುವುದು ಅತೀವ ಪಾಪಕರವೆಂತಲೂ, ಅದರಲ್ಲಿಯೂ ತಮ್ಮಂತಹ ಸಾಧುಸ್ವಭಾವದ ಚಕ್ರವರ್ತಿಗಳನ್ನು ಹೀಯಾಳಿಸುವುದು ಅತ್ಯಂತ ನೀಚ ಕೆಲಸವೆಂದೂ ಸ್ಪಷ್ಟವಾಗಿ ಹೇಳಿಬಿಟ್ಟೆನು. ನನ್ನ ಮಾತುಗಳಿಂದ ಅವರಿಗೆ ಬಹಳ ಸಿಟ್ಟು ಬಂದಿತು. ಅವರು ನನ್ನನ್ನು ಸೆರೆಮನೆಯಲ್ಲಿರಿಸಿದರು. ಅವರ ಬಂದೀವಾಸದಿಂದ ತಪ್ಪಿಸಿಕೊಂಡು ಬರಬೇಕಾದರೆ ನನಗೆ ಸಾಕುಬೇಕಾಯಿತು. ಮಹಾರಾಜ, ತಮ್ಮ ರಾಜ್ಯದಲ್ಲಿ ತಮ್ಮ ಮಗನು ನಿರ್ದೋಷಿಯಾದ ಫಕೀರನ ಮೇಲೆ ಇಷ್ಟೊಂದು ಅತ್ಯಾಚಾರವನ್ನಾಚರಿಸುತ್ತಿರುವುದನ್ನು ನೋಡಿದರೆ, ಯಾರಿಗೆ ಕೆಡಕೆನಿಸಲಿಕ್ಕಿಲ್ಲ? ನನಗಾದರೋ ತಮ್ಮ ವಂಶದಲ್ಲಿ ಇಂತಹ ಕಲಂಕಿಗಳು ಹುಟ್ಟಿರುವುದನ್ನು ನೋಡಿ ಬಹಳ ದುಃಖವಾಗುತ್ತಿರುವದು!

ಬಾ. (ಕ್ರೋಧಕಂಪಿತನಾಗಿ ವಜೀರನನ್ನುದ್ದೇಶಿಸಿ)—ವಜೀರ, ಕೇಳಿದಿಯಾ? ಎಂತಹ ವಿಚಿತ್ರಕಾಲವಿದು! ಬಹು ದಿವಸಗಳ ವರೆಗೆ ರಕ್ಷಣೆ ಮಾಡಿ, ವಿಶ್ವಾಸದಿಂದ ಒಂದು ಪ್ರಾಂತದ ಸುಬೆದಾರನನ್ನಾಗಿ ಮಾಡಿದ ಮಗನು, ನನ್ನನ್ನು ಈ ರೀತಿಯಾಗಿ ಜರಿಯಬೇಕೇ? ಸಾಮ್ರಾಟರು ಇಂತಹ ಅಪಮಾನವನ್ನೆಂದಿಗೂ ಸಹಿಸರು! ತೀವ್ರವೇ ಬಂಗಾಲದ ಮೇಲೆ ದಂಡೆತ್ತಿ ಹೋಗಿ, ಆ ನೀಚನನ್ನು ಸೆರೆಹಿಡಿದುಕೊಂಡು ಬರುವೆವು. ನೀನು ಸೈನ್ಯದ ಸಿದ್ಧತೆಯನ್ನು ಮಾಡು.

ವಜೀರನಿಗೆ ಏನು ಮಾತಾಡಬೇಕೆಂಬುದು ಹೊಳೆಯಲಿಲ್ಲ. ಅವನು ಮುಂದೆ ಎಂತಹ ಕುತ್ತು ಬರುವದೋ ಎಂದು ವಿಚಾರಮಾಡುತ್ತ ಸುಮ್ಮನೆ ನಿಂತುಕೊಂಡಿದ್ದನು. ಆಸ್ಥಾನದೊಳಗಿನ ಯಾವತ್ತು ಜನರು ಆಶ್ಚರ್ಯದಿಂದ ದಂಗುಬಡೆದು ಹೋಗಿದ್ದರು. ಬಾದಶಹನ ಸ್ವಭಾವವಾದರೋ

ವಿಚಿತ್ರಲಹರಿಯುಳ್ಳದ್ದು. ಅವನು ಯಾವ ಕಾಲಕ್ಕೆ ಹೇಗೆ ಅಪ್ಪಣೆ ಮಾಡ ಬಹುದು? ಅವನ ಕ್ರೋಧದೃಷ್ಟಿಯು ಯಾರ ಮೇಲೆ ತಿರುಗಬಹುದು? ಎಂಬದರ ನಿಯಮವಿದ್ದಿಲ್ಲ. ಆದ್ದರಿಂದ ಯಾರೂ ಸ್ಪಷ್ಟವಾಗಿ ಮಾತಾಡು ವಂತಿದ್ದಿಲ್ಲ. ಫಕೀರನು ಹೇಳತೊಡಗಿದನು— ಮಹಾರಾಜ, ಆನೆಗುಂದಿಯ ರಾಜಕುಮಾರಿಯು ಪರಕೀಯಳು. ಮೇಲಾಗಿ ಪವಿತ್ರವಾದ ಇಸ್ಲಾಮ ಧರ್ಮವನ್ನು ತಿರಸ್ಕರಿಸುತ್ತಿರುವ ಕಾಫರ ಜಾತಿಯವಳು. ಅದರಿಂದವಳು ತಮ್ಮನ್ನು ತಿರಸ್ಕರಿಸಿದರೆ, ಅದು ದೊಡ್ಡ ತಪ್ಪಾಗಲಿಕ್ಕಿಲ್ಲ. ಆದರೆ ಬಾದ ಶಹರ ಅನುಗ್ರಹದಿಂದ ಮತ್ತು ಬಾದಶಹರ ಅನ್ನದಿಂದ ಬೆಳೆದ, ಸುಬೆದಾರ ರಾದ ಮಕ್ಕಳು ಬಾದಶಹರನ್ನು ತಿರಸ್ಕರಿಸುವುದೆಂದರೇನು? ಇಂತಹ ಗೃಹ ಕಲಹಿಗಳನ್ನು ಆದಷ್ಟು ತೀವ್ರ ನಾಶಮಾಡುವುದೊಳ್ಳೆಯದು. ಇಲ್ಲವಾದರೆ ಅವರು ಕಾಫರರಿಗೆ ಅನುಕೂಲರಾಗಿ, ತಮಗೆ ಕೇಡನ್ನುಂಟುಮಾಡಲು ಯತ್ನಿಸಬಹುದು. ಇದು ಸಾಮ್ರಾಟರಿಗೂ ದಿಲ್ಲಿಯ ರಾಜ್ಯಕ್ಕೂ ಅಪಾಯ ಕಾರಕವಾದ್ದೆಂಬುದನ್ನು ತಮಗೆ ಹೇಳುವ ಕಾರಣವಿಲ್ಲ.

ಬಾದಶಹನ ಕ್ರೋಧವು ಮತ್ತಿಷ್ಟು ಹೆಚ್ಚಾಯಿತು. ಅವನು ಸಿಟ್ಟಿನಿಂದ ನಡುಗುತ್ತ ಕಠೋರಸ್ವರದಿಂದ— ಫಕೀರ, ನೀನು ಹೇಳುತ್ತಿರುವುದು ನಿಜವು. ನಾವು ಆ ಗೃಹಶತ್ರುವನ್ನು ತೀವ್ರವೇ ಹಿಡಿದು ತಂದು ಶಿಕ್ಷಿಸುವೆವು ಎಂದು ಹೇಳಿ, ವಜೀರನನ್ನು ಕುರಿತು— ವಜೀರ, ಕ್ಷಣಕಾಲಸಹ ವಿಲಂಬಮಾಡ ಬೇಡ. ಸೈನ್ಯದ ಸಿದ್ಧತೆಯನ್ನು ಮಾಡು. ಸ್ವತಃ ನಾವೇ ಬಂಗಾಲದ ಮೇಲೆ ದಂಡೆತ್ತಿ ಹೋಗುವೆವು, ಎಂದು ಹೇಳಿದನು.

ಫಕೀರನಿಗೆ ತನ್ನ ಕಾರ್ಯವು ಯಾವ ತೊಂದರೆಯೂ ಇಲ್ಲದೆ, ಸಹಜ ವಾಗಿ ಸಾಧ್ಯವಾದುದನ್ನು ನೋಡಿ, ಆನಂದವಾಯಿತು. ಆದರೆ ಅವನು ತನ್ನ ಈ ಹೃದಯಸ್ಥಿತ ಸಂತೋಷವನ್ನು ಬಹಿರಂಗ ಪಡಿಸುವಂತಿದ್ದಿಲ್ಲ. ಆದ ಕಾರಣ ಅವನು ತನ್ನ ಸ್ಥಳದ ಮೇಲೆ ಸುಮ್ಮನೆ ಕುಳಿತುಕೊಂಡು, ಮೊದಲ ನೆಯ ಫಕೀರನ ಮುಖವನ್ನು ನೋಡತೊಡಗಿದನು. ಮೊದಲನೆಯ ಫಕೀರ ನಾದರೂ ಇವನ ಮುಖವನ್ನು ಸೂಕ್ಷ್ಮರೀತಿಯಿಂದ ನೋಡುತಲಿದ್ದನು; ಎರಡನೆಯ ಫಕೀರನು ತನ್ನ ಮೋರೆಯನ್ನು ನೋಡುತ್ತಿರುವದನ್ನು ಕಂಡು,

ಅವನು ತನ್ನ ಮುಖವನ್ನು ಕೆಳಗೆ ಮಾಡಿದನು. ಆ ಮುಖದಲ್ಲಿ ಪರಾಜಯದ ಚಿಹ್ನವು ಎರಡನೆಯ ಫಕೀರನಿಗೆ ಕಂಡುಬಂದಿತು.

ಸಭೆಯ ಕೆಲಸವು ತೀರಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೊರಟರು. ಬಾದಶಹನ ಸಿಟ್ಟು ಇನ್ನೂ ಹೋಗಿರಲಿಲ್ಲ. ಅವನು ಸಿಟ್ಟಿನಿಂದ ಉರಿಯುತ್ತ ಅಂತಃಪುರವನ್ನು ಹೊಕ್ಕನು.

ವಾಚಕ ಮಹಾಶಯರೇ, ಈ ಫಕೀರರಾರೆಂದು ನೀವು ಗೊಂದಲದಲ್ಲಿ ಬಿದ್ದಿರಬಹುದು. ಇವರಲ್ಲಿ ಮೊದಲನೆಯ ಫಕೀರನು ಕಾಮಾಕ್ಷಿಯ ದಾಸಿಯೆಂದೂ, ಎರಡನೆಯ ಫಕೀರನು ಆಚಾರ್ಯರ ಶಿಷ್ಯನಾದ ಬುಕ್ಕರಾಯನೆಂದೂ ನಾವು ಇಲ್ಲಿ ಹೇಳದಿರಲಾರೆವು. ಇವರು ತಮ್ಮ ಬುದ್ಧಿಬಲದಿಂದ ಕಾರ್ಯಸಾಧನೆಗೆ ಹೇಗೆ ಯತ್ನಿಸಿದರೆಂಬುದನ್ನೂ ಕೊನೆಯಲ್ಲಿ ಇವರಿಬ್ಬರೊಳಗೆ ಯಾರು ಜಯಶಾಲಿಗಳಾದರೆಂಬುದನ್ನೂ ನಾವು ಮೊದಲೇ ಹೇಳಿದ್ದೇವೆ.

## ೯ನೆಯ ಅಧ್ಯಾಯ

### ಬಹಾಉದ್ದೀನ

ನಾವು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಸಂಗತಿಗಳಿಂದ, ಇತಿಹಾಸ ಬಲ್ಲ ವಾಚಕರು, ಈ ಅವಧಿಯಲ್ಲಿ ತಗಲಕಮುಹಮ್ಮದನು (೧೩೨೪-೫೧) ದಿಲ್ಲಿಯ ಚಕ್ರವರ್ತಿಯಾಗಿದ್ದನೆಂದು ಊಹಿಸಿರಬಹುದು. ಇವನು ವಿಚಿತ್ರಸ್ವಭಾವದವನಾಗಿದ್ದನು. ಇವನು ಚೆನ್ನಾಗಿ ವಿದ್ಯೆಗಲಿತು ಪಂಡಿತನಾಗಿದ್ದರೂ, ಸ್ಥಿರಮನಸ್ಸಿನವನಾಗಿರಲಿಲ್ಲ. ಇವನ ಮನಸ್ಸಿನ ಸ್ಥಿತಿಯು ಯಾವಕಾಲಕ್ಕೆ ಹೇಗಾಗುವದೆಂಬುದರ ನಿಯಮವಿದ್ದಿಲ್ಲ. ಒಮ್ಮೊಮ್ಮೆ ಅತ್ಯಂತ ಉದಾರಬುದ್ಧಿಯಿಂದ ಕೆಲಸಮಾಡುವನು. ಮತ್ತೊಮ್ಮೆ ಅತಿನೀಚತನದ ಕೆಲಸಮಾಡುವನು. ಬೇರೊಮ್ಮೆ ಬಹುಬುದ್ಧಿವಂತಿಕೆಯ ಕೆಲಸಮಾಡುವನು. ಒಂದೊಂದು ಸಮಯದಲ್ಲಿ ಇವನು ಮನುಷ್ಯನಾಗಿರದೆ ರಾಕ್ಷಸನಾಗಿರುವನೆಂಬ ಕಲ್ಪ

ನೆಯುನ್ನುಂಟುಮಾಡತಕ್ಕ ಘೋರಹತ್ಯೆಯ ಕೃತ್ಯಗಳನ್ನಾಚರಿಸುವನು. ಈ ತರದ ಸ್ವಭಾವವೈಚಿತ್ರ್ಯವನ್ನು ನೋಡಿ, ಜನರು ಇವನಿಗೆ ಹುಚ್ಚು ಮಹಮ್ಮದನೆಂದೆನ್ನುತ್ತಿದ್ದರು. ಇತಿಹಾಸದಲ್ಲಿ ಇವನು ಇದೇ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ.

ಇವನ ಅಣ್ಣನ ಮಗನಾದ ಬಹಾಉದ್ದೀನ ಗುಸ್ತಾಸ್ಪನು ಬಂಗಾಲದ ಸುಬೇದಾರನಾಗಿದ್ದನು. ಇವನು ತರುಣನಾಗಿದ್ದು, ದುರ್ವ್ಯಸನಿಯೂ ವಿಲಾಸಿಯೂ ಆಗಿದ್ದನು. ರಾಜ್ಯಕಾರಭಾರವನ್ನು ಸಾಗಿಸಲಿಕ್ಕೆ ಬೇಕಾಗುವ ಬುದ್ಧಿವಂತಿಕೆಯು ಇವನಲ್ಲಿರಲಿಲ್ಲ. ಮೇಲಾಗಿ ಶೂರನೂ ಇದ್ದಿಲ್ಲ.

ಬೇಸಿಗೆಯ ಕೃಷ್ಣಪಕ್ಷದ ದಿವಸವು. ಸುಮಾರು ಎರಡು ತಾಸು ರಾತ್ರಿಯಾಗಿರಬಹುದು. ಅಂಧಕಾರವು ಎಲ್ಲ ಕಡೆಯಲ್ಲಿ ಹಬ್ಬಿದೆ. ರಾಜಧಾನಿಯ ಮಾರ್ಗಗಳು ಕ್ರಮವಾಗಿ ಜನಶೂನ್ಯವಾಗುತ್ತ ನಡೆದಿವೆ.

ಅಂತಃಪುರದಲ್ಲಿಯ ಶೃಂಗರಿಸಿದ ಒಂದು ಕೋಣೆಯಲ್ಲಿ ಬಹಾಉದ್ದೀನನು ಕುಳಿತುಕೊಂಡಿದ್ದಾನೆ. ಸುಗಂಧಪೂರ್ಣವಾದ ಎಣ್ಣೆಯ ನಾಲ್ಕೆಂಟು ದೀಪಗಳು ಉರಿಯುತ್ತಲಿವೆ. ಹತ್ತರದಲ್ಲಿ ಇಬ್ಬರು ದಾಸಿಯರು ನಿಂತು ಗಾಳಿಯನ್ನು ಬೀಸುತ್ತಿದ್ದಾರೆ. ಬಹಾಉದ್ದೀನನು ಮೃದುವಾಗಿಯೂ ಎತ್ತರವಾಗಿಯೂ ಇದ್ದ ಕುತ್ನಿಯ ಗಾದಿಯ ಮೇಲೆ ಬಿದ್ದುಕೊಂಡಿದ್ದಾನೆ. ಸಮೀಪದಲ್ಲಿ ಮತ್ತೊಬ್ಬ ದಾಸಿಯು ಮದ್ಯವನ್ನು ಸಿದ್ಧಮಾಡಿಟ್ಟುಕೊಂಡು ಅವನು ಬೇಡುವ ದಾರಿಯನ್ನು ನೋಡುತ್ತ ಕುಳಿತಿದ್ದಾಳೆ. ತುಸು ಅಂತರದ ಮೇಲೆ ನಾಲ್ಕಾರು ಜನ ಸುಂದರ ಸ್ತ್ರೀಯರು ಬಹುಮೂಲ್ಯ-ವಸ್ತ್ರಾಭರಣಗಳಿಂದ ಭೂಷಿತೆಯರಾಗಿ ಕುಳಿತುಕೊಂಡಿದ್ದಾರೆ. ಇವರಲ್ಲೊಬ್ಬಳು ತಂಬೂರಿಯನ್ನು ಬಾರಿಸುತ್ತಲಿದ್ದಾಳೆ. ಬೇರೊಬ್ಬಳು ಹಾಡುತ್ತಿದ್ದಾಳೆ. ಬಹಾಉದ್ದೀನನು ಬಿದ್ದುಕೊಂಡೇ ಗಾಯನವನ್ನು ಕೇಳುತ್ತಿದ್ದಾನೆ; ಮತ್ತು ಗಾಯನದಿಂದ ತೃಪ್ತನಾಗಿ ಹಾಡುವವಳಿಗೆ ಧನ್ಯವಾದವನ್ನರ್ಪಿಸುತ್ತಿದ್ದಾನೆ. ದಾಸಿಯು ಆಗಿಂದಾಗ ಸುರಾಪೂರ್ಣಪಾತ್ರೆಯನ್ನು ಅವನ ಕೈಯಲ್ಲಿ ಕೊಡುತಲಿದ್ದಾಳೆ. ಅವನು ಅದನ್ನು ಕುಡಿದು ಕುಡಿದು ಮೈಮೇಲಿನ ಸಂಪೂರ್ಣವಾದ ಎಚ್ಚರವು ತಪ್ಪಿದೆ. ಆಗ ಅವನು ಅರ್ಧ ನಿದ್ರೆ, ಅರ್ಧ ಎಚ್ಚರದ ಅವಸ್ಥೆಯಲ್ಲಿದ್ದನೆಂದು ಹೇಳಬಹುದು.

ಹೀಗೆ ಸುಮಾರು ಅರ್ಧ ತಾಸಿನ ವರೆಗೆ ನಡೆಯಿತು. ಅಷ್ಟರಲ್ಲಿ ಯಾರೋ ಬಾಗಿಲನ್ನು ತಟ್ಟಿದರು. ಕೂಡಲೇ ರಮಣಿಯೋರ್ವಳು ಯಾರ ವರು ? ಎಂದು ಕೇಳಿದಳು.

ನಾನು ಸುಬೇದಾರರ ಹಿತಚಿಂತಕನು. ಮಹತ್ವದ ಸಂಗತಿಯನ್ನು ಅವರಿಗೆ ತಿಳಿಸುವದಕ್ಕಾಗಿ ಬಂದಿದ್ದೇನೆ. ಈಗಲೇ ಸುಬೇದಾರರನ್ನು ಕಾಣ ಬೇಕಾಗಿದೆ. ಅವರು ಇಲ್ಲಿಯೇ ಇರುವರಷ್ಟೇ? ಇದ್ದರೆ ತೀವ್ರ ಬಾಗಿಲನ್ನು ತೆಗೆಯಿರಿ ಎಂದು ಆ ಹೊರಗಿನ ಮನುಷ್ಯನಂದನು.

ನಿನ್ನನ್ನು ಒಳಗೆ ಬಿಟ್ಟವರಾರು ? ಈ ಹೊತ್ತಿನಲ್ಲಿ ಸುಬೇದಾರರು ಯಾರಿಗೂ ಭೆಟ್ಟಿಯಾಗುವಂತಿಲ್ಲ. ಆದಕಾರಣ ನೀನು ನಾಳೆ ಮುಂಜಾವಿನಲ್ಲಿ ಬಾ. ಅಂದರೆ ಅವರ ದರ್ಶನವು ನಿನಗಾಗುವದು. ಈಗ ಹೊರಟು ಹೋಗು ಎಂದು ಮತ್ತೊಬ್ಬ ರಮಣಿಯು ಹೇಳಿದಳು.

ಛೀ, ಛೆ, ನಾನು ಆ ವರೆಗೆ ತಡೆಯುವಂತಿಲ್ಲ. ನಾನು ತಂದ ವರ್ತಮಾನವು ಅತ್ಯಂತ ಮಹತ್ವದ್ದಾಗಿದ್ದು, ಅದನ್ನು ಸುಬೇದಾರರು ಈಗಲೇ ಕೇಳಬೇಕಾಗಿದೆ. ಇಲ್ಲವಾದರೆ ಅವರು ಬಹಳ ಹಾನಿಯನ್ನು ಹೊಂದಬೇಕಾಗುವದು, ಎಂದು ಆ ಆಗಂತುಕನಂದನು.

ಏನೇ ಇರಲಿ, ಈಗ ಬಾಗಿಲನ್ನು ತೆರೆಯುವಂತಿಲ್ಲ. ಸುಮ್ಮನೆ ಹೊರಟು ಹೋಗು. ವ್ಯರ್ಥವಾಗಿ ಸಾಹೇಬರ ವಿಲಾಸಕ್ಕೆ ತೊಂದರೆಯನ್ನುಂಟು ಮಾಡಬೇಡ ಎಂದು ಮೊದಲಿನ ರಮಣಿಯು ಹೇಳಿದಳು.

ನಾನು ಹೇಳತಕ್ಕ ಸಂಗತಿಯು ಬಹಳ ಜರೂರಿಯದಾದ್ದರಿಂದಲೇ ಬಾಗಿಲು ಕಾಯುವವರು ನನ್ನನ್ನು ತಡೆಯಲಿಲ್ಲ. ಆ ಸಂಗತಿಯನ್ನು ಕೇಳಿದ ಬಳಿಕ, ಸುಬೇದಾರರಿಗಾದರೂ ನನ್ನ ಮಾತಿನ ನಿಜತ್ವವು ಕಂಡುಬರದಿರಲಾರದು. ವ್ಯರ್ಥವಾಗಿ ನಾನು ಇಂತಹ ರಾತ್ರಿಯಲ್ಲಿ ಹೀಗೆ ಲಗುಬಗೆಯಿಂದ ಬರುತ್ತಿದ್ದೆನೇ ? ನೀವು ಎರಡನೆಯ ಮಾತನ್ನಾಡದೆ ಲಗು ಬಾಗಿಲನ್ನು ತೆರೆಯಿರಿ, ಎಂದು ಆಗಂತುಕನು ಹೇಳಿದನು.

ಹೊರಗಿನ ಮನುಷ್ಯನು ಏನು ಹೇಳಿದರೂ ಕೇಳುವದಿಲ್ಲವೆಂದು ಆ ರಮಣಿಯರಿಗೆ ತಿಳಿಯಬಂದಿತು. ಆದ್ದರಿಂದವರು ನಿರುಪಾಯರಾದರು.

ದಾಸಿಯು ಬಾಗಿಲು ತೆಗೆಯುವುದಕ್ಕೆ ಮುಂದುವರಿದಳು. ಉಳಿದವರು ಬೇರೊಂದು ಬಾಗಿಲಿನಿಂದ ಹಾಯ್ದು, ಒಳಗೆ ಹೋದರು.

ಆಗಂತುಕನು ಒಳಗೆ ಪ್ರವೇಶಿಸಿದನು. ಬಹಾಉದ್ದೀನನು ಮದಿರೆಯ ಗುಂಗಿನಿಂದ ಹಾಗೇ ಬಿದ್ದುಕೊಂಡಿದ್ದನು. ಆಗ ಅವನು ಸಂಪೂರ್ಣವಾಗಿ ಎಚ್ಚರದಪ್ಪಿ ಹೋಗಿದ್ದನು.

ಆಗಂತುಕನು ಗಾಬರಿಯಾದವನಂತೆ ನಟಿಸಿ, ಊರ್ಧ್ವಶ್ವಾಸಬಿಡುತ್ತ, ಬಹಾಉದ್ದೀನನನ್ನು ಬಡೆದೆಬ್ಬಿಸಿದನು. ಬಹಾಉದ್ದೀನನು ಜೋಲೆ ಹೊಡೆಯುತ್ತ ಎದ್ದು, ಪುನಃ ಬೀಳುವದರಲ್ಲಿದ್ದನು. ಆಗಂತುಕನು ಅವನನ್ನು ಹಿಡಿದುಕೊಂಡು ಕೆಲಹೊತ್ತು ಕುಳಿತನು. ಬಹಾಉದ್ದೀನನು ಕ್ರಮವಾಗಿ ಎಚ್ಚರವನ್ನು ಹೊಂದತೊಡಗಿದನು. ಅವನಿಗೆ ತುಸು ಮಟ್ಟಿಗೆ ಎಚ್ಚರಿಕೆಯುಂಟಾದ ಬಳಿಕ, ಸುತ್ತಲೂ ನೋಡಿದನು. ಸಮೀಪದಲ್ಲಿ ಅಪರಿಚಿತನಾದೊಬ್ಬ ಫಕೀರನು ಕುಳಿತಿರುವುದನ್ನು ನೋಡಿ ಗಾಬರಿಯಾದನು. ಕೂಡಲೇ ಅವನು ದಾಸಿಯರನ್ನು ಒದರಿದನು. ಯಾರೂ ಉತ್ತರ ಕೊಡಲಿಲ್ಲ. ಉಳಿದೊಬ್ಬ ದಾಸಿಯು ಈ ಅವಧಿಯಲ್ಲಿ ಒಳಗೆ ಹೋಗಿಬಿಟ್ಟಿದ್ದಳು. ಬಹಾಉದ್ದೀನನು ಹುಚ್ಚನಂತಾಗಿ, ಸುತ್ತಲೂ ನೋಡತೊಡಗಿದನು.

ಫಕೀರನು ಅವನನ್ನು ಪುನಃ ಎಚ್ಚರಿಸಿ ಹೇಳತೊಡಗಿದನು—ಸಾಹೇಬ, ಈ ರೀತಿ ಎಚ್ಚರಿಲ್ಲದಿರುವುದು ತರವಲ್ಲ. ಬೇಗನೆ ಎಚ್ಚರಹೊಂದಿರಿ. ನೀವೀಗ ಭಯಂಕರ ಸಂಕಟದಲ್ಲಿರುವಿರಿ. ದಿಲ್ಲಿಯ ಬಾದಶಹರು ನಿಮ್ಮನ್ನು ಶಿಕ್ಷಿಸುವದಕ್ಕಾಗಿ, ದೊಡ್ಡ ದಂಡಿನೊಡನೆ ತೀವ್ರವೇ ಬರುತ್ತಿದ್ದಾರೆ; ಏಕಂದರೆ ಅವರು ನಿಮ್ಮ ಮೇಲೆ ಬಹಳ ಸಿಟ್ಟಿಗೆದ್ದಿದ್ದಾರೆ.

ಬಹಾಉದ್ದೀನನಿಗೆ ಈ ಮಾತುಗಳ ಅರ್ಥವೇ ಆಗಲಿಲ್ಲ. ಫಕೀರನು ಏನೋ ಬಡಬಡಿಸುತ್ತಿರುವಂತೆ ಅವನಿಗೆ ಬೋಧೆಯಾಯಿತು. ಕಾರಣ ಅವನು ಬೇಸರದ ಸ್ವರದಿಂದ—ಫಕೀರ, ನೀನು ಯಾರು? ಈ ಹೊತ್ತಿನಲ್ಲಿ ಇಲ್ಲಿಗೇಕೆ ಬಂದೆ? ಎಂದು ಕೇಳಿದನು.

**ಫಕೀರ**—ನಾನು ಒಬ್ಬ ಬಡ ಫಕೀರನು. ಪರೋಪಕಾರವನ್ನೇ ಮುಖ್ಯವಾಗಿಟ್ಟುಕೊಂಡು ಕಾಲಕಳೆಯುತ್ತಲಿದ್ದೇನೆ. ನಿಮ್ಮ ಮೇಲೆ ಉಪಕಾರ

ಮಾಡುವುದಕ್ಕೋಸ್ಕರ ಇಂತಹ ಅಕಾಲದಲ್ಲಿ ನಾನು ಇಲ್ಲಿಗೆ ಬರಬೇಕಾ ಯಿತು.

ಬಹಾ.—ಏನು! ನೀನು ನನಗೆ ಉಪಕಾರ ಮಾಡುವುದಕ್ಕೆ ಇಲ್ಲಿಗೆ ಬಂದಿರುವಿಯಾ? ನಾನು ವಿಲಾಸದಲ್ಲಿರುವುದು ನಿನಗೆ ತಿಳಿಯಲಿಲ್ಲವೇನು? ಏನಾದರೂ ಹೇಳುವದಿದ್ದರೆ, ನಾಳೆ ಹೇಳಬೇಕಾಗಿತ್ತು. ನೀನು ಹೇಳುವ ದಾದರೂ ಏನು? ಬಿಕ್ಕೆ ಬೇಡುವುದಕ್ಕಾಗಿ ಬಂದಿರಬಹುದು.

ಫ.—ಸಾಹೇಬ, ನಾನು ಭಿಕ್ಷೆ ಬೇಡುವದಕ್ಕಾಗಿ ಇಲ್ಲಿಗೆ ಬಂದಿಲ್ಲ. ಹಾಗಿದ್ದರೆ ಇಂತಹ ವೇಳೆಯಲ್ಲಿ ಬಹು ಪರಿಶ್ರಮಬಟ್ಟು ಹೀಗೆ ಬರುತ್ತಿದ್ದೆನೇ? ಪೂರ್ಣ ಎಚ್ಚರಹೊಂದಿರಿ. ನಾನು ಹೇಳುವುದನ್ನು ಲಕ್ಷಗೊಟ್ಟು ಕೇಳಿರಿ.

ಬ.—ಹಾಗಾದರೆ ನೀನು ಯಾಕೆ ಬಂದಿರುವೆ, ಹೇಳು ನೋಡೋಣ.

ಫ.—ಖಾವಿಂದ, ನಾನು ಕೇವಲ ತಮ್ಮ ಹಿತಚಿಂತಕನು. ಮುಂದೆ ಇದು ತಮಗೆ ಗೊತ್ತಾಗದಿರದು. ತಮ್ಮ ಪ್ರಾಣವನ್ನು ಬದುಕಿಸುವದಕ್ಕಾ ಗಿಯೇ ನಾನು ಇಷ್ಟೊಂದು ಶ್ರಮಪಡಬೇಕಾಯಿತು. ನನ್ನ ಬರುವಿಕೆಯಿಂದ ತಮ್ಮ ವಿಲಾಸಕ್ಕೆ ಭಂಗಬಂದಿರಬಹುದು. ಆದರೂ ಉಪಾಯವಿಲ್ಲದಾಗಿದೆ. ಪ್ರಸಕ್ತಿಯೇ ಹಾಗಿರುವದು. ಈ ವೇಳೆಯಲ್ಲಿ ನೀವು ಎಚ್ಚತ್ತು, ಮುಂದಿನ ಉಪಾಯವನ್ನು ಕಂಡುಕೊಳ್ಳದಿದ್ದರೆ, ನಿಶ್ಚಯವಾಗಿಯೂ ಪ್ರಾಣಕ್ಕೆ ಎರ ವಾಗುವಿರಿ.

ಬ. (ಗಾಬರಿಯಾಗಿ)—ಏನು! ನಾನು ಪ್ರಾಣವನ್ನು ಕಳೆದುಕೊಳ್ಳು ವೆನೇ? ಅದೇಕೆ? ಆದುದಾದರೂ ಏನು?

ಫ.—ನೀವು ಬಾದಶಹರ ಅಪಮಾನ ಮಾಡಿದಿರಂತೆ. ಈ ಸುದ್ದಿಯ ನ್ನೊಬ್ಬ ಫಕೀರನು ಬಾದಶಹರಿಗೆ ಹೇಳಿದನು. ಅದರಿಂದ ಬಾದಶಹರು ನಿಮ್ಮ ಮೇಲೆ ಬಹಳವಾಗಿ ಸಿಟ್ಟಿಗೆದ್ದಿದ್ದಾರೆ. ನಿಮ್ಮನ್ನು ಹಿಡಿದು, ಶಿಕ್ಷಿಸುವ ದಕ್ಕಾಗಿ ದೊಡ್ಡ ದಂಡಿನೊಡನೆ ಹೊರಟಿದ್ದಾರೆ. ಅವರ ಕೈಯಲ್ಲಿ ನೀವು ಸಿಗುವಿರಾದರೆ, ನಿಶ್ಚಯವಾಗಿಯೂ ಜೀವವನ್ನು ಕಳೆದುಕೊಳ್ಳುವಿರಿ.

ಬ.—ನಾನು ಬಾದಶಹರ ಅಪಮಾನವನ್ನು ಮಾಡಿದೆನೇ? ಎಂದು? ಇದನ್ನು ಬಾದಶಹರಿಗೆ ಹೇಳಿದವರಾರು? ಬಾದಶಹರು ನನ್ನ ಕಕ್ಕಂದಿರು.

ನಾನೆಂದಿಗಾದರೂ ಅವರ ಅಪಮಾನ ಮಾಡೇನೇನು ? ನೀನು ಸುಳ್ಳೇ ಏನಾದರೊಂದು ಹೇಳುತ್ತಿರಬಹುದು.

ಸಾಹೇಬ, ನಾನು ಸುಳ್ಳು ಹೇಳತಕ್ಕವನಲ್ಲ. ಸಟೆಯಾಡಿ ನಾನು ಕಟ್ಟಿಕೊಳ್ಳುವದಾದರೂ ಏನು? ನನ್ನ ವೇಷವನ್ನು ನೋಡಿರಿ. ಈ ಜಗತ್ತಿನಲ್ಲಿ ನನಗೆ ಯಾವ ಆಶೆಯೂ ಇಲ್ಲ. ಕೇವಲ ಅಲ್ಲಾನ ಸ್ಮರಣೆಯಲ್ಲಿ ಕಾಲಕಳೆಯುವುದಕ್ಕಾಗಿ ಫಕೀರನಾಗಿದ್ದೇನೆ. ಈ ಸ್ಥಿತಿಯಲ್ಲಿರುವ ನಾನು, ಪರೋಪಕಾರ ಮಾಡುವುದೇ ನನ್ನ ಧರ್ಮವೆಂದು ತಿಳಿಯುತ್ತೇನೆ. ನೀವು ನಿರಪರಾಧಿಗಳೆಂಬುದು ನನಗೆ ಗೊತ್ತುಂಟು. ಅದಕ್ಕಾಗಿಯೇ ನಾನಿಂದು ಯಾವ ತಪ್ಪನ್ನೂ ಮಾಡದೆ ವ್ಯರ್ಥವಾಗಿ ಪ್ರಾಣಕ್ಕೆ ಎರವಾಗುತ್ತಿರುವ ತಮ್ಮನ್ನು ಉಳಿಸಿಕೊಳ್ಳುವುದಕ್ಕಾಗಿ ಸಾಹಸಮಾಡಿ ಇಲ್ಲಿಗೆ ಬಂದೆನು.

ಬ.—ಫಕೀರ, ನಿನ್ನ ಉಪಕಾರವು ನನ್ನ ಮೇಲೆ ಬಹಳವಾಯಿತು. ಆದರೆ ನಿನ್ನ ಈ ಕೆಲಸದಿಂದ ಯಾವ ಉಪಯೋಗವೂ ಆಗುವಂತಿಲ್ಲ; ಏಕಂದರೆ ಕಕ್ಕಂದಿರ ಕೈಯಿಂದ ಪಾರಾಗಿ ಹೋಗುವ ಸಾಮರ್ಥ್ಯವು ನನಗಿಲ್ಲ. ನಾನು ಕಕ್ಕಂದಿರೊಬ್ಬರನ್ನು ಮಾತ್ರ ನಂಬಿದ್ದೆನು. ಅವರೇ ಈ ರೀತಿಯಾಗಿ ನನ್ನನ್ನು ಕೊಲ್ಲಲುದ್ಯುಕ್ತರಾಗಿರುವಾಗ ನಾನು ಬದುಕುವುದು ಹೇಗೆ ? ನನಗೆ ಸಹಾಯ ಮಾಡುವವರು ಯಾರು ? ಮೊದಲೇ ಗೊತ್ತಾದರೂ ಫಲವೇನು? ನಾನು ಈ ಸಂಕಟದಿಂದ ಪಾರಾಗಲಾರೆನು.

ಫ.—ಸಾಹೇಬ, ಹೀಗೆನ್ನಬೇಡಿರಿ. ಬಾದಶಹರ ಸ್ವಭಾವವನ್ನು ನೀವು ಅರಿಯದವರಲ್ಲ. ಮನಸ್ಸಿನ ಲಹರಿಯಂತೆ ಅವರು ವರ್ತಿಸತಕ್ಕವರು. ಸದ್ಯಕ್ಕೆ ಅವರು ನಿಮ್ಮ ಮೇಲೆ ಅತಿಶಯ ಸಿಟ್ಟಾಗಿರುವರು. ಈ ಸಮಯದಲ್ಲಿ ನೀವು ಅವರ ಕೈಯಲ್ಲಿ ಸಿಗುವಿರಾದರೆ, ಅನೇಕ ಯಾತನೆಗಳಿಂದ ಅವರು ನಿಮ್ಮನ್ನು ಕೊಲ್ಲುವರು. ಕಾರಣ ನೀವೀಗ ಕೆಲಕಾಲದ ಮಟ್ಟಿಗಾದರೂ ಅವರ ಕಣ್ಣುತಪ್ಪಿಸಿ ಹೋಗಲಿಕ್ಕೆ ಯತ್ನಿಸಿರಿ. ಮುಂದೆ ಕ್ರಮೇಣ ಬಾದಶಹರ ಸಿಟ್ಟು ಇಳಿದ ತರುವಾಯ, ನೀವು ಅವರ ದರ್ಶನ ತೆಗೆದುಕೊಂಡು, ಪುನಃ ಈ ಸುಬೇದಾರಿಕೆಯನ್ನು ಪಡೆಯಬಹುದಾಗಿದೆ.

ಬ.—ಇದೆಲ್ಲ ನಿಜವು; ಆದರೆ ನಾನು ಹೋಗಲೆಲ್ಲಿಗೆ? ಎಲ್ಲಿಯೂ ನನಗೆ ಆಶ್ರಯಸ್ಥಾನವಿಲ್ಲ. ಎಂದು ಸುಬೇದಾರನು ಭೀತಿಯಿಂದಲೂ ನಿರಾಶೆಯಿಂದಲೂ ನುಡಿದನು.

ಹಿಂದುಗಳು ಅತಿಥಿಸತ್ಕಾರದ ವಿಷಯದಲ್ಲಿ ಬಹಳ ಮುಂದುವರಿದಿದ್ದಾರೆ. ಉದಾರಹೃದಯದಿಂದ ಆಶ್ರಿತಪಾಲನೆ ಮಾಡತಕ್ಕವರಲ್ಲಿ ಭಾರತೀಯರು ಶ್ರೇಷ್ಠತಮರಾಗಿದ್ದಾರೆ. ಶತ್ರುಗಳೇ ಆಗಲಿ, ಮಿತ್ರರೇ ಆಗಲಿ, ಅವರ ಬೆನ್ನು ಬಿದ್ದರೆ ಸಾಕು. ಶರಣು ಬಂದವರ ರಕ್ಷಣೆ ಮಾಡುವದಕ್ಕಾಗಿ ಅವರು ತಮ್ಮ ಪ್ರಾಣದ ಪರಿವೆಯನ್ನು ಬಿಟ್ಟುಬಿಡುವರು. ಇದಕ್ಕಾಗಿ ಎಷ್ಟೇ ವಿಪತ್ತುಗಳು ಬರುತ್ತಿರಲಿ; ಅವನ್ನವರು ಲೆಕ್ಕಿಸುವದಿಲ್ಲ. ಇಂತಹ ಸಂದರ್ಭದಲ್ಲಿ ಅವರಿಗೆ ಆಶ್ರಿತರ ರಕ್ಷಣೆಯ ಹೊರತು, ಬೇರೆ ವಿಚಾರವೇ ತೋರುವುದಿಲ್ಲ. ಆದ್ದರಿಂದ ನೀವು ಒಬ್ಬ ಹಿಂದೂ ಅರಸನನ್ನಾಶ್ರಯಿಸುವಿರಾದರೆ, ಈ ವಿಪತ್ತಿನಿಂದ ಪಾರಾಗುವಿರಿ.

ಬ.—ಅಂತಹ ಹಿಂದೂ ಅರಸರಾದರೂ ಎಲ್ಲಿದ್ದಾರೆ? ಮುಸಲ್ಮಾನರು ಹಿಂದುಗಳ ವಿಷಯವಾಗಿ ಬಹಳ ಅತ್ಯಾಚಾರ ನಡಿಸಿದ್ದಾರೆ; ಮತ್ತು ಈಗಲೂ ನಡಿಸುತ್ತಲಿದ್ದಾರೆ. ಆದಕಾರಣ ಹಿಂದುಗಳೆಲ್ಲರೂ ಮುಸಲ್ಮಾನರನ್ನು ಕಡು ಹಗೆಗಳಂತೆ ಕಾಣುತ್ತಿರುವರು. ಇಂತಹ ಸ್ಥಿತಿಯಲ್ಲಿ ಅವರನ್ನು ಆಶ್ರಯಿಸುವುದು ಹೇಗೆ?

ಫ.—ಬೇರೆ ಉಪಾಯವಿಲ್ಲದ ಬಳಿಕ, ಎಂತಹ ಕೆಲಸವನ್ನಾದರೂ ಮಾಡಲೇ ಬೇಕು. ಪ್ರಾಣದಿಂದುಳಿದರೆ ಮುಂದೆ ಏನಾದರೂ ಮಾಡಬಹುದಾಗಿದೆ. ಕರ್ನಾಟಕದಲ್ಲಿ **ಕಂಪಿಲ**ವೆಂಬದೊಂದು ಸಣ್ಣ ರಾಜ್ಯವಿದೆ. ಅಲ್ಲಿಯ ಅರಸನಿಗೆ **ರಾಯಿ**ಯೆನ್ನುವರು. ಅವನು ಬಹಳ ಉದಾರನೂ, ಶೂರನೂ ಆಗಿದ್ದಾನೆಂದು ಕೇಳಿದ್ದೇನೆ. ನೀವು ಅವನನ್ನು ಶರಣುಹೊಕ್ಕರೆ, ಈ ಕುತ್ತಿನಿಂದ ಪಾರಾಗುವುದರಲ್ಲಿ ಸಂದೇಹವಿಲ್ಲ. ಈ ಸಮಯದಲ್ಲಿ ಬೇರೆ ವಿಚಾರ ಮಾಡದೆ, ಕಂಪಿಲಕ್ಕೆ ಹೊರಟು ಹೋಗಿರಿ. ತಡ ಮಾಡಬೇಡರಿ. ನಾಲ್ಕೆಂಟು ದಿವಸ ತಡಮಾಡುವಿರಾದರೆ, ಬಾದಶಹರ ಸಿಟ್ಟಿನಿಂದ ಪಾರಾಗಲಾರಿರಿ.

ಬ.—ಆ ರಾಜ್ಯವೆಲ್ಲಿರುವದೋ ನಾನು ನೋಡಿಲ್ಲ. ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗುವರಾರು? ನೀನು ನನ್ನ ಮೇಲೆ ಬಹಳ ಉಪಕಾರ

ಮಾಡಿರುವೆ. ಇದೊಂದು ಕೆಲಸವನ್ನು ಮಾಡಿ ಪುಣ್ಯ ಕಟ್ಟಿಕೊಳ್ಳುವುದಾದರೆ ನಾನು ನಿನ್ನೊಡನೆ ಬರುವೆನು. ಅಲ್ಲಿಯ ವರೆಗೆ ನನ್ನನ್ನು ಕರೆದುಕೊಂಡು ಹೋಗು.

ಫ.—ಸುಬೇದಾರ ಸಾಹೇಬ, ಇಷ್ಟೊಂದು ಹೆದರುವುದೇಕೆ? ನೀವು ಗಂಡಸರಲ್ಲವೇ? ನಿಮಗೆ ಹೆರವರ ಜೋಡೇಕೆ? ಹಿಂದುಗಳನ್ನು ಪೀಡಿಸುತ್ತಿರುವ ಕೆಲಸದಲ್ಲಿ ತೋರಿಸುತ್ತಿರುವ ಶೂರತನವನ್ನು ಸ್ವಸಂರಕ್ಷಣೆಗಾಗಿ ಉಪಯೋಗ ಮಾಡಿಕೊಳ್ಳುವದಿಲ್ಲವೇಕೆ?

ಬ.—ಇಲ್ಲ, ನಾನು ಹೆದರುವದಿಲ್ಲ. ಹಿಂದುಗಳ ಆಶ್ರಯದಲ್ಲಿ ಹೋಗಿ ನಿಲ್ಲುವುದಕ್ಕೆ ನನಗೆ ನಾಚಿಗೆ ಬರುತ್ತದೆ. ಅವರು ಏನೆಂದು ನನ್ನನ್ನು ಸಲುಹಬೇಕು? ನಾನಾದರೂ ಯಾವ ಮೋರೆಯಿಂದ ಅವರ ಆಶ್ರಯವನ್ನು ಬೇಡಲಿ?

ಫ.—ಈ ಸಮಯದಲ್ಲಿ ಇದೆಲ್ಲವನ್ನುವಿಚಾರ ಮಾಡುತ್ತ ಕುಳಿತುಕೊಂಡರೆ ಉಪಯೋಗವಿಲ್ಲ. ಹೊತ್ತುಬಂದಂತೆ ನಡೆದುಕೊಳ್ಳುವುದು ಜಾಣರ ಕೆಲಸವು. ನಡೆಯಿರಿ, ನಾನು ನಿಮ್ಮೊಡನೆ ಬಂದು, ನಿಮ್ಮನ್ನು ಕಂಪಿಲ ಪಟ್ಟಣಕ್ಕೆ ಮುಟ್ಟಿಸುವೆನು. ತರುವಾಯ ಅಲ್ಲಿ ಆಶ್ರಯ ಹೊಂದುವುದು ನಿಮ್ಮನ್ನವಲಂಬಿಸಿದೆ.

ಬ.—ಫಕೀರ, ನಿನ್ನ ಇಚ್ಛೆಯಂತೆ ಆಗಲಿ, ನಾವು ನಾಳಿನ ದಿವಸ ಇಲ್ಲಿಂದ ಹೊರಡೋಣ.

ಫ.—ತಡಮಾಡುವುದು ಘಾತುಕವೆಂದು ನಾನು ಮೊದಲೇ ಹೇಳಿಲ್ಲವೇ? ಕಾರಣ ಆದಷ್ಟು ತೀವ್ರ ಹೊರಡಿರಿ. ನೀವು ಬೆಳಗಾಗುವದರೊಳಗಾಗಿಯೇ ಗುಪ್ತರೀತಿಯಿಂದ ಹೊರಬೀಳುವುದು ಹೆಚ್ಚು ಕ್ಷೇಮಕರವೆಂದು ತೋರುತ್ತದೆ.

ಬ.—ಫಕೀರ ಹಾಗೆಯೇ ಮಾಡೋಣ.

ಫಕೀರನು ಬಹಾಉದ್ದೀನನನ್ನು ಕಂಪಿಲಕ್ಕೆ ಮುಟ್ಟಿಸಿ ತಾನು ತಿರುಗಿ ದಿಲ್ಲಿಗೆ ಹೋದನು. ಇವನು ಕಾಮಾಕ್ಷಿಯ ದಾಸಿ ಎಂದು ಹೇಳಬೇಕಾಗಿಲ್ಲ.

# ೧೦ನೆಯ ಅಧ್ಯಾಯ

## ಕಂಪಿಲದ ರಾಯಿಯು

ಮಾಗಿಯ ಕಾಲ ಸುಮಾರು ನಾಲ್ಕು ತಾಸು ಹೊತ್ತೇರಿರಬಹುದು. ಸೂರ್ಯನ ಕಿರಣಗಳು ಪ್ರಖರವಾಗುತ್ತ ನಡೆದಿವೆ. ಕಂಪಿಲ ನಗರದೊಳಗಿನ ಜನರು ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಕಂಪಿಲವು ಸಣ್ಣ ಸಂಸ್ಥಾನವಾಗಿದ್ದು, ಇದನ್ನು 'ರಾಯಿ' ಯೆಂಬ ಬಿರುದುಳ್ಳ ಒಬ್ಬ ಅರಸನು ಆಳುತ್ತಿದ್ದನೆಂದೂ ಇವನು ಆನೆಗುಂದಿಯ ಅರಸನ ಮಾಂಡಲಿಕನಾಗಿದ್ದನೆಂದೂ ನಾವು ಹಿಂದೆ ಹೇಳಿದ್ದೇವೆ.

ರಾಯಿಯು ತನ್ನ ದಿವಾಣಖಾನೆಯಲ್ಲಿ ಕುಳಿತಿದ್ದಾನೆ. ಅವನ ಮೂರು ನಾಲ್ಕು ಸಣ್ಣ ಸಣ್ಣ ಮಕ್ಕಳು ಸಮೀಪದಲ್ಲಿಯೇ ಆಟವಾಡುತ್ತಿದ್ದಾರೆ. ವೃದ್ಧನಾದ ರಾಯಿಯು ಮುದ್ದುಮಕ್ಕಳ ಆಟವನ್ನು ನೋಡಿ, ಆನಂದ ಪಡುತಲಿದ್ದಾನೆ; ಮತ್ತು ಅವರನ್ನು ಹೊಸ ಹೊಸ ಆಟಕ್ಕೆ ಹುರಿದುಂಬಿಸುತಲಿದ್ದಾನೆ.

ಈ ಸಮಯದಲ್ಲೊಬ್ಬ ಯವನ ಯುವಕನು ರಾಯಿಯ ದಿವಾಣಖಾನೆಯನ್ನು ಪ್ರವೇಶಿಸಿದನು. ರಾಯಿಯ ಲಕ್ಷವು ಚಿಕ್ಕ ಮಕ್ಕಳ ಆಟದ ಕಡೆಗೆ ಇದ್ದುದರಿಂದ, ಅವನು ಆಗಂತುಕನನ್ನು ನೋಡಲಿಲ್ಲ. ಆ ಆಗಂತುಕನು ನೆಟ್ಟಗೆ ಹೋಗಿ, ರಾಯಿಯ ಕಾಲುಗಳನ್ನು ಹಿಡಿದುಕೊಂಡನು. ರಾಯಿಯು ಒಮ್ಮಿಂದೊಮ್ಮೆ ಅಪರಿಚಿತನಾದ ಒಬ್ಬ ಯವನನು ಬಂದು ತನ್ನ ಕಾಲು ಹಿಡಿದುದನ್ನು ನೋಡಿ ಬೆರಗಾದನು.

ಯವನ (ದೈನಾಸೆಬಟ್ಟು)—ಮಹಾರಾಜ, ನಾನೊಬ್ಬ ಅನಾಥನು. ನೀವು ಆಶ್ರಯ ಕೊಡುವೆನೆಂದು ವಚನಕೊಟ್ಟ ಹೊರತು, ನಾನು ತಮ್ಮ ಅಡಿಗಳನ್ನು ಬಿಡುವಂತಿಲ್ಲ.

ವೃದ್ಧರಾಯಿಯು ತರುಣನ ಈ ಮಾತನ್ನು ಕೇಳಿ, ಕನಿಕರಬಟ್ಟು ದಯಾಪರವಶನಾಗಿ—ಅತಿಥಿಯೇ ಏಳು, ನೀನಾರು ಹೇಳು ಎಂದು ಕೇಳಿದನು.

ಯವನ—ಮಹಾರಾಜ, ತಾವು ಅಭಿವಚನವನ್ನು ಕೊಡುವತನಕ ನಾನು ನನ್ನ ಪರಿಚಯುವನ್ನು ಹೇಳುವಂತಿಲ್ಲ. ನೀವು ಮೊದಲು ನನಗೆ ಅಭಯದಾನವನ್ನು ಕೊಡಿರಿ.

ರಾಯ—ಆಗಂತುಕನೇ, ಇಂದು ನೀನು ನಮ್ಮ ಅತಿಥಿಯು. ಹಿಂದುಗಳು ಅತಿಥಿಯುನ್ನು ಹಿಂದಿರುಗಿ ಕಳುಹಿಸುವವರಲ್ಲ. ನೀನು ಯಾವ ಸಂದೇಹವನ್ನೂ ತೆಗೆದುಕೊಳ್ಳಬೇಡ. ಏಳು, ನಿನ್ನ ಪರಿಚಯುವನ್ನು ಹೇಳು.

ಯ.—ತಾವು ನನ್ನನ್ನು ರಕ್ಷಿಸುವೆನೆಂದು ವಚನಕೊಡಬೇಕು. ಅಂದರೆ ನನಗೆ ನಂಬಿಗೆ ಉಂಟಾಗುವದು.

ರಾ.—ಆಗಂತುಕನೆ, ನಾವು ಹಿಂದುಗಳು. ಹಿಂದುಗಳ ಪ್ರತಿಜ್ಞೆಯೂ ಸ್ವಾಭಾವಿಕವಾಗಿ ಆಡಿದ ಮಾತೂ ಒಂದೇ. ಆದುದರಿಂದ ವಚನಕೊಡುವ ಕಾರಣವೇ ನಮಗೆ ಬರುವದಿಲ್ಲ. ನಿನಗೊದಗಿದ ಸಂಕಟವನ್ನು ದೂರ ಮಾಡುವೆನು. ಏಳು, ನಿರ್ಭಯನಾಗು.

ಯ—ವಿಚಾರಮಾಡಿರಿ. ನಾನು ಪರಕೀಯ ಧರ್ಮದವನು. ಇಷ್ಟು ದಿವಸ ಹಿಂದುಗಳನ್ನು ದ್ವೇಷಿಸುತ್ತಿರುವ ಯವನನು. ವಿಚಾರಮಾಡಿ ವಚನ ಕೊಡಿರಿ.

ರಾ.—ಅತಿಥಿಯೇ, ನೀನು ಯಾರೇ ಇರಲೊಲ್ಲೆಯೇಕೆ; ನಾನು ನಿನಗೆ ಅಭಯುವನ್ನು ಕೊಟ್ಟಿದ್ದೇನೆ. ಅತಿಥಿಯ ಜಾತಿ-ಗೋತ್ರಗಳನ್ನು ವಿಚಾರಿಸುವ ಪದ್ಧತಿಯು ನಮ್ಮಲ್ಲಿಲ್ಲ. ಯಾವನೇ ಆಗಲಿ, ಒಮ್ಮೆ ನಮ್ಮ ಮರೆಹೊಕ್ಕನೆಂದರೆ ತೀರಿತು. ಅವನನ್ನು ಸಂರಕ್ಷಿಸುವುದು ನಮ್ಮ ಮುಖ್ಯ ಕರ್ತವ್ಯವೆಂದು ನಾವು ತಿಳಿಯುತ್ತೇವೆ. ಪ್ರತ್ಯಕ್ಷ ವೈರಿಯೂ ಕೂಡ ಶರಣುಬಂದನೆಂದರೆ, ಅವನ ರಕ್ಷಣೆಗಾಗಿ ಪ್ರಾಣವನ್ನು ತ್ಯಜಿಸಲು ನಾವು ಸಿದ್ಧರಾಗುವೆವು. ಆಗಂತುಕನೇ, ಇದಕ್ಕಿಂತಲೂ ಹೆಚ್ಚಿಗೆ ಹೇಳಲೇನು?

ಯ.—ಮಹಾರಾಜ, ಹಿಂದುಗಳು ಆಶ್ರಿತಪಾಲನೆಯ ವಿಷಯದಲ್ಲಿ ಅತಿಶಯ ಮುಂದುವರಿದಿರುವರೆಂದು ನಾನು ಕೇಳಿದ್ದೇನೆ. ಅದರಲ್ಲಿಯೂ ಧರ್ಮಾತ್ಮರಾದ ತಾವು ಈ ವಿಷಯದಲ್ಲಿ ಅದ್ವಿತೀಯರಾಗಿರುವಿರೆಂದು ಜನರು

ಹೇಳುತ್ತಿರುವರು. ಅಂತೆಯೇ ಪರಧರ್ಮಿಯಾದ ನಾನು ತಮ್ಮನ್ನು ಹುಡು ಕಿಕೊಂಡು ಬಂದೆನು.

ರಾ. — ಅದು ಇರಲಿ, ನೀನಾರೆಂಬುದನ್ನು, ಇಲ್ಲಿಗೇಕೆ ಬಂದೆಯೆಂಬು ದನ್ನು ಹೇಳು.

ಆಗಂತುಕನು ರಾಯಿಯ ಕಾಲುಗಳನ್ನು ಬಿಟ್ಟು, ಅಲ್ಲಿಯೇ ಸಮೀಪ ದಲ್ಲಿ ಕುಳಿತುಕೊಂಡು ಹೇಳತೊಡಗಿದನು— ನಾನು ದಿಲ್ಲಿಯ ಬಾದಶಹನಾದ ಮಹಮ್ಮದ ತಗಲಖನ ಅಣ್ಣನ ಮಗನು. ನನ್ನ ಹೆಸರು ಬಹಾಉದ್ದೀನನು.

ರಾ. (ಸೋಜಿಗಗೊಂಡು) — ಏನು! ನೀನು ದಿಲ್ಲಿಯ ಬಾದಶಹನ ಅಣ್ಣನ ಮಗನೇ ?

ಬ. — ಮಹಾರಾಜ, ತಾವು ಇಷ್ಟೊಂದು ಆಶ್ಚರ್ಯಯುತರಾಗುತ್ತಿರು ವದೇಕೆ ? ನಿಜವಾಗಿಯೂ ಬಾದಶಹನು ನನ್ನ ಕಕ್ಕನಾಗಬೇಕು. ಅವನ ಅನುಗೃಹದಿಂದ ನಾನಿದುವರೆಗೆ ಬಂಗಾಲದ ಸುಬೇದಾರನಾಗಿದ್ದೆನು. ಈಗ ಒಂದು ಘೋರವಾದ ವಿಪತ್ತಿನಲ್ಲಿ ಬಿದ್ದಿದ್ದೇನೆ. ಆದಕಾರಣ ತಮ್ಮ ಆಶ್ರಯ ವನ್ನು ಬಯಿಸಿ ಬಂದೆನು.

ರಾ. — ನಿನಗೆ ಬಂದ ಅಂತಹ ಸಂಕಟವಾದರೂ ಯಾವುದು ?

ಬ. — ಮಹಾರಾಜ, ನಿಜವಾಗಿಯೂ ನಾನು ನಿರಪರಾಧಿಯು; ಆದರೆ ಯಾರೋ ದುಷ್ಟರು ನನ್ನ ಕಕ್ಕನಿಗೆ ಇಲ್ಲದ್ದೊಂದು ಹೇಳಿದ್ದಾರೆ. ಚಂಚಲ ಸ್ವಭಾವದವನಾದ ನಮ್ಮ ಕಕ್ಕನು ಯಾವುದನ್ನೂ ವಿಚಾರಿಸದೆ ನನ್ನ ಮೇಲೆ ಸಿಟ್ಟಾಗಿದ್ದಾನೆ; ಮತ್ತು ನನ್ನನ್ನು ದಂಡಿಸುವದಕ್ಕಾಗಿ ದೊಡ್ಡ ದಂಡನ್ನು ತೆಗೆದು ಕೊಂಡು ಹೊರಟಿದ್ದಾನೆ. ಅವನ ದೊಡ್ಡ ಸೈನ್ಯಕ್ಕೆ ಎದುರಾಗುವ ಸಾಮ ರ್ಥ್ಯವು ನನ್ನಲ್ಲಿಲ್ಲ. ಒಂದು ವೇಳೆ ನಾನು ಅವನ ಕೈಯಲ್ಲಿ ಸಿಕ್ಕೆನಾದರೆ, ಕ್ರೂರನಾದ ಆ ಕಕ್ಕನು ಕಠೋರತೆಯಿಂದ ನನ್ನನ್ನು ಕೊಲ್ಲಿಸುವದರಲ್ಲಿ ಸಂದೇಹವಿಲ್ಲ. ಆದುದರಿಂದ ಮರಣವನ್ನು ತಪ್ಪಿಸಿಕೊಳ್ಳುವದಕ್ಕಾಗಿ, ಬಹು ಪ್ರಯಾಸಬಟ್ಟು ತಮ್ಮ ಬಳಿಗೆ ಬಂದಿದ್ದೇನೆ. ತಾವು ಆಶ್ರಯವಿತ್ತುದರಿಂದ ನಾನು ನಿಶ್ಚಿಂತನಾದೆನು.

ರಾಯಿಯು ದೊಡ್ಡ ಚಿಂತೆಯಲ್ಲಿ ಬಿದ್ದನು; ಏಕೆಂದರೆ ಅವನು ಆಶ್ರಯ ಕೊಟ್ಟ ಮನುಷ್ಯನ ಶತ್ರುವು ಸಾಮಾನ್ಯನಾಗಿರಲಿಲ್ಲ— ಸ್ವತಃ ದಿಲ್ಲಿಯ ಬಾದಶಹನು. ದಿಲ್ಲಿಯ ಈ ಹುಚ್ಚು ಬಾದಶಹನ ಕ್ರೂರಕೃತ್ಯಗಳನ್ನು ಕೇಳದವರಾರೂ ಇರಲಿಲ್ಲ. ಅದರಿಂದ ಮಹಮ್ಮದನೆಂದರೆ ಎಲ್ಲರೂ ಗಡಗಡನೆ ನಡುಗುತ್ತಿದ್ದರು. ರಾಯಿಯು ಸ್ವತಃ ಶೂರನಾಗಿದ್ದರೂ, ಅವನೊಬ್ಬ ಸಣ್ಣ ಸಂಸ್ಥಾನಿಕನು. ಆದುದರಿಂದ ದಿಲ್ಲಿಯ ಪ್ರಚಂಡ ಸೈನ್ಯವನ್ನು ಎದುರಿಸುವಷ್ಟು ಕಸುವು ಅವನಲ್ಲಿರಲಿಲ್ಲ. ಇನ್ನು ಆನೆಗುಂದಿಯ ಅರಸನ ಸಹಾಯವನ್ನು ಹೊಂದಬೇಕೆಂದರೆ, ಇದು ಸಾಧ್ಯವಾದ ಮಾತಾಗಿರಲಿಲ್ಲ; ಏಕೆಂದರೆ ಆನೆಗುಂದಿಯ ಅರಸನು ಕ್ರಮೇಣ ದುರ್ಬಲನಾಗುತ್ತ ನಡೆದಿದ್ದನು. ತನಗೆ ಕುತ್ತು ಬಂದಾಗ ಅವನ ನೆರವು ದೊರೆದೀತೆಂದು ರಾಯಿಯು ನಂಬಿರಲಿಲ್ಲ. ಆದಕಾರಣ ರಾಯಿಯು ತನ್ನ ಆಶ್ರಿತನನ್ನು ಯಾವ ರೀತಿಯಿಂದ ಕಾಪಾಡಬೇಕೆಂಬ ಎಣಿಕೆಯಲ್ಲಿ ಮುಳುಗಿದನು.

ರಾಯಿಯು ಈ ಮೇರೆಗೆ ವಿಚಾರದಲ್ಲಿ ಬಿದ್ದುದನ್ನು ನೋಡಿ, ಬಹಾಉದ್ದೀನನು— ಮಹಾರಾಜ ಬಹಳ ಗುಂಬಬಿದ್ದಂತೆ ತೋರುತ್ತದೆ. ಮೊದಲು ಕೊಟ್ಟ ವಚನಕ್ಕಾಗಿ ತಮಗೆ ಪಶ್ಚಾತ್ತಾಪವಾಗುತ್ತಿರುವುದೇನು? ಬಾದಶಹನಿಂದ ನನ್ನನ್ನು ರಕ್ಷಿಸುವುದಾಗಲಿಕ್ಕಿಲ್ಲೆಂದು ಹೆದರಿರುವಿರೋ? ಹೀಗಿದ್ದರೆ ಈಗಲೇ ಹೇಳಿ ಬಿಡಿರಿ. ಅಂದರೆ ನಾನು ಬೇರೆ ಯಾರನ್ನಾದರೂ ಶರಣು ಹೋಗುವೆನು, ಎಂದು ಹೇಳಿದನು.

ಅತಿಥಿಯೇ, ಆ ಸಂದೇಹವನ್ನೇ ತೆಗೆದುಕೊಳ್ಳಬೇಡ. ಬಾದಶಹನಿಂದ ನಿನ್ನನ್ನು ಸಂರಕ್ಷಿಸುವುದು ದುರ್ಘಟ ಕೆಲಸವಾಗಿದ್ದರೂ, ನಾನದಕ್ಕೆ ಹಿಂಜರಿಯುವದಿಲ್ಲ. ಆಶ್ರಿತಪಾಲನೆಯ ಕೆಲಸವು ಎಷ್ಟೇ ಕಠಿಣವಿರಲಿ, ಅದನ್ನು ಕಯ್ಕೊಳ್ಳಲಿಕ್ಕೆ ನಾವು ಹಿಂದುಗಳು ಹಿಂದೆಗೆಯುವುದಿಲ್ಲೆಂದು ನಾನು ಈ ಮೊದಲೇ ಹೇಳಲಿಲ್ಲವೇ? ಆದುದರಿಂದ ನೀನು ಈ ವಿಷಯವಾಗಿ ನಿಶ್ಚಿಂತನಾಗಿರು. ಇಂದಿನಿಂದ ನೀನು ನನ್ನ ಆತಿಥ್ಯವನ್ನು ಸ್ವೀಕರಿಸಿ, ನಿಶ್ಚಿಂತನಾಗಿರು, ಎಂದು ಹೇಳಿ ರಾಯಿಯು ಆಳುಗಳಿಗೆ ಆಗಂತುಕನ ಆರೈಕೆ ಮಾಡಲು

ಅಪ್ಪಣೆಯನಿತ್ತನು. ಸೇವಕರು ಬಹಾಉದ್ದೀನನನ್ನು ಬೇರೊಂದು ಕಡೆಗೆ ಕರೆದುಕೊಂಡು ಹೋದರು.

* * * * *

ಮಧ್ಯಾಹ್ನದ ಸಮಯವು. ಜನರು ಊಟ-ಉಡಿಗೆಗಳಲ್ಲಿ ತೊಡಗಿದ್ದಾರೆ. ಕಂಪಿಲದ ರಾಯಿಯು ಇನ್ನು ಮೇಲೆ ಊಟಕ್ಕೆ ಕುಳಿತುಕೊಳ್ಳುವವನಿದ್ದನು. ಈ ಸಮಯದಲ್ಲಿ ಒಬ್ಬ ತರುಣನೂ ತೇಜಸ್ವಿಯೂ ಆದ ಸನ್ಯಾಸಿಯು ರಾಯಿಯ ಬಳಿಗೆ ಬಂದನು.

ಹೀಗೆ ಅಕಸ್ಮಾತ್ತಾಗಿ ಬಂದ ಸನ್ಯಾಸಿಯನ್ನು ನೋಡಿ, ರಾಯಿಗೆ ಆನಂದವಾಯಿತು. ಅವನು ಭಕ್ತಿಪೂರ್ವಕವಾಗಿ ಸನ್ಯಾಸಿಯನ್ನು ವಂದಿಸಿದನು. ಸನ್ಯಾಸಿಯು ರಾಯಿಯನ್ನು ಆಶೀರ್ವದಿಸಿದನು. ರಾಯಿಯು ಆಸನವಿತ್ತು ಸನ್ಯಾಸಿಯನ್ನು ಸತ್ಕರಿಸಿ, ಸಮೀಪದಲ್ಲಿ ಕುಳಿತು— ಪೂಜ್ಯರೇ, ತಮ್ಮ ಆಗಮನದಿಂದ ನಾನು ಧನ್ಯನಾದೆನು; ನನ್ನ ಈ ಮನೆಯು ಪವಿತ್ರವಾಯಿತು. ಇಂದು ತಾವು ನನ್ನ ಆತಿಥ್ಯವನ್ನು ಸ್ವೀಕರಿಸಬೇಕು, ಎಂದು ಬೇಡಿಕೊಂಡನು.

ಸನ್ಯಾಸಿ— ಅರಸನೇ, ನನಗೆ ಆತಿಥ್ಯದ ಆವಶ್ಯಕತೆಯಿಲ್ಲ. ನಾನೊಂದು ಮಹತ್ವದ ಕೆಲಸಕ್ಕಾಗಿ ನಿನ್ನ ಬಳಿಗೆ ಬಂದಿದ್ದೇನೆ.

ರಾಯಿ.— ಮಹಾರಾಜ, ಮಧ್ಯಾಹ್ನದ ಸಮಯವಾಗಿದೆ. ದೇವರ ದಯೆಯಿಂದ ಅನಾಯಾಸವಾಗಿ ತಮ್ಮಂತಹ ಮಹಾತ್ಮರ ಆಗಮನವಾಗಿದೆ. ತಾವು ನನ್ನ ಆತಿಥ್ಯವನ್ನು ಸ್ವೀಕರಿಸಿದರೆ, ನಾನು ಧನ್ಯನೆಂದು ತಿಳಿಯುವೆನು.

ಸ.— ನಾನು ಮಧ್ಯಾಹ್ನದ ಆಹ್ನಿಕವನ್ನು ತೀರಿಸಿಕೊಂಡು, ಫಲಾಹಾರ ತಕ್ಕೊಂಡು ಬಂದಿದ್ದೇನೆ. ಅದರಿಂದ ಈಗ ನಾನು ನಿನ್ನ ಮನೆಯಲ್ಲಿ ಆಹಾರ ತೆಗೆದುಕೊಳ್ಳಲಾರೆನು. ನೀನು ಈ ವಿಷಯವಾಗಿ ಸ್ವಲ್ಪವಾದರೂ ಅಸಮಾಧಾನ ಹಚ್ಚಿಕೊಳ್ಳಬೇಡ. ಅತಿಶಯ ಮಹತ್ವದ ಕೆಲಸವಿದ್ದ ಮೂಲಕ, ಈ ಹೊತ್ತಿನಲ್ಲಿ ನಿನಗೆ ತೊಂದರೆ ಕೊಡಬೇಕಾಯಿತು.

ರಾ.— ಮಹಾತ್ಮರೆ, ನನಗೆ ತೊಂದರೆಯೆಲ್ಲಿಯದು? ಹೇಳತಕ್ಕದ್ದನ್ನು ಸಂಕೋಚವಿಲ್ಲದೆ ಹೇಳಬೇಕು. ನಾನು ತಮ್ಮ ದಾಸನು. ಇದೆಲ್ಲ ವೈಭವವು ತಮ್ಮಂತಹರ ಆಶೀರ್ವಾದದಿಂದಲೇ ದೊರೆತಿದೆಯೆಂದು ನಾನು ನಂಬಿದ್ದೇನೆ.

ಸ. – ರಾಜನೇ, ನೀನು ಹೇಳುವುದು ಸುಳ್ಳಲ್ಲ. ತಪಸ್ವಿಗಳ ಪುಣ್ಯಫಲದಿಂದಲೇ ಯಾವದೊಂದು ಜನಾಂಗವು ಶುಭವನ್ನು ಹೊಂದುತ್ತಿದೆ. ತಪಸ್ವಿಗಳನ್ನೊಳಗೊಳ್ಳದ ರಾಜ್ಯವು ಎಣ್ಣೆ ತೀರಿದ ದೀಪದಂತೆ ಕ್ರಮವಾಗಿ ನಿಸ್ತೇಜವಾಗುತ್ತ ಹೋಗುತ್ತದೆ. ಇದನ್ನು ತಿಳಿದವನಾದ ನೀನು, ಮಹಾತ್ಮರ ವಿಷಯದಲ್ಲಿ ತೋರಿಸುತ್ತಿರುವ ಅತ್ಯಾದರವನ್ನು ನೋಡಿ, ನನಗೆ ಅತ್ಯಾನಂದವಾಗುತ್ತಿದೆ. ನಾನು ಇಂದು ನಿನಗೊಂದು ಉಪಕಾರ ಮಾಡುವುದಕ್ಕಾಗಿ ಇಲ್ಲಿಗೆ ಬಂದಿದ್ದೇನೆ.

ರಾ. — ತಮ್ಮಂತಹ ಮಹಾತ್ಮರಿಗಿದು ಭೂಷಣವೇ ಸರಿ. ಸಾಧುಗಳು ಕೇವಲ ಜಗತ್ಕಲ್ಯಾಣಕ್ಕಾಗಿಯೇ ಜನ್ಮವೆತ್ತಿರುವರೆಂದು ನಾನು ಕೇಳಿದ್ದೇನೆ.

ಸ. — ರಾಯಿಯೆ, ಇಂದು ಒಬ್ಬ ಯುವನನು ನಿನ್ನ ಆಶ್ರಯದಲ್ಲಿ ಬಂದು ನಿಂತಿರುವನಷ್ಟೇ ?

ರಾ. — ಅಹುದು, ಬಂದಿರುವನು. ತಾವು ಇದನ್ನು ತಿಳಿದ ಬಗೆ ಹೇಗೆ ?

ಸ. — ಅವನಿಂದ ಕರ್ನಾಟಕಕ್ಕೆ ಒಂದು ದೊಡ್ಡ ಗಂಡಾಂತರವು ಬರತಕ್ಕದ್ದಿರುವದು. ನಾನು ಅದನ್ನು ತಪ್ಪಿಸುವದಕ್ಕಾಗಿ ಯತ್ನಿಸುತ್ತಿದ್ದೇನೆ.

ರಾ. — ಅವನಿಗೂ, ಕರ್ನಾಟಕದ ಸಂಕಟಕ್ಕೂ ಸಂಬಂಧವೇನು ? ಅವನಿಗೆ ಆಶ್ರಯವಿತ್ತದ್ದಾದರೆ, ಕರ್ನಾಟಕವು ದಿಲ್ಲಿಯ ಬಾದಶಹನ ಕ್ರೋಧಕ್ಕೊಳಗಾಗಿ ಹಾಳಾಗುವದೆಂದು ತಮ್ಮ ಅಭಿಪ್ರಾಯವೇ ?

ಸ. — ಕೇವಲ ಅವನಿಗೆ ಆಶ್ರಯ ಕೊಡುವುದರಿಂದಲೇ ಕರ್ನಾಟಕವು ಬಾದಶಹನ ಕೋಪಕ್ಕೊಳಗಾಗುವದೆಂಬುದೇನೂ ಇಲ್ಲ; ಮೊದಲೇ ಬಾದಶಹನು ಕನ್ನಡಿಗರ ಮೇಲೆ ಸಿಟ್ಟಾಗಿದ್ದಾನೆ. ತುಸು ದಿವಸಗಳಲ್ಲಿ ದೊಡ್ಡ ಸೈನ್ಯದೊಡನೆ, ಆನೆಗುಂದಿಯ ಮೇಲೆ ದಾಳಿಯನ್ನು ಮಾಡತಕ್ಕವನಿದ್ದಾನೆ. ಈಗ ನೀನು ಬಹಾಉದ್ದೀನನಿಗೆ ಆಶ್ರಯಕೊಟ್ಟದ್ದಾದರೆ, ಬಾದಶಹನ ಸಿಟ್ಟು ಇಮ್ಮಡಿಸುವದು. ಇದರಿಂದ ನಾಳೆ ಬರತಕ್ಕ ಆಪತ್ತು, ಇಂದೇ ಬಂದು, ಕರ್ನಾಟಕವನ್ನು ಹಾಳು ಮಾಡಿಬಿಡುವದು.

ರಾ.—ಕರ್ನಾಟಕವು ಯವನರ ಈ ಹಾವಳಿಯಿಂದ ಪಾರಾಗಬೇಕಾದರೆ, ಮಾಡಬೇಕಾದ್ದೇನು ?

ಸ.—ಶರಣು ಬಂದ ತರುಣನಿಗೆ ಆಶ್ರಯ ಕೊಡಬಾರದು.

ರಾ.—ಮೊದಲೇ ಬಾದಶಹನು ಕರ್ನಾಟಕದ ಮೇಲೆ ಸಿಟ್ಟಾಗಿರುವನೆಂದು ತಾವು ಹೇಳುತ್ತಿರುವಿರಿ. ಅಂದಬಳಿಕ ಇದರಿಂದ ಆಗುವದಾದರೂ ಏನು ? ಒಂದಿಲ್ಲೊಂದು ದಿನ ಬಾದಶಹನು ದಂಡೆತ್ತಿ ಬರತಕ್ಕವನೇ. ಹೀಗಿರಲು ಅವನಿಗೆ ಹೆದರಿ ಉಪಯೋಗವೇನು ? ಎದುರಾಗಿ ನಿಂತು ನಮ್ಮ ಶೂರತನವನ್ನು ತೋರಿಸುವುದೇ ಮೇಲಾದ ಕರ್ತವ್ಯವು. ಇದರಿಂದ ಆಶ್ರಿತರಕ್ಷಣೆಯೆಂಬ ನಮ್ಮ ಮುಖ್ಯ ವ್ರತವನ್ನೂ ಪಾಲಿಸಿದಂತಾಗುವದು. ಮುಂದೆ ದೇವರು ಮಾಡಿಸಿದ್ದಾಗಲಿ.

ಸ.—ವೃದ್ಧವೀರನೇ, ಚೆನ್ನಾಗಿ ವಿಚಾರಮಾಡಿ ನೋಡು. ಬಾದಶಹನನ್ನು ಎದುರಿಸುವಷ್ಟು ಸಾಮರ್ಥ್ಯವು ನಿನ್ನಲ್ಲಿದೆಯೇ ? ಕರ್ನಾಟಕದ ಯಾವನೊಬ್ಬ ಅರಸನು ಬಾದಶಹನ ದೌಡನ್ನು ತಡೆದು ನಿಲ್ಲಿಸಬಹುದೇ ? ಕನ್ನಡಿಗರಲ್ಲಿ ಒಳಜಗಳವು ಬಹಳವಾಗಿ ಹಬ್ಬಿರುವುದರಿಂದ ಒಕ್ಕಟ್ಟಂತೂ ಇಲ್ಲವೇ ಇಲ್ಲ. ಈ ಸ್ಥಿತಿಯಲ್ಲಿ ಬಾದಶಹನಿಗೆ ಯುದ್ಧಕ್ಕಾಗಿ ಆಮಂತ್ರಣವನ್ನು ಕೊಡುವುದು ಒಳಿತಾದೀತೇ ?

ರಾ.—ಪೂಜ್ಯರೆ, ಶರಣುಬಂದವರನ್ನು ರಕ್ಷಿಸುವುದು ಹಿಂದುಗಳ ಶ್ರೇಷ್ಠಧರ್ಮವೆಂಬುದನ್ನು ತಮಗೆ ಹೇಳುವ ಕಾರಣವಿಲ್ಲ. ಈ ಧರ್ಮದಿಂದ ವಂಚಿತರಾಗಿ, ನಾವು ಕೆಲವು ಕಾಲ ಬಾದಶಹನ ದೃಷ್ಟಿಯಿಂದ ಮರೆಯಾದರೆ, ಅದರಿಂದ ಉಪಯೋಗವೇನು ? ಬಾದಶಹನು ಒಂದಿಲ್ಲೊಂದು ದಿವಸ ನಮ್ಮ ಮೇಲೆ ದಂಡೆತ್ತಿ ಬರುವುದು ನಿಶ್ಚಿತವು. ನಾವು ಒಕ್ಕಟ್ಟಿಲ್ಲದವರಾದ್ದರಿಂದ ಎಂದಾದರೊಮ್ಮೆ ಬಾದಶಹನ ಕ್ರೋಧಕ್ಕೆ ಆಹುತಿಯಾಗುವುದು ಕಟ್ಟಿಟ್ಟ ಮಾತೇ ಸರಿ. ಹೀಗಿರಲು ನಮ್ಮ ಜೀವನವನ್ನು ಅಧರ್ಮದಿಂದ ಕೆಲಕಾಲದವರೆಗೆ ರಕ್ಷಿಸಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವಿದೆ ? ಒದಗತಕ್ಕ ಕುತ್ತಿನಿಂದ ದೂರದೂರ ಸರಿಯಲು ಯತ್ನಿಸುವದಕ್ಕಿಂತ, ಅದನ್ನು ಎದುರಿಸಿ ಹಿಮ್ಮೆಟ್ಟಿಸುವವನು ಜಾಣನೆಂದು ಸೂಜ್ಞರು ಹೇಳುತ್ತಾರೆ. ಕಾರಣ ಈ ಸಮಯ

ದಲ್ಲಿ ನಾನು ಬಾದಶಹನನ್ನು ಎದುರಿಸಲಿಕ್ಕೆ ಸಿದ್ಧನಾಗಿ ಕುಳಿತುಕೊಳ್ಳುವುದೇ ಉತ್ತಮವೆಂದು ನೆನೆಸುತ್ತೇನೆ.

ಸ.—ವೃದ್ಧನೆ, ನಿನ್ನ ಮಾತು ಕೆಲಮಟ್ಟಿಗೆ ನಿಜವಿದ್ದರೂ, ಅದು ಪ್ರಕೃತಸ್ಥಿತಿಗೆ ಸರಿಯಾದುದಲ್ಲ. ನೀನು ದಿಲ್ಲಿಯ ಬಾದಶಹನ ದರಬಾರಿನಲ್ಲಿ ನಡೆದ ಸಂಗತಿಯನ್ನು ಅರಿಯೆ. ಬಾದಶಹನ ಬಲವೆಷ್ಟಿದೆಯೆಂಬುದನ್ನೂ ಅವನ ಸ್ವಭಾವವೈಚಿತ್ರ್ಯವನ್ನೂ ನೀನು ಚನ್ನಾಗಿ ಅರಿತಿಲ್ಲ. ಆದುದರಿಂದ ಹೀಗೆ ಮಾತಾಡುತ್ತಿರುವೆ.

ಹೀಗೆ ಹೇಳಿ, ಸನ್ಯಾಸಿಯು ದರಬಾರಿನಲ್ಲಿ ನಡೆದ ವಿಷಯವನ್ನು, ಬಾದಶಹನ ಕ್ರೂರಕೃತ್ಯಗಳನ್ನೂ ವರ್ಣಿಸಿ ಹೇಳಿದನು. ತರುವಾಯ ಅವನು—ಶೂರನೇ, ಸದ್ಯಕಾಲಕ್ಕೆ ಕರ್ನಾಟಕದ ಸ್ಥಿತಿಯು ಚೆನ್ನಾಗಿಲ್ಲ. ನಮ್ಮಲ್ಲಿ ಒಕ್ಕಟ್ಟಿಲ್ಲ. ಬಹು ಜನ ಶೂರರಿಲ್ಲ. ನಿಮ್ಮಂತಹ ಒಬ್ಬಿಬ್ಬರು ವೀರರಿದ್ದರೆ ಉಪಯೋಗವೇನಾದೀತು? ದಿಲ್ಲಿಯ ಬಾದಶಹನನ್ನು ಎದುರಿಸಬೇಕಾದರೆ ಕಲಿಗಳೂ ನಾಡಿಗಾಗಿ ಆತ್ಮಯಜ್ಞಮಾಡಲು ಸಿದ್ಧರೂ ಆದ ಸಾವಿರಾರು ಜನರು ಬೇಕು. ಈ ತರದ ವೀರರು ನಮ್ಮಲ್ಲಿ ಎಷ್ಟು ಜನರಿರುವರು? ಈ ಸ್ಥಿತಿಯಲ್ಲಿ ಬಾದಶಹನೊಡನೆ ಪ್ರಕಾಶವಾಗಿ ಕಾಳಗಕ್ಕೆ ನಿಂತುಕೊಳ್ಳುವುದು ಸರಿಯಾದೀತೇ? ನಮ್ಮ ಸುದೈವದಿಂದ ಮಾಧವಾಚಾರ್ಯರಂತಹ ಮಹಾತ್ಮರು ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ಅವರ ಪ್ರೇರಣೆಯಿಂದ ನಮ್ಮಂತಹ ನಾಲ್ಕೆಂಟು ಜನರು ಕೇವಲ ಸ್ವದೇಶ ಸೇವೆಗಾಗಿ ಹೆಣಗುತ್ತಿದ್ದೇವೆ. ಇದರಿಂದ ಕಾಲಾಂತರದಲ್ಲಿ ಯವನರನ್ನೆದುರಿಸುವ ಸಾಮರ್ಥ್ಯವು ನಮ್ಮಲ್ಲಿ ಬರಬಹುದು. ಅಲ್ಲಿಯ ವರೆಗೆ ನಾವು ಮಾರ್ಗಪ್ರತೀಕ್ಷೆ ಮಾಡುವುದು ಒಳಿತಾದುದು. ಇಲ್ಲವಾದರೆ, ದೀವಿಗೆಯನ್ನು ಪತಂಗವು ಮುತ್ತುವಂತೆ, ನಾವು ಪಠಾಣರೊಡನೆ ಕಾದಲು ನಿಂತರೆ, ನಮ್ಮವರೆಲ್ಲ ಅಳ್ಳುಹುರಿದಂತೆ ಪಟಪಟನೆ ಬಿದ್ದು ಸತ್ತುಹೋಗುವುದರಲ್ಲಿ ಸಂದೇಹವಿಲ್ಲ. ಇದರಿಂದ ಕರ್ನಾಟಕಕ್ಕೆ ಲೇಸಾದೀತೇ? ತಿಳಿದು ನೋಡು.

ರಾ.—ಪೂಜ್ಯರೆ, ನನ್ನಂತಹ ನೂರಾರು ಅರಸರು ಈ ಕಂಪಿಲನಗರವನ್ನಾಳಿ ಹೋಗಿದ್ದಾರೆ. ನಾನೂ ಆಳಿ ಹೋಗತಕ್ಕವನಿದ್ದೇನೆ. ನನ್ನ ಪೂರ್ವ

ಜರಲ್ಲಿ ಒಬ್ಬನಾದರೂ ಹಗೆಗಳಿಗೆ ಹೆದರಿದವನಲ್ಲ. ಬರತಕ್ಕ ವಿಪತ್ತಿಗೆ ಅಂಜಿ, ಆಶ್ರಿತನನ್ನು ಹಿಂದುರಿಗಿ ಕಳುಹಿಸಿದವನಲ್ಲ. ಹೀಗಿರಲು ನಾನು ಪೂರ್ವಜರ ಈ ಶ್ರೇಷ್ಠಾಚರಣೆಯಿಂದ ವಂಚಿತನಾಗಿ ಮಾಡತಕ್ಕದ್ದೇನು? ನನಗೇನು ಈ ರಾಜ್ಯವು ಸ್ಥಿರವೇ? ಒಂದಿಲ್ಲೊಂದು ದಿವಸ ನಾನು ಸಾಯಲೇ ಬೇಕು. ಹೀಗಿರಲು ಅಲ್ಪಕಾಲದ ಜೀವಿತದ ಮೋಹದಿಂದ ಅಕೃತ್ಯವನ್ನಾಚರಿಸಬಹುದೇ? ಆದುದರಿಂದ ಆಶ್ರಿತನನ್ನು ಹಿಂದುರಿಗಿ ಕಳುಹಲಾರೆನು. ವಚನಭ್ರಷ್ಟನಾಗಲಾರೆನು. ಆದಕಾರಣ ತಾವು ನನ್ನನ್ನು ಈ ಮಾರ್ಗದಿಂದ ತಿರುಗಿಸುವುದಕ್ಕೆ ಪ್ರಯತ್ನಿಸಬಾರದೆಂದು ಬೇಡಿಕೊಳ್ಳುತ್ತೇನೆ. ನಾನು ಸ್ಪಷ್ಟವಾಗಿ ಮಾತಾಡಿದ್ದಕ್ಕೆ ಕ್ಷಮಿಸಿರಿ. ಬೇರೆ ಏನಾದರೂ ಇದ್ದರೆ ಹೇಳಿರಿ. ನಿಮಗಾಗಿ ನಾನು ಎಂತಹ ಸ್ವಾರ್ಥತ್ಯಾಗವನ್ನಾದರೂ ಮಾಡಲಿಕ್ಕೆ ಸಿದ್ಧನಿದ್ದೇನೆ.

ರಾಯಿಯ ಮನಸ್ಸನ್ನು ತಿರುಗಿಸುವುದಕ್ಕಾಗುವದಿಲ್ಲೆಂಬ ಮನವರಿಕೆಯು ಸನ್ಯಾಸಿಗಾಯಿತು. ಅದರಿಂದವನು ನಿರಾಶೆಯಿಂದ—ವ್ಯರ್ಥವಾದ ಮಾತುಗಳಿಂದ ಉಪಯೋಗವೇನು? ಮುಖ್ಯವಾಗಿ ಕರ್ನಾಟಕದ ಭವಿತವ್ಯವು ನೆಟ್ಟಗಿಲ್ಲ. ಆದುದರಿಂದ ನೀನು ಅಭಿಮಾನಕ್ಕೊಳಗಾಗಿ ದೇಶದ ಮೇಲೆ ಘೋರ ಸಂಕಟವನ್ನು ತರಲುದ್ಯುಕ್ತನಾಗಿರುವೆ. ಪರೋಪಕಾರವೇ ಪುಣ್ಯವು. ಒಬ್ಬ ಆಶ್ರಿತನಿಗೆ ಉಪಕಾರಮಾಡಿ, ಸಾವಿರಾರು ಜನರಿಗೆ ಅಪಕಾರ ಮಾಡುವಿ. ನೀನು ಹಟಹಿಡಿದರೆ ಉಪಾಯವಿಲ್ಲ. ನಾನಿನ್ನು ಹೊರಡುವೆನು. ಇನ್ನೊಮ್ಮೆ ಚೆನ್ನಾಗಿ ವಿಚಾರಮಾಡು. ಕರ್ನಾಟಕವನ್ನು ಹಾಳುಮಾಡುವ ಪಾಪಕ್ಕೆ ಗುರಿಯಾಗಬೇಡ.

ಸನ್ಯಾಸಿಯು ಬೇರೆ ಮಾತಾಡದೆ, ಕೂಡಲೇ ಹೊರಟುಹೋದನು. ರಾಯಿಯು ನಾನಾ ತರದ ವಿಚಾರಗಳಿಗೊಳಗಾದನು. ಅವನ ಮನಸ್ಸು ವಚನಭಂಗಮಾಡುವುದಕ್ಕೆ ಎಷ್ಟು ಮಾತ್ರವೂ ಒಡಂಬಡಲಿಲ್ಲ. ಆದಕಾರಣ ಅವನು ಆನೆಗುಂದಿಯ ಅರಸರ ಸಾಹಾಯುವನ್ನು ಹೊಂದಿ, ಯುದ್ಧಕ್ಕೆ ಸಿದ್ಧನಾಗಿ ಕುಳಿತುಕೊಳ್ಳಬೇಕೆಂದು ನಿರ್ಧರಿಸಿದನು.

# ಹನ್ನೊಂದನೆಯ ಅಧ್ಯಾಯ

## ಆಚಾರ್ಯರ ಆಶ್ರಮ

ಮಧ್ಯಾಹ್ನದ ಸಮಯವು. ಭಗವಾನ್ ರವಿಯು ಗಗನ ಮಧ್ಯದಲ್ಲಿ ವಿರಾಜಿಸುತಲಿದ್ದಾನೆ. ಅವನ ತೀಕ್ಷ್ಣ ಕಿರಣಗಳು ಜಗತ್ತಿನಲ್ಲೆಲ್ಲ ಹಬ್ಬಿವೆ. ಆಶ್ರಮದ ಸುತ್ತಲಿನ ಪ್ರದೇಶವು ಹಸರು ಬಣ್ಣದಿಂದೊಪ್ಪುತ್ತಿದೆ. ದನಕುರಿಗಳು ಸ್ವೇಚ್ಛೆಯಿಂದ ಹುಲ್ಲು ಮೇಯುತ್ತಲಿವೆ. ದನಕಾಯುವವರೂ ಕುರಿಕಾಯುವವರೂ ಗಿಡದಡಿಯಲ್ಲಿ ಕುಳಿತು, ವಿಶ್ರಾಂತಿಯನ್ನು ಹೊಂದುತಲಿದ್ದಾರೆ.

ಆಚಾರ್ಯರು ಆಶ್ರಮದಲ್ಲಿ ಸಮಾಧಿಸ್ಥರಾಗಿ ಕುಳಿತಿದ್ದಾರೆ. ಬಳಿಯಲ್ಲಿಯೇ ಬುಕ್ಕರಾಯನು ಕೈಮುಗಿದುಕೊಂಡು ಕುಳಿತಿದ್ದಾನೆ. ಆಚಾರ್ಯರ ಸಮಾಧಿಯ ಅವಸ್ಥೆಯಲ್ಲಿಯೂ ಅವರ ಮೋರೆಯ ಮೇಲೆ ಬೇರೆಬೇರೆ ವಿಕಾರಗಳು ಚಿತ್ರಿತವಾಗುತ್ತಲಿವೆ. ಬುಕ್ಕರಾಯನು ಇವುಗಳನ್ನು ನೋಡುತ್ತ, ಮನಸ್ಸಿನಲ್ಲಿ ಏನೋ ಭಾವಿಸಿಕೊಳ್ಳುತ್ತಿದ್ದಾನೆ.

ಆಚಾರ್ಯರು ತುಸು ಹೊತ್ತಿನಲ್ಲಿ ಸಮಾಧಿಯಿಂದೆಚ್ಚತ್ತರು. ಶಿಷ್ಯನು ಗುರುಗಳು ಹೇಳುವುದನ್ನು ಕೇಳುವುದಕ್ಕೆ ಆತುರನಾಗಿ ಕುಳಿತನು. ಆಶ್ರಮದಲ್ಲೆಲ್ಲಕಡೆಯಲ್ಲಿ ಗಭೀರವಾದ ಶಾಂತತೆಯು ನೆಲೆಗೊಂಡಿದೆ. ಆಚಾರ್ಯರು ಒಮ್ಮಿಂದೊಮ್ಮೆ ಈ ಶಾಂತತೆಯನ್ನು ಭಂಗಪಡಿಸಿ ಹೇಳತೊಡಗಿದರು—ಪ್ರಿಯ ಶಿಷ್ಯನೆ, ನೀನಾದರೋ ರಾಷ್ಟ್ರಸೇವೆಯ ಪವಿತ್ರವಾದ ಕಾರ್ಯವನ್ನು ಮನಃಪೂರ್ವಕವಾಗಿ ಕೈಕೊಂಡಿರುವೆ; ಅದಕ್ಕನುಗುಣವಾಗಿ ರಾಷ್ಟ್ರಹಿತದ ಅನೇಕ ಕೆಲಸಗಳನ್ನು ಬಹುಪ್ರಯಾಸಬಟ್ಟು ಮಾಡಿರುವೆ; ಮುಂದೆಯಾದರೂ ಮಾಡಬೇಕೆಂದು ನಿಶ್ಚಯಿಸಿರುವೆ. ಆದರೆ ಪ್ರಕೃತದಲ್ಲಿ ನಿನ್ನ ಈ ಕೆಲಸಕ್ಕೆ ಜಯವು ದೊರೆಯುವಂತೆ ತೋರುವದಿಲ್ಲ; ಏಕೆಂದರೆ ಸದ್ಯಃಕಾಲವು ಕನ್ನಡಿಗರ ಘೋರವಾದ ಕಗ್ಗತ್ತಲೆಯ ರಾತ್ರಿಯ ಸಮಯವಾಗಿದೆ; ಕನ್ನಡಿಗರೆಲ್ಲರು ಅಜ್ಞಾನಾಂಧಃಕಾರದಲ್ಲಿ ಮುಳುಗಿ ನಿದ್ರಾವಶರಾಗಿದ್ದಾರೆ.

ಬುಕ್ಕ (ನಿರಾಶೆಯಿಂದ)—ಮಹಾರಾಜ, ಹಾಗಾದರೆ ನಾನು ಈ ಸಮಯದಲ್ಲಿ ಮಾಡಬೇಕಾದ್ದೇನು ?

ಆಚಾರ್ಯ—ಶಿಷ್ಯನೆ, ಹೀಗಿದ್ದರೂ ನೀನು ಎದೆಯೊಡಕೊಳ್ಳುವ ಕಾರಣವಿಲ್ಲ. ಮನುಷ್ಯನು ಕೈಕೊಂಡಿರುವ ಕಾರ್ಯಗಳಿಗನುರೂಪವಾದ ಶುಭಾಶುಭಫಲಗಳನ್ನನುಭವಿಸಲೇ ಬೇಕು. ಆದುದರಿಂದ ನೀನು ಒಂದಿಲ್ಲೊಂದು ದಿವಸ, ನಿನ್ನ ನಿಶ್ಚಿತಕಾರ್ಯದಲ್ಲಿ ಉತ್ತಮ ಫಲವನ್ನು ಹೊಂದುವಿಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ನೀನು ಆ ವರೆಗೆ ಮನಸ್ಸನ್ನು ಹೊಯ್ದಾಡಗೊಡದೆ, ದಿಟ್ಟತನದಿಂದ ಕೈಕೊಂಡ ಕಾರ್ಯವನ್ನು ಮಾಡುತ್ತ ಹೋಗು. ಎಡರುಗಳು ಬಂದವೆಂದರೆ, ಇಲ್ಲವೆ ನಿರಾಶೆಯ ಸ್ಥಿತಿಯುಂಟಾಯಿತೆಂದರೆ, ನೀನು ಕೈಕಾಲು ಕಳೆದುಕೊಂಡು ಸುಮ್ಮನೆ ಕೂಡಬಾರದು. ನಿರಾಶಾಜನಕವಾದ ಅವಸ್ಥೆಯು ಪ್ರಾಪ್ತವಾದರೆ, ನನ್ನ ದುರದೃಷ್ಟದಿಂದಲೇ ಹೀಗಾಯಿತೆಂದು ಭಾವಿಸಿ, ಧೈರ್ಯದಿಂದಲೂ ಉತ್ಸಾಹದಿಂದಲೂ ಮುಂದರಿಸು; ಹೆದರಬೇಡ.

ಬು.—ಮಹಾರಾಜ, ತಾವು ಹೇಳುತ್ತಿರುವುದು ನಿಜವಾದುದು. ಈ ವರೆಗೆ ನಾನು ತಮ್ಮ ಅಪ್ಪಣೆಯಂತೆಯೇ ನಡೆಯುತ್ತ ಬಂದಿದ್ದೇನೆ. ಇನ್ನು ಮೇಲೆಯೂ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಕಾರ್ಯಮಾಡುತ್ತ ಹೋಗುವೆನು.

ಆ.—ಪ್ರಿಯ ಶಿಷ್ಯನೆ, ನಿನ್ನ ಮಾತನ್ನು ಕೇಳಿ, ನನಗೆ ಅತ್ಯಾನಂದವಾಗುತ್ತಿದೆ. ನೀನು ತಂದ ವರ್ತಮಾನದಿಂದ ದಿಲ್ಲಿಯ ಬಾದಶಹನು ಆನೆಗುಂದಿಯ ಮೇಲೆ ದಂಡೆತ್ತಿ ಬರುವನೆಂಬುದರಲ್ಲಿ ಸಂದೇಹವಿಲ್ಲ. ಈ ಪ್ರಸಂಗದಲ್ಲಿ ಬಾದಶಹನ ದೃಷ್ಟಿಯು ತನ್ನ ಅಣ್ಣನ ಮಗನ ಕಡೆಗೆ ತಿರುಗಿದ್ದು ಒಳಿತಾಯಿತು. ಈ ವಿಷಯವಾಗಿ ನೀನು ಮಾಡಿದ ಸಾಹಸವೆಲ್ಲ ಒಳಿತಾದುದೇ ಸರಿ. ಈ ಕೆಲಸದಲ್ಲಿ ನೀನು ತೋರಿಸಿದ ಚಾತುರ್ಯವು ವರ್ಣನೀಯವಾಗಿದೆ. ಆದರೆ ರಾಯನು ಬಹಾಉದ್ದೀನನಿಗೆ ಆಶ್ರಯ ಕೊಟ್ಟುದೊಂದು ಮಾತ್ರ ಸರಿಯಾಗಲಿಲ್ಲ. ಬಂಗಾಲದ ಮೇಲೆ ದಂಡೆತ್ತಿ ಹೋಗುತ್ತಿರುವ ಬಾದಶಹನಿಗೆ ಮಧ್ಯಮಾರ್ಗದಲ್ಲಿಯೇ ಈ ಸುದ್ದಿಯು ತಿಳಿದುದಾದರೆ,

ಅವನು ನೆಟ್ಟಗೆ ಕಂಪಿಲ ಪಟ್ಟಣದ ಮೇಲೆ ಸಾಗಿ ಬರುವನು. ರಾಯಿಯೂ, ಅವನ ಅನುಚರರೂ ಎಷ್ಟೇ ಶೂರರಾಗಿದ್ದರೂ, ಮುಷ್ಟಿಪ್ರಾಯರಾದ ಅವರು ಬಾದಶಹನ ಪ್ರಚಂಡಸೈನ್ಯಕ್ಕೆ ಈಡಾಗುವಂತಿಲ್ಲ. ಬಾದಶಹನು ತೀವ್ರವೇ ಕಂಪಿಲ ಪಟ್ಟಣವನ್ನು ಗೊತ್ತಿಗೆಹಚ್ಚಿಬಿಡುವನು. ತರುವಾಯ ಅವನಿಗೆ ಆನೆಗುಂದಿಯ ಮೇಲೆ ದಂಡೆತ್ತಿ ಬರಲಿಕ್ಕೆ ತಡವಾಗದು. ದಿಲ್ಲಿಯ ಬಾದ ಶಹನನ್ನು ಎದುರಿಸುವಷ್ಟು ಸಾಮರ್ಥ್ಯವು ಸದ್ಯಃಕಾಲಕ್ಕೆ ಆನೆಗುಂದಿಯ ಅರಸನಲ್ಲಿಲ್ಲ. ಅದರಿಂದ ಆನೆಗುಂದಿಯೂ ಬಾದಶಹನ ತುತ್ತಿಗೆ ಆಹುತಿ ಯಾಗಿ ಹೋಗುವದು. ಇದನ್ನು ಮುಂಗಡವಾಗಿಯೇ ನಾನು ಕರ್ನಾಟಕದ ಮೇಲೆ ಸಮೀಪದಲ್ಲೊಂದು ಘೋರ ವಿಪತ್ತು ಬರುವದೆಂದು ಹೇಳಿದೆನು.

ಬು. (ವಿಷಾದದಿಂದ)—ಗುರುಮಹಾರಾಜ, ಈ ಸಂಕಟದಿಂದ ಕನ್ನಡಿ ಗರನ್ನು ಪಾರುಮಾಡಲಿಕ್ಕೆ ಯಾವ ಉಪಾಯವೂ ಇಲ್ಲವೇನು ?

ಆ.—ಶಿಷ್ಯೋತ್ತಮನೆ, ಈಶಸಂಕಲ್ಪವೇ ಹೀಗಿರುವದು. ಇದನ್ನು ತಪ್ಪಿಸುವುದು ಯಾರಿಂದಲೂ ಆಗದು. ಅದಕ್ಕಾಗಿಯೇ ನಮ್ಮಲ್ಲಿ ದೇಶ ದ್ರೋಹಿಗಳು ಉದಯಿಸುತಲಿದ್ದಾರೆ. ಅವರು ದುರಭಿಮಾನದಿಂದಲೂ ರಾಕ್ಷಸೀ ಆಶೆಯಿಂದಲೂ ಬಾದಶಹನಿಗೆ ಆನೆಗುಂದಿಯ ಮೇಲೆ ದಂಡೆತ್ತಿ ಬರುವುದಕ್ಕೆ ಆಮಂತ್ರಣವನ್ನು ಕೊಡುತ್ತಿದ್ದಾರೆ; ರಾಯಿಯು ದಿಲ್ಲಿಯ ಬಾದಶಹನ ವಿರೋಧಿಯಾದವನಿಗೆ ಆಶ್ರಯವಿತ್ತು, ಬಾದಶಹನು ತೀವ್ರ ಸಾಗಿಬರುವುದಕ್ಕೆ ಕಾರಣೀಭೂತನಾಗುತ್ತಿದ್ದಾನೆ. ಇದೇ ಮೇರೆಗೆ ಇನ್ನೂ ಕನ್ನಡಿಗರ ಉನ್ನತಿಗೆ ವಿಘಾತಕವಾದ ಅನೇಕ ಸಂಗತಿಗಳು ವರ್ತಿಸುತ್ತ ನಡೆದಿವೆ. ಬಾದಶಹನು ಇವುಗಳ ಲಾಭವನ್ನು ತೆಗೆದುಕೊಂಡು, ಕರ್ನಾಟ ಕವನ್ನು 'ಹಾ ಹಾ' ಎನ್ನುವಷ್ಟರಲ್ಲಿ ಸಮೂಲವಾಗಿ ನಾಶಮಾಡಿ ಬಿಡುವನು. ತಲೆತಿರುಕ ಬಾದಶಹನ ಅತ್ಯಾಚಾರದಿಂದ ಕನ್ನಡಿಗರು ಬಹಳ ದುಃಖವನ್ನ ನುಭವಿಸಬೇಕಾಗುವದು. ಈ ದುಃಖಾಗ್ನಿಯಿಂದ ಕನ್ನಡಿಗರಲ್ಲಿ ಬೇರುಬಿಟ್ಟ ಸ್ವಾರ್ಥಪರವಾದ ದೇಶದ್ರೋಹವಿಚಾರಗಳು ಸುಟ್ಟು ಬೂದಿಯಾಗಿ, ಆ ಬೂದಿಯ ಗೊಬ್ಬರದಿಂದಲೇ ಅವರ ಮನಸ್ಸಿನಲ್ಲಿ ಸ್ವದೇಶಾಭಿಮಾನ-ಸ್ವಾರ್ಥ ತ್ಯಾಗಗಳ ಮೊಳಕೆಗಳು ಅಂಕುರಿಸುವವು.

ಋ.—ಗುರುವರ್ಯರೆ, ತಾವು ಹೇಳುತ್ತಿರುವ ಸಂಗತಿಯನ್ನು ಕೇಳಿ, ನನಗೆ ಬಹಳ ದುಃಖವಾಗುತ್ತಿರುವದು. ನಿಜವಾಗಿಯೂ ಕನ್ನಡಿಗರು ಘೋರ ವಿಪತ್ತಿಗೊಳಗಾಗುತ್ತಿದ್ದರೆ, ನಾನು ಈ ಮೇರೆಗೆ ಪ್ರಯತ್ನವನ್ನೇಕೆ ಮಾಡಬೇಕಾಗಿತ್ತು? ನನ್ನ ಶ್ರಮದಿಂದ ಉಪಯೋಗವೇನು ಆದಂತಾಯ್ತು? ಈ ವರೆಗೆ ನಾನು ವ್ಯರ್ಥವಾಗಿ ಬಳಲಿದಂತಾಗಲಿಲ್ಲವೇ? ಆತ್ಮಜ್ಞಾನದಿಂದ ವಂಚಿತನಾಗಿ, ಸುಳ್ಳೇ ದೇಶ ದೇಶಗಳನ್ನಲೆದೆನಲ್ಲ!

ಆ.—ವತ್ಸ, ಹೀಗೆ ಎನ್ನ ಕೂಡದು. ನಿನ್ನ ಪ್ರಯತ್ನಗಳಿಂದ ಕನ್ನಡಿಗರ ಸುದೈವವು ಸಮಿಾಪಿಸಿತು. ಕನ್ನಡಿಗರಿಗಾಗಿ ನಿನ್ನ ಆತ್ಮವು ತಳಮಳಿಸುವದಾದರೆ, ಇದಕ್ಕಿಂತಲೂ ಹೆಚ್ಚಿನ ಕಾರ್ಯಗಳನ್ನು ಮಾಡು; ಕನ್ನಡಿಗರಿಗಾಗಿ ಆತ್ಮಯಜ್ಞಮಾಡಲು ಸಿದ್ಧನಾಗು. ಅಂದರೆ ನಿಜವಾಗಿಯೂ ಕನ್ನಡಿಗರು ಬಲುಬೇಗನೆ ಉದ್ಧಾರರಾಗುವರು—ಯವನರ ಅತ್ಯಾಚಾರಗಳಿಂದ ಬಹು ಕಾಲ ಮುಕ್ತರಾಗುವರು. ಈಗ ಗಾಢಾಂಧಕಾರದಲ್ಲಿ (ಅಜ್ಞಾನನಿದ್ರೆಯಲ್ಲಿ) ಮುಳುಗಿಹೋದ ಕನ್ನಡಿಗರು ಎಚ್ಚತ್ತು ಅರುಣೋದಯವಾದುದನ್ನು ನೋಡುವರು. ಕ್ರಮವಾಗಿ ನಿಜವಾದ ಜ್ಞಾನವನ್ನು ಪಡೆದು, ಕರ್ತವ್ಯನಿಷ್ಠರಾಗಿ, ಸ್ವಾತಂತ್ರ್ಯ ರವಿಯ ಉಜ್ವಲಪ್ರಕಾಶದಲ್ಲಿ ಚಿರಾನಂದದಿಂದ ಕಾಲಕಳೆಯುವರು.

ಋ.—ಗುರುಗಳೆ, ನಿಮ್ಮ ಈ ಮಾತುಗಳನ್ನು ಕೇಳಿ ಸಂತೋಷವಾಗುತ್ತಿದ್ದರೂ, ಸದ್ಯಕ್ಕೆ ಕನ್ನಡಿಗರಿಗೊದಗತಕ್ಕ ದುಃಖಪರಂಪರೆಯು ಕಲ್ಪನೆಯಿಂದ ನನ್ನ ಜೀವವು ಕಳವಳವಾಗುತ್ತಲಿದೆ.

ಆ.—ಪ್ರಿಯ ಶಿಷ್ಯನೆ, ಇದಕ್ಕಾಗಿ ಮನಸ್ಸಿಗೆ ಅಸಮಾಧಾನ ತಂದುಕೊಳ್ಳಬೇಡ. ಕನ್ನಡಿಗರ ಆತ್ಮಕಲಹವೆಂಬ ಭೂತವು ತೊಲಗಬೇಕಾದರೆ, ಯವನರ ಅತ್ಯಾಚಾರವೆಂಬ ಕಠೋರತಂತ್ರದ ಆವಶ್ಯಕತೆಯುಂಟು. ಆದಕ್ಕಾಗಿಯೇ ದೇವರು ಈ ಗಂಡಾಂತರವನ್ನು ತರುತಲಿದ್ದಾನೆ. ನೀನು ಇದಕ್ಕಾಗಿ ಚಿಂತಿಸಿ ಉಪಯೋಗವಿಲ್ಲ.

ಈ ಸಮಯದಲ್ಲಿ ಹರಿಹರನು ಬಂದು ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಗುರುಗಳು ಪ್ರೇಮಭರದಿಂದ ಆಶೀರ್ವದಿಸಿ ಅವನಿಗೆ

ಒತ್ತಟ್ಟಿಗೆ ಕುಳಿತುಕೊಳ್ಳಹೇಳಿದರು. ಹರಿಹರನು ಗುರುಗಳ ಸಮೀಪದಲ್ಲಿ ಕುಳಿತುಕೊಂಡನು. ಆಚಾರ್ಯರು—ಪ್ರಿಯ ಶಿಷ್ಯರೆ, ಇಂದು ನೀವಿರ್ವರೂ ನನ್ನ ಆಶ್ರಮದಲ್ಲಿ ಕೂಡಿ ಇರುವುದನ್ನು ನೋಡಿ, ನನಗೆ ಬಹಳ ಸಂತೋಷ ವಾಗುತ್ತಿದೆ. ನಾನೊಬ್ಬ ಸನ್ಯಾಸಿಯಾಗಿದ್ದರೂ ಚಿರಸಹವಾಸದಿಂದುಂಟಾದ ನಿಮ್ಮ ಸ್ನೇಹದ ಮೂಲಕ, ನೀವಿಲ್ಲದಂತಾದ ಕೂಡಲೆ, ಕರುವನ್ನು ಕಳೆದು ಕೊಂಡ ಆಕಳಿನಂತೆ ನನ್ನ ಸ್ಥಿತಿಯಾಗುತ್ತದೆ. ಜಗತ್ತಿನ ಮೋಹವೇ ಇಂತ ಹದಿದೆ! ಒಂದು ಲಂಗೋಟಿಯಿಂದ ಸನ್ಯಾಸಿಯ ಸಂಸಾರವು ಬೆಳೆಯಿತೆಂದು ವೃದ್ಧರು ಕಥೆ ಹೇಳುತ್ತಿರುವುದನ್ನು ನೀವು ಕೇಳಿರಬಹುದು.

ಹರಿಹರ.—ಗುರುಮಹಾರಾಜ, ನಮ್ಮ ಮೇಲಿರುವ ತಮ್ಮ ಈ ಅಕೃತ್ರಿಮ ಪ್ರೀತಿಯನ್ನು ನೋಡಿ, ನಮಗೆ ಅತ್ಯಂತವಾದ ಆನಂದವಾಗುತ್ತಿರುವದು. ಈ ಜಗತ್ತಿನಲ್ಲಿ ನಮಗೆ ಬೇರೆ ಯಾರೂ ಇಲ್ಲ. ನಾವು ಸರ್ವಭಾವದಿಂದ ನಿಮ್ಮನ್ನು ಮರೆಹೊಕ್ಕಿದ್ದೇವೆ. ಈ ಸ್ಥಿತಿಯಲ್ಲಿ ತಮ್ಮ ದಯವಿದ್ದಹೊರತು, ನಮ್ಮ ಜೀವನ-ಯಾತ್ರೆಯು ಕ್ಷೇಮಕರವಾಗುವುದು ಹೇಗೆ? ನೀವು ಈ ಜಗ ತ್ತಿನಲ್ಲಿಯ ನಮ್ಮ ಸಕಲ ಕರ್ತವ್ಯಗಳಿಗೆ ಸಾಹಾಯಕರೂ, ಪಾರಲೌಕಿಕ ಸುಖ ಪ್ರಾಪ್ತಿಗೆ ಮಾರ್ಗದರ್ಶಕರೂ ಎಂದು ನಾವು ದೃಢವಾಗಿ ನಂಬಿದ್ದೇವೆ.

ಆ.—ಶಿಷ್ಯರೆ, ನನ್ನಲ್ಲೇನಿದೆ? ಸಕಲ ಚರಾಚರ ವಸ್ತುಗಳಿಗೆ ಆ ಭಗವಂ ತನೇ ಆಧಾರಭೂತನು. ಸದುದ್ದೇಶವನ್ನಿಟ್ಟುಕೊಂಡು ಉತ್ತಮಕಾರ್ಯ ಮಾಡುತ್ತಿರುವವರಿಗೆ ಭಗವಂತನು ಚಿರಸಾಹಾಯಕನಾಗಿರುವನು. ಆದು ದರಿಂದಲೇ ಅವನಿಗೆ ಶಿಷ್ಟರಕ್ಷಕನೆಂಬ ಬಿರುದುಂಟಾಗಿದೆ. ನಾನೂ ಆಭಗ ವತ್ಪ್ರೇಮ-ಸಂಪಾದನೆಗಾಗಿ ಇಲ್ಲಿ ಈ ರೀತಿ ವಾಸಮಾಡುತ್ತಿದ್ದೇನೆ. ನೀವೂ ಕೂಡ ನನ್ನಂತೆ ಮಹಾಮಹಿಮನಾದ ದೇವರಲ್ಲಿ ವಿಶ್ವಾಸವನ್ನಿಟ್ಟು, ಕರ್ತವ್ಯ ಪಂಥಾನವನ್ನು ಕ್ರಮಿಸುವಿರಾದರೆ, ನಿಮಗೆ ಇಹ-ಪರಗಳಲ್ಲಿ ನಿಶ್ಚಯವಾಗಿ ಯೂ ಸುಖವು ದೊರೆಯುವದು. ನಮ್ಮೆಲ್ಲರ ಸಾಹಾಯಕ್ಕಾಗಿಯೇ ಆ ಭಗ ವಂತನು ಶ್ರೀ ವಿರೂಪಾಕ್ಷನೆಂಬ ಹೆಸರಿನಿಂದ ಇಲ್ಲಿ ವಾಸಿಸುತ್ತಿರುವನೆಂದು ದೃಢವಾಗಿ ನಂಬಿರಿ.

ಬು.—ದೇವರ ಪ್ರೇಮವನ್ನು ಹೊಂದುವ ಯೋಗ್ಯತೆಯು ನಮಗಿನ್ನೂ ಬಂದಿಲ್ಲ. ಯಾವ ಮಾರ್ಗದಿಂದಾಚರಿಸಿದರೆ ಭಗವಂತನು ತೃಪ್ತನಾಗುವ

ನೆಂಬುದೂ ನಮಗೆ ಗೊತ್ತಿಲ್ಲ. ಇದನ್ನಭ್ಯಾಸಿಸುವುದಕ್ಕಾಗಿಯೇ ನಾವು ತಮ್ಮನ್ನು ಮರೆಹೊಕ್ಕಿದ್ದೇವೆ. ಸದ್ಗುರುವಿನ ಅನುಗ್ರಹದ ಹೊರತು ಈಶ್ವರೀ ಪ್ರೇಮವು ಲಭಿಸದೆಂದು ಮಹಾತ್ಮರು ಹೇಳುತ್ತಾರೆ. ಅದಕ್ಕಾಗಿ ಪೂಜ್ಯರೆ, ತಾವು ನಮಗೆ ಮುಂದಿನ ಮಾರ್ಗವನ್ನು ತೋರಿಸಿಕೊಡಬೇಕು.

**ವಿ.** — ಬುಕ್ಕರಾಯ, ಆ ಮಾತೊತ್ತಟ್ಟಿಗಿರಲಿ. ನಿಮ್ಮಣ್ಣನು ತನ್ನ ಪ್ರವಾಸವನ್ನು ಮುಗಿಸಿಕೊಂಡು ಇದೇ ಈಗ ಬಂದಿದ್ದಾನೆ. ಮುಖವನ್ನು ನೋಡುತ್ತಿರಲು ಇವನು ಜಯಶಾಲಿಯಾಗಿ ಬಂದಂತೆ ಕಂಡುಬರುತ್ತದೆ. (ಹರಿಹರನನ್ನು ಕುರಿತು) — ಏಕೆ, ನಾನು ಹೇಳುತ್ತಿರುವುದು ನಿಜವಷ್ಟೇ? ನೀನು ಆವಾವ ಕೆಲಸಗಳನ್ನು ಮಾಡಿಕೊಂಡು ಬಂದೆಯೆಂಬುದನ್ನು ಹೇಳು ನೋಡೋಣ.

**ಹ.** —ಗುರುವರ್ಯರೇ, ತಮ್ಮ ಅನುಗ್ರಹವಿರುತ್ತಿರಲು ನಾನು ಅಪಜಯ ಹೊಂದುವುದು ಹೇಗೆ? ನಾನು ಕರ್ನಾಟಕದ ಬಹುಭಾಗದಲ್ಲಿ ಸಂಚರಿಸಿದೆನು. ಜನರಲ್ಲಿ ಸ್ವದೇಶಭಕ್ತಿಯ ವಿಷಯವಾಗಿ ಅರಿವಿಲ್ಲದಿರುವುದು ನಿಜವು. ಆದರೂ ಜನರು ನನ್ನ ಉಪದೇಶದಿಂದ ಸ್ವದೇಶವೆಂದರೇನು? ಅದಕ್ಕಾಗಿ ಮನುಷ್ಯನ ಕರ್ತವ್ಯಗಳೇನು? ಅವನ್ನವರು ಯಾವ ರೀತಿಯಿಂದ ಕಡೆಹಾಯಿಸಬೇಕು? ಈ ಮೊದಲಾದ ಸಂಗತಿಗಳನ್ನು ಅರಿತಿದ್ದಾರೆ. ಎಷ್ಟೋ ಜನರು ನನ್ನ ಶಿಷ್ಯರಾಗಿ, ನನ್ನ ಉಪದೇಶ ಪ್ರಸಾರಣೆಗಾಗಿ ಬೇರೆಬೇರೆ ಕಡೆಗೆ ಹೋಗಿದ್ದಾರೆ. ಇದರಿಂದ ತುಸು ದಿವಸಗಳಲ್ಲಿ ಇಡಿ ಕರ್ನಾಟಕವು ಸ್ವದೇಶ ಪ್ರೇಮವನ್ನು ಹೊಂದೀತೆಂದು ನನಗೆ ತೋರುತ್ತದೆ. ನಾನು ಈ ಕೆಲಸವನ್ನು ಮಾಡಿದ್ದಲ್ಲದೆ, ದ್ವಾರಸಮುದ್ರದ ಅರಸನ ದರ್ಶನವನ್ನು ತೆಗೆದುಕೊಂಡೆನು.

**ವಿ.** — ದ್ವಾರಸಮುದ್ರದ ಸ್ಥಿತಿಯು ಹೇಗಿದೆ?

**ಹ.** — ಅಲ್ಲಿಯ ಸ್ಥಿತಿಯು ಸಾಕಷ್ಟು ಸಮಾಧಾನಕಾರಕವಿಲ್ಲ. ಯವನರಿಂದ ಹಾಳಾದ **ಹಳೇಬೀಡು** ಇತ್ತಿತ್ತಲಾಗಿ ಸುಧಾರಿಸುತ್ತ ನಡೆದಿದೆ. ಸದ್ಯದ ರಾಜನಾದ ಬಲ್ಲಾಳದೇವನು ಒಳ್ಳೆಯವನಿದ್ದು, ತನ್ನ ರಾಜ್ಯದ ಸುಧಾರಣೆಗಾಗಿ ಯತ್ನಿಸುತ್ತಿರುವನು.

ಆ. — ದ್ವಾರಸಮುದ್ರದ ರಾಜನಿಂದ ಆನೆಗುಂದಿಯ ರಾಜ್ಯಕ್ಕೇನಾದರೂ ಸಾಹಾಯವಾಗಬಹುದೇನು ? ಯವನರು ಆನೆಗುಂದಿಯ ಮೇಲೆ ಸಾಗಿಬಂದರೆ, ಬಲ್ಲಾಳದೇವನು ಆನೆಗುಂದಿಯ ಹಿತಕ್ಕಾಗಿ ಯವನರನ್ನು ಎದುರಿಸಬಹುದೇನು ?

ಹ. — ಇಲ್ಲ, ಈ ಸಮಯದಲ್ಲಿ ದ್ವಾರಸಮುದ್ರದ ಅರಸನಿಂದ ಆನೆಗುಂದಿಗೆ ನೆರವಾಗುವಂತಿಲ್ಲ; ಏಕೆಂದರೆ ಆ ರಾಜ್ಯವು ಯವನರಿಂದ ಅದಕ್ಕುಂಟಾದ ಹಾನಿಯನ್ನು ತುಂಬಿಕೊಳ್ಳಬೇಕಾದರೆ ಎಷ್ಟೋ ವರುಷಗಳು ಬೇಕು.

ಆ. — ಬಲ್ಲಾಳದೇವನಿಗೆ ಯಾವತ್ತೂ ಕರ್ನಾಟಕದ ವಿಷಯವಾಗಿ ಸಹಾನುಭೂತಿಯಿರುವದೇನು ? ಯವನರ ಸೇಡನ್ನು ತೀರಿಸಿಕೊಳ್ಳುವ ಪ್ರಬಲವಾದ ಇಚ್ಛೆಯು ಅವನಲ್ಲಿದೆ ಏನು ?

ಹ. — ಇದೆ.

ಆ. — ಪ್ರಿಯ ಶಿಷ್ಯರೆ, ನೀವಿನ್ನು ನಿಮ್ಮ ಕೈಕೊಂಡ ಕಾರ್ಯದ ಪೂರ್ಣತೆಗಾಗಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂಬುದನ್ನು ಹೇಳುತ್ತೇನೆ, ಕೇಳಿರಿ. ಹರಿಹರ, ನೀನು ಆನೆಗುಂದಿಯಲ್ಲಿಯೇ ಇರು. ಯವನರು ಏಕೆ ಆನೆಗುಂದಿಯ ಮೇಲೆ ದಂಡೆತ್ತಿಬರುವರೆಂಬ ಸುದ್ಧಿಯನ್ನು ನಿನ್ನ ತಮ್ಮನಿಂದ ಕೇಳಿಕೊಳ್ಳು. ಈ ಕಾಲಕ್ಕೆ ಯಾವ ಮಾರ್ಗದಿಂದ ನಡೆದರೆ ಹಿತವಾದೀತೆಂದು ಆಲೋಚಿಸಿ ಅದರಂತೆ ನಡೆದುಕೊಳ್ಳು. ಏನಾದರೂ ಸಂದೇಹವುಂಟಾದರೆ, ನಡುನಡುವೆ ಬಂದು ನನ್ನ ದರ್ಶನ ತೆಗೆದುಕೊ. ಬುಕ್ಕರಾಯ, ನೀನು ದ್ವಾರಸಮುದ್ರಕ್ಕೆ ಹೋಗು. ಅಲ್ಲಿಯ ಅರಸನ ಮನಸ್ಸಿನಲ್ಲಿ ಕರ್ನಾಟಕದ ವಿಷಯವಾಗಿ ಪ್ರೇಮವನ್ನೂ, ಯವನರ ವಿಷಯದಲ್ಲಿ ಹಗೆತನವನ್ನೂ ಉಂಟುಮಾಡುವುದಕ್ಕೆ ಯತ್ನಿಸು. ದ್ವಾರಸಮುದ್ರದ ಬಲವು ಬೆಳೆಯುವುದಕ್ಕೆ ಮಾಡಬೇಕಾದ ಉಪಾಯಗಳನ್ನು ಅಲ್ಲಿಯ ಅರಸನಿಗೆ ಸೂಚಿಸು. ಇದರಿಂದ ಆನೆಗುಂದಿಯ ರಾಜ್ಯಕ್ಕೆ ಹಿತವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಇನ್ನು ನೀವು ನಿಮ್ಮ ನಿಮ್ಮ ಕೆಲಸಕ್ಕೆ ಹೋಗಬಹುದು. ನನ್ನ ಆಹ್ನಿಕದ ಹೊತ್ತಾಯಿತು.

ಆಚಾರ್ಯರು ಸಮಾಧಿಸ್ಥರಾಗಿ ಕುಳಿತರು. ಅಣ್ಣತಮ್ಮಂದಿರು ಭಕ್ತಿ ಭಾವದಿಂದ ಗುರುಗಳಿಗೆ ವಂದಿಸಿ ಮಾತು-ಕಥೆಗಳನ್ನಾಡುವುದಕ್ಕಾಗಿ ಬೇರೆ ಕಡೆಗೆ ಹೋದರು.

## ಹದಿನೆರಡನೆಯ ಅಧ್ಯಾಯ

### ಕಾಮಾಕ್ಷಿಯ ಕುವಿಚಾರ

ನದಿಯ ದಂಡೆಯಲ್ಲಿ ಪ್ರಧಾನ ಸಂಗಮನ ಮನೆಯಿತ್ತು. ಇದು ಎರ ಡಂತಸ್ತಿನದಾಗಿದ್ದು, ನೋಡುವುದಕ್ಕೆ ಬಹು ಸುಂದರವಾಗಿತ್ತು. ಮನೆಯ ಹಿಂಭಾಗದಲ್ಲಿ ನದಿಯ ತೀರಕ್ಕೆ ಹೊಂದಿ, ಒಂದು ಉದ್ಯಾನವಿದ್ದಿತು.

ಸಾಯಂಕಾಲದ ಸಮಯವು. ರವಿಯು ಅಪರಸಮುದ್ರದಲ್ಲಿ ಮುಳುಗಿ ಹೋಗಿದ್ದಾನೆ. ಎಲ್ಲ ಕಡೆಯಲ್ಲಿ ಮಬ್ಬುಗತ್ತಲೆಯು ಬಿದ್ದಿದೆ. ಆಕಾಶದಲ್ಲಿ ನಕ್ಷತ್ರಗಳು ಒಂದೊಂದಾಗಿ ಉದಯವಾಗುತ್ತಲಿವೆ.

ಈ ಸಮಯದಲ್ಲಿ ಮೇಲೆ ಹೇಳಿದ ಉಪವನದಲ್ಲಿಯ ಸಂಗಮರವರಿಕಲ್ಲಿನಿಂದ ನಿರ್ಮಿತವಾದ ಕಟ್ಟೆಯ ಮೇಲೆ ಕಾಮಾಕ್ಷಿಯು ಕುಳಿತಿದ್ದಾಳೆ. ಸಮೀಪದಲ್ಲಿ ತುಂಗಭದ್ರೆಯು ಇಂಚರದಿಂದ ಪ್ರವಹಿಸುತಲಿದ್ದಾಳೆ. ಸಾಯಂಕಾಲದ ಮನೋಹರವಾದ ತಂಗಾಳಿಯು ಉದ್ಯಾನದ ಹೂಗಳ ಸುಗಂಧದೊಡನೆ ಬೀಸುತ್ತಲಿದೆ. ಮನೆಯ ಹೊರಗೂ ಒಳಗೂ ಹಚ್ಚಿದ ದೀಪಗಳ ಪ್ರಕಾಶವು ತೋಟದಲ್ಲಿ ಬಿದ್ದಿದೆ. ಇವುಗಳ ಕಡೆಗೆ ಕಾಮಾಕ್ಷಿಯ ಲಕ್ಷ್ಯವಿರಲಿಲ್ಲ. ಅವಳು ಯಾವುದೋ ಒಂದು ಘನ ವಿಚಾರದಲ್ಲಿ ಮಗ್ನಳಾಗಿದ್ದಾಳೆ. ನಡು ನಡುವೆ ಎದ್ದುನಿಂತು ತೋಟದ ಪ್ರವೇಶದ್ವಾರದ ಕಡೆಗೆ ನೋಡುತ್ತಿದ್ದುದರಿಂದ, ಅವಳು ಯಾರದೋ ಮಾರ್ಗಪ್ರತೀಕ್ಷೆ ಮಾಡುತ್ತಿದ್ದಳೆಂದು ಹೇಳ ಬಹುದಾಗಿತ್ತು.

ವಾಚಕ ಮಹಾಶಯರೇ, ಕಾಮಾಕ್ಷಿಯು ಮನಸ್ಸಿನಲ್ಲಿ ಏನೇನೋ ಆಲೋಚಿಸುತಲಿದ್ದಳು. ಅವಳ ಆಲೋಚನೆ ನಿಮಗೆ ತಿಳಿಯುವ ಸಂಭವ ವಿಲ್ಲ. ಆದರೆ ಅದು ಕಾದಂಬರಿಕಾರರಾದ ನಮಗೆ ತಿಳಿಯದೆ ಇರುವಂತಿಲ್ಲ. ಏಕೆಂದರೆ ಕಾದಂಬರಿಕಾರರಿಗೆ ಕರ್ಣಪಿಶಾಚಗಳ ನೆರವುಂಟು. ಅವು ಯಾವದೇ ಗುಪ್ತಸ್ಥಳದಲ್ಲಾಗಲಿ ನಡೆದ ಗುಪ್ತಕಾರ್ಯಗಳನ್ನೂ, ಗುಪ್ತಾಲೋ ಚನೆಗಳನ್ನೂ ಕಾದಂಬರಿಕಾರರಿಗೆ ಯಥಾರ್ಥವಾಗಿ ಹೇಳಿಬಿಡುತ್ತಿರುವವು. ಓರ್ವ ಕುಲಮಹಿಳೆಯ ಗುಪ್ತಾಲೋಚನೆಗಳನ್ನು ಬೈಲಿಗಿಡುವದು ತರವಲ್ಲ ವೆಂದು ನೀವು ಹೇಳಬಹುದು. ಆದರೆ ಉಪಾಯವಿಲ್ಲದಾಗಿದೆ. ನಮ್ಮ ಕಥಾ ನಕಕ್ಕೆ ಇದರ ಅವಶ್ಯಕತೆ ಇರುವುದರಿಂದ ನಾವಿದನ್ನು ಇಲ್ಲಿ ಹೇಳಲೇ ಬೇ ಕಾಗಿದೆ.

ಕಾಮಾಕ್ಷಿಯು ಯೋಚಿಸತೊಡಗಿದಳು— ನಾನು ಮಹಾರಾಣಿಯಾಗ ಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿ ಅದಕ್ಕನುಗುಣವಾಗಿ ಕೆಲಸ ಮಾಡುತ್ತಬಂದಿರುವೆನು. ಆದರೆ ನನ್ನ ಈ ಮನೋರಥವು ಕಡೆಹಾಯ್ದೀ ತೆಂಬ ಭರವಸೆಯು ನನಗಿಲ್ಲ. ನಾನು ಮಹಾರಾಣಿಯಾಗಬೇಕಾದರೆ, ನನ್ನ ವೃದ್ಧಪತಿಯು ಮಹಾರಾಜನಾಗಬೇಕು; ಆದರೆ ಆವನಿಗೆ ಈ ತರದ ಉಬ್ಬು ಇಲ್ಲ. ಮುಪ್ಪಿನಲ್ಲಿ ಅವನಿಗೆ ಇಂತಹ ಹೆಗ್ಗೋರಿಕೆ ಎಲ್ಲಿಂದ ಬರಬೇಕು? ಆದ್ದರಿಂದ ಅವನು ನನ್ನ ಹೇಳಿಕೆಯಂತೆ ಕುಣಿಯಲಾರನು. ಒಂದು ವೇಳೆ ಅವನು ನನ್ನ ಬಯಕೆಯಂತೆ ನಡೆದರೂ, ಅವನಿಂದ ಹೆಚ್ಚಿನ ಕೆಲಸವಾಗು ವಂತಿಲ್ಲ. ಆದಕಾರಣ ಅವನಿಂದ ನನ್ನ ಆಶೆಯ ಪೂರ್ಣತೆಗೆ ಸಾಹಾಯವಾ ಗಲಾರದು. ನಾನಾದರೋ ನನ್ನ ಮಹತ್ವಾಕಾಂಕ್ಷೆಗೆ ಸಾಹಾಯಕನಾಗ ಬಹುದೆಂದು ಭಾವಿಸಿ, ವೃದ್ಧನಾದ ಇವನನ್ನು ಲಗ್ನಮಾಡಿಕೊಂಡೆನು. ಬಡ ವನೂ ಮಹತ್ವಾಕಾಂಕ್ಷಿಯೂ ಆದ ತರುಣನೊಬ್ಬನನ್ನು ವಿವಾಹಮಾಡಿ ಕೊಂಡಿದ್ದರೆ ಎಷ್ಟು ಒಳಿತಾಗುತ್ತಿತ್ತಲ್ಲ! ಆದದ್ದಾಗಿ ಹೋಯಿತು. ಇನ್ನು ಚಿಂತಿಸಿದರೆ ಫಲವೇನು? ಇದ್ದದ್ದರಲ್ಲಿಯೇ ಸಮಾಧಾನವನ್ನು ಹಚ್ಚಿಕೊಂಡು ನಾನು ನನ್ನ ಕಾರ್ಯದಲ್ಲಿ ಮುಂದಡಿಯನ್ನಿಡಬೇಕು. ಇದೇ ನನ್ನ ಕರ್ತ ವ್ಯವು.

ಇನ್ನು ನನಗೆ ಇತರರಿಂದ ಸಾಹಾಯುವು ದೊರೆಯುವಂತಿಲ್ಲ. ಚತುರ ಳಾದ ದಾಸಿಯೊಬ್ಬಳು ನನ್ನ ಕೆಲಸಕ್ಕೆ ನೆರವಾಗಬಲ್ಲವಳಾಗಿದ್ದಳು. ಆದರೆ ಅವಳು ನನ್ನ ಹೇಳಿಕೆಯಂತೆ ರಾಜಕಾರಣಕ್ಕಾಗಿ ದೂರ ಹೋದುದರಿಂದ ಸದ್ಯಕ್ಕೆ ನನ್ನ ಕೈಮುರಿದಂತಾಗಿದೆ. ಅವಳು ತನ್ನ ಕೆಲಸದಲ್ಲಿ ಎಷ್ಟರ ಮಟ್ಟಿಗೆ ಯಶಸ್ಸನ್ನು ಪಡೆಯುವಳೋ ಎಂಬ ಚಿಂತೆಯು ನನ್ನನ್ನು ಸದಾ ಬಾಧಿಸುತ್ತಲಿದೆ. ಅವಳು ಹೋಗಿ ಬಹಳ ದಿವಸಗಳಾದವು. ಇನ್ನೂ ಆಕೆಯು ತಿರುಗಿ ಬರಲಿಲ್ಲವಲ್ಲ!! ಅವಳು ಯಾವುದಾದರೊಂದು ವಿಪತ್ತಿಗೆ ಗುರಿಯಾಗಿರಬಹುದೇನು? ಈಗ ಯಾವುದನ್ನು ನಿಶ್ಚಯಿಸಲಿಕ್ಕೆ ಬರುವಂತಿಲ್ಲ.

ನಾನು ನನ್ನ ಈ ಆಶೆಯನ್ನು ಪೂರ್ಣಮಾಡಿಕೊಳ್ಳುವುದಕ್ಕಾಗಿ ಹರಿಹರನ ಮನವೊಲಿಸಲು ಪ್ರಯತ್ನಿಸಿದೆನು. ಈ ಕೆಲಸಕ್ಕೆ ನೀನು ನನಗೆ ಸಾಹಾಯಕ ನಾಗೆಂದು ಎಷ್ಟೋ ಸಾರಿ ಹೇಳಿಕೊಂಡೆನು. ಅವನನ್ನು ನೋಡಿದೊಡನೆ ನನ್ನ ಮನಸ್ಸಿನಲ್ಲಿ ಮತ್ತೊಂದು ವಿಕಾರದ ಪ್ರಾದುರ್ಭಾವವಾಗುತ್ತಿರುವದು. ಚೆಲುವನೂ, ಬಲಶಾಲಿಯೂ, ಸುಗುಣಪೂರ್ಣನೂ ಆದ ತರುಣನನ್ನು ನೋಡಿ, ಯಾರಿಗೆ ಆನಂದವಾಗಲಿಕ್ಕಿಲ್ಲ? ಯಾರಿಗೆ ಮೋಹ ಬರಲಿಕ್ಕಿಲ್ಲ? ವೃದ್ಧಮಂತ್ರಿಯನ್ನು ವಿವಾಹಮಾಡಿಕೊಂಡದ್ದಕ್ಕಿಂತ ಇವನನ್ನು ಲಗ್ನವಾಗಿ ದ್ದರೆ, ಉತ್ತಮವಾಗುತ್ತಿತ್ತೆಂದು ಈಗ ಮೇಲಿಂದ ಮೇಲೆ ನನ್ನ ಮನಸ್ಸಿನಲ್ಲಿ ವಿಚಾರ ಬರುತ್ತಲಿದೆ. ಆದರೆ ಮಿಂಚಿಹೋದ ಕೆಲಸಕ್ಕಾಗಿ ಚಿಂತಿಸಿ ಉಪ ಯೋಗವಿಲ್ಲ. ಆದರೂ ನನ್ನ ಈ ಎರಡೂ ಉದ್ದೇಶಗಳನ್ನು ಸಾಧ್ಯಮಾಡಿ ಕೊಳ್ಳುವುದ್ದಕ್ಕಾಗಿ ಆ ತರುಣನನ್ನು ನನ್ನ ಮೋಹಜಾಲದಲ್ಲಿ ಕೆಡವಲೇ ಬೇಕು; ಆದರೆ ಅವನ ನಡತೆಯನ್ನು ನೋಡಿದರೆ, ನನ್ನ ಕಾರ್ಯಕ್ಕೆ ಯಶಸ್ಸು ದೊರೆತೀತೆಂದು ತೋರುವುದಿಲ್ಲ. ಅವನನ್ನು ನೋಡಿದೊಡನೆ ನಾನು ಮರುಳಾಗಿ ಹೋಗುತ್ತೇನೆ. ನನ್ನ ಬುದ್ಧಿಯು ಅಸ್ಥಿರವಾಗುತ್ತದೆ. ಆದ್ದರಿಂದ ಗಂಭೀರವೃತ್ತಿಯ ಆ ತರುಣನ ಮುಂದೆ, ನನ್ನ ಆಲೋಚನೆಗಳನ್ನು ಸರಿ ಯಾಗಿ ಇಡುವುದಕ್ಕೆ ನಾನು ಅಸಮರ್ಥಳಾಗಿದ್ದೇನೆ. ಇಂತಹ ತೊಡಕಿನಲ್ಲಿ ನಾನು ಮಾಡುವದಾದರೂ ಏನು?

ಇನ್ನು ಹೀಗೆಯೇ ಬಹುಕಾಲ ಮನಸ್ಸಿನಲ್ಲಿ ಕುದಿಯುತ್ತ ಕುಳಿತರೆ ಪ್ರಯೋಜನವಿಲ್ಲ. ಯಾವದಾದರೊಂದನ್ನಾದರೂ ನಿರ್ಧರಿಸಿಕೊಳ್ಳಲಿಕ್ಕೇ

ಬೇಕು. ಇಂದು ನಾನು ಹರಿಹರನನ್ನು ಕರೆಕಳುಹಿಸಿದ್ದೆನು. ಅವನು ಸಾಯಂಕಾಲದ ಸುಮಾರಕ್ಕೆ ಬರುವೆನೆಂದು ಹೇಳಿಕಳುಹಿಸಿದ್ದಾನೆ. ಇದರಿಂದ ನನ್ನ ಮನಸ್ಸಿಗೆ ತುಸು ಸಂತೋಷವಾಗಿದೆ. ನಾನಾ ತರದ ಕಾಲ್ಪನಿಕ ಸುಖದಲ್ಲಿ ನಾನು ಮುಳುಗಿ ಏಳುತ್ತಿರುವೆನು!!! ಆದರೆ ಅವನು ಇನ್ನುವರೆಗೆ ಏಕೆ ಬಂದಿರಲಿಕ್ಕಿಲ್ಲ?

ಒಮ್ಮೆಲೆ ಯಾರೋ ಬಂದ ಸಪ್ಪಳವಾಯಿತು. ಕಾಮಾಕ್ಷಿಯು ಮುಖವನ್ನೆತ್ತಿ ನೋಡಿದಳು. ಕುಮಾರನು ಬರುತ್ತಿರುವುದು ಅವಳಿಗೆ ಕಂಡುಬಂದಿತು. ಮುಂದೆ ಏನೇ ಆಗಲಿ, ಸದ್ಯಕ್ಕೆ ಹರಿಹರನ ದರ್ಶನದಿಂದ ಅವಳಿಗೆ ಆನಂದವಾಯಿತೆಂಬುದರಲ್ಲಿ ಸಂದೇಹವಿಲ್ಲ.

ಕಾಮಾಕ್ಷಿಯು ಎದ್ದುಹೋಗಿ, ಕುಮಾರನ ಕೈಯನ್ನು ಹಿಡಿಯಲು ಯತ್ನಿಸಿದಳು. ಆದರೆ ಅವಳ ಇಚ್ಛೆಯು ಪೂರ್ಣವಾಗಲಿಲ್ಲ. ಹೀಗೆ ಪರಪುರುಷರ ಕೈಹಿಡಿಯುವುದು ಸರ್ವಥಾ ಸರಿಯಲ್ಲವೆಂದು ಕುಮಾರನು ನಿಷ್ಠುರವಾಗಿ ಹೇಳಿದನು.

ಆದರೂ ಕಾಮಾಕ್ಷಿಯು ನಿರಾಶಳಾಗಲಿಲ್ಲ. ಕುಮಾರನನ್ನು ಕರೆದುಕೊಂಡು ಬಂದು, ಕಟ್ಟೆಯ ಮೇಲೆ ಕುಳ್ಳಿರಿಸಿದಳು. ತಾನೂ ಸಮೀಪದಲ್ಲಿ ಕುಳಿತುಕೊಂಡಳು. ಏನೋ ಮಾತಾಡಬೇಕೆಂದು ಮುಂದುವರಿದಳು; ಆದರೆ ಅವನ ರೂಪಕ್ಕೆ ಮೆಚ್ಚಿ ಮರುಳಾದವಳ ಬಾಯಿಂದ ಶಬ್ದಗಳೇ ಹೊರಡಲಿಲ್ಲ!!

**ಹರಿಹರ**— ಅಮ್ಮಾ, ತಾವು ನನ್ನನ್ನು ಕರೆಸಿದ್ದೇಕೆ? ಏನಾದರೂ ಇದ್ದರೆ ಅಪ್ಪಣೆಯಾಗಬೇಕು.

**ಕಾಮಾಕ್ಷಿ**— ಕುಮಾರ, ನಾನು ಒಬ್ಬ ಹೆಂಗಸು. ನಿನಗೆ ಅಪ್ಪಣೆ ಕೊಡುವ ಅಧಿಕಾರವು ನನಗಿಲ್ಲ. ನಾನು ಕೇವಲ ವಿನಂತಿರೂಪವಾಗಿ ಹೇಳಿಕೊಳ್ಳುತ್ತೇನೆ. ನೀನು ನನಗಿಂತ ಹಿರಿಯನು; ರಾಜಾನುಗ್ರಹಪಾತ್ರನು. ಮೇಲಾಗಿ ನಮ್ಮೀರ್ವರಲ್ಲಿ ಚಿರಪರಿಚಯವಿದೆ. ಹೀಗಿದ್ದ ಬಳಿಕ ನೀನು ನನ್ನೊಡನೆ ಮಾತಾಡುವಾಗ ಬಹುವಚನವನ್ನೇಕೆ ಉಪಯೋಗಿಸುವೆ? ಸಲುಗೆಯಿಂದ ಮಾತಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ನೀನು ಹೀಗೆ ಮಾಡುವೆಯಾದರೆ, ನನಗೆ ಬಹಳ ಆನಂದವಾಗುವದು.

ಹ.—ಅಮ್ಮಾ, ನಿಮಗೆ ಏನೇ ಬೇಕಾಗಲಿ, ನನ್ನ ಮನಸ್ಸು ಶಿಷ್ಟಾಚಾರವನ್ನು ಬಿಡಲಿಕ್ಕೆ ಹೇಸುವದು. ಈ ರಾಜ್ಯಕ್ಕೆ ಆಧಾರಸ್ತಂಭರೂ ವೃದ್ಧರೂ ಆದ ಸಂಗಮರವರ ಹೆಂಡಂದಿರು ತಾವು! ಕಾರಣ ನೀವು ಈ ರಾಜ್ಯದ ಯಾವತ್ತು ಪ್ರಜೆಗಳಿಂದ ಮನ್ನಣೆಯನ್ನು ಹೊಂದಲು ಯೋಗ್ಯರು! ನಾನೊಬ್ಬ ಪ್ರಜೆಯಾದ್ದರಿಂದ ನನ್ನ ಮನ್ನಣೆಗೆ ತಾವು ಪಾತ್ರರು.

ಕಾ.—ಉಳಿದ ಪ್ರಜೆಗಳು ನನ್ನ ವಿಷಯದಲ್ಲಿ ಬೇಕಾದಷ್ಟು ಮರ್ಯಾದೆಯನ್ನು ತೋರಿಸಲಿ, ನಾನದಕ್ಕೆ ಬೇಡೆನ್ನುವದಿಲ್ಲ; ಆದರೆ ನೀನು ಮಾತ್ರ ನನ್ನೊಡನೆ ಹೀಗೆ ಗೌರವದಿಂದ ವರ್ತಿಸುತ್ತಿರುವುದು ನನಗೆ ಸರಿಯಾಗಿ ಕಾಣಿಸಲೊಲ್ಲದು. ನಾನು ನಿನ್ನಲ್ಲಿ ಪ್ರೀತಿವಿಶ್ವಾಸವಿಟ್ಟು ನನ್ನವನೆಂದು ಎಣಿಸುತ್ತಿರಲು, ನೀನು ನನ್ನೊಡನೆ ಪರಕೀಯಳೊಡನೆ ನಡೆದಂತೆ ನಡೆಯುವುದು ತರವಲ್ಲ. ನಿಮ್ಮ ಹೃದಯವು ಅತಿ ಕಠಿನವಾಗಿರುತ್ತದೆಂದು ನನಗೆ ತೋರುತ್ತಿದೆ.

ಹ.—ಅಮ್ಮಾ ನಿಮಗೆ ಹೇಗೇ ತೋರಲೊಲ್ಲದೇಕೆ, ನಾನು ಈ ದೇಶದ ಪ್ರಜೆಗಳಲ್ಲೊಬ್ಬನು; ಆದುದರಿಂದ ನೀವು ನನಗೆ ಪೂಜ್ಯರು. ಕಾರಣ ನಿಮ್ಮೊಡನೆ ಮರ್ಯಾದೆಯಿಂದ ವರ್ತಿಸುವುದು ಯೋಗ್ಯವೆಂದು ನನ್ನ ಮನಸ್ಸಾಕ್ಷಿಯು ಹೇಳುತ್ತಿದೆ.

ಕಾ.—ಕುಮಾರ, ಇದು ಹೇಗೇ ಇರಲಿ, ನೀನು ಈಗ ಕೆಲವು ದಿವಸಗಳಿಂದ ರಾಜಧಾನಿಯಲ್ಲಿದ್ದಂತೆ ಕಂಡುಬರಲಿಲ್ಲ. ಎಲ್ಲಿ ಹೋಗಿದ್ದೆ? ಈ ಅವಧಿಯಲ್ಲಿ ನಾನು ಎರಡು-ಮೂರು ಸಾರೆ ನಿನ್ನನ್ನು ಕರೆಕಳುಹಿಸಿದ್ದೆನು. ನೀನು ಎಲ್ಲಿಯೋ ಹೋಗಿರುವೆಯೆಂದು ದಾಸಿಯರು ನನಗೆ ಹೇಳಿದರು.

ಹ.—ಅಹುದು, ನಾನು ರಾಜಧಾನಿಯಲ್ಲಿರಲಿಲ್ಲ.

ಕಾ.—ಎಲ್ಲಿಗೆ ಹೋಗಿದ್ದೆಯೆಂಬುದನ್ನು ಹೇಳಲಿಕ್ಕಾಗದೇನು?

ಹ.—ಅದನ್ನು ತೆಗೆದುಕೊಂಡು ನೀವು ಮಾಡುವುದೇನು?

ಕಾ.—ನನಗದರ ಅವಶ್ಯಕತೆಯುಂಟು. ಹೇಳಿದರೇನಾಗುವದು?

ಹ.—ಹೇಳಲಿಕ್ಕೆ ಅಡ್ಡಿಯಿಲ್ಲ. ಆದರೂ ನೀವು ಸ್ತ್ರೀಯರು. ಪರಪುರುಷರ ಸುದ್ದಿಯನ್ನು ತೆಗೆದುಕೊಂಡು ಮಾಡುವದೇನು? ತಾವು ಈ ವಿಷಯದಲ್ಲಿ ಹೆಚ್ಚಿಗೆ ಚಿಕಿತ್ಸೆ ಮಾಡದಿರುವುದು ಒಳಿತಾದುದು.

**ಕಾ.**—ನೀನು ಪರಕೀಯನೆಂದು ನಾನು ಸರ್ವಥಾ ಎಣಿಸಿಲ್ಲ. ನನ್ನ ಹೆಗ್ಗೋರಿಕೆಯನ್ನೂ ಗುಪ್ತಕಾರಸ್ಥಾನವನ್ನೂ ನಿನಗೆ ನಾನು ತಿಳಿಸಿಲ್ಲವೆ? ಅಬಲೆಯಾದ ನಾನು ನಿನ್ನನ್ನು ನಂಬಿದ್ದು ನೀನು ನನ್ನನ್ನು ನೆಚ್ಚದಿರುವುದು ನ್ಯಾಯವೇ? ನಿನಗೆ ಬೇಕಾದ್ದನ್ನು ಕೊಡಲು ನಾನು ಸಿದ್ಧಳಿದ್ದೇನೆ. ನನ್ನಿಂದೇನಾದರೂ ಸಾಹಾಯವಾಗುವಂತಿದ್ದರೆ, ನಾನು ನಿನಗೆ ತಪ್ಪದೆ ಅದನ್ನು ಮಾಡುವೆನು.

**ಹ.**—ಅಮ್ಮಾ, ನಿಮ್ಮಿಂದ ನನಗೆ ಏನೂ ಬೇಕಾಗಿಲ್ಲ. ನಿಮ್ಮ ಸಾಹಾಯವು ನನಗೆ ಬೇಡ. ನಾನು ನನ್ನ ಸ್ವಂತದ ಕೆಲಸಕ್ಕಾಗಿ ಹೋಗಬೇಕಾಗಿದ್ದಿತು. ಅದಕ್ಕಾಗಿ ಹೋಗಿ, ಆ ಕೆಲಸವನ್ನು ಮುಗಿಸಿಕೊಂಡು ಬಂದೆನು.

**ಕಾ.**—ಅದೇನು ರಾಜಕಾರಣದ ಕೆಲಸವಲ್ಲವಷ್ಟೇ?

**ಹ.**—ಅಲ್ಲ.

**ಕಾ.**—ಹಾಗಾದರೆ ಹೇಳುವ ಇಚ್ಛೆಯು ನಿನಗಿರದಿದ್ದರೆ ಬಿಟ್ಟುಬಿಡು.

**ಹ.**—ಅಮ್ಮಾ, ನಾನೊಂದು ಮಾತು ಕೇಳುವೆನು. ಹೇಳುವಿರಾ?

**ಕಾ.**—ಕುಮಾರ, ಹೇಳದೇನು? ಬೇಕಾದ ಸಂಗತಿಯನ್ನು ಕೇಳು. ನಾನು ನಿನ್ನವಳೆಂದು ತಿಳಿ.

**ಹ.**—ನಿಮ್ಮ ಆ ಚತುರಳಾದ ದಾಸಿಯು ಊರಲ್ಲಿಲ್ಲವಾಗಿ ಕಾಣಿಸುತ್ತದೆ. ಅವಳೆಲ್ಲಿ ಹೋಗಿರುವಳು?

**ಕಾ.**—ಅವಳನ್ನು ನಾನು ಒಂದು ಕೆಲಸಕ್ಕಾಗಿ ದೂರ ದೇಶಕ್ಕೆ ಕಳುಹಿಸಿದ್ದೇನೆ.

**ಹ.**—ಅಂಥ ಕೆಲಸವಾದರೂ ಯಾವುದು?

**ಕಾ.**—ಮತ್ತಾವದು? ರಾಜಕಾರಣ.

**ಹ.**—ಅದಾವ ರಾಜಕಾರಣ? ಅವಳನ್ನೆಲ್ಲಿಗೆ ಕಳುಹಿಸಿದ್ದೀರಿ?

**ಕಾ.**—ಈ ಬಗ್ಗೆ ನಾನು ಈಗಲೇ ಉತ್ತರವನ್ನು ಹೇಳಲಾರೆನು. ನೀನು ನನ್ನವನಾಗುವ ವರೆಗೆ ಅದನ್ನು ತಿಳಿಸಲಾರೆನು.

**ಹ.**—ಅದೇಕೆ?

**ಕಾ.**—ಅವಳೆಲ್ಲಿ ಹೋಗಿರುವಳೋ, ಏನು ಮಾಡುತ್ತಿರುವಳೋ ನಾನ ದನ್ನು ಅರಿಯೆನು. ಅವಳು ಬಂದನಂತರ ಎಲ್ಲವೂ ತಿಳಿಯುವದು.

**ಹ.**—ತಾವು ಅವಳನ್ನು ಕಳಿಸಿದ್ದಾದರೂ ಏತಕ್ಕೆ?

**ಕಾ.**—ನಾನು ಮಹಾರಾಣಿಯಾಗಲಿಕ್ಕೆ ಅನುಕೂಲವಾದ ಸಂಗತಿಗ ಳನ್ನು ಜರಗಿಸುವದಕ್ಕೆ.

**ಹ.**—ದಿಲ್ಲಿಗೆ ಹೋಗಿರುವಳೇನು ?

**ಕಾ.**—ಹೋಗಿರಬಹುದು. ಕುಮಾರ, ಗಂಡಸರು ಮಹಾವಂಚಕರು. ನೀನು ನನ್ನಿಂದ ಎಲ್ಲವನ್ನು ಕೇಳಿಕೊಂಡೆ. ನಾನೊಂದನ್ನು ಕೇಳಿದರೆ ಹೇಳ ಲಿಲ್ಲ. ಇದಕ್ಕೇನೆನ್ನ ಬೇಕು ?

**ಹ.**—ಅಮ್ಮಾ, ನಾನೇನೂ ಅಂಥ ಮಹತ್ವದ ಕೆಲಸಕ್ಕೆ ಹೋಗಿರಲಿಲ್ಲ. ಅದಕ್ಕಾಗಿ ಹೇಳಲಿಲ್ಲ.

**ಕಾ.**—ಕುಮಾರ, ಆದಿರಲಿ ಬಿಡು. ಈಗ ನಾನೊಂದು ಮಹತ್ವದ ಮಾತನ್ನು ಹೇಳತಕ್ಕವಳಿರುವೆನು.

**ಹ.**—ಅದೇನು ಹೇಳಬಹುದು.

**ಕಾ.**—ಹೇಳಲಿಕ್ಕೆ ನಾಚಿಕೆಯಾಗುತ್ತಿರುವದು. ಆದರೂ ನಿರ್ವಾಹವಿ ಲ್ಲದಾಗಿದೆ, (ಎಂದು ಕಾಮಾಕ್ಷಿಯು ಶೃಂಗಾರ ಚೇಷ್ಟೆಗಳನ್ನಭಿನಯಿಸತೊ ಡಗಿದಳು.)

**ಹ.**—ಅಮ್ಮಾ, ಅಂಥ ಮಾತಾದರೂ ಯಾವದು ? ನಾಚಿಕೆ ಬರುವಂ ತಿದ್ದರೆ, ಹೇಳುವದನ್ನೇ ಬಿಟ್ಟುಬಿಟ್ಟರಾಯಿತಲ್ಲ !

**ಕಾ.**—ಕುಮಾರ, ನೋಡು, ಸಂಧ್ಯಾಕಾಲದ ಅಂಧಕಾರವು ಎಲ್ಲಕಡೆ ಯಲ್ಲಿಯೂ ಹಬ್ಬಿದಂತೆ, ಭವದೀಯ ವಿರಹವು ನನ್ನ ಹೃದಯವನ್ನೆಲ್ಲ ವ್ಯಾಪಿ ಸಿಬಿಟ್ಟದೆ. ಕುಮುದಿನಿಯು ಚಂದ್ರನ ಮಾರ್ಗಪ್ರತೀಕ್ಷೆ ಮಾಡುತ್ತಿರುವಂತೆ, ನಾನು ನಿನ್ನ ಹಾದಿ ನೋಡುತ್ತಿದ್ದೆನು. ನೀನು ಬಂದು ನನ್ನನ್ನಾನಂದ ಪಡಿ ಸಿದೆ. ಆದರೆ ಇಷ್ಟರಿಂದಲೇ ನನ್ನ ಹೃದಯವು ಶಾಂತವಾಗಲಾರದು. ಅದು ಕೇವಲ ನಿನ್ನ ಪ್ರೇಮಾಲಿಂಗನಕ್ಕಾಗಿ ಹಪಾಪಿಸಿದೆ. ನೀನು ನನ್ನ ಕಾಮವನ್ನು ಪೂರೈಸಿ ನನ್ನನ್ನು ನಿನ್ನ ದಾಸಿಯಾಗಿ ಮಾಡಿಕೊ.

ಹು.—ಅಮ್ಮಾ, ತಾವು ಇದೇನು ಮಾತಾಡುತ್ತಿರುವಿರಿ? ನಾನು ನಿಮಗೆ ಮಗನ ಸಮಾನನು. ಹೀಗಿರಲು ನೀವು ನನ್ನ ವಿಷಯದಲ್ಲಿ ಕಾಮವಾಸನೆಯನ್ನು ತಾಳುವುದು ಅತೀವ ಗರ್ಹಣೀಯವು. ಆದುದರಿಂದ ಈ ಮಾತನ್ನು ಬಿಟ್ಟುಬಿಡಿರಿ.

ಕಾ.—ಕುಮಾರ, ಹಾಗಾಗುವಂತಿಲ್ಲ! ಹೃದಯದಲ್ಲಿ ಬಹು ದಿವಸಗಳಿಂದ ಪೋಷಿಸಿಕೊಂಡಿದ್ದ ಆಶೆಯನ್ನು ತ್ಯಜಿಸಲಾರೆನು. ನಾನದನ್ನು ಯಾವ ರೀತಿಯಿಂದಾದರೂ ಸಾಧ್ಯಮಾಡಿಕೊಳ್ಳದೆ ಬಿಡೆನು. ನೀನು ಸುಮ್ಮನೆ ನನ್ನ ಮಾತಿಗೆ ಒಡಂಬಡುವೆಯಾದರೆ, ನಿನ್ನ ಕಲ್ಯಾಣವಾಗುವದು, ನನ್ನ ಸರ್ವಸ್ವವೂ ದೇಹವೂ ನಿನ್ನವಾಗುವವು. ಇಲ್ಲವಾದರೆ ಬಹಳ ಅನರ್ಥಕ್ಕೊಳಗಾಗುವೆ. ನಾನು ಅಬಲೆಯಾದರೂ ನನ್ನ ಇಚ್ಛೆಯು ಅತಿ ಬಲಿಷ್ಠವಾಗಿರುತ್ತದೆ.

ಹು.—ಎಂತಹ ಮನುಷ್ಯಳು ನೀನು! ಈ ರಾಜ್ಯದ ಅತಿ ಗೌರವವುಳ್ಳ ಪ್ರಧಾನಿಗಳ ಹೆಂಡತಿಯಾಗಿ, ಈ ತರದ ಜಾರಿಣಿಯಾಗಲಿಕ್ಕೆ ನಿನಗೆ ನಾಚಿಕೆಯಾದರೂ ಹೇಗೆ ಬರುವದಿಲ್ಲ? ನಿನಗಿದು ಎಷ್ಟು ಮಾತ್ರವೂ ತರವಲ್ಲ!

ಕಾ.—ಒಳಿತು-ಹೀನಗಳನ್ನು ವಿಚಾರಿಸುವ ಶಕ್ತಿಯು ನನ್ನಲ್ಲಿಲ್ಲ. ನಾನು ನಿನಗೆ ಮೋಹಿತಳಾಗಿ ಹೋಗಿದ್ದೇನೆ—ದಯವಿಟ್ಟು ನನ್ನನ್ನು ಸ್ವೀಕರಿಸು. (ಎಂದು ಅಪ್ಪಿಕೊಳ್ಳಲಿಕ್ಕೆ ಮುಂದರಿಸುತ್ತಾಳೆ.)

ಹು.—(ಆಕೆಯನ್ನು ಹಿಂದಕ್ಕೆ ಸರಿಸಿ) ಛೀ! ದುಷ್ಟಳೆ! ಇನ್ನೊಮ್ಮೆ ಹೀಗೆ ಮಾತಾಡ ಬೇಡ! ಈ ಕಾಮವಾಸನೆಯನ್ನು ನೀನು ನಿನ್ನ ಪತಿಯಲ್ಲಿರಿಸು. ಅಂದರೆ ದೇವರು ನಿನಗೆ ಮೆಚ್ಚುವನು.

ಕಾ.—ಕುಮಾರ, ನೀನು ಹೀಗೆ ನನ್ನನ್ನು ತಿರಸ್ಕರಿಸುವುದು ಒಳಿತಲ್ಲ! ನಾನು ಸಾಮಾನ್ಯ ಸ್ತ್ರೀಯಳಿರುವೆನೆಂದು ಎಣಿಸಿರುವೆಯೇನು? ನೀನು ನನ್ನ ಇಚ್ಛೆಯಂತೆ ನಡೆಯುವೆಯಾದರೆ, ನಾನು ನಿನ್ನನ್ನು ಈ ರಾಜ್ಯದ ಸ್ವಾಮಿಯಾಗಿ ಮಾಡುವೆನು.

ಹು.—ಬೇಡ, ನಿನ್ನ ರಾಜ್ಯವು ನನಗೆ ಬೇಕಾಗಿಲ್ಲ! ನಿನಗೂ ನಿನ್ನ ರಾಜ್ಯಕ್ಕೂ ಧಿಕ್ಕಾರವಿರಲಿ!! ದುಷ್ಟಳೇ, ನಿನ್ನ ಇಷ್ಟಾರ್ಥಗಳು ಸೃಷ್ಟಿಕರ್ತನ ದಯೆಯಿಂದ ನಷ್ಟವಾಗಿ ಹೋಗಲಿ!!! ಎಂದು ಹೇಳಿ ಕುಮಾರನು ಹೊರಟು

ಹೋದನು. ಕಾಮಾಕ್ಷಿಯು ಅವನನ್ನು ಹಿಡಿಯಲು ಯತ್ನಿಸಿದಳು; ಆದರೆ ಅದು ಸಾಧ್ಯವಾಗಲಿಲ್ಲ. ಅವಳು ಪುನಃ ಕಟ್ಟೆಯ ಮೇಲೆ ಬಂದು ಕುಳಿತು, ಹೃದಯವ್ಯಥೆಯಿಂದ ನಾನಾ ತರದ ಆಲೋಚನೆಗಳನ್ನು ಮಾಡತೊಡಗಿದಳು. ಅದರಿಂದವಳ ಮನಸ್ಸು ಶಾಂತವಾಗಲಿಲ್ಲ. ಕಡೆಗವಳು ಎದ್ದು ಹೋಗಿ, ತನ್ನ ಕೋಣೆಯಲ್ಲಿಯ ಹಾಸುಗೆಯ ಮೇಲೆ ಬಿದ್ದುಕೊಂಡಳು. ಆದರೂ ಅವಳ ಮನೋವ್ಯಥೆಯು ಕಡಿಮೆಯಾಗಲಿಲ್ಲ.

* * * * *

ಆಕಾಶದಲ್ಲಿ ತದಿಗೆಯ ಚಂದ್ರನು ಉದಿತನಾಗಿದ್ದಾನೆ. ಅವನ ಕ್ಷೀಣವಾದುದೊಂದು ಆಲೋಕರೇಖೆಯು ಕಾಮಾಕ್ಷಿಯ ಮುಖದ ಮೇಲೆ ಬಿದ್ದಿದೆ. ಕಾಮಾಕ್ಷಿಯು ಹಾಸಿಗೆಯಲ್ಲಿ ಹೊರಳಾಡುತ್ತ ತಳಮಳಿಸುತ್ತಿದ್ದಾಳೆ. ಈ ಸಮಯದಲ್ಲಿ ಒಬ್ಬ ದಾಸಿಯು ಕೋಣೆಯೊಳಗೆ ಬಂದು ತನ್ನ ಒಡೆಯಳ ಈ ಹಾಡನ್ನು ನೋಡಿದಳು; ಯಾವದೋ ಒಂದು ಕಾರಣದಿಂದ ಒಡತಿಗೆ ಬಹಳ ಅಸಮಾಧಾನವಾಗಿದೆಯೆಂಬುದನ್ನು ಕಂಡು ಅವಳು ಈಗ ಅವಳಿಗೆ ಭೆಟ್ಟಿಯಾಗುವುದು ಸರಿಯಲ್ಲೆಂದು ಎಣಿಸಿದಳು; ಆದರೆ ಅವಳ ಮನಸ್ಸಿನಲ್ಲಿ ತನ್ನ ಒಡತಿಯನ್ನು ಬೇಗನೆ ಕಂಡು ತಾನು ಮಾಡಿದ ಶತಕೃತ್ಯವನ್ನು ತಿಳಿಸಿ ಬಹುಮಾನ ಹೊಂದಬೇಕು ಎಂಬ ಉಬ್ಬು ಅವಳಿಗೆ ಬಹಳವಾಗಿತ್ತು. ಆದ್ದರಿಂದ ಅವಳು ಕಾಮಾಕ್ಷಿಯ ಹತ್ತರ ಹೋಗಿ ನಿಂತು—ಅಮ್ಮನವರೇ, ಎಂದು ಮೃದುಸ್ವರದಿಂದ ಒದರಿದಳು.

ಕಾಮಾಕ್ಷಿಯು ದಾಸಿಯನ್ನು ನೋಡಿ, ಅವಳಿಗೆ ಸಮೀಪದಲ್ಲಿ ಕುಳಿತುಕೊಳ್ಳುವುದಕ್ಕೆ ಹೇಳಿದಳು. ದಾಸಿಯು ತಂದ ವರ್ತಮಾನವನ್ನು ಕೇಳುವ ಕುತೂಹಲವು ಅವಳಿಗಾಯಿತು; ಆದರೆ ಅಸಹ್ಯವಾದ ಮನೋವ್ಯಥೆಯ ಮೂಲಕ ಅವಳಿಂದ ಮಾತಾಡುವುದಾಗಲಿಲ್ಲ.

ದಾಸಿ—ಅಮ್ಮನವರೆ, ತಾವು ಇಂದು ಇಷ್ಟೊಂದು ತಲ್ಲಣಿಸುವ ಕಾರಣವೇನು? ತಮ್ಮ ಮುಖವನ್ನು ನೋಡಿದರೆ, ಯಾವದೋ ಒಂದು ಕೇಡು ಒದಗಿದೆ ಎಂದು ಕಂಡುಬರುತ್ತದೆ. ಏನಾದರೂ ಜಾಡ್ಯವಾಗಿರುವುದೇನು? ಹೇಳಿದರೆ ನಿವಾರಣೆಯ ಉಪಾಯವನ್ನು ಮಾಡಲು ಈ ದಾಸಿಯು ಸಿದ್ಧಳಿರುವಳು.

ಕಾಮಾಕ್ಷಿಯು ತನ್ನ ಕಾಮಬಾಧೆಯನ್ನು ಮುಚ್ಚಿಡುವ ಉದ್ದೇಶದಿಂದ ಮುಖದಲ್ಲಿ ಸಾಧ್ಯವಾದಷ್ಟು ಪ್ರಸನ್ನತೆಯನ್ನು ತಂದುಕೊಂಡು—ಚತುರಿಕೆ, ನನಗೇನೂ ಆಗಿಲ್ಲ. ನೀನು ಯಾವಾಗ ಬಂದೆ? ಏನೇನು ಕೆಲಸ ಮಾಡಿದೆ ಹೇಳು, ನೋಡೋಣ, ಎಂದು ಕೇಳಿದಳು.

ದಾ.—ಅಮ್ಮನವರೆ, ನಾನು ಇಂದೇ ಸಾಯಂಕಾಲಕ್ಕೆ ಬಂದೆನು; ಕೂಡಲೇ ತಮ್ಮ ದರ್ಶನಕ್ಕಾಗಿ ಇಲ್ಲಿಗೆ ಓಡಿ ಬಂದಿದ್ದೇನೆ. ಈಗ ತಮ್ಮ ಮನಸ್ಸಿನ ಸ್ಥಿತಿಯು ಚೆನ್ನಾಗಿರದಲ್ಲಿ, ಮಲಗಿಕೊಳ್ಳಬೇಕು. ನಾಳೆ ಮುಂಜಾವಿನಲ್ಲಿ ನಾನು ನನ್ನ ಸುದ್ದಿಯನ್ನು ಹೇಳುವೆನು.

ಕಾ.—ಇಲ್ಲ, ಈಗಲೇ ಹೇಳು. ಕೇಳುವ ಲವಲವಿಕೆಯು ನನಗೆ ಬಹಳವಾಗಿದೆ.

ದಾ.—ನಾನು ಹೇಳತಕ್ಕದ್ದು ಬಹಳವಾಗಿದೆ. ತಮ್ಮ ದೇಹಕ್ಕೆ ಸ್ವಾಸ್ಥ್ಯವಿದ್ದಂತೆ ತೋರುವುದಿಲ್ಲ.

ಕಾ.—ಎಷ್ಟೇ ಇರಲೊಲ್ಲದೇಕೆ; ಹೇಳು, ನೋಡೋಣ.

ದಾ.—ನಾನು ಇಲ್ಲಿಂದ ಮೊದಲು ನೆಟ್ಟಗೆ ದಿಲ್ಲಿಗೆ ಹೋದೆನು; ಫಕೀರನ ವೇಷವನ್ನು ಹಾಕಿಕೊಂಡು ಬಾದಶಹನ ದರಬಾರನ್ನು ಪ್ರವೇಶಿಸಿದೆನು.

ಕಾ. (ಆಶ್ಚರ್ಯಾನ್ವಿತಳಾಗಿ)—ಏನು! ಬಾದಶಹನ ದರಬಾರಿಗೆ ಹೋಗಿದ್ದೆಯಾ? ಅಲ್ಲಿ ನಿನ್ನನ್ನು ಯಾರೂ ಗುರುತಿಸಲಿಲ್ಲವೇ?

ದಾ.—ಅಮ್ಮಾ, ಅಲ್ಲಿ ನನ್ನನ್ನು ಗುರ್ತಿಸುವರಾರು? ಗುರ್ತಿಸುವಂತೆ ವೇಷಹಾಕಲಿಕ್ಕೆ ನಾನು ಹೆಡ್ಡಳೇ?

ಕಾ.—ಮುಂದೇನು ಮಾಡಿದೆ?

ದಾ.—ನಾನು ಸಮಯಾವರಿತು ಬಾದಶಹನ ಮನಸ್ಸಿನಲ್ಲಿ ರಾಜಕುಮಾರಿಯ ವಿಷಯವಾಗಿ ಕ್ರೋಧವನ್ನುಂಟುಮಾಡಿದೆನು.

ಕಾ.—ಅದು ಹೇಗೆ?

ದಾಸಿಯು ಕಾಮಾಕ್ಷಿಗೆ ದರಬಾರಿನಲ್ಲಿ ತಾನು ಮಾಡಿದ ಕೆಲಸವನ್ನು ಹೇಳಿದಳು; ಆದರೆ ತನ್ನ ವಿರುದ್ಧವಾಗಿ ಬೇರೊಬ್ಬ ಫಕೀರನು ಮಾಡಿದ ಕೆಲಸವನ್ನು ಹೇಳಲಿಲ್ಲ. ಕಡೆಗೆ ಅವಳು—ಬಾದಶಹನು ಸಿಟ್ಟಿನಿಂದ ಸಂತಪ್ತ

ನಾಗಿ ತೀವ್ರವೇ ಆನೆಗುಂದಿಯ ಮೇಲೆ ದಂಡೆತ್ತಿ ಬರತಕ್ಕವನಿರುವನು, ಎಂದು ಹೇಳಿದಳು.

ಕಾ.—ಎಂದು ಬರತಕ್ಕವನಿದ್ದಾನೆ?

ದಾ.—ಅದನ್ನು ನಿಶ್ಚಯವಾಗಿ ಹೇಳಲಿಕ್ಕೆ ಬರುವಂತಿಲ್ಲ; ಆದರೂ ತೀವ್ರವೇ ಬರತಕ್ಕವನಿರುವನೆಂಬುದರಲ್ಲಿ ಸಂದೇಹವಿಲ್ಲ.

ಕಾ.—ಚತುರಿಕೆ, ನೀನು ನಿಜವಾಗಿಯೂ ನಿನ್ನ ಹೆಸರಿನಂತೆ ಮಹಾ ಚತುರೆಯಾಗಿರುವೆ. ತಾಯಿತಂದೆಗಳು ನಿನಗೆ ತಕ್ಕ ಹೆಸರನ್ನಿಟ್ಟಿದ್ದಾರೆ. ಮತ್ತೇನು ಮಾಡಿದೆ ಹೇಳು.

ಚ.—ನಾನು ಬೇಗಮಳ ದರ್ಶನವನ್ನು ತೆಗೆದುಕೊಂಡು, ಅವಳಿಗೆ ನಿಮ್ಮ ಮನೋಗತವನ್ನು ತಿಳುಹಿಸಿದೆನು. ಬೇಗಮಳು ನಿಮ್ಮ ಇಚ್ಛೆಯಂತೆ ಮಾಡಲಿಕ್ಕೆ ಒಪ್ಪಿಗೆಯನ್ನು ಕೊಟ್ಟಿರುವಳು.

ಕಾ.—ಬಹಳ ಚೆನ್ನಾಗಿ ಮಾಡಿದೆ. ನಾನು ನಿನಗಾಗಿ ಈ ಬಹುಮೂಲ್ಯ ರತ್ನಹಾರವನ್ನು ಮಾಡಿಸಿಟ್ಟಿದ್ದೇನೆ. ಇಗೋ, ತೆಗೆದುಕೊಳ್ಳು, ಎಂದು ಹೇಳಿ, ಕಾಮಾಕ್ಷಿಯು ತನ್ನ ಕೊರಳಲ್ಲಿಯ ರತ್ನಹಾರವನ್ನು ತೆಗೆದು, ದಾಸಿಯ ಕಂಠದಲ್ಲಿ ಹಾಕಿದಳು. ದಾಸಿಗೆ ಅತ್ಯಾನಂದವಾಯಿತು. ಅವಳು—ಅಮ್ಮನವರೆ, ಬಾದಶಹನು ಇಷ್ಟರಲ್ಲಿಯೇ ಇಲ್ಲಿಗೆ ದಂಡೆತ್ತಿ ಬರತಕ್ಕವನಿದ್ದನು; ಆದರೆ ಅವನ ಅಣ್ಣನ ಮಗನಾದ ಬಹಾಉದ್ದೀನನು ಬಂಗಾಲದಲ್ಲಿ ಬಂಡಾಯವನ್ನೆಬ್ಬಿಸಿದ ಸುದ್ದಿಯು ಅವನಿಗೆ ತಿಳಿದುದರಿಂದ ಅವನು ಅತ್ತಕಡೆಗೆ ದಂಡೆತ್ತಿ ಹೋಗುವ ಜೋಡಣೆಯಲ್ಲಿದ್ದನು. ಇದರಿಂದ ಬಾದಶಹನು ಇಲ್ಲಿಗೆ ಬರುವುದಕ್ಕೆ ತಡವಾಗುವಂತಿತ್ತು. ಹೀಗಾಗಬಾರದೆಂದು ಆಲೋಚಿಸಿ, ನಾನು ಬಂಗಾಲಕ್ಕೆ ಹೋಗಿ ಬಾದಶಹನ ಅಣ್ಣನ ಮಗನನ್ನು ಕಂಡು ಅವನು ಕಂಪಿಲದಲ್ಲಿದ್ದ ರಾಯಿಯ ಆಶ್ರಯ ಹೊಂದುವಂತೆ ಮಾಡಿ, ಆ ಸುದ್ದಿಯು ಬಾದಶಹನಿಗೆ ತಿಳಿಯುವಂತೆಯೂ ಮಾಡಿದ್ದೇನೆ. ಇದರಿಂದ ಬಾದಶಹನು ನೆಟ್ಟಗೆ ಕಂಪಿಲದ ಮೇಲೆ ಸಾಗಿಬರುವನು. ತರುವಾಯ ಇಲ್ಲಿಗೆ ದಂಡೆತ್ತಿ ಬರುವನು. ಕಂಪಿಲವಂತೂ ಒಂದೆರಡು ದಿವಸಗಳಲ್ಲಿ ಬಾದಶಹನ ಕಯ್ಸೇರುವದು. ಈ ಪಟ್ಟಣವೂ ಬಾದಶಹನ ವಶವಾಗಲಿಕ್ಕೆ ತಡಹತ್ತುವಂತಿಲ್ಲ, ಎಂದು ನಗೆಮೊಗದಿಂದ ಹೇಳಿದಳು.

ಕಾ.—ಈ ಸಮಯದಲ್ಲಿ ನಾವು ನಮ್ಮ ಬಯಕೆಯನ್ನು ಹೇಗೆ ಪೂರೈಸಿ ಕೊಳ್ಳಬೇಕು? ನನಗಾದರೋ ಏನೂ ತಿಳಿಯದಾಗಿದೆ. ನಾನು ನಿನ್ನನ್ನೇ ನಂಬಿದ್ದೇನೆ.

ಚ.—ಅಮ್ಮನವರೆ, ನೀವು ಇದಕ್ಕಾಗಿ ಉಮ್ಮಳಿಸಬೇಡಿರಿ. ನಾನು ಎಲ್ಲ ಏರ್ಪಾಡು ಮಾಡಿದ್ದೇನೆ. ಬಾದಶಹನು ಬೇಗಮಳೊಡನೆ ಇಲ್ಲಿಗೆ ಬರುವನು. ಬಾದಶಹನಿಗೆ ಈ ರಾಜ್ಯವನ್ನಾಳುವ ಇಚ್ಛೆಯಿಲ್ಲ. ಅವನು ಕೇವಲ ರಾಜಕುಮಾರಿಯನ್ನು ಶಿಕ್ಷಿಸುವದಕ್ಕಾಗಿ ಬರುತ್ತಿರುವನು. ಅವನು ಈ ಕೆಲಸವನ್ನು ಮುಗಿಸಿಕೊಂಡು, ಸಿಕ್ಕಷ್ಟು ಸುಲಿಗೆಯನ್ನು ಎತ್ತಿಕೊಂಡು ಹೊರಟು ಹೋಗುವನು. ಹೋಗುವ ಸಮಯದಲ್ಲಿ ಈ ರಾಜ್ಯದ ಅಧಿಕಾರವನ್ನು ತಮಗೆ ಒಪ್ಪಿಸಲಿಕ್ಕೆ ಬಾದಶಹನನ್ನು ಪ್ರೇರಿಸುವೆನೆಂದು ಬೇಗಮಳು ವಚನ ಕೊಟ್ಟಿದ್ದಾಳೆ.

ಕಾ. (ಅತಿಸಂತುಷ್ಟಳಾಗಿ)—ಹಾಗಾದರೆ ಎಲ್ಲ ಕೆಲಸವನ್ನು ನೀನೇ ಮಾಡಿದಂತಾಯಿತಲ್ಲ! ನಾನು ಮಾಡತಕ್ಕದ್ದು ಏನೂ ಇಲ್ಲವಷ್ಟೇ? ಬಹಳ ಒಳಿತಾಯಿತು. ನಾನಿನ್ನು ಯಾವ ತೊಂದರೆಯೂ ಇಲ್ಲದೆ ಈ ರಾಜ್ಯದ ಮಹಾರಾಣಿಯಾಗುವೆನು. ಚತುರಿಕೆ, ಇದಕ್ಕಾಗಿ ನಾನು ನಿನಗೆ ಬಹಳ ಪಾರಿತೋಷಕವನ್ನು ಕೊಡುವೆನು.

ಚ.—ನೀವು ಮಹಾರಾಣಿಯರಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಇನ್ನು ಒಂದೆರಡು ಕೆಲಸಗಳನ್ನು ನೀವು ಮಾಡಬೇಕು.

ಕಾ.—ಅವೇನು? ಬೇಗನೆ ಹೇಳು.

ಚ.—ಕಂಪಿಲದ ರಾಯಿಯು ಈ ರಾಜ್ಯದ ಸಹಾಯವನ್ನು ಅಪೇಕ್ಷಿಸುವನು. ಅವನ ಸಹಾಯಕ್ಕೆ ದಂಡು ಕಳುಹಿಸಲು ಒಪ್ಪಬೇಕು; ಆದರೆ ಇಲ್ಲಿಂದ ಹೋಗತಕ್ಕ ಸೈನ್ಯವು ರಾಯಿಯ ಉಪಯೋಗಕ್ಕೆ ಬೀಳಬಾರದು. ಬಾದಶಹನು ಕಂಪಿಲವನ್ನು ಕೈವಶಮಾಡಿಕೊಂಡ ಬಳಿಕ, ಈ ಸೈನ್ಯವು ಅಲ್ಲಿಗೆ ಹೋಗಬೇಕು. ಇದರಿಂದ ಕಂಪಿಲವು ತೀವ್ರ ಹಾಳಾಗುವದು; ಇಲ್ಲಿಂದ ಹೋದ ಸೈನ್ಯವೂ ನಾಶವಾಗುವದು. ತರುವಾಯ ಬಾದಶಹನು ಈ ಪಟ್ಟಣಕ್ಕೆ ಬರುವನು. ಮೊದಲೇ ಈ ರಾಜ್ಯದಲ್ಲಿ ಬಾದಶಹನನ್ನು ಎದುರಿಸು

ವಷ್ಟು ಸಾಮರ್ಥ್ಯವಿಲ್ಲ. ಈ ರಾಜ್ಯದ ಸೈನ್ಯದ ಕೆಲಭಾಗವು ಹೀಗೆ ನಿರರ್ಥಕವಾಗಿ ನಾಶವಾಯಿತೆಂದರೆ, ಬಾದಶಹನು ಈ ಪಟ್ಟಣವನ್ನು ಅನಾಯಾಸವಾಗಿ ಹಿಡಿದುಕೊಳ್ಳುವನು. ಆ ಮೇಲೆ ನಾವು ಬೇಗನೆ ದರ್ಶನವನ್ನು ತೆಗೆದುಕೊಳ್ಳೋಣ; ನಾವು ಮಾಡಿದ ಕೆಲಸಗಳನ್ನು ಹೇಳೋಣ. ಹೀಗೆ ಮಾಡಿದ್ದಾದರೆ ನಿಮ್ಮ ಉದ್ದೇಶವು ಸಂಪೂರ್ಣವಾಗಿ ಸಾಧ್ಯವಾಗುವದು. ಪ್ರಧಾನರಿಗೆ ಇಲ್ಲದ್ದೊಂದು ಹೇಳಿ, ಇಷ್ಟು ಕೆಲಸವನ್ನು ಮಾಡಿಸುವ ಭಾರವು ನಿಮ್ಮನ್ನು ಕೂಡಿದೆ.

ಕಾ. — ಇದರಲ್ಲೇನಿದೆ? ನಾನು ಸುಲಭವಾಗಿ ಈ ಕೆಲಸವನ್ನು ಮಾಡಬಲ್ಲೆನು.

ಚ. — ಹಾಗಾದರೆ, ನೀವು ನಿಶ್ಚಯವಾಗಿಯೂ ಆನೆಗುಂದಿಯ ಮಹಾರಾಣಿಯರಾಗುವಿರಿ.

ಕಾಮಾಕ್ಷಿಯು ಆನಂದಭರದಿಂದ ಎದ್ದು ದಾಸಿಯನ್ನು ಅಪ್ಪಿಕೊಂಡಳು. ದಾಸಿಯು ಒಡೆಯಳ ಅಪ್ಪಣೆ ಪಡೆದು ಬೇರೆ ಕಡೆಗೆ ಹೋದಳು. ಕಾಮಾಕ್ಷಿಯು ಕಾಲ್ಪನಿಕಮಹಾರಾಣಿಯಾಗಿ ಏನೇನೋ ಆಳೆದುಹಾಕತೊಡಗಿದಳು.

## ಹದಿಮೂರನೆಯ ಅಧ್ಯಾಯ

### ಕರ್ನಾಟಕದಲ್ಲಿಯ ಜೋಹಾರ

ಕೃಷ್ಣಪಕ್ಷದ ಮಧ್ಯರಾತ್ರಿಯ ಸಮಯವು. ಘೋರವಾದ ಅಂಧಕಾರವು ಎಲ್ಲೆಡೆಯಲ್ಲಿ ಹಬ್ಬಿದೆ. ಜಗತ್ತಿನಲ್ಲಿಯ ಸಕಲ ಪ್ರಾಣಿಗಳು ಗಾಢವಾದ ನಿದ್ರೆಯಲ್ಲಿರುವ ಸಮಯವಿದು; ಆದರೆ ಕಂಪಿಲ ಪಟ್ಟಣದ ನಿವಾಸಿಗಳಿಗೆ ಇಂದು ನಿದ್ದೆಯಿಲ್ಲ — ಸಕಲರೂ ಎಚ್ಚತ್ತಿದ್ದಾರೆ; ಏಕೆಂದರೆ ಅವರೆಲ್ಲರ ಮನಸ್ಸು ತಬ್ಬಿಬ್ಬಾಗಿದೆ. ಎಲ್ಲರೂ ಘೋರವಾದ ದುಃಖದಲ್ಲಿ ಮುಳುಗಿ ಹೋಗಿದ್ದಾರೆ.

ಬೆಳಗಾಗುವದರೊಳಗಾಗಿ ಕೆಲವರು ಸಾವಿನ ಬಾಯಿಗೆ ತುತ್ತಾಗಬೇಕಾಗಿದ್ದಿತು. ಬೇರೆ ಕೆಲವರು ಮೃತ್ಯುವಿನ ಚಿರಶಾಂತಿಯ ಪ್ರಾಪ್ತಿಗಾಗಿ ಸಿದ್ಧರಾಗಬೇಕಾಗಿತ್ತು. ಜೀವಿಸುವ ಆಶೆಯು ಯಾರಿಗೂ ಇರಲಿಲ್ಲ; ಏಕೆಂದರೆ ಮರ್ಯಾದೆಯ ರಕ್ಷಣೆಯೇ ಮಾನವೀಜೀವಿತದ ಅತ್ಯುಚ್ಚಧ್ಯೇಯವೆಂದೂ, ಅದು ಸಾಧ್ಯವಾಗದಲ್ಲಿ ಮರಣವನ್ನು ಹೊಂದುವುದು ಲೇಸೆಂದೂ ಆಕಾಲದ ಎಲ್ಲ ಸಜ್ಜನರ ತಿಳಿವಳಿಕೆಯಾಗಿತ್ತು.

ಮಾನವನ ಈ ಮೂರುವರೆ ಮೊಳ ಉದ್ದವಾದ ದೇಹವು ಅಸ್ಥಿರವಾಗಿದ್ದು, ಇದು ಒಂದಿಲ್ಲೊಂದುದಿನ ನಾಶವಾಗಲೇ ಬೇಕು; ಪಂಚಮಹಾಭೂತಗಳಿಂದ ನಿರ್ಮಿತವಾದ ಈ ಯಂತ್ರವು, ತನ್ನ ಕೆಲಸವನ್ನು ನಡೆಯಿಸಲ ಸಮರ್ಥವಾದ ಬಳಿಕ, ತಿರುಗಿ ಪಂಚಮಹಾಭೂತಗಳಲ್ಲಿ ಕೂಡಿಹೋಗುವದೇ ನ್ಯಾಯವು. ಅದಕ್ಕಾಗಿ ನಮ್ಮ ಪೂರ್ವಜರು ಈ ದೇಹವನ್ನು ನಂಬದೆ, ದೇಹಕ್ಕೆ ಮೂಲಕಾರಣನಾದ ದೇಹಿಯನ್ನು ನಂಬುವುದು ಲೇಸೆಂದು ಸಾರಿ ಹೇಳಿದರು. ಈ ದೇಹದ ಬೇರೆಬೇರೆ ಅವಸ್ಥೆಗಳಿಗೆ ಶುಭಾಶುಭ ಕಾರ್ಯಗಳು ಕಾರಣೀಭೂತವಾಗಿರುವುದರಿಂದ, ಪ್ರತಿಯೊಬ್ಬನು ತನ್ನ ಕೈಯಿಂದಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಬೋಧಿಸಿದರು.

ನಾವು ಹುಟ್ಟುವಾಗ ಏಕಮಾತ್ರರಾಗಿ ಹುಟ್ಟುವೆವು; ಸಾಯುವಾಗಲೂ ಒಬ್ಬರೇ ಸಾಯುವೆವು. ಮಧ್ಯದಲ್ಲಿ ಹೆಂಡಿರು, ಮಕ್ಕಳು, ಹೊಲ, ಮನೆ, ಹಣ ಮೊದಲಾದವುಗಳ ಸಾಹಚರ್ಯವು ನಮಗುಂಟಾಗುವದು. ಆದರೆ ನಾವು ಈ ಜಗತ್ತನ್ನು ಬಿಟ್ಟುಹೋಗುವಾಗ ಅವು ನಮ್ಮನ್ನು ಹಿಂಬಾಲಿಸಬಹುದೇನು? ಎಂದೂ ಸಾಧ್ಯವಿಲ್ಲ. ಅವುಗಳಲ್ಲಿ ಯಾವವೂ ನಮ್ಮೊಡನೆ ಬರಲಾರವು; ಸಾವಿನ ತುತ್ತಿನಿಂದ ನಮ್ಮನ್ನುಳಿಸಿಕೊಳ್ಳಲಾರವು. ಹಾಗಾದರೆ ಪರಲೋಕಕ್ಕೆ ನಮ್ಮನ್ನನುಸರಿಸಿ ಬರುತ್ತಿರುವವು ಯಾವವು?

ನಮ್ಮ ಶುಭಾಶುಭ ಕರ್ಮಫಲಗಳು,—ಅಂದರೆ ನಮ್ಮ ಧರ್ಮವು+ ನಾವು ಈ ಜಗತ್ತಿನಲ್ಲಿ ಮಾಡಿದ ಕರ್ಮಫಲಗಳು ಈ ಸಮಯದಲ್ಲಿ ನಮ್ಮನ್ನನುಸರಿಸಿ ಬರುವವು. ಆ ಕರ್ಮಫಲಕ್ಕನುರೂಪವಾಗಿ ಪರಲೋಕದಲ್ಲಿಯೂ,

---

+ ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂಚಿತೌ || ವಿಮುಖಾ ಬಾಂಧವಾ ಯಾಂತಿ ಧರ್ಮಸ್ತದನುಗಚ್ಛತಿ ||

ಮುಂದಿನ ಜನ್ಮದಲ್ಲಿಯೂ ಒಳಿತು ಕೇಡುಗಳನ್ನು ಹೊಂದುವೆವು. ಆದುದರಿಂದ ಪ್ರತಿಯೊಬ್ಬ ಮನುಷ್ಯನು ಮರಣದ ಪೂರ್ವದಲ್ಲಿ ಸಾಧ್ಯವಾದಷ್ಟು ಪುಣ್ಯಸಂಚಯಮಾಡಿಟ್ಟುಕೊಂಡರೆ ಒಳಿತಾಗುವದು. ಮುಂದಿನ ಜನ್ಮದ ಸಂಸಾರಯಾತ್ರೆಯ ಪ್ರವಾಸಕ್ಕೆ ಈ ಪುಣ್ಯಸಂಚಯವು ಕಟ್ಟಿದ ಬುತ್ತಿಯಂತೆ ಪರಿಣಮಿಸುವದೆಂದು ಪ್ರಾಜ್ಞರು ಹೇಳುತ್ತಿರುವರು.

ನಮ್ಮ ಪೂರ್ವಜರು ಈ ತತ್ವವನ್ನು ಚೆನ್ನಾಗಿ ಅರಿತವರಾದ್ದರಿಂದ, ಅವರು ದೇಹಸುಖವನ್ನು ನಂಬಿರಲಿಲ್ಲ. ಅವರು ಇಂದ್ರಿಯಗಳ ಸುಖಕ್ಕಾಗಿ ಪಾಪ ಕರ್ಮಗಳನ್ನಾಚರಿಸಲಿಲ್ಲ. ತಮ್ಮ ಆತ್ಮವನ್ನು (ಮನುಷ್ಯತ್ವವನ್ನು) ಮಾರಿಕೊಳ್ಳುವ ಸಮಯದಲ್ಲಿ ದೇಹದ ಮೋಹವನ್ನು ಹರಿದೊಗೆದು, ಆನಂದದಿಂದ ಮೃತ್ಯುವನ್ನಾಲಂಗಿಸುತ್ತಿದ್ದರು.

ಸ್ತ್ರೀಯರ ಪಾತಿವ್ರತ್ಯಭಂಗವು ಮಹಾಪಾತಕವೆಂದು ನಮ್ಮ ಹಿರಿಯರ ಗ್ರಹಿಕೆಯು. ಹದಿಬದೆಯಾದ ರಮಣಿಯು ತನ್ನ ಪ್ರಾಣವನ್ನು ತ್ಯಜಿಸಬಲ್ಲಳಲ್ಲದೆ, ಸತೀತ್ವವನ್ನೆಂದಿಗೂ ಮಾರಿಕೊಳ್ಳಲಾರಳು. ನಮ್ಮಾ ಆರ್ಯಮಹಿಳೆಯರ ಪಾತಿವ್ರತ್ಯರಕ್ಷಣೆಗಾಗಿ ಪುರುಷರು ಪ್ರಾಣವಿಸರ್ಜನೆಮಾಡಲು ಹಿಂದೆಗೆಯರು. ಯಾರೆ ಆಗಲಿ, ಸ್ವಸ್ತ್ರೀಯು, ಇಲ್ಲವೆ ಆಪ್ತರಾದ ರಮಣಿಯರ, ಇಲ್ಲವೆ ಇತರ ನಾರಿಯರ ಸತೀತ್ವಭಂಗವು ತಮ್ಮೆದುರಿನಲ್ಲಾಗುತ್ತಿರುವುದನ್ನು ನೋಡಿ, ತಮ್ಮಿಂದಾದಷ್ಟು ಪ್ರತಿಕಾರಮಾಡದ ಭಾರತೀಯರಿಲ್ಲ. ಆ ಕುಲವಧುಗಳ ರಕ್ಷಣೆಗಾಗಿ ಎಷ್ಟೇ ವಿಘ್ನ ಬರಲಿ, ಅದನ್ನವನು ನೋಡನು; ಅದರಿಂದ ತಾನು ಎಂತಹ ವಿಪತ್ತಿಗೊಳಗಾಗಲೊಲ್ಲನೇಕೆ, ಅವನು ಅದನ್ನು ಲೆಕ್ಕಿಸನು. ಪ್ರತಿಯೊಬ್ಬ ಕನ್ನಡಿಗನು ಹೆಂಗಸರ ಸತೀತ್ವರಕ್ಷಣೆಯು ಮಹಾಪುಣ್ಯದ ಕಾರ್ಯವೆಂದೆಣಿಸಿ, ಮುಂದರಿಸುವುನಲ್ಲದೆ, ಪ್ರಾಣವಿರುವವರೆಗೆ ಅದಕ್ಕಾಗಿ ಬಡೆದಾಡುವನು.

ಯುದ್ಧದಲ್ಲಿ ಯಾವದೊಂದು ಜನಾಂಗವು ಸೋತಬಳಿಕ, ಗೆದ್ದಜನರು ಅಪಜಯಪಟ್ಟವರ ಮೇಲೆ ಅತ್ಯಾಚಾರ ನಡಿಸುವದು ಚಿರಾನುಗತಪಂಥಾನವಾಗಿದೆ. ಈ ಕಾರ್ಯದಲ್ಲಿ ಯವನರು ಅತಿಶಯ ಮುಂದುವರಿದುದು ಈ ದೇಶದ ಇತಿಹಾಸದಲ್ಲಿ ಕಂಡುಬರುವದು. ಸೋತ ಹಿಂದುಗಳ ಧನವನ್ನಪಹ

ರಿಸುವುದು, ಸಿಕ್ಕವರನ್ನು ನಿರ್ದಯತನದಿಂದ ಕೊಲ್ಲಿಸುವುದು ಅವರ ಸ್ವಾಭಾವಿಕವಾದ ಕೆಲಸಗಳಾಗಿದ್ದವು. ಇದಕ್ಕಾಗಿ ಕನ್ನಡಿಗರು ವಿಶೇಷವಾಗಿ ಚಿಂತಿಸುತ್ತಿರಲಿಲ್ಲ. ಏಕೆಂದರೆ ಇದರಲ್ಲಿ ಮರ್ಯಾದೆಯ ಹಾನಿಯು ಸಂಭವವಿರಲಿಲ್ಲ. ಆದರೆ ಯವನರು ಇದಕ್ಕಿಂತಲೂ ಭಯಂಕರವಾದ ಬೇರೊಂದು ಅತ್ಯಾಚಾರವನ್ನು ನಡಿಸುತ್ತಿದ್ದರು— ಕರ್ನಾಟಕದ ಸುಂದರಿಯರ ಪಾತಿವ್ರತ್ಯವನ್ನು ಹರಣಮಾಡಲಿಕ್ಕೆ ಅವರು ಮುಂದುವರಿಯುತ್ತಿದ್ದರು. ಇದು ಕನ್ನಡಿಗರಿಗೆ ಎಷ್ಟುಮಾತ್ರವೂ ಸಹನವಾಗುತ್ತಿರಲಿಲ್ಲ; ಏಕೆಂದರೆ ಇದು ತಮ್ಮ ಘೋರ ಅಪಮಾನದ ಸಂಗತಿಯೆಂದು ಅವರು ತಿಳಿಯುತ್ತಿದ್ದರು. ಅದಕ್ಕಾಗಿ ಅವರು ಅಪಜಯದ ಪ್ರಸಂಗ ಬರುತ್ತದೆಂದು ಕಂಡುಬಂದ ಬಳಿಕ, ಮಡದಿಯರನ್ನೂ, ತಾಯಂದಿರನ್ನೂ, ಮಕ್ಕಳನ್ನೂ ತಮ್ಮ ಸಮಕ್ಷಮ ಅಗ್ನಿನಾರಾಯಣನಿಗೆ ಆಹುತಿಯಾಗಿ ಕೊಡುತ್ತಿದ್ದರು. ಇದೊಂದು ಅತಿಭಯಂಕರ ನಿಷ್ಠುರತೆಯ ಕಾರ್ಯವೆಂದು ಪ್ರಕೃತದಲ್ಲಿ ತೋರಬಹುದು. ಆದರೆ ಆಕಾಲದ ಜನರು ಸತೀತ್ವರಕ್ಷಣೆಗೆ ಅತ್ಯಂತ ಮಹತ್ವಕೊಟ್ಟಿದ್ದರು. ಕಾರಣ ಅವರು ಅದಕ್ಕಾಗಿ ಎಷ್ಟೊಂದು ನಿಷ್ಠುರತೆಯನ್ನು ತೋರ್ಪಡಿಸುವದಕ್ಕೂ ಹಿಂಜರಿಯುತ್ತಿರಲಿಲ್ಲ.

ಬೆಳಗಾಗುವದರೊಳಗೆ ಕಂಪಿಲಪಟ್ಟಣದ ರಮಣಿಯರು ಭಾರತೀಯರ ಚಿರಾನುಗತಪಂಥಾನವನ್ನನುಸರಿಸಿ, ಜೋಹಾರವ್ರತವನ್ನಾಚರಿಸತಕ್ಕವರಿದ್ದರು. ಇನ್ನು ಅವರ ಈ ಜಗತ್ತಿನವಾಸವೂ, ಪತಿಪುತ್ರರ ಸಮಾಗಮವೂ ಅತ್ಯಲ್ಪಕಾಲದ್ದಾಗಿತ್ತು. ಅರುಣೋದಯದ ಪೂರ್ವದಲ್ಲಿಯೇ ಅವರು ತಮ್ಮ ಬಾಲಕಿಯರೊಡನೆ ಹುತಾಶನನ ಹಾಸಿಗೆಯ ಮೇಲೆ ಚಿರನಿದ್ರೆಯನ್ನೈದುವ್ಮವರಿದ್ದರು. ಆದುದರಿಂದವರು ಈ ಸಮಯದಲ್ಲಿ ತಮ್ಮ ಪತಿಪುತ್ರರ ಕಡೆಯ ಅಪ್ಪಣೆಯನ್ನು ತೆಗೆದುಕೊಳ್ಳುತ್ತಲಿದ್ದರು.

ಒಂದು ಮನೆಯಲ್ಲಿ ಎರಡು ವರುಷದ ಮುದ್ದುಮಗುವೊಂದು ಹಾಸಿಗೆಯಲ್ಲಿ ಆನಂದದಿಂದ ಕ್ರೀಡಿಸುತ್ತಲಿದೆ. ದಂಪತಿಗಳು ಆ ಮಗುವಿನ ಬಾಲಲೀಲೆಯನ್ನು ನೋಡಿ, ಸಂತೋಷಸಾಗರದಲ್ಲಿ ಮುಳುಗಿ, ಪ್ರೇಮಾತಿರೇಕದಿಂದ ಮುದ್ದಿನ ಮಳೆಗರೆಯತೊಡಗಿದ್ದಾರೆ. ಆದರೆ ಈ ಆನಂದವು ಎಷ್ಟು ಹೊತ್ತಿನದು ? ಅಪರಕ್ಷಣದಲ್ಲಿಯೇ ತಾವು ಈ ಬಾಲಕನೊಡನೆ ಇಹಜಗ

ತ್ತನ್ನು ತ್ಯಜಿಸಬೇಕಾಗುವದೆಂಬ ಭಾವನೆಯು ಅವರ ಮನಸ್ಸಿನಲ್ಲುದಯಿಸಿತು. ಕೂಡಲೇ ಆ ದಂಪತಿಗಳು ಘೋರವಿಷಾದಕ್ಕೊಳಗಾದರು. ಆ ಬಾಲಕನ ಜನನಿಯು ಕಣ್ಣೀರು ಸುರಿಸತೊಡಗಿದಳು. ನಗುತ್ತಿರುವ ತಾಯಿತಂದೆಗಳು ದುಃಖಿತರಾದುದನ್ನು ಆ ಮಗುವು ವಿಷಣ್ಣಮುಖದಿಂದ ದಿಟ್ಟಿಸಿನೋಡಲಾರಂಭಿಸಿತು. ತರುವಾಯ ಆ ಬಾಲಕನು ತನ್ನ ಕೋಮಲವಾದ ಕರಗಳನ್ನು ಮುಂದೆಮಾಡಿ, ತಾಯಿಯ ಕೊರಳಿಗೆ ತೆಕ್ಕೆಹಾಕಿ, ಕಣ್ಣೀರುದುರಿಸತೊಡಗಿತು. ಆಗಿನ ಕಾಲಕ್ಕೆ ತಾಯಿತಂದೆಗಳ ಹೃದಯದಲ್ಲಾದ ತಳಮಳವನ್ನು ವರ್ಣಿಸುವದು ಯಾರಿಗೆ ಸಾಧ್ಯವು ?

ಬೇರೊಂದು ಮನೆಯಲ್ಲಿ ನವಪರಿಣತದಂಪತಿಗಳು ಗಾಢಾಲಿಂಗನದಲ್ಲಿ ಮೈಮ್ಮರೆದು ಹೋಗಿದ್ದಾರೆ. ಆದರೆ ಅವರ ಈ ಆನಂದವು ಬಹುಕಾಲ ನಿಲ್ಲುವದಾಗಿರಲಿಲ್ಲ. ಉತ್ತರಕ್ಷಣದಲ್ಲಿಯೇ ಅವರಿಗೆ ಮುಂದೊದಗತಕ್ಕ ಸಂಗತಿಗಳ ನೆನಪಾಯಿತು. ಅವರು ನಿದ್ರೆಯಿಂದೆಚ್ಚತ್ತಂತೆ, ಆಲಿಂಗನವನ್ನು ಳಿದು ನಿಂತರು. ಭಾವೀಚಿರವಿರಹಕ್ಕಾಗಿ ಅವರ ಕೈಕಾಲೇ ತಣ್ಣಗಾದವು. ಇಬ್ಬರೂ ಕಣ್ಣೀರು ಸುರಿಸತೊಡಗಿದರು. ಇದ್ದುದರಲ್ಲಿಯೇ ಪತಿಯು ಆದಷ್ಟು ಸಮಾಧಾನವನ್ನು ತಂದುಕೊಂಡು, ತನ್ನ ಉತ್ತರೀಯದಿಂದ ಸತಿಯ ಮೌಕ್ತಿಕಸಮವಾದ ಅಶ್ರುಬಿಂದುಗಳನ್ನೊರಿಸಿ, ಕೋಮಲವೂ ಕರುಣಾಜನಕವೂ ಆದ ಸ್ವರದಿಂದ—ಪ್ರಿಯೆ, ಇನ್ನು ದುಃಖಿಸಿ ಉಪಯೋಗವಿಲ್ಲ. ಮೃತ್ಯುದೇವತೆಯ ಆಮಂತ್ರಣದ ಮೇರೆಗೆ ನಾವು ಅವಳ ಬಳಿಗೆ ಹೋಗಲೇ ಬೇಕು. ನಿನ್ನ ಕೈಯ್ಪಿಡಿದು ತುಸುದಿವಸಗಳಾಗಿದ್ದರೂ, ನಾನು ನಿನ್ನಿಂದ ಅನಂತಸುಖಗಳನ್ನನುಭವಿಸಿದೆನು. ಆದರೆ ನನ್ನ ಪಾಣಿಗ್ರಹಣಮಾಡಿದುದಕ್ಕೆ ನಿನಗಾವ ಸುಖವೂ ದೊರೆಯಲಿಲ್ಲ. ಉಪಾಯವಿಲ್ಲ. ದೇವರು ಮುಂದಿನ ಜನ್ಮದಲ್ಲಿಯೂ ನಮ್ಮಿರ್ವರನ್ನು ದಂಪತಿಗಳನ್ನಾಗಿ ಮಾಡುವನಾದರೆ, ಆಗ ನಾನು ನಿನ್ನ ಋಣವನ್ನು ತೀರಿಸುವೆನು, ಎಂದು ಹೇಳಿದನು. ಅದಕ್ಕಾಸತಿಯು—ಪ್ರಾಣನಾಥ, ತಾವು ಹೀಗೇಕೆ ಅನ್ನುತ್ತಿರುವಿರಿ ? ನನಗೆ ನಿಮ್ಮ ಹೊರತು ಸುಖವಿನ್ನೆಲ್ಲಿಯೂ ಇಲ್ಲ. ನಾನು ಮುಂದೆ ಹೋಗಿ, ಸ್ವರ್ಗದಲ್ಲಿ ತಮ್ಮ ಮಾರ್ಗಪ್ರತೀಕ್ಷೆಮಾಡುತ್ತಿರುವೆನು. ತಾವು ಅಲ್ಲಿಗೆ ಬಂದೇ ಬರುವಿರಿ. ಅದು ನಮ್ಮ ಚಿರಸಮ್ಮೇಲನವು. ತರುವಾಯ ನಮ್ಮಿರ್ವರಲ್ಲಿ ವಿರಹವನ್ನುಂಟು

ಮಾಡುವ ಶಕ್ತಿಯು ಯಾರಲ್ಲಿಯೂ ಇಲ್ಲ, ಎಂದು ಅಂದಳು. ಪತಿಯು ಸತಿಯ ಈ ಪ್ರೇಮಮಯವಾದ ಭಾಷಣವನ್ನು ಕೇಳಿ, ಆನಂದಾಶ್ರುಗಳನ್ನು ತಡೆಯಲು ಸಮರ್ಥನಾಗಲಿಲ್ಲ. ಅವನು ಪ್ರೇಮಭರದಿಂದ ಪುನಃ ಪ್ರಿಯ ಮಡದಿಯನ್ನಾಲಂಗಿಸಿದನು.

ಮತ್ತೊಂದು ಮನೆಯಲ್ಲಿ ನಡುವಯಸ್ಸಿನ ಗಂಡಹೆಂಡರು, ತಮ್ಮ ತರುಣನಾದ ಹಿರಿಯಮಗನು ಯುದ್ಧದಲ್ಲಿ ಮಡಿದುದನ್ನು ಕೇಳಿ, ಅವನ ಗುಣಗಳನ್ನು ಕೊಂಡಾಡುತ್ತ ಶೋಕಿಸುತಲಿದ್ದಾರೆ. ಪತಿಯು ತುಸು ಸಮಾಧಾನವನ್ನು ತಂದುಕೊಂಡು, ಪತ್ನಿಯನ್ನು ಸಂತೈಸುತ್ತಿದ್ದಾನೆ — ಪ್ರಿಯೆ, ಯಾಕೆ ಶೋಕಿಸುವೆ? ನಾವೇನು ಈ ಜಗತ್ತಿನಲ್ಲಿ ಬಹುಕಾಲವಿರಬೇಕಾಗಿದೆ! ನಾಲ್ಕೈದು ತಾಸುಗಳಲ್ಲಿ ನಾವೂ ಪ್ರಿಯಪುತ್ರನ ದರ್ಶನಕ್ಕಾಗಿ ಹೊರಡುವೆವು. ಇಷ್ಟು ಅವಧಿಯ ಪುತ್ರವಿರಹವನ್ನು ಹೇಗಾದರೂ ತಾಳಿಕೊ. ಈ ಸಮಯದಲ್ಲಿ ಈ ದಂಪತಿಗಳ ಐದು ವರುಷದ ಬಾಲಕನು ಬಂದು — ಅಮ್ಮಾ, ಅಣ್ಣನು ಎಲ್ಲಿರುವನು? ಅವನು ಇಂದು ಮನೆಗೆ ಬರಲಿಲ್ಲವಲ್ಲ! ಎಂದು ಕೇಳಿದನು. ಮಾತೆಯ ಕುತ್ತಿಗೆಯ ಶಿರಗಳು ಉಬ್ಬಿಬಂದವು. ಅವಳು ಅಳುವ ಸ್ವರದಿಂದ — ಮಗು, ನನಗೆ ಗೊತ್ತಿಲ್ಲ. ಅವರನ್ನು ಕೇಳು, ಎಂದು ಹೇಳಿಬಿಟ್ಟಳು. ಕೂಡಲೇ ಬಾಲಕನು — ಅಪ್ಪಾ, ಅಣ್ಣನು ಎಲ್ಲಿಗೆ ಹೋಗಿದ್ದಾನೆ? ಕೇಳಿದರೆ ಅಮ್ಮನು ಹೇಳಲೇ ಒಲ್ಲಳು ನೋಡು, ಎಂದು ಚಪಲತೆಯಿಂದ ಕೇಳಿದನು. ಇದಕ್ಕೆ ತಂದೆಯು — ಮಗು, ನಿನ್ನಣ್ಣನು ಸ್ವರ್ಗಕ್ಕೆ ಹೋಗಿದ್ದಾನೆ. ಇನ್ನು ಅವನು ಇಲ್ಲಿಗೆ ಬರುವದಿಲ್ಲ. ಅವನ ಭೆಟ್ಟಿಯಾಗಬೇಕಾದರೆ ನಾವೇ ಅಲ್ಲಿಗೆ ಹೋಗಬೇಕು, ಎಂದು ಹೇಳಿದನು. ಇದಾಕ್ಕಾ ಬಾಲಕನು — ಹಾಗಾದರೆ, ಅಪ್ಪಾ ಲಗು ಏಳು. ಅಮ್ಮನು ಬರುವದಿಲ್ಲವೇನು? ಬರದಿದ್ದರೆ ಅಷ್ಟೇ ಹೋಯಿತು. ನಾನೂ, ನೀನೂ ಕೂಡಿಹೋಗಿ, ಅಣ್ಣನನ್ನು ನೋಡೋಣ ನಡೆ, ಎಂದು ಅಂದನು. ಬಾಲಕನ ಈ ಮುದ್ದು ಮಾತುಗಳನ್ನು ಕೇಳಿ, ದಂಪತಿಗಳು ಅವನನ್ನು ಅಪ್ಪಿಕೊಂಡು ಗಟ್ಟಿಯಾಗಿ ಅತ್ತುಬಿಟ್ಟರು. ಬಾಲಕನಿಗಾದರೋ ಏನೂ ತಿಳಿಯದು. ಅವನು ತಾಯಿತಂದೆಗಳ ಮುಖವನ್ನು ಟಕಮಕನೋಡಹತ್ತಿದನು. ಎಂತಹ ಹೃದಯದ್ರಾವಕನೋಟವಿದು!

ಅಂತಃಪುರದಲ್ಲಿ ರಾಯಿಯ ಭಾರ್ಯೆಯು ಕುಳಿತಿದ್ದಾಳೆ. ಅವಳು ಕಣ್ಣೀರು ಸುರಿಸುತ್ತಿದ್ದಾಳೆ; ಏಕೆಂದರೆ ಅವಳ ಹನ್ನೊಂದು ಮಂದಿ ಮಕ್ಕಳು ಯುದ್ಧಭೂಮಿಯಲ್ಲಿ ಒಬ್ಬರಹಿಂದೊಬ್ಬರು ಮಡಿದಿದ್ದರು. ಒಂದೆರಡು ದಿವಸಗಳಲ್ಲಿ ಹನ್ನೊಂದು ಮಂದಿ ಪ್ರಿಯಪುತ್ರರನ್ನು ಕಳೆದುಕೊಂಡ ಆ ವೀರಮಾತೆಯಾದ ವೃದ್ಧಜನನಿಯ ಶೋಕವನ್ನು ವರ್ಣಿಸುವ ಸಾಮರ್ಥ್ಯವು ನಮ್ಮಲ್ಲಿಲ್ಲ. ಈ ಸಮಯದಲ್ಲಿ ರಾಯಿಯು ಬಂದು ಅವಳನ್ನು ಸಮಾಧಾನಪಡಿಸತೊಡಗಿದನು. ರಾಯಿಗೆ ದುಃಖವಾಗಿದ್ದಿಲ್ಲವೆಂದಲ್ಲ; ಆದರೆ ಅವನು ವೀರಪುರುಷನಾದುದರಿಂದ, ತನ್ನ ಮಕ್ಕಳು, ಶತ್ರುಗಳೊಡನೆ ಹೊಡೆದಾಡಿ, ಯುದ್ಧಭೂಮಿಯಲ್ಲಿ ಮಡಿದು, ವೀರಸ್ವರ್ಗವನ್ನೈದಿದರೆಂದು ತಿಳಿದು, ಸಮಾಧಾನ ಹಚ್ಚಿಕೊಂಡಿದ್ದನು.

ಪ್ರಿಯ ವಾಚಕರೆ, ಈ ದಿವಸ ಕಂಪಿಲನಗರದ ಪ್ರತಿಯೊಂದು ಮನೆಯಲ್ಲಿ ಈ ತರದ ಹೃದಯವಿದಾರಕನೋಟವು ಕಣ್ಣಿಗೆ ಬೀಳುತಲಿತ್ತು. ಇದನ್ನು ನಾವು ಹೆಚ್ಚಾಗಿ ವರ್ಣಿಸಿ, ನಿಮಗೆ ಅಸಮಾಧಾನವನ್ನುಂಟುಮಾಡಲು ಇಚ್ಛಿಸುವದಿಲ್ಲ. ಬೇಕಾದರೆ ನೀವು ಇದರ ಯಥಾರ್ಥಸ್ವರೂಪವನ್ನು ನಿಮ್ಮ ಕಲ್ಪನೆಯಿಂದೂಹಿಸಬಹುದು.

ಮನುಷ್ಯನು ಎಷ್ಟೇ ಜ್ಞಾನಿಯಾಗಿದ್ದರೂ, ಬಹುಜನ್ಮಗಳ ವ್ಯವಹಾರದಿಂದುಂಟಾದ ಚಟದ ಮೂಲಕ, ಸಂಸಾರಿಕ ಮೋಹವು ಅವನಿಗೆ ತಪ್ಪಿದ್ದಲ್ಲ. ಹೆಂಡತಿ, ಮಕ್ಕಳು, ಹೊಲ, ಮನೆ, ಹಣಗಳು ಅಸ್ಥಿರವೆಂದೂ, ಇವನ್ನು ನಂಬಬಾರದೆಂದೂ ಹೇಳುತ್ತಿರುವ ಜ್ಞಾನಿಗಳ ತತ್ವಗಳನ್ನು ಕೇಳಿ, ನಾವು ತಲೆದೂಗುತ್ತಿದ್ದರೂ, ಪ್ರತ್ಯಕ್ಷವಾಗಿ ಇವು ನಮ್ಮ ಕೈಯಿಂದ ಜಾರಿಹೋಗುವ ಸಮಯ ಬಂದಾಗ ದುಃಖಿಸದಿರಲಾರೆವು. ಸ್ವತಃ ಆತಾತ್ವಿಕರಿಗಾದರೂ ಇದು ಸಾಧ್ಯವಿದೆಯೋ ಇಲ್ಲವೋ ಎಂಬುದನ್ನು ಹೇಳುವುದು ಕಠಿಣವಾಗಿರುವದು. ಶಕುಂತಲೆಯು ಗಂಡನ ಮನೆಗೆ ಹೋಗುವಾಗ ಮಹಾಕವಿಕಾಳಿದಾಸನು ವರ್ಣಿಸಿದ ಕಣ್ವಮುನಿಯ ಶೋಕವು ದಿಟವಾಗಿದ್ದರೆ, ಅಂತಹ ಮಹಾತ್ಮರಿಗಾದರೂ ವಿಯೋಗದುಃಖವು ಬಾಧಿಸುತ್ತದೆಂದು ಧಾರಾಳವಾಗಿ ಹೇಳಬಹುದು.

ಇವೆಲ್ಲಕ್ಕಿಂತಲೂ ಜೀವಿತದ ಮೋಹವು ಮನುಷ್ಯನನ್ನು ಹೆಚ್ಚು ಅಂಟಿ ಕೊಂಡಿರುತ್ತದೆ. ಏನೇ ಆಗಲಿ, ತಾನು ಜೀವದಿಂದುಳಿದರೆ ಸಾಕೆಂದು ಮನುಷ್ಯನು ಭಾವಿಸುತ್ತಿರುವನು; ಮತ್ತು ಅದಕ್ಕನುರೂಪವಾಗಿ ಕೆಲಸಮಾಡುತ್ತಿರುವನು. ಜೀವಿತಕ್ಕೆ ಅತ್ಯಂತವಾಗಿ ಅವಶ್ಯಕವೆಣಿಸಿದ, ಹೆಂಡಿರು-ಮಕ್ಕಳು, ಹೊಲ-ಮನೆ ಮೊದಲಾದವುಗಳನ್ನು ಸಂಪಾದಿಸಿಕೊಂಡು ಅವನು ಅಕ್ಕರೆಯಿಂದ ಕಾಲಕಳೆಯಬಯಸುವನು. ಆದರೆ ಇವು ಅವನ ಕೈಬಿಟ್ಟುಹೋಗುವಾಗ, ಅವನು ಇವುಗಳೊಡನೆ ಹೋಗಲಾರನು. ಬೇಕಾದರೆ ಹೆಂಡತಿ-ಮಕ್ಕಳನ್ನು ಪುನಃ ದೊರಕಿಸಲಿಚ್ಛಿಸುವನು — ಇದಕ್ಕಾಗಿ ಶಕ್ತಿಮೀರಿ ಪ್ರಯತ್ನಿಸುವನು.

ಹೀಗಿದ್ದರೂ ಮಾನವನು ಕೆಲವೊಂದು ಇಕ್ಕಟ್ಟಿನಲ್ಲಿ ತನ್ನ ಜೀವಿತವನ್ನೂ, ತನ್ನ ಸತಿಸುತರ ಜೀವಿತವನ್ನೂ ತೃಣಸಮಾನವಾಗಿ ಬಗೆಯಬೇಕಾಗುತ್ತದೆ. ಇದಕ್ಕೆ ನಮ್ಮ ಪೂರ್ವಜರ ಜೋಹಾರವು ಉತ್ತಮ ದೃಷ್ಟಾಂತವಾಗಿದೆ.

ರಾತ್ರಿಯ ಕಡೆಯ ಭಾಗವು. ಅರುಣೋದಯಕ್ಕೆ ಸುಮಾರು ಒಂದು ತಾಸಿನ ಅವಕಾಶವಿತ್ತು. ಅಂಧಕಾರವಿನ್ನೂ ಕಡಿಮೆಯಾಗಿರಲಿಲ್ಲ. ಕಂಪಿಲ ನಗರದ ಗ್ರಾಮದೇವತೆಯ ಗುಡಿಯ ಮುಂದಿರುವ ಭವ್ಯವಾದ ಪ್ರಾಂಗಣದಲ್ಲಿ ಭಯಂಕರವಾದುದೊಂದು ಚಿತೆಯು ಉರಿಯುತ್ತಲಿದೆ. ಅನೇಕ ಶ್ರೀಗಂಧದ ಕಟ್ಟಿಗೆಗಳೂ, ಸುವಾಸನೆಯ ಪದಾರ್ಥಗಳೂ ಅದನ್ನು ಪುಟಿಸುತ್ತವೆ. ಆದರೆ ಇಷ್ಟರಿಂದಲೇ ಆ ಹುತಾಶನನಿಗೆ ತೃಪ್ತಿಯಿಲ್ಲ. ನೂರಾರು ಮುತ್ತೈದೆಯರ ಆಹುತಿಗಾಗಿ ಆ ಅಗ್ನಿನಾರಾಯಣನು ಭೋರ್ಗರೆಯುತಲಿದ್ದಾನೆ. ಪುರೋಹಿತನು ಪೂಜೆಯ ಸಾಹಿತ್ಯಗಳನ್ನಿಟ್ಟುಕೊಂಡು ಸಿದ್ಧನಾಗಿ ಕುಳಿತಿದ್ದಾನೆ.

ನಗರವಾಸಿಗಳಾದ ಉಚ್ಚಕುಲದ ರಮಣಿಯರೆಲ್ಲರೂ ತಮ್ಮ ಪತಿಗಳ ಮತ್ತು ಪುತ್ರರ ಕಡೆಯ ಅಪ್ಪಣೆಯನ್ನು ಹೊಂದಿ, ಅರಮನೆಯ ಮುಂದೆ ಕೂಡಿದರು. ಅವರೆಲ್ಲರೂ ಅಡ್ಡಸೆರಗನ್ನು ಕಟ್ಟಿದ್ದಾರೆ. ಭವ್ಯವಾದ ಕುಂಕುಮವನ್ನು ಹಚ್ಚಿಕೊಂಡಿದ್ದಾರೆ. ಈಗವರ ಮುಖದಲ್ಲಿ ವಿಷಾದದ ಕಳೆಯಿಲ್ಲ. ಎಲ್ಲರೂ ಉತ್ತೇಜಿತರಾಗಿ ಜೀವನಾಹುತಿಗೆ ಅಣಿಯಾಗಿದ್ದಾರೆ. ನೋಡುವವರಿಗೆ ದೈತ್ಯಮರ್ದಿನಿಯಾದ ಭಗವತೀಸಿಂಹವಾಹಿನಿಯಂತೆ ಕಾಣಿಸುತಲಿದ್ದಾರೆ.

ರಾಯಿಯ ಹೆಂಡತಿಯು ಜೋಹಾರಕ್ಕೋಸ್ಕರ ಸಿದ್ಧಳಾಗಿ, ನಗರದ ರಮಣಿಯರ ಮುಖ್ಯಸ್ಥಳಾಗಿ ಮುಂದುವರಿದಳು. ಎಲ್ಲರೂ ಅವಳನ್ನು ಹಿಂಬಾಲಿಸಿದರು. ತುಸುಹೊತ್ತಿನಲ್ಲಿ ಅವರೆಲ್ಲರೂ ಚಿತೆಯು ಉರಿಯುತ್ತಲಿರುವ ಸ್ಥಳದ ಹತ್ತರ ಬಂದರು. ಚಿತೆಯು ಭಯಂಕರವಾಗಿ ಪ್ರಜ್ವಲಿಸುತಲಿತ್ತು. ಅದನ್ನು ನೋಡಿ ರಮಣಿಯರು ಹೆದರಲಿಲ್ಲ. ಅದರಲ್ಲಿ ಹೇಗೆ ಬೀಳಲಿ, ಎಂಬ ಜೀವಿತ-ಮೋಹವು ಅವರನ್ನಡ್ಡಯಿಸಲಿಲ್ಲ.

ವೀರರು ಸಮೀಪದಲ್ಲಿ ನಿಂತು, ನೋಡುತಲಿದ್ದರು. ಪುರೋಹಿತನು ಮಂತ್ರಗಳನ್ನುಚ್ಚರಿಸತೊಡಗಿದನು. ರಾಣಿಯು ಪುರೋಹಿತನ ಹೇಳಿಕೆಯಂತೆ ಅಗ್ನಿಪೂಜೆಯನ್ನು ಮಾಡಿದಳು. ತರುವಾಯ ಎಲ್ಲರೂ ಮೂರುಸಾರೆ ಅಗ್ನಿನಾರಾಯಣನನ್ನು ಬಲಗೊಂಡು ಪೊಡಮಡಿದು ತಮ್ಮ ಅಂತ್ಯಕಾಲದ ಕೋರಿಕೆಯನ್ನು ಬೇಡಿಕೊಂಡರು. ರಾಣಿಯು ಧೈರ್ಯದಿಂದ ಚಿತೆಯಲ್ಲಿ ಹಾರಿಕೊಂಡಳು. ಕ್ರಮವಾಗಿ ಒಬ್ಬೊಬ್ಬರೇ ಅಗ್ನಿಯಲ್ಲಿ ದೇಹಸಮರ್ಪಣೆಯನ್ನು ಮಾಡಿದರು. ತುಸುಹೊತ್ತಿನಲ್ಲಿಯೇ ಅಗ್ನಿಯು ಅವರನ್ನು ಭಸ್ಮೀಭೂತರನ್ನಾಗಿ ಮಾಡಿಬಿಟ್ಟಿತು. ಹಾಯ! ಹಾಯ! ಎಂತಹ ಭೀಷಣ ನೋಟವಿದು!!

ಅರುಣೋದಯವಾಗುತಲಿದ್ದಿತು. ಅತ್ತಕಡೆಗೆ ಕಂಪಿಲದ ವೀರರ ದೃಷ್ಟಿಯಿರಲಿಲ್ಲ. ಅವರು ತಮ್ಮ ಮಾತಾಸುತೆಯರ ಕಡೆಯ ಅಪ್ಪಣೆಯನ್ನು ಹೊಂದಿ, ಸತಿಯರ ಕಡೆಯ ತಾಂಬೂಲವನ್ನು ಸ್ವೀಕರಿಸಿ, ಹಳದೀವಸ್ತ್ರಗಳನ್ನು ಧರಿಸಿ, ರಣಾಂಗಣಕ್ಕೆ ದೇಹವನ್ನರ್ಪಿಸುವದಕ್ಕೆ ಮುಂದುವರಿದಿದ್ದರು. ತಮ್ಮ ಸತಿಸುತೆಯರು ತಮ್ಮೆದುರಿನಲ್ಲಿಯೇ ಅಗ್ನಿಗೆ ಆಹುತಿಯಾದುದನ್ನವರು ನೋಡಿದ್ದರು. ಅದರಿಂದವರು ಯವನರ ಅತ್ಯಾಚಾರಕ್ಕೊಳಗಾಗಿ, ಮರ್ಯಾದೆಗೇಡಿಗಳು ಎಲ್ಲಿ ಆಗುವರೊ ಎಂಬ ಅಂಜಿಕೆಗೆ ಒಳಗಾಗಲಿಲ್ಲ. ಜೀವಿತದ ಯಾವತ್ತು ಬಂಧನಗಳು ಛಿನ್ನವಿಚ್ಛಿನ್ನವಾದುದರಿಂದ ಜೀವಿಸಿರುವ ಆಶೆಯು ಅವರಿಗಿರಲಿಲ್ಲ. ಸಾಧ್ಯವಾದಷ್ಟು ಯವನರನ್ನು ಸಂಹರಿಸುವದೂ, ಕಡೆಯಲ್ಲಿ ಯುದ್ಧಭೂಮಿಯಲ್ಲಿ ಮಡಿದು ವೀರಸ್ವರ್ಗವನ್ನು ಹೊಂದುವದೂ ಅವರ ಉದ್ದೇಶವಾಗಿತ್ತು. ಅವರು ಸ್ವರ್ಗದಲ್ಲಿ ಮಾರ್ಗಪ್ರತೀಕ್ಷೆಮಾಡುತ್ತ ಕುಳಿತಿರುವ ಅಂಗನೆಯರ ಸಂದರ್ಶನಕ್ಕಾಗಿ ಉತ್ಸುಕರಾಗಿದ್ದರು. ಇದರಿಂದ

ಆವರು ಉತ್ತೇಜಿತರಾಗಿ 'ಹರಹರಮಹಾದೇವ' ಎಂಬ ಉಚ್ಚಗರ್ಜನೆಯನ್ನು ಮಾಡುತ್ತ ರಣಾಂಗಣದ ಕಡೆಗೆ ಸಾಗಿದ್ದರು.

ಯವನರಾದರೂ ಇವರ ಮಾರ್ಗಪ್ರತೀಕ್ಷೆಯನ್ನು ಮಾಡುತ್ತ ಕುಳಿತು ಕೊಂಡಿದ್ದರು; ಏಕೆಂದರೆ ಪಟ್ಟಣದಲ್ಲಿ ಚಿತೆಯುರಿಯುತ್ತಿದ್ದುದು ಅವರ ದೃಷ್ಟಿಗೆ ಬಿದ್ದಿತ್ತು; ಅದರಿಂದ ಯವನರು ಇನ್ನು ಮೇಲೆ ಕಂಪಿಲದ ಜನರು ತಮ್ಮ ಮೇಲೆ ಸಾಗಿಬರುವರೆಂದು ಗೊತ್ತುಮಾಡಿಕೊಂಡು, ಸಿದ್ಧರಾಗಿ ಕುಳಿತಿದ್ದರು.

ಇರ್ಬಣದ ನಡುವೆ ಘೋರಯುದ್ಧವಾಯಿತು. ಆದರೇನು? ಹಿಂದು ಗಳ ಸಂಖ್ಯೆಯು ಅತ್ಯಲ್ಪವಾಗಿತ್ತು. ಅದರಿಂದವರು ಯವನರೊಡನೆ ಬಹು ಕಾಲದವರೆಗೆ ಯುದ್ಧಮಾಡಲು ಸಮರ್ಥರಾಗಲಿಲ್ಲ. ವೃದ್ಧರಾಯಿಯು ಬಹುಶೂರತನದಿಂದ ಕಾದಿ, ಅನೇಕ ಶತ್ರುಗಳನ್ನು ಕೊಂದು, ಕಡೆಯಲ್ಲಿ ಚಿರನಿದ್ರೆಯನ್ನಯ್ದಿದನು. ಕನ್ನಡದಂಡಾಳುಗಳು ಕ್ರಮವಾಗಿ ಕಡಿಮೆಯಾ ಗುತ್ತ ನಡೆದು, ಬೆಳಗಾಗುವದರೊಳಗಾಗಿ ನಾಮಶೇಷರಾಗಿ ಹೋದರು.

ಬಾದಶಹನೂ, ಅವನ ಸೈನಿಕರೂ ಕೊಂಚಕಾಲದವರೆಗೆ ವಿಶ್ರಾಂತಿ ಯನ್ನು ತೆಗೆದುಕೊಂಡರು. ತರುವಾಯ ಬಾದಶಹನು ತನ್ನ ಅನುಚರರೊ ಡನೆ ಯುದ್ಧಭೂಮಿಯನ್ನು ನಿರೀಕ್ಷಿಸಿ, ಪಟ್ಟಣವನ್ನು ನೋಡುವುದಕ್ಕೆ ಹೊರ ಟನು. ಆದರೆ ಪಟ್ಟಣದಲ್ಲೇನಿತ್ತು? ಎಲ್ಲವೂ ಶೂನ್ಯಮಯ! ಆದರೂ ಸಿಕ್ಕಷ್ಟು ಸುಲಿಗೆಮಾಡುವದಕ್ಕೆ ಬಾದಶಹನ ಸೈನಿಕರು ಹಿಂದುಮುಂದೆ ನೋಡ ಲಿಲ್ಲ. ಈ ಮೇರೆಗೆ ಕಂಪಿಲನಗರವು ಸಂಪೂರ್ಣವಾಗಿ ನಾಶಹೊಂದಿತು.

*　　*　　*　　*　　*

ಬಾದಶಹನು ಬಂಗಾಲದ ಮೇಲೆ ದಂಡೆತ್ತಿ ಹೊರಟು, ಮಧ್ಯಮಾರ್ಗಕ್ಕೆ ಬಂದ ಸಮಯದಲ್ಲಿ, ಬಹಾಉದ್ದೀನನು ಕಂಪಿಲದಲ್ಲಿ ಆಶ್ರಯ ಹೊಂದಿದ ಸುದ್ದಿಯು ಅವನಿಗೆ ತಿಳಿಯಿತು. ಅದರಿಂದವನು ಬಂಗಾಲಕ್ಕೆ ಹೋಗದೆ, ನೆಟ್ಟಗೆ ಕಂಪಿಲದ ಮೇಲೆ ಸಾಗಿಬಂದನು. ಇಷ್ಟು ತೀವ್ರವಾಗಿ ಬಾದಶಹನು ತನ್ನ ಮೇಲೆ ಸಾಗಿಬಂದಾನೆಂದು ರಾಯಿಯು ಎಣಿಸಿದ್ದಿಲ್ಲ; ಮತ್ತು ಇಷ್ಟು ಅವಧಿಯಲ್ಲಿ ಸಾಕಷ್ಟು ಸೈನ್ಯವನ್ನು ಸಂಗ್ರಹಿಸುವದೂ, ಯುದ್ಧದ ಸಿದ್ಧತೆಯನ್ನು ಮಾಡುವದೂ ಸಣ್ಣ ಸಂಸ್ಥಾನಿಕನಾದ ಅವನಿಗೆ ಸಾಧ್ಯವಿದ್ದಿಲ್ಲ. ಅವನು ಬಯ ಸಿದ ಮೇರೆಗೆ ಆನೆಗುಂದಿಯ ಸೈನ್ಯವೂ ಅವನ ಹೊತ್ತಿಗೆ ಒದಗಲಿಲ್ಲ.

ಬಾದಶಹನು ತನ್ನ ಅಣ್ಣನ ಮಗನನ್ನು ಹುಡುಕಿದನು; ಆದರೆ ಅವನು ಬಾದಶಹನಿಗೆ ಸಿಗಲಿಲ್ಲ. ಬಾದಶಹನು ಒಂದೆರಡು ದಿವಸಗಳ ವರೆಗೆ ವಿಶ್ರಾಂತಿಯನ್ನು ತೆಗೆದುಕೊಂಡು, ಬಹಾಉದ್ದೀನನನ್ನು ಹುಡುಕುವದಕ್ಕೆ ಕೆಲವು ಜನರನ್ನು ಕಳುಹಿಸಿದನು. ಉಳಿದ ಜನರನ್ನು ತೆಗೆದುಕೊಂಡು ತಾನು ಆನೆಗುಂದಿಯ ಮೇಲೆ ಸಾಗಿದನು.

## ಹದಿನಾಲ್ಕನೆಯ ಅಧ್ಯಾಯ

### ಆನೆಗುಂದಿಯ ಅಳಿಗಾಲ

ಆನೆಗುಂದಿಯ ವೃದ್ಧಮಹಾರಾಜನಾದ ಜಂಬುಕೇಶ್ವರನು ದಿವಾಣಖಾನೆಯಲ್ಲಿ ಕುಳಿತಿದ್ದಾನೆ. ಸಮೀಪದಲ್ಲಿ ಅವನ ಪ್ರಧಾನನಾದ ಸಂಗಮನು ಮೋರೆ ಕೆಳಗೆ ಮಾಡಿಕೊಂಡು ಕುಳಿತುಕೊಂಡಿದ್ದಾನೆ. ಇಬ್ಬರ ಮೋರೆಯ ಮೇಲೆಯೂ ಘನಚಿಂತಾಕುಲತೆ ಚಿಹ್ನವು ಒಡೆದು ಕಾಣುತಲಿತ್ತು. ಕಂಪಿಲ ಪಟ್ಟಣದ ಅವಸ್ಥೆಯು ಇವರಿಗೆ ಗೊತ್ತಾಗಿದೆ. ಇನ್ನು ನಾಲ್ಕೆಂಟು ದಿವಸಗಳಲ್ಲಿಯೇ ಬಾದಶಹನು ಆನೆಗುಂದಿಯ ಮೇಲೆ ಸಾಗಿಬರತಕ್ಕವನಾಗಿದ್ದನು. ಅವನನ್ನು ಎದುರಿಸುವಷ್ಟು ಸಾಮರ್ಥ್ಯವು ಆನೆಗುಂದಿಯಲ್ಲಿರಲಿಲ್ಲ. ಆದಕ್ಕಾಗಿ ಮಹಾರಾಜನಿಗೆ ಬಹಳ ಚಿಂತೆಯುಂಟಾಗಿದೆ. ಮಹಾರಾಜನು ರಾಯಿಯ ಸಹಾಯಕ್ಕಾಗಿ ಕೆಲದಂಡನ್ನು ಕಳುಹಿಸಿದ್ದನು. ಅದು ರಾಯಿಯ ಉಪಯೋಗಕ್ಕೆ ಬೀಳಲಿಲ್ಲವೆಂಬುದು ಮಹಾರಾಜನಿಗೆ ಗೊತ್ತಾಗಿದೆ. ಆ ಸೈನ್ಯವು ತಿರುಗಿ ಆನೆಗುಂದಿಗೆ ಬರುವ ಸಂಭವವೇ ಇದ್ದಿಲ್ಲ; ಏಕೆಂದರೆ ಯವನರು ಅದನ್ನು ಈಗಾಗಲೇ ಕಡಿದುಹಾಕಿರಬಹುದು. ಮಹಾರಾಜನು ಉಳಿದ ತುಸುದಂಡಿನಿಂದ ಬಾದಶಹನನ್ನು ಎದುರಿಸಬೇಕಾಗಿದ್ದರಿಂದ ತಾನು ಸೋಲುವೆನೆಂಬುದನ್ನು ಮೊದಲೇ ತಿಳಿಕೊಂಡಿದ್ದನು; ಹೇಗೇ ಆಗಲಿ, ಯವನರೊಡನೆ ಯುದ್ಧಮಾಡಲೇ ಬೇಕಾಗಿತ್ತು. ಅವರಿಗೆ ಶರಣು ಹೋಗಲಿಕ್ಕೆ ಅವನ ಮನಸ್ಸು ಒಡಂಬಡಲಿಲ್ಲ. ಅದಕ್ಕಾಗಿ ಅವನು ವಿಷಾದ ಪೂರ್ಣಸ್ವರದಿಂದ— ಮಂತ್ರಿಶ್ರೇಷ್ಠರೇ, ಭವಿಷ್ಯತ್ಕಾಲದಲ್ಲಿ ನಮ್ಮ ಅವಸ್ಥೆಯು ನೆಟ್ಟಗಾಗುವಂತೆ

ತೋರುವದಿಲ್ಲ! ವೃದ್ಧರಾಯಿಯ ಗತಿಯೇ ನಮಗೂ ಆಗುವದು! ಕಂಪಿಲ ನಗರವು ಶೂನ್ಯಮಯವಾದಂತೆ, ಪ್ರಾಚೀನಕಾಲದಿಂದ ನಡೆದುಬಂದ ನಮ್ಮಾ ರಾಜಧಾನಿಯು ಹಾಳಾಗಿಹೋಗುವದು!! ಕಂಪಿಲದ ರಾಯಿಯು ತಾನು ಸತ್ತರೂ ತನ್ನ ಅತುಲಗುಣಗಳಿಂದ ಮರ್ಯಾದೆಯನ್ನು ಕಾಯ್ದುಕೊಂಡು ಹೋದನು. ಆದರೆ ನಮ್ಮ ಈ ನಗರಕ್ಕೆ ಆ ಸುಯೋಗವಾದರೂ ದೊರೆಯು ವದೋ ಇಲ್ಲವೋ ಎಂಬುದನ್ನು ಯಾರು ಹೇಳಬೇಕು ? ಯವನರ ಅತ್ಯಾ ಚಾರವನ್ನಂತೂ ನೀವು ಕೇಳಿರುವಿರಿ. ಅವರ ಕೈಯಲ್ಲಿ ಸಿಕ್ಕರೆ ನಮ್ಮ ಹಾಡು ಏನಾಗುವದೋ ತಿಳಿಯದು. ಈ ಅತ್ಯಾಚಾರದಿಂದ ನಾವು ಹೇಗೆ ಪಾರಾ ದೇವೆಂಬ ಚಿಂತೆಯು ನನ್ನನ್ನು ಮಿಡಿಕಿಸುತ್ತದೆ. ದೇವರೇ ಈ ಸಮಯದಲ್ಲಿ ನಮ್ಮ ಮರ್ಯಾದೆಯನ್ನುಳಿಸಬೇಕಲ್ಲದೆ, ನಮ್ಮಿಂದೇನೂ ಆಗದು! ಎಂದು ಹೇಳಿ ಉಸುರ್ಗರೆದನು.

ಸಂಗಮ — ಮಹಾರಾಜ, ಮಾಡುವದೇನು ? ಬಂದುದನ್ನು ಅನುಭವಿ ಸಲೇಬೇಕು; ಒಲ್ಲೆನೆಂದರೆ ಬಿಡದು. ಇದ್ದಷ್ಟು ಸೈನ್ಯವನ್ನು ತೆಗೆದುಕೊಂಡು ಬಾದಶಹನನ್ನು ಎದುರಿಸೋಣ. ದೇವರು ನಮ್ಮ ಮೇಲೆ ನಿರ್ದಯನಾಗಿರು ವನಾದರೆ, ಕಂಪಿಲಕ್ಕೊದಗಿದ ಅವಸ್ಥೆಯು ನಮಗೂ ಆಗುವದು. ವ್ಯರ್ಥ ವಾಗಿ ಈಗ ಚಿಂತಿಸುತ್ತ ಕುಳಿತರೆ ಪ್ರಯೋಜನವೇನು ?

ಜಂಬುಕೇಶ್ವರ — ಪ್ರಧಾನರೇ, ಹಾಗೆಂದರೇನು ? ಮುಂದಾಗುವದನ್ನು ನಾವು ತಪ್ಪಿಸಲಾರೆವಾದರೂ, ಆಲೋಚಿಸುವುದು ನಮ್ಮ ಕೆಲಸವಲ್ಲವೇ ? ಮುಂದೆ ಏನೇ ಆಗಲಿ, ಈಗ ನಾವು ವಿಚಾರಮಾಡಿ, ಸಂಕಟದಿಂದ ಮುಕ್ತ ರಾಗತಕ್ಕ ಉಪಾಯಗಳನ್ನು ಗೊತ್ತುಮಾಡಲೇಬೇಕು. ಈಗ ನಾವು ಏನು ಮಾಡೋಣ, ಹೇಳಿರಿ.

ಸಂಗಮ — ಮಹಾರಾಜ, ಮಾಡುವದೇನು ? ಶತ್ರುಗಳೊಡನೆ ಶೂರತನ ದಿಂದ ಕಾದೋಣ. ಯವನರನ್ನು ಹಿಂದಕ್ಕಟ್ಟಲು ಆದಷ್ಟು ಯತ್ನಿಸೋಣ. ಹೊತ್ತು ಬಂದರೆ, ರಾಯಿಯಂತೆ ನಾವೂ ಕಲಿತನದಿಂದ ಕಾದಿ, ಮಡಿದು ಹೋಗೋಣ.

**ಜಂಬು**—ಪ್ರಧಾನರೇ ಈ ಯುದ್ಧವು ರಾಜಕುಮಾರಿಯ ಸಲುವಾಗಿ ನಡೆಯುತಕ್ಕದ್ದಿದೆಯೆಂಬುದನ್ನು ನೀವು ಬಲ್ಲಿರಾ ? ಒಂದು ವೇಳೆ ಯವನರು ವಂಚನೆಯಿಂದ ಕುಮಾರಿಯನ್ನಪಹರಿಸಲು ಯತ್ನಿಸಿದರೆ ಏನು ಮಾಡಬೇಕು?

**ಸ.**—ಮಹಾರಾಜ, ಇದಕ್ಕೆ ನಾವು ಅನುವನ್ನು ಕೊಡಬಾರದು. ಈ ಪಟ್ಟಣದಲ್ಲಿ ಯವನರ ಪ್ರವೇಶವಾಗದಂತೆ ಮಾಡುವದಕ್ಕಾಗಿ ಮಾರ್ಗದಲ್ಲಿಯೇ ಅವರನ್ನು ಎದುರಿಸೋಣ. ಸೋಲು ಬಂದರೆ, ಸ್ತ್ರೀಯರನ್ನು ಕಂಪಿಲರಂತೆ ಅಗ್ನಿನಾರಾಯಣನಿಗೆ ಅರ್ಪಿಸಿ, ನಾವು ಕಲಿತನದಿಂದ ಕಾದಿ, ಮಡಿದು ಹೋದರಾಯಿತು. ಹೀಗೆ ಮಾಡಿದರೆ, ಒದಗತಕ್ಕ ಅಪಮಾನವನ್ನು ತಪ್ಪಿಸಿಕೊಂಡಂತಾಗುವುದಿಲ್ಲವೇ ?

**ಜ.**—ಜೋಹಾರವ್ರತವನ್ನಾಚರಿಸುವ ಮೊದಲೇ ಕುಮಾರಿಯು ಯವನರ ಕೈವಶಳಾದರೆ, ನಾವು ಮಾಡುವದೇನು ? ದಿಲ್ಲಿಯ ಬಾದಶಹನು ತಲೆತಿರುಕನಿರುವನೆಂದು ನಾನು ಕೇಳಿದ್ದೇನೆ. ಅವನು ಒಮ್ಮೆ ಆಲೋಚಿಸಿದನೆಂದರೆ, ಅದನ್ನು ಮಾಡದೆ ಬಿಡನೆಂದು ಜನರು ಹೇಳುತ್ತಿರುವರು. ಆದ್ದರಿಂದ ಕುಮಾರಿಯು ಅವನ ಕಯ್ಗೆ ಸಿಕ್ಕದಂತೆ ಮಾಡುವುದು ನಮ್ಮ ಕೆಲಸವಲ್ಲವೇ ?

**ಸ.**—ಇದಕ್ಕಾಗಿ ಏನು ಮಾಡಬೇಕೆಂದು ತಾವು ಯೋಚಿಸಿರುವಿರಿ ?

**ಜ.**—ಕುಮಾರಿಯನ್ನು ಎಲ್ಲಿಗಾದರೂ ಕಳುಹಿಸುವದು ಯೋಗ್ಯವೆಂದು ನನಗೆ ತೋರುತ್ತದೆ.

**ಸ.**—ಮಹಾರಾಜರ ಚಿತ್ತ. ನನಗೆ ಇದು ಸರಿಯಾಗಿ ಕಾಣಲೊಲ್ಲದು. ಏಕೆಂದರೆ ನೀವು ಮಗಳ ಮೋಹದಿಂದ ಹೀಗೆ ಮಾಡುವಿರಾದರೆ, ಪ್ರಜೆಗಳಿಂದ ತಿರಸ್ಕಾರವನ್ನು ಹೊಂದಬೇಕಾದೀತು.

**ಜ.**—ಒಳ್ಳೆಯದು, ಈಗ ನೀವು ಹೋಗಿರಿ. ನಾನು ಈ ಬಗ್ಗೆ ಇನ್ನೂ ವಿಚಾರಮಾಡಿ, ಮತ್ತೆ ನಿಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳುವೆನು.

ಸಂಗಮನು ಮಹಾರಾಜನ ಅಪ್ಪಣೆಪಡೆದು ಹೊರಟುಹೋದನು. ಇವನ ಮನಸ್ಸಿನಲ್ಲಿ ಲೀಲಾಂಬಿಕೆಯನ್ನು ಬೇರೆ ಕಡೆಗೆ ಕಳುಹಿಸುವದಿರಲಿಲ್ಲ; ಏಕೆಂದರೆ ಕಾಮಾಕ್ಷಿಯು ತನ್ನ ಕಾರ್ಯಸಾಧನೆಗಾಗಿ, ಈ ಮೊದಲೇ ಪ್ರಧಾ

ನಿಯ ಕಿವಿಯನ್ನು ಊದಿಬಿಟ್ಟಿದ್ದಳು. ಮುದುಕನಾದ ಆ ಬಡಪ್ರಾಣಿಯು ತನ್ನ ಅಚ್ಚೆಯ ಹೆಂಡತಿಯ ಹೇಳಿಕೆಯಂತೆಯೇ ನಡೆಯಬೇಕಾಗಿತ್ತೆಂಬುದನ್ನು ಇಲ್ಲಿ ಹೇಳುವ ಕಾರಣವಿಲ್ಲ.

*　　*　　*　　*　　*

ಸಂಗಮನು ಹೋದಬಳಿಕ ಮಹಾರಾಜನು ಪುನಃ ಚಿಂತಾಕ್ರಾಂತನಾಗಿ ಕುಳಿತನು. ಮುಂದೇನು ಮಾಡಬೇಕೆಂಬ ಬಗ್ಗೆ ಅವನ ಮನಸ್ಸಿನಲ್ಲಿ ಅನೇಕ ವಿಚಾರಗಳು ಬರತೊಡಗಿದವು. ಕುಮಾರಿಯನ್ನು ಬೇರೆ ಕಡೆಗೆ ಕಳುಹಿಸುವದು ಉತ್ತಮವೆಂದು ಅವನಿಗೆ ತೋರುತ್ತಿತ್ತು. ಮಹಾರಾಜನು ಕಂಪಿಲದ ಜೋಹಾರದ ಸುದ್ದಿಯನ್ನು ಕೇಳಿದ್ದನು. ಹೀಗೆ ಆನೆಗುಂದಿಯವರೂ ವ್ರತವನ್ನಾಚರಿಸಿದ್ದಾದರೆ, ಮಾನಭಂಗದ ಸಂಭವವಿರಲಿಲ್ಲ; ಆದರೆ ಯವನರು ಈ ಸಂಧಿಯನ್ನು ತಂದುಕೊಡದೆ, ಮೋಸದಿಂದ ಕುಮಾರಿಯನ್ನೆತ್ತಿಕೊಂಡು ಹೋದರೆ ಮಾಡುವದೇನು? ಎಂಬ ಶಂಕೆಯು ಮಹಾರಾಜನ ಮನಸ್ಸಿನಲ್ಲಿ ಕಟಿಯುತ್ತಿತ್ತು. ಮೇಲಾಗಿ ಏಕಮಾತ್ರಳಾದ ಮುದ್ದುಗುವರಿಯನ್ನು ಈ ಚಿಕ್ಕ ವಯಸ್ಸಿನಲ್ಲಿ ಅಗ್ನಿನಾರಾಯಣನಿಗೆ ಆಹುತಿಯಾಗಿ ಕೊಡುವುದು, ಕೋಮಲ ಹೃದಯದ ಆ ವೃದ್ಧಪಿತನಿಗೆ ಕಠೋರತಮವೆಂದು ತೋರುತ್ತಿತ್ತು. ಅದಕ್ಕಾಗಿ ಅವನು ಕುಮಾರಿಯನ್ನು ಯವನರಿಂದ ರಕ್ಷಿಸುವದೂ, ಅವಳು ಬಹುಕಾಲ ಬದುಕಿರುವಂತೆ ಮಾಡುವುದೂ ತನ್ನ ಕರ್ತವ್ಯವೆಂದೆಣಿಸಿ ಅದಕ್ಕೊಂದು ಉಪಾಯವನ್ನು ಯೋಚಿಸುತಲಿದ್ದನು. ಇದಕ್ಕಾಗಿ ಕುಮಾರಿಯನ್ನು ಬೇರೆ ಕಡೆಗೆ ಕಳುಹಿಸುವದಾಗಲಿ, ಗುಪ್ತರೀತಿಯಿಂದ ಎಲ್ಲಿಯಾದರೂ ಆಕೆಯನ್ನು ಇರಿಸುವದಾಗಲಿ ಅವಶ್ಯಕವಾಗಿತ್ತು. ಆದರೆ ಈ ಕೆಲಸವನ್ನು ಹೇಗೆ ಮಾಡಬೇಕು? ಎರಡನೆಯ ಕಡೆಗೆ ಕಳುಹಿಸುವುದಾದರೆ ಎಲ್ಲಿಗೆ ಕಳಿಸಬೇಕು? ಯಾರೊಡನೆ ಕಳಿಸಬೇಕು? ಎಂಬ ವಿಚಾರಗಳು ಮಹಾರಾಜನನ್ನು ಇರಕಿನಲ್ಲಿ ಹಾಕಿದ್ದವು.

ಮಹಾರಾಜನು ಹೀಗೆ ವಿಚಾರಪರನಾಗಿ ಕುಳಿತಸಮಯದಲ್ಲಿ ಕುಮಾರಿಯು ಅಲ್ಲಿಗೆ ಬಂದಳು. ಅವಳಿಗೆ ತಂದೆಯ ಚಿಂತೆಯ ಕಾರಣವು ಗೊತ್ತಾಗಿತ್ತು. ತನಗೋಸುಗವೇ ತಂದೆಯ ಮೇಲೆ ಭಯಂಕರ ಸಂಕಟವು ಬರತಕ್ಕ

ದ್ದಿದೆಯೆಂಬುದನ್ನು ಕೇಳಿ ಅವಳಿಗೆ ದುಃಖವಾಗಿತ್ತು; ಆದರೆ ತಂದೆಯ ಚಿಂತೆಯನ್ನು ಬಿಡಿಸುವ ಸಾಮರ್ಥ್ಯವು ಅವಳಲ್ಲಿರಲಿಲ್ಲ. ಈ ವಿಷಯವಾಗಿ ಅವಳು ಮಾಡುವದಾದರೂ ಏನು? ಆದರೂ ಇಂದು ವಿಷಾದಾಕ್ರಾಂತನಾದ ತಂದೆಯ ಮುಖವನ್ನು ನೋಡಿ, ಅವಳಿಗೆ ಬಹಳ ಕೆಡಕೆನಿಸಿತು; ಅವಳು ತಂದೆಯನ್ನು ಸಮಾಧಾನಪಡಿಸುವುದಕ್ಕಾಗಿ — ಅಪ್ಪಾಜಿ, ತಾವು ಇಷ್ಟೊಂದು ಚಿಂತಿಸುತ್ತಿರುವದೇಕೆ? ಮುಂದಾಗತಕ್ಕದ್ದು ಆಗಿಯೇ ತೀರುವದು. ಅದನ್ನು ತಪ್ಪಿಸುವುದು ನಮ್ಮ ಕೈಯಲ್ಲಿಲ್ಲ. ಅಂದಬಳಿಕ ಸುಮ್ಮನೆ ಚಿಂತೆಮಾಡಿ ಸೊರಗುವದೆಲ್ಲಿಯದು! ಎಂದು ಕಳವಳದಿಂದ ಹೇಳಿದಳು.

ಮಗಳೇ, ಹಾಗಂದರೆ ಹೇಗೆ? ಬಹುಕಾಲದಿಂದ ಹೆಸರಾದ ನಮ್ಮ ಈ ರಾಜ್ಯವು ಯವನರ ಕೈಸೇರುವದು. ಇದರಿಂದ ಈ ರಾಜ್ಯದ ಅಳಿಗಾಲಕ್ಕೆ ನಾನು ಕಾರಣೀಭೂತನಾದಂತಾಗಲಿಲ್ಲವೇ? ಇಷ್ಟರಿಂದಲೇ ನನ್ನ ದುರ್ದೈವವು ತೀರದು! ಇದ್ದೊಬ್ಬ ಮಗಳಾದ ನೀನು ಯವನರ ಕೈಸೇರುತ್ತಿರುವುದನ್ನು ನೋಡಿ ನಾನು ಹೇಗೆ ಸಹಿಸಲಿ? ಎಂದು ಉಸುರ್ಗರೆದನು.

ಲೀಲಾ. — ಅಪ್ಪಾ, ನಾನು ಯವನರ ಕೈಸೇರುವವಳೇ? ತಾವು ಈ ಬಗ್ಗೆ ಅಸಮಾಧಾನತಂದುಕೊಳ್ಳಬೇಡರಿ. ಕಂಪಿಲದ ಸಾಧ್ವಿಯರು ಅಗ್ನಿನಾರಾಯಣನಿಗೆ ದೇಹವನ್ನರ್ಪಿಸಿ, ತಮ್ಮ ಸತೀತ್ವವನ್ನು ಕಾಯ್ದುಕೊಂಡಂತೆ, ನಾವೂ ನಮ್ಮ ಸತೀಧರ್ಮವನ್ನು ರಕ್ಷಿಸಿಕೊಳ್ಳುವೆವು. ಒಂದುವೇಳೆ ಇದು ಸಾಧ್ಯವಾಗದಿದ್ದರೆ, ಈ ಶಸ್ತ್ರವು ನನ್ನ ಮರ್ಯಾದೆರಕ್ಷಣೆಗಾಗಿ ಸದಾಸಿದ್ಧವಾಗಿರುವದು, (ಎಂದು ಆವೇಶದಿಂದ ಹೇಳಿ, ಕುಮಾರಿಯು ಸಣ್ಣ ಆಯುಧವೊಂದನ್ನು ತಂದೆಗೆ ತೋರಿಸಿದಳು).

ಜ. — ಮುದ್ದುಮಗಳೇ, ನೀನು ಅಂತಹ ವೀರಾಂಗನೆಯೇ ಆಗಿರುವೆ. ಆದರೂ ನಿನ್ನನ್ನು ಯಾವದೇ ರೀತಿಯಿಂದ ವಿಪತ್ತಿಗೆ ಗುರಿಮಾಡಲು, ನಿನ್ನ ಈ ಮುದುಕ ತಂದೆಯು ಬಯಸುವದಿಲ್ಲ. ಅದಕ್ಕಾಗಿ ಅವನು ನಿನ್ನನ್ನು ಏನಾದರೊಂದು ಹಂಚಿಕೆಯಿಂದ ಸುರಕ್ಷಿತವಾಗಿರಿಸಲು ಯತ್ನಿಸುತ್ತಿರುವನು.

ಲೀ. — ಪೂಜ್ಯ ಪಿತರೆ, ನನ್ನ ಮೇಲೆ ತಮ್ಮ ಪ್ರೀತಿಯು ಬಹಳವಾಗಿದೆಯೆಂಬುದನ್ನು ನಾನು ಬಲ್ಲೆನು; ಅದಕ್ಕಾಗಿಯೇ ತಾವು ಈ ಆಲೋಚನೆ

ಯನ್ನು ಮಾಡುತ್ತಿರುವಿರಿ. ಆದರೆ ಇದು ನನಗೂ ನಿಮಗೂ ಹಿತಕಾರಕವಲ್ಲ; ಏಕೆಂದರೆ ಈ ನಗರದ ಯಾವತ್ತು ರಮಣಿಯರು ಆಪತ್ತಿನಲ್ಲಿ ಬೀಳುತ್ತಿರುವಾಗ, ತಾವು ಕೇವಲ ನನ್ನೊಬ್ಬಳ ಮುಕ್ತತೆಗಾಗಿ ಯತ್ನಿಸುತ್ತಿರುವುದು ತರವಲ್ಲ. ಎಲ್ಲರೊಡನೆ ಇದ್ದುಕೊಂಡು, ಅವರಿಗೆ ಪ್ರಾಪ್ತವಾದ ಅವಸ್ಥೆಯನ್ನು ನಾನೂ ಅನುಭವಿಸುವೆನು. ನನಗೋಸ್ಕರವಾಗಿಯೇ ರಾಜ್ಯದ ಪ್ರಜೆಗಳು ವಿಪತ್ತಿನಲ್ಲಿ ಬಿದ್ದಿರುವರು. ಹೀಗಿರುವಾಗ ಅವರನ್ನು ಬಿಟ್ಟು ನಾನೊಬ್ಬಳೇ ಮರಣವನ್ನು ತಪ್ಪಿಸಿಕೊಳ್ಳುವುದು ನ್ಯಾಯವಾದ್ದಲ್ಲ.

ಜ.—ಹುಚ್ಚಿ, ನೀನು ಇಲ್ಲಿ ಇದ್ದು ಮಾಡುವದಾದರೂ ಏನು? ನೀನು ಪ್ರಜೆಗಳ ಸಂಕಟವನ್ನು ದೂರ ಮಾಡಬಲ್ಲೆಯಾ? ನನಗೆ ಗಂಡು ಮಕ್ಕಳಿಲ್ಲ. ಇದ್ದೊಬ್ಬ ಮಗಳಾದ ನೀನು ಸತ್ತುಹೋಗುವದನ್ನಾಗಲಿ, ಅಪಮಾನ ಹೊಂದುವದನ್ನಾಗಲಿ ನಿನ್ನ ಈ ಮುಪ್ಪಿನ ತಂದೆಯು ನೋಡಲಾರನು! ಕಾರಣ ಮುದ್ದು ಮಗಳೆ, ನೀನು ಈ ಸಮಯದಲ್ಲಿ ನಾನು ಹೇಳಿದಂತೆ ನಡೆದುಕೊಂಡು, ಸಂಕಟದಿಂದ ಪಾರಾಗು. ಅಂದರೆ ಮಾತ್ರ ನೀನು ನಿನ್ನ ತಂದೆಯನ್ನು ಸಮಾಧಾನಪಡಿಸಿದಂತಾಗುವದು.

ಕುಮಾರಿಯು ಏನೋ ಉತ್ತರಕೊಡತಕ್ಕವಳಿದ್ದಳು; ಆದರೆ ಮಹಾರಾಜನು ಅದಕ್ಕವಕಾಶವನ್ನು ಕೊಡಲಿಲ್ಲ. ಸೇವಕನನ್ನು ಕರೆದು ಹರಿಹರನನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದನು. ಕುಮಾರಿಯು ತಾನೇ ಹೋಗಿ ಹರಿಹರನನ್ನು ಕರೆದುಕೊಂಡು ಬರುವೆನೆಂದು ಹೇಳಿದಳು. ಮಹಾರಾಜನು ಅದಕ್ಕೆ ಸಮ್ಮತಿಸಿದನು. ಕುಮಾರಿಯು ಹರಿಹರನನ್ನು ಕರೆದು ತರುವುದಕ್ಕೆ ಹೊರಟುಹೋದಳು.

ತುಸು ಹೊತ್ತಿನಲ್ಲಿ ಕುಮಾರಿಯೂ ಹರಿಹರನೂ ಕೂಡಿ, ಮಹಾರಾಜನ ಬಳಿಗೆ ಬಂದರು. ಇವರ ಈ ಸಖ್ಯವನ್ನು ನೋಡಿ, ಮಹಾರಾಜನಿಗೆ ಇಂತಹ ಸ್ಥಿತಿಯಲ್ಲಿಯೂ ಕೊಂಚ ಆನಂದವಾಯಿತು. ಹರಿಹರನು ಮಹಾರಾಜನಿಗೆ ವಂದಿಸಿ, ಸಮೀಪದಲ್ಲಿ ಕುಳಿತುಕೊಂಡನು. ಕುಮಾರಿಯು ಹಾಗೇ ಎದ್ದು ನಿಂತಿದ್ದಳು. ಮಹಾರಾಜನು ಅವಳನ್ನು ಕರೆದು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು, ಸ್ನೇಹಭರದಿಂದವಳ ಮೈಮೇಲೆ ಕೈಯಾಡಿಸಿದನು.

ಮಹಾರಾಜ, ಅಪ್ಪಣೆಯೇನು? ಎಂದು ಹರಿಹರನು ವಿನಯದಿಂದ ಕೇಳಿದನು.

ಹರಿಹರ, ಪ್ರಕೃತಸ್ಥಿತಿಯು ನಿನಗೆ ಗೊತ್ತಿದೆ. ಈಗ ನಾವು ಯವನರೊಡನೆ ಯುದ್ಧ ಮಾಡಲೇ ಬೇಕು. ದೈವವಶದಿಂದ ನಮ್ಮ ಸೈನ್ಯವು ಅವರನ್ನು ಹಿಂದಕ್ಕಟ್ಟಿದರಂತೂ ಉತ್ತಮವಾಗುತ್ತದೆ. ಒಂದು ವೇಳೆ ನಾವು ಸೋಲುವೆವಾದರೆ, ನಾವೆಲ್ಲರೂ ಯವನರ ಅತ್ಯಾಚಾರಕ್ಕೊಳಗಾಗಿ ಶೋಚನೀಯ ಮರಣಕ್ಕೊಳಗಾಗುವದರಲ್ಲಿ ಸಂದೇಹವಿಲ್ಲ. ಈ ಸಮಯದಲ್ಲಿ ರಾಜವಂಶವು ನಿರ್ಮೂಲವಾಗಬಾರದೆಂಬ ಪ್ರಬಲವಾದ ಇಚ್ಛೆಯು ನನಗುಂಟು. ಆದಕ್ಕಾಗಿ ನಾನು ಕುಮಾರಿಯನ್ನು ಬೇರೆ ಕಡೆಗೆ ಭದ್ರವಾಗಿರಿಸಬೇಕೆಂದು ಮನಸ್ಸು ಮಾಡಿದ್ದೇನೆ. ಈ ಕೆಲಸಕ್ಕಾಗಿ ನನಗೆ ನಿನ್ನ ಸಹಾಯವು ಬೇಕಾಗಿದೆ. ನಿನ್ನ ಹೊರತು ಈ ಕೆಲಸಕ್ಕೆ ಬೇರೆ ಯೋಗ್ಯ ಮನುಷ್ಯರಿಲ್ಲ. ಆದುದರಿಂದ ನಾನು ವಿಶ್ವಾಸಪಾತ್ರನಾದ ನಿನ್ನನ್ನು ಈ ಕೆಲಸಕ್ಕೆ ನಿಯಮಿಸುತ್ತೇನೆ. ನೀನು ಇವಳನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಿ, ಯವನರಿಂದ ಸಂರಕ್ಷಿಸು. ಇವಳಿಗೆ ಯಾರಿಂದಲೂ ಅಪಮಾನವಾಗದಂತೆ ನೋಡಿಕೊಂಡಿರು. ಎಂದು ಹೇಳಿ ಮಹಾರಾಜನು ಸುಮ್ಮನಾದನು.

ಮಹಾರಾಜನು ಮುಂದೇನು ಹೇಳುವನೋ ಎಂದು ಕುಮಾರನು ಅವನ ಮೋರೆಯನ್ನು ನೋಡುತ್ತ ಕುಳಿತಿದ್ದನು. ಮಹಾರಾಜನು ತುಸು ಹೊತ್ತು ಏನೋ ಆಲೋಚಿಸಿ—ಕುಮಾರ, ಇವಳನ್ನು ಎಲ್ಲಿ ಇರಿಸಿದರೆ ನೆಟ್ಟಗಾದೀತು? ಎಂದು ಕೇಳಿದನು.

**ಹ.**—ಆಚಾರ್ಯರ ಆಶ್ರಮದಲ್ಲಿ ಗುಪ್ತರೀತಿಯಿಂದಿರಸಬಹುದಾಗಿದೆ. ಇಲ್ಲವೆ **ಹಳೇಬೀಡಿಗೆ** ಕರೆದುಕೊಂಡು ಹೋಗಬಹುದಾಗಿದೆ. ಮಹಾರಾಜರು ಇವೆರಡು ಸ್ಥಳಗಳಲ್ಲಿ ಯಾವದೊಂದನ್ನು ಆರಿಸಬಹುದು.

**ಜ.**—ಕುಮಾರ, ಇಂಥ ಸ್ಥಳಕ್ಕೇ ಕರೆದುಕೊಂಡು ಹೋಗೆಂದು ನಾನು ಹೇಳುವದಿಲ್ಲ. ನೀನು ಎಲ್ಲಿಗಾದರೂ ಹೋಗಲೊಲ್ಲೆಯೇಕೆ; ಇವಳನ್ನು ಉತ್ತಮರೀತಿಯಿಂದ ರಕ್ಷಿಸಿದರಾಯಿತು. ನಾನು ಜಯಶಾಲಿಯಾದರೆ, ಪುನಃ ನಿಮ್ಮನ್ನು ಇಲ್ಲಿಗೆ ಕರೆಯಿಸಿಕೊಳ್ಳುವೆನು. ಒಂದುವೇಳೆ ಅಪಜಯ

ಪಟ್ಟು ಮರಣ ಹೊಂದುವೆನಾದರೆ—(ಮುದುಕನಿಂದ ಹೆಚ್ಚಿಗೆ ಮಾತಾಡು ವುದಾಗಲಿಲ್ಲ. ಅವನ ಕುತ್ತಿಗೆಯು ಶಿರವು ಬಿಗಿಯಿತು. ಅವನ ಕಣ್ಣು ನೀರಿ ನಿಂದ ತುಂಬಿದವು.)

ಹ.—ಮಹಾರಾಜ, ಹೀಗೆ ಅಳುವುದರಿಂದ ಆಗುವದೇನು? ಈ ಹೊತ್ತಿನಲ್ಲಿ ತಾವು ಹೆಚ್ಚು ಧೈರ್ಯವನ್ನು ತಾಳಬೇಕು. ತಮ್ಮಂತಹ ವೀರರು ಹೀಗೆ ದುಃಖಿಸಬಹುದೇ? ಆದುದರಿಂದ ಶಾಂತರಾಗಿರಿ. ದೇವರ ದಯೆಯಿಂದ ನಿಮಗಂತಹ ಅವಸ್ಥೆಯು ಬರಲೇ ಬೇಡ. ನಾನು ತಮ್ಮ ಅನ್ನದಿಂದ ಬಳೆದ ಸೇವಕನು. ಆದುದರಿಂದ ತಾವು ಹೇಳಿದ್ದನ್ನು ಕೇಳುವುದು ನನ್ನ ಕರ್ತವ್ಯವು. ಆದರೆ ಈ ವೇಳೆಯಲ್ಲಿ ಮತ್ತು ಇಂತಹ ಸಂಕಟ ಸಮಯದಲ್ಲಿ ತಮ್ಮನ್ನು ಬಿಟ್ಟು ಬೇರೆ ಕಡೆಗೆ ಹೋಗುವುದಕ್ಕೆ ನನ್ನ ಮನಸ್ಸು ಒಪ್ಪಲೊಲ್ಲದು.

ಜಿ.—ಕುಮಾರ, ನೀನು ನನಗಾಗಿ ಚಿಂತಿಸಬೇಡ. ನಾನು ಮುದುಕನಾಗಿ ಹೋಗಿದ್ದೇನೆ. ಹಿಂದೆ ಬಾಳಿದಷ್ಟು ವರುಷ ಇನ್ನು ಮುಂದೆ ಬದುಕಲಾರೆನು. ಇರುವ ಆಶೆಯೂ ನನಗಿಲ್ಲ. ನನ್ನ ಇಹಲೋಕದ ಯಾತ್ರೆಯು ಮುಗಿಯುತ್ತ ಬಂದಿದೆ. ಹೀಗಿರುವಾಗ ನಾನು ಇಂದು ಸತ್ತರೇನು? ಇನ್ನು ಒಂದೆರಡು ವರುಷ ಬಿಟ್ಟು ಸತ್ತರೇನು? ನನ್ನ ಮರಣದಿಂದ ಯಾರಿಗೂ ಕೆಡಕೆನಿಸಲಿಕ್ಕಿಲ್ಲ. ನನಗಾದರೂ ಈ ಬಗ್ಗೆ ದುಃಖವಾಗುವದಿಲ್ಲ. ನಾನು ಸಂತೋಷದಿಂದ ಮರಣಕ್ಕೆ ಸಿದ್ಧನಾಗಿದ್ದೇನೆ; ಆದರೆ ನಿರ್ವಂಶನಾಗಿ ಸತ್ತು ಹೋಗಬೇಕಾಗುತ್ತದೊ ಏನೋ ಎಂದು ಅಸಮಾಧಾನ ಪಡುತ್ತೇನೆ. ಅದಕ್ಕಾಗಿಯೇ ಇದ್ದೊಬ್ಬ ಮಗಳನ್ನು ಜತನದಿಂದ ರಕ್ಷಿಸುವುದಕ್ಕೆ ಇಷ್ಟೊಂದು ಸಾಹಸ ಮಾಡುತ್ತಿದ್ದೇನೆ. ಇಂದು ನಾನು ಇವಳನ್ನು ನಿನ್ನ ಕೈಯಲ್ಲಿ ಕೊಟ್ಟಿದ್ದೇನೆ. ಇನ್ನು ನೀನೇ ಇವಳ ಸಂರಕ್ಷಕನು. ಯವನರಿಂದ ಈ ರಾಜ್ಯವು ನಾಶವಾಗುವದಾದರೆ, ನೀವೀರ್ವರೂ ಕೂಡಿ, ಹೇಗಾದರೂ ಮಾಡಿ, ಪುನಃ ಈ ರಾಜ್ಯವನ್ನು ಉದ್ಧಾರ ಮಾಡಬೇಕು. ಅಂದರೆ ನೀವು ಮಾಡತಕ್ಕದ್ದನ್ನು ಮಾಡಿದಂತಾಗುವದು.

ಹ.—ಮಹಾರಾಜ, ತಮ್ಮ ಆಜ್ಞೆಯು ನನಗೆ ಶಿರಸಾಮಾನ್ಯವು, (ಎಂದು ಹರಿಹರನು ಮಹಾರಾಜನ ಚರಣಗಳ ಮೇಲೆ ಮಸ್ತಕವನ್ನಿರಿಸಿದನು.)

ಮಹಾರಾಜನು ಹರಿಹರನ ಕೈಯನ್ನು ಹಿಡಿದು ಎಬ್ಬಿಸಿ—ಕುಮಾರ, ನಾನು ನಿನಗೆ ಮತ್ತೊಂದು ಮಾತು ಹೇಳುತ್ತೇನೆ, ಕೇಳು. ಕುಮಾರಿಗೆ ನೀನೇ ತಕ್ಕ ವರನೆಂದು ನಾನು ಬಹುದಿವಸಗಳಿಂದ ಗೊತ್ತುಮಾಡಿದ್ದೇನೆ; ಆದರೆ ನಿನ್ನ ಪೂರ್ವಚರಿತ್ರೆಯು ಸಂಪೂರ್ಣವಾಗಿ ನನಗೆ ಗೊತ್ತಾಗದೆ ಇರುವದರಿಂದ, ನಾನಿದನ್ನು ಇದುವರೆಗೆ ಪ್ರಕಾಶಪಡಿಸಿದ್ದಿಲ್ಲ. ಆಚಾರ್ಯರು ನೀನು ಶ್ರೇಷ್ಠವಂಶೀಯನೆಂದು ಮಾತ್ರ ಹೇಳಿದ್ದಾರೆ; ಆದರೆ ನಿನ್ನ ವಂಶದ ಸಂಪೂರ್ಣ ವೃತ್ತಾಂತವನ್ನು ಅವರು ನನಗೆ ಹೇಳಲಿಲ್ಲ. ಅವರು ಈ ಸಂಗತಿಯನ್ನು ನನಗೆ ಹೇಳುವೆನೆಂದು ಹೇಳಿದ್ದರು; ಆದರೆ ಇನ್ನು ಆಚಾರ್ಯರ ಮುಖದಿಂದ ನಿನ್ನ ವಂಶ-ವೃತ್ತಾಂತವನ್ನು ಕೇಳುವ ಅವಕಾಶವು ನನಗಿಲ್ಲ. ಆದುದರಿಂದ ಆಚಾರ್ಯರ ಉಕ್ತಿಯಲ್ಲಿ ವಿಶ್ವಾಸವಿಟ್ಟು, ನಾನಿಂದು ನನ್ನ ಮುದ್ದುಮಗಳನ್ನು ನಿನಗೆ ಒಪ್ಪಿಸುತ್ತೇನೆ. ಇವಳನ್ನು ನಾನಿದುವರೆಗೆ ಬಹು ಅಕ್ಕರೆಯಿಂದ ಜೋಪಾನಮಾಡಿದ್ದನ್ನು ನೀನು ಬಲ್ಲೆ. ಇನ್ನು ಮುಂದೆ ನೀನು ಇವಳಿಗೆ ಸಂತೋಷವಾಗುವಂತೆ ವರ್ತಿಸಬೇಕೆಂದು ನಾನು ಈ ಸಮಯದಲ್ಲಿ ಹೇಳದಿರಲಾರೆನು.

ಮಹಾರಾಜನು ಕುಮಾರಿಯ ಹಸ್ತವನ್ನು ಹರಿಹರನ ಕೈಯಲ್ಲಿರಿಸಿದನು. ಗಾಂಧರ್ವವಿಧಿಯಿಂದ ವಿವಾಹಿತರಾದ ನವದಂಪತಿಗಳು ಮಹಾರಾಜನಿಗೆ ವಂದಿಸಿದರು. ಮಹಾರಾಜನು ಪ್ರೇಮಭರದಿಂದ ಇವರನ್ನು ಆಶೀರ್ವದಿಸಿದನು.

* * * * *

ಹರಿಹರನು ಕುಮಾರಿಯನ್ನು ಕರೆದುಕೊಂಡು, ಆಚಾರ್ಯರ ಆಶ್ರಮಕ್ಕೆ ಹೋದನು. ಕುಮಾರಿಯನ್ನು ಆಶ್ರಮದಲ್ಲಿ ಗುಪ್ತವಾಗಿರಿಸಬೇಕೆಂದು ಗೊತ್ತಾಯಿತು. ಹರಿಹರನು ಪುನಃ ಆನೆಗುಂದಿಗೆ ಬರುವ ಆಲೋಚನೆಯಲ್ಲಿದ್ದನು; ಆದರೆ ಆಚಾರ್ಯರು ಇದಕ್ಕೆ ಸಮ್ಮತಿಸಲಿಲ್ಲ. ಅವರು ಹರಿಹರನನ್ನು ಆಶ್ರಮದಲ್ಲೇ ಇಟ್ಟುಕೊಂಡರು.

* * * * *

ಮುಂದೆ ಮೂರು-ನಾಲ್ಕು ದಿವಸಗಳಲ್ಲಿಯೇ ಯವನರು ಆನೆಗುಂದಿಯ ಮೇಲೆ ದಂಡೆತ್ತಿಬಂದರು. ಅಲ್ಪಸಂಖ್ಯಾಕರಾದ ಕನ್ನಡಿಗರು ಯವನರನ್ನು

ಹಿಂದಕ್ಕಟ್ಟಲಿಕ್ಕೆ ಸಮರ್ಥರಾಗಲಿಲ್ಲ. ತುಸು ಹೊತ್ತಿನಲ್ಲಿ ಯವನರು ಗೆದ್ದು ಕೈಗೆಸಿಕ್ಕವರನ್ನು ಕೊಲ್ಲುತ್ತ ಪಟ್ಟಣವನ್ನು ಪ್ರವೇಶಿಸಿದರು. ಪಟ್ಟಣದಲ್ಲಿ ಅವರು ಆಚರಿಸಿದ ಅತ್ಯಾಚಾರಕ್ಕೆ ನೆಲೆಯಿಲ್ಲ. ಹೆಂಗಸರು, ಹುಡುಗರೆನ್ನದೆ, ಕೈಗೆಸಿಕ್ಕವರನ್ನು ನಿರ್ದಯತನದಿಂದ ಕೊಂದು, ಸಿಕ್ಕಷ್ಟು ಸುಲಿಗೆಯನ್ನು ತೆಗೆದುಕೊಂಡರು.

* * * * *

ಬಾದಶಹನು ರಾಜಕುಮಾರಿಯನ್ನು ಹುಡುಕಿದನು; ಆದರೆ ಅವಳು ದೊರೆಯಲಿಲ್ಲ. ಎಲ್ಲಿ ಹೋದಳೆಂಬುದೂ ಗೊತ್ತಾಗಲಿಲ್ಲ. ಕಾರಣ ಬಾದಶಹನು ರಾಜಕುಮಾರಿಯು ಆತ್ಮಹತ್ಯೆಮಾಡಿಕೊಂಡು ಸತ್ತುಹೋಗಿರಬಹುದೆಂದು ಭಾವಿಸಿದನು. ಇಷ್ಟರಲ್ಲಿ ಅವನ ಅನುಚರರು ಬಹಾಉದ್ದೀನನನ್ನು ಹಿಡಿದುಕೊಂಡು ಬಂದರು.

* * * * *

ಮಧ್ಯರಾತ್ರಿಯ ಸಮಯವಾಗಿದೆ. ಯವನ ಸೈನಿಕರು ಪಾಳೆಯದಲ್ಲಿ ಆನಂದೋತ್ಸವಗಳಲ್ಲಿ ಮುಳುಗಿದ್ದಾರೆ. ಸ್ವಚ್ಛವಾದ ಬೆಳದಿಂಗಳು ಬಿದ್ದಿದೆ. ಈ ಸಮಯದಲ್ಲಿ ಮಾಧವಾಚಾರ್ಯರು ಹರಿಹರನನ್ನು ಕರೆದುಕೊಂಡು ರಣಭೂಮಿಗೆ ಬಂದರು. ಯುದ್ಧಭೂಮಿಯು ಸ್ಮಶಾನಕ್ಕಿಂತ ಹೆಚ್ಚು ಭಯಂಕರ ಸ್ವರೂಪವನ್ನು ಹೊಂದಿತ್ತು. ಅಲ್ಲಲ್ಲಿ ವೀರರ ರಕ್ತವು ಹರಿಯುತಲಿತ್ತು. ಅಚೇತನಗಳಾದ ವೀರರ ದೇಹಗಳು ರಾಸಿರಾಸಿಯಾಗಿ ಬಿದ್ದಿದ್ದವು. ಒಂದೆರಡು ಕಡೆಯಲ್ಲಿ ಇನ್ನೂ ಪ್ರಾಣವಾಯುವು ಹಾರಿಹೋಗದ ವೀರರ ನರಳುವಿಕೆಯು ಕೇಳಬರುತಲಿತ್ತು. ಮಾಧವಾಚಾರ್ಯರು ಯಾರನ್ನೋ ಹುಡುಕುತ್ತ ನಡೆದಿದ್ದರು. ಹರಿಹರನು ದುಃಖಭರದಿಂದ ಅವರನ್ನನುಸರಿಸಿದ್ದನು.

ಸಹಸಾ, ಆಚಾರ್ಯರು ಒತ್ತಟ್ಟಿಗೆ ನಿಂತು, ಒಂದು ಅಚೇತನ ದೇಹವನ್ನು ತೋರಿಸಿ—ಹರಿಹರ, ನೀನು ಈ ದೇಹವನ್ನು ಗುರುತಿಸಿದೆಯಾ? ಇದು ಯಾರ ದೇಹವು ಹೇಳು? ಎಂದು ಕೇಳಿದರು.

**ಹರಿಹರನು** (ಆ ದೇಹವನ್ನು ಸೂಕ್ಷ್ಮರೀತಿಯಿಂದ ನೋಡಿ)—ಮಹಾರಾಜ, ಇದು ಆನೆಗುಂದಿಯ ಪ್ರಧಾನರಾದ ಸಂಗಮರವರದು! ಇದನ್ನು ಗುರುತಿಸದೇನು?

ಇಬ್ಬರೂ ಆ ಅಚೇತನ ದೇಹದ ಬಳಿಯಲ್ಲಿ ಕುಳಿತರು. ಸಂಗಮನು ಮೃತ್ಯುಶಯ್ಯೆಯಲ್ಲಿ ಮಲಗಿದ್ದನು. ಅವನಿನ್ನೂ ಸತ್ತಿರಲಿಲ್ಲ. ಆದರೂ ಅವನಿಗೆ ಮಾತಾಡುವ ಶಕ್ತಿಯಿದ್ದಿಲ್ಲ; ಜನರನ್ನು ಗುರುತಿಸುವ ಶಕ್ತಿಯೂ ಇದ್ದಿಲ್ಲ. ಒಂದೆರಡು ನಿಮಿಷಗಳಲ್ಲಿ ಅವನು ಇಹಲೋಕವನ್ನು ಬಿಟ್ಟುಹೋಗತಕ್ಕವನಿದ್ದನು.

ಆ.—ಹರಿಹರ, ಇವನು ನಿನಗೇನಾಗಬೇಕೆಂಬುದನ್ನು ಬಲ್ಲೆಯಾ?

ಹ.—ಮಹಾರಾಜ, ಇದನ್ನು ನಾನರಿಯೆನು.

ಆ.—ಇವನು ನಿನ್ನ ಜನ್ಮದಾತನು.

ಹರಿಹರನು (ಆಶ್ಚರ್ಯಾನ್ವಿತನಾಗಿ)—ಮಹಾರಾಜ, ತಾವು ಇದೇನು ಹೇಳುತ್ತಿರುವಿರಿ?

ಆ.—ಹರಿಹರ, ನಾನು ಸುಳ್ಳುಹೇಳತಕ್ಕವನೇ? ಇವನು ನಿಜವಾಗಿಯೂ ನಿನ್ನ ತಂದೆಯು.

ಹ.—ಅದು ಹೇಗೆ?

ಆ.—ನಾನು ನಿನಗೆ ಎಲ್ಲ ವೃತ್ತಾಂತವನ್ನು ಹೇಳಿದ್ದೇನೆ. ಕೇವಲ ನಿನ್ನ ತಾಯಿತಂದೆಗಳ ಹೆಸರನ್ನು ಮಾತ್ರ ಹೇಳಿರಲಿಲ್ಲ. ಇವನು ನಿನ್ನ ತಂದೆಯು. ಇವನ ಮೊದಲಿನ ಹೆಂಡತಿಯು ನಿನ್ನ ಜನನಿಯು.

ಹ.—ಈ ಸಂಗತಿಯನ್ನು ನೀವು ನನಗೆ ಮೊದಲೇ ಏಕೆ ಹೇಳಲಿಲ್ಲ!

ಆ.—ಅದಕ್ಕೆ ಅನೇಕ ಕಾರಣಗಳಿವೆ. ಹೊತ್ತು ಬಂದಾಗ ಅವನ್ನು ನಾನು ನಿನಗೆ ಹೇಳುವೆನು. ಈಗ ನೀನು ಇವನ ಉತ್ತರಕ್ರಿಯೆಯನ್ನು ಮಾಡಬೇಕು. ಮಹಾರಾಜರ ದೇಹವನ್ನು ಹುಡುಕೋಣ. ಇಬ್ಬರ ದೇಹಕ್ಕೂ ಅಗ್ನಿಸಂಸ್ಕಾರ ಮಾಡಿ, ನಾವು ಮನೆಗೆ ಹೋಗೋಣ.

ಹ.—(ಮನದಲ್ಲಿ ಮಿಡುಕಿ) ಮಹಾರಾಜ, ನಾನು ತಂದೆಯ ಬಳಿಯಲ್ಲಿದ್ದರೂ, ಪಿತೃಭಕ್ತಿಯಿಂದ ವಂಚಿತನಾದೆನಲ್ಲ! ನನ್ನಿಂದ ನನ್ನ ತಂದೆಗೆ ಏನು ಉಪಯೋಗವಾದಂತಾಯಿತು? ಈ ಸಂಗತಿಯನ್ನು ನೀವು ನನಗೆ ಮೊದಲೇ ಹೇಳಿದ್ದರೆ ಎಷ್ಟು ಒಳಿತಾಗುತ್ತಿತ್ತಲ್ಲ!

ಆ.—ಹರಿಹರ, ಈಗ ನೀನು ಹೀಗೆ ಮಿಡುಕುತ್ತ ಕುಳಿತುಕೊಳ್ಳುವುದು ತರವಲ್ಲ. ಆದದ್ದಾಗಿ ಹೋಗಿದೆ. ಇನ್ನು ಅದಕ್ಕಾಗಿ ಚಿಂತಿಸಿ ಫಲವಿಲ್ಲ.

ಆದರೂ ನಾನು ಮಾಡಿದ್ದು ಉತ್ತಮವಾಯಿತೆಂದು ನಿನಗೆ ಮುಂದೆ ಮನವರಿಕೆಯಾದೀತು. ಅದಿರಲಿ, ಈಗ ನಾವು ಮಹಾರಾಜರ ಶವವನ್ನು ಹುಡುಕೋಣ, ನಡೆ.

ಹರಿಹರನು ಒಮ್ಮೆ ತಂದೆಯ ಮುಖದ ಕಡೆಗೆ ನೋಡಿದನು. ಸಂಗಮನ ಪ್ರಾಣವಾಯುವು ಆಗಲೇ ಹಾರಿಹೋಗಿತ್ತು. ಮೃತ್ಯುವಿನ ಮಲಿನ ಛಾಯೆಯು ಅವನ ಮೋರೆಯ ಮೇಲೆ ಬಂದಿತ್ತು. ಹರಿಹರನು ನಿಟ್ಟುಸಿರನ್ನು ಬಿಟ್ಟು ಕಳವಳದಿಂದ ಅಲ್ಲಿಯೇ ಕುಳಿತುಕೊಂಡನು. ಆಚಾರ್ಯರು ಹೋಗಿ ಮಹಾರಾಜನ ಶವವನ್ನು ಹುಡುಕಿಕೊಂಡು, ತಂದರು. ತರುವಾಯ ಗುರುಶಿಷ್ಯರಿಬ್ಬರೂ ಕೂಡಿ, ಆ ಎರಡು ದೇಹಗಳಿಗೆ ಅಗ್ನಿಸಂಸ್ಕಾರವನ್ನು ಮಾಡಿ, ಬೆಳಗಾಗುವದರೊಳಗಾಗಿ ಆಶ್ರಮವನ್ನು ಸೇರಿದರು.

* * * * *

ಬಾದಶಹನ ಸಂಗಡ ಬೇಗಮಳು ಬಂದಿದ್ದಿಲ್ಲ. ಆದುದರಿಂದ ಚತುರಿಕೆಯ ಯುಕ್ತಿಯು ಸಫಲವಾಗುವಂತಿದ್ದಿಲ್ಲ. ಇದನ್ನು ಮೊದಲೇ ತಿಳಿದ ಆ ಚತುರದಾಸಿಯು ಎತ್ತ್ರೋ ಓಡಿಹೋಗಿ ಬಿಟ್ಟಳು. ಕಾಮಾಕ್ಷಿಗೆ ಆವಳ ತುಬ್ಬು ಹತ್ತಲಿಲ್ಲ. ಆದರೂ ಮಹತ್ವಾಕಾಂಕ್ಷೆಯನ್ನು ಧರಿಸಿದ ದುಷ್ಟ ಕಾಮಾಕ್ಷಿಯು ಗುಪ್ತಕಾರಸ್ಥಾನಕ್ಕೆ ಮುಂದುವರಿದಳು; ಆದರೆ ಅವಳಿಗೆ ಅದರಲ್ಲಿ ಗೆಲವು ದೊರೆಯಲಿಲ್ಲ. ಅವಳು ಒಬ್ಬ ಯುವನನ ಅತ್ಯಾಚಾರಕ್ಕೊಳಗಾಗಿ ಆತ್ಮಹತ್ಯ ಮಾಡಿಕೊಂಡು ಸತ್ತುಹೋದಳು. ದುರ್ಬುದ್ಧಿಯ ಪರಿಣಾಮವು ಇದೇ !!!!!

* * * * *

ಬಾದಶಹನು ತನ್ನ ಸೇನಾಪತಿಯಾದ ಮಲಿಕನಾಯಿಬನನ್ನು ಶೂನ್ಯಮಯವಾದ ಆನೆಗುಂದಿಯ ಸುಬೆದಾರನನ್ನಾಗಿ ಮಾಡಿದನು. ತರುವಾಯ ಅವನು ರಾಜದ್ರೋಹಿಯಾದ ಬಹಾಉದ್ದೀನನನ್ನು ಸಂಗಡ ಕರೆದುಕೊಂಡು ತಿರುಗಿ ತನ್ನ ರಾಜಧಾನಿಗೆ ಹೋದನು. ಅಲ್ಲಿ ಅವನು ಬಹಾಉದ್ದೀನನನ್ನು ಬಹು ಕ್ರೂರತನದಿಂದ ಕೊಲ್ಲಿಸಿ, ಅವನ ಹೆಣವನ್ನು ಪಟ್ಟಣದಲ್ಲೆಲ್ಲ ಮೆರೆಯಿಸಿದನು.

# ಹದಿನೈದನೆಯ ಅಧ್ಯಾಯ

## ಅರುಣೋದಯ

ಮಲಿಕನಾಯಬನು ಸ್ಮಶಾನಸಮವಾದ ಆನೆಗುಂದಿಯ ಸುಬೆದಾರನಾಗಿದ್ದಾನೆ. ಬಾದಶಾಹೀ ಸೈನಿಕರು ಪಟ್ಟಣದಲ್ಲಿಯೂ, ಸಮೀಪದ ಪ್ರದೇಶಗಳಲ್ಲಿಯೂ ವಾಸವಾಗಿದ್ದಾರೆ. ಇವರು ಕೇವಲ ಕೊಲೆಸುಲಿಗೆಗಳಲ್ಲಿ ತೊಡಗಿದ್ದರು. ಆದಕಾರಣ ರಾಜ್ಯವನ್ನು ಸುವ್ಯವಸ್ಥಿತವಾಗಿರಿಸುವುದಕ್ಕೆ ಮಲಿಕನಾಯಬನಿಗೆ ಅನುಕೂಲವಾಗಲಿಲ್ಲ. ಮೇಲಾಗಿ ದಿಲ್ಲಿಯಿಂದ ಬಹು ದೂರದಲ್ಲಿರುವ ಸಣ್ಣ ಪಟ್ಟಣವಾದ ಆನೆಗುಂದಿಯಲ್ಲಿರುವುದಕ್ಕೆ ಅವನ ಮನಸ್ಸು ಒಪ್ಪಲಿಲ್ಲ; ಆದ್ದರಿಂದ ಅವನು ರಾಜ್ಯದ ವ್ಯವಸ್ಥೆಗೆ ತಕ್ಕಷ್ಟು ಲಕ್ಷ ಕೊಡಲಿಲ್ಲ. ಒಡೆಯನ ಈ ತರದ ಉದಾಸವೃತ್ತಿಯನ್ನು ನೋಡಿ, ಅನುಚರರಾದ ಸೈನಿಕರೂ ಮನಬಂದಂತೆ ನಡೆಯ ತೊಡಗಿದರು. ಕೆಲವರು ಆನೆಗುಂದಿಯಲ್ಲಿರುವುದಕ್ಕೆ ಬೇಸತ್ತು, ವಿಲಾಸಪೂರ್ಣವಾದ ದಿಲ್ಲಿಯನ್ನು ನೆನೆದು, ಒಬ್ಬೊಬ್ಬರಾಗಿ ರಾಜಧಾನಿಯ ಮಾರ್ಗವನ್ನು ಹಿಡಿದರು. ಬೇರೆ ಕೆಲವರು ಕೊಲೆಸುಲಿಗೆಗಳಿಂದ ಆದಷ್ಟು ಧನವನ್ನು ಸಂಗ್ರಹಿಸಿ, ಅದನ್ನು ತೆಗೆದುಕೊಂಡು ರಾಜಧಾನಿಗೆ ಹೊರಡುವ ಯತ್ನದಲ್ಲಿದ್ದರು. ಬೇರೆ ಕೆಲವರು ಆಮೋದ-ಪ್ರಮೋದಗಳಲ್ಲಿ ನಿರತರಾಗಿದ್ದರು.

ಆನೆಗುಂದಿಯು ಅಳಿಗಾಲವಾದ ಬಳಿಕ, ಅಲ್ಲಿಯ ಸೈನಿಕರು ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ಬೇರೆ ಬೇರೆ ಕಡೆಗೆ ಹೋಗಿದ್ದರು. ಹರಿಹರನು ಇವರನ್ನು ಕೂಡಹಾಕಿದನು. ಇವನ ಪ್ರಯತ್ನದಿಂದ ಕೆಲವು ಸೈನ್ಯವು ಕೂಡಿತು. ಹರಿಹರನು ಈ ಸೈನಿಕರನ್ನು ಗುಪ್ತ ರೀತಿಯಿಂದಿರಿಸಿ, 'ಅವರಿಗೆ ಯುದ್ಧ ಶಿಕ್ಷಣವನ್ನು ಕೊಡತೊಡಗಿದನು.

ಬುಕ್ಕನು ದ್ವಾರಸಮುದ್ರಕ್ಕೆ ಹೋಗಿ, ಅಲ್ಲಿಯ ಅರಸನ ಸಾಹಾಯ್ಯ ಪಡೆದು, ಕೆಲವು ಸೈನಿಕರನ್ನು ತೆಗೆದುಕೊಂಡು ಬಂದು ಹರಿಹರನನ್ನು ಕೂಡಿದನು. ಬುಕ್ಕನೊಡನೆ ದ್ವಾರಸಮುದ್ರದ ರಾಜನೂ ದಂಡಿನೊಡನೆ ಬಂದನು. ಆವನಿಗೆ ಯವನರ ಸೇಡನ್ನು ತೀರಿಸಿಕೊಳ್ಳುವ ಪ್ರಬಲವಾದ ಕೋರಿಕೆ

ಯಿತ್ತು. ಹರಿಹರನು ಈ ಎರಡೂ ಸೈನ್ಯದವರಿಗೆ ಅಧಿಪತಿಯಾಗಿ, ಆನೆಗುಂದಿಯ ಮೇಲೆ ದಂಡೆತ್ತಿ ಹೋಗುವ ಸಿದ್ಧತೆಯನ್ನು ಮಾಡತೊಡಗಿದನು.

ಈ ಸುದ್ದಿಯು ಮಲಿಕನಾಯಬನಿಗೆ ತಿಳಿದ ಕೂಡಲೆ, ಅವನು ಓಡಿಹೋಗಲು ಸಿದ್ಧನಾದನು; ಏಕೆಂದರೆ ದಿಲ್ಲಿಯಿಂದ ಹೊಸ ದಂಡಿನ ಸಾಹಾಯವು ದೊರೆಯುವ ಸಂಭವವಿದ್ದಿಲ್ಲ; ಮತ್ತು ಇದ್ದ ಅಲ್ಪ ಸಂಖ್ಯಾಕರಾದ ಸೈನಿಕರಿಂದ ಯಾವ ಸ್ವಸಂರಕ್ಷಣೆಯೂ ಆಗುವಂತಿರಲಿಲ್ಲ. ಆದಕಾರಣ ಅರುಣೋದಯವಾಗುತ್ತಲೆ ಕತ್ತಲೆಯು ಓಡಿ ಹೋಗುವಂತೆ, ಯವನರು ದಿಕ್ಕುಪಾಲಾಗಿ ಓಡಿ ಹೋದರು. ಹರಿಹರನು ರಕ್ತಪಾತವಿಲ್ಲದೆ ಆನೆಗುಂದಿಯನ್ನು ಕೈವಶಮಾಡಿಕೊಂಡು ಅಲ್ಲಿಯ ಅರಸನಾದನು.

ತಾವು ಕೈಕೊಂಡ ಕಾರ್ಯವು ಈ ಮೇರೆಗೆ ಸುಲಭಸಾಧ್ಯವಾದುದನ್ನು ನೋಡಿ, ಆಚಾರ್ಯರಿಗೆ ಅತ್ಯಾನಂದವಾಯಿತು; ಆದರೆ ಅವರ ಇಷ್ಟರಿಂದಲೇ ಸಮಾಧಾನ ಹೊಂದುವಂತಿದ್ದಿಲ್ಲ. ಕರ್ನಾಟಕದಲ್ಲಿ ಪ್ರಬಲವಾದುದೊಂದು ಕನ್ನಡಿಗರ ಅರಸುತ್ತಿಗೆಯನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು. ಕನ್ನಡಿಗರ ಸ್ವಾತಂತ್ರ್ಯರವಿಯು ಪೂರ್ಣಪ್ರಕಾಶದಿಂದ ಬೆಳಗುವ ವರೆಗೆ ಯವನರ ಅತ್ಯಾಚಾರವು ಸಂಪೂರ್ಣವಾಗಿ ತಗ್ಗಲಾರದೆಂದು ಅವರ ಮನವರಿಕೆಯಾಗಿತ್ತು. ಆದ್ದರಿಂದ ಅವರು ಆನೆಗುಂದಿಯನ್ನು ಹೊಸರಾಜ್ಯದ ರಾಜಧಾನಿಯನ್ನಾಗಿ ಮಾಡದೆ, ವಿಜಯನಗರವನ್ನು ಮಾಡಬೇಕೆಂದು ಆಲೋಚಿಸಿದರು. ಈ ಸಂಗತಿಯನ್ನು ಅವರು ಹರಿಹರನಿಗೆ ತಿಳುಹಿದರು. ಹರಿಹರನಾದರು ಅದಕ್ಕೆ ಒಪ್ಪಿಕೊಂಡನು. ಏಕೆಂದರೆ ಆನೆಗುಂದಿಗೆ ಕೋಟೆಯಿದ್ದಿಲ್ಲ. ವಿಜಯನಗರಕ್ಕೆ ಕೋಟೆಯಿತ್ತು. ಆದ್ದರಿಂದ ಹಗೆಗಳು ವಿಜಯನಗರವನ್ನು ಸುಲಭವಾಗಿ ಹಿಡಿದುಕೊಳ್ಳುವ ಸಂಭವವಿದ್ದಿಲ್ಲ.

ವಿಜಯನಗರವನ್ನು ಹೊಸರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕಾದರೆ ಧನದ ಅವಶ್ಯಕತೆಯಿತ್ತು; ಏಕೆಂದರೆ ಅಲ್ಲಿ ಅರಮನೆಯಿದ್ದಿಲ್ಲ, ಆಸ್ಥಾನವಿದ್ದಿಲ್ಲ, ಗಜಾಶ್ವಗೋಶಾಲೆಗಳಿದ್ದಿಲ್ಲ, ಪೇಟೆಯಿದ್ದಿಲ್ಲ, ಜನವಸ್ತಿಇದ್ದಿಲ್ಲ. ಇಂತಹ ಹಾಳು ಕೋಟೆಯನ್ನು ರಾಜಧಾನಿಯಾಗಿ ಮಾಡಲಿಕ್ಕೆ ಕೋಟ್ಯಾಂತರ ರೂಪಾಯಿಗಳು ಅವಶ್ಯವಾಗಿ ಬೇಕಾಗಿದ್ದವು. ಯವನರು

ಈಗ ಹೇಳದೆ ಕೇಳದೆ ಓಡಿ ಹೋಗಿದ್ದರೂ, ಮುಂದೆ ದಂಡೆತ್ತಿಬರುವ ಸಂಭವವಿತ್ತು. ಆದಕಾರಣ ಹೆಚ್ಚು ದಂಡಿನವರನ್ನು ಕೂಡಿಹಾಕಿ, ಸೈನ್ಯದಲ್ಲಿ ತಿದ್ದುಪಡೆಯನ್ನುಂಟುಮಾಡಿ, ಹಗೆಗಳೊಡನೆ ಕಾದಬೇಕಾಗಿತ್ತು. ಈ ಕೆಲಸಗಳನ್ನು ಮಾಡುವುದಕ್ಕೆ ಹರಿಹರನಿಗೆ ಹಣವಿದ್ದಿಲ್ಲ. ಈ ಅಡಚಣೆಯನ್ನು ಅವನು ಆಚಾರ್ಯರ ಬಳಿಯಲ್ಲಿ ನಿವೇದಿಸಿದನು. ಅವರು ಶ್ರೀ ಮಹಾಲಕ್ಷ್ಮಿಯನ್ನು ಸ್ತುತಿಸಿ ಮೂರೂ ಮುಕ್ಕಾಲು ಗಳಿಗೆಯ ವರೆಗೆ ವಿಜಯನಗರದ ಕೋಟೆಯಲ್ಲಿ ಸುವರ್ಣವೃಷ್ಟಿಯನ್ನು ಸುರಿಸಿದರು. ಅದರಿಂದ ದೊರೆದ ಅಗಣಿತ ದ್ರವ್ಯದಿಂದ ತೃಪ್ತನಾಗಿ ಹರಿಹರ ರಾಯನು ಉಬ್ಬಿನಿಂದಲೂ ಹುರುಪಿನಿಂದಲೂ ಪ್ರಯತ್ನಪೂರ್ವಕವಾಗಿ ವಿಜಯನಗರದ ವೈಭವವನ್ನು ಬೆಳೆಸತೊಡಗಿದನು. ಮುಂದೆ ತುಸು ವರ್ಷಗಳಲ್ಲೇ ವಿಜಯನಗರವು ವೈಭವಪೂರ್ಣವಾದ ಸಂಪತ್ತಿಯುಳ್ಳ ಸುಂದರವಾದ, ಮನೋಹರವಾದ ಮತ್ತು ದೊಡ್ಡ ರಾಜಧಾನಿಯ ಪಟ್ಟಣವಾಯಿತು.

* * * * *

ಹರಿಹರನು ಬಹು ವಿಜೃಂಭಣೆಯಿಂದ ವಿಜಯನಗರದ ಸಿಂಹಾಸನವನ್ನೇರಿದನು. ಸ್ವತಃ ಆಚಾರ್ಯರು ಅವನಿಗೆ ರಾಜ್ಯಾಭಿಷೇಕ ಮಾಡಿದರು. ಈ ಸಮಾರಂಭದೊಡನೆ ಲೀಲಾಂಬಿಕೆ ಮತ್ತು ಹರಿಹರ ಇವರ ವಿವಾಹ ಸಮಾರಂಭವೂ ಜರಗಿತು. ಶ್ರೀ ವಿದ್ಯಾರಣ್ಯರು **ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ**ರೆಂಬ ಅತಿ ಗೌರವವುಳ್ಳ ಅಲಭ್ಯವಾದ ಬಿರುದನ್ನು ಪಡೆದರು (ಜ್ಯೇಷ್ಠ ಬಹುಳ ೧೪).

ಕರ್ನಾಟಕದ ಎಲ್ಲ ಕಡೆಯಲ್ಲಿಯೂ ಆನಂದವೇ ಹಬ್ಬಿತು. ಕರ್ನಾಟಕಕ್ಕೆ ಜಯವಾಗಲಿ, ಶ್ರೀ ವಿದ್ಯಾರಣ್ಯರಿಗೆ ಜಯವಾಗಲಿ ಎಂಬ ಕೋಲಾಹಲ ಧ್ವನಿಯು ಆಕಾಶವನ್ನು ನುಗ್ಗಿ ಸ್ವರ್ಗದಲ್ಲಿ ಕೇಳಬಂತು. ದೇವತೆಗಳು ಸಂತುಷ್ಟರಾಗಿ ಶ್ರೀ ವಿದ್ಯಾರಣ್ಯರನ್ನು ಹೊಗಳಿ ಹರಿಹರ ರಾಯನನ್ನು ಹರಸಿದರು !!!

## ಕೆಳಗೆ ಬರೆದ ಪುಸ್ತಕಗಳು

ನಮ್ಮ ಪುಸ್ತಕಾಲಯದಲ್ಲಿ ಯೋಗ್ಯ ಕ್ರಯಕ್ಕೆ ಸಿಗುವವು.

| | | ರೂ. | ಆ. | ಪೈ |
|---|---|---|---|---|
| ೧. | ಹನೂಮದ್ರಾಮಾಯಣ (ಪದ್ಯ) | ೨ | ೧ | ೦ |
| ೨. | ಪದ್ಯರತ್ನಾಕರ, ಭಾ. ೧. | ೧ | ೧ | ೦ |
| ೩. | ,, ,, ೨. | ೧ | ೧ | ೦ |
| ೪. | ತಿಲಕರ ಗೀತಾರಹಸ್ಯ | ೩ | ೬ | ೦ |
| ೫. | ಸ್ತ್ರೀಧರ್ಮನೀತಿ | ೦ | ೧೦ | ೦ |
| ೬. | ಪತಿವ್ರತೆಯರು | ೧ | ೪ | ೦ |
| ೭. | ಕರ್ನಾಟಕ ನಕಾಶ (ರೂಲು ಹಾಕಿದ್ದು) | ೧ | ೧ | ೦ |
| ೮. | ಶಕ್ತಿಮಯೀ | ೧ | ೦ | ೦ |
| ೯. | ಶ್ರೀ ದಾಸಬೋಧ, ಭಾ. ೧, ೨ | ೧ | ೧೪ | ೦ |
| ೧೦. | ಭಗವಾನದಾಸ (ಪತ್ತೆದಾರಿ ಕಥೆ) | ೧ | ೦ | [illegible] |
| ೧೧. | ಭಯಂಕರ ಕೊಲೆ ( ,, ) | ೦ | ೧೨ | [illegible] |
| ೧೨. | ಮುರಾರ ರಾವ ( ,, ) | ೦ | ೮ | [illegible] |
| ೧೩. | ವ್ರತಧಾರಿಣಿ | ೦ | ೧೨ | [illegible] |
| ೧೪. | ಸನ್ನಾಮತಿ (ಪ್ರಣಯಲೀಲಾ) | ೧ | ೬ | |
| ೧೫. | ಪರಶುರಾಮ ಭಾವೂ ಪಟವರ್ಧನ ಚರಿತ್ರೆ | ೧ | ೪ | |
| ೧೬. | ಮರಾಟರ ಅವನತಿ | ೦ | ೧೪ | [illegible] |
| ೧೭. | ಮರಾಟರ ಅಭ್ಯುದಯ | ೧ | ೦ | [illegible] |
| ೧೮. | ಭ್ರಾಂತಿವಿಲಾಸ | ೦ | ೧೩ | [illegible] |
| ೧೯. | ಶಾಲಿವಾಹನ ಚರಿತ್ರೆ | ೦ | ೩ | ೦ |
| ೨೦. | ವಚನ ಜ್ಞಾನಸಿಂಧು | ೩ | ೦ | ೦ |
| ೨೧. | ರಾಜಯೋಗ (ವಿವೇಕಾನಂದ) | ೧ | ೪ | ೦ |
| ೨೨. | ತಿಲಕಪುರಾಣ (ಪದ್ಯ) | ೦ | ೯ | ೦ |
| ೨೩. | ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ | ೧ | ೦ | ೦ |
| ೨೪. | ವಿಚಿತ್ರಕಾರಸ್ಥಾನ | ೦ | ೧೨ | ೦ |
| ೨೫. | ಸಚಿತ್ರ ಭಾಗವತ ಕಥಾಸಂಗ್ರಹ | ೧ | ೪ | |

ಶ್ರೀಪಾದ ರಾಮಚಂದ್ರ ದೇಶಪಾಂಡೆ, ಬಿ. ಎಸ್‌ಸಿ.,
ವ್ಯವಸ್ಥಾಪಕ,
ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ,
ಮಾಳಮಡ್ಡಿ, ಧಾರವಾಡ.

# ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ

೧. ಈ ಸಂಸ್ಥೆಯ ಹೆಸರು ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ [illegible].

೨. ಯೋಗ್ಯ [illegible] ಕಂಡ [illegible] ಕನ್ನಡದ ಹೊಸ ಅಥವಾ [illegible] ಗಳನ್ನು ಮುದ್ರಿಸಿ ಪ್ರಸಿದ್ಧ ಮಾಡುವುದೇ ಈ ಸಂಸ್ಥೆಯ ಮುಖ್ಯೋದ್ದೇಶ.

೩. ಇದಕ್ಕೆ ಬೇಕಾಗುವ ಬಂಡವಲವು [illegible] ರೂಪಾಯಿಗಳು. ೫೦ ರೂ. ಬೆಲೆಬಾಳುವ ೧೦೦ ಪಾಲುಗಳಲ್ಲಿ ಈ ಬಂಡವಲವನ್ನು ವಿಭಾಗಿಸಿದೆ. ೫೦ ರೂಪಾಯಿಗಳಷ್ಟೊಂದು [illegible] ಕಂತುಗಳಿಂದ ಪಾಲಿನ ಹಣವನ್ನು ಮುಟ್ಟಿಸಬಹುದು.

೪. ಮನಃಪೂರ್ವಕವಾಗಿ ಕನ್ನಡ ನುಡಿಯನ್ನು ಸೇವಿಸಲಿಚ್ಛಿಸುವವರೆಲ್ಲ ಈ ಸಂಸ್ಥೆಯ ಪಾಲುಗಾರರಾಗುವುದಕ್ಕೆ ತಕ್ಕವರು.

೫. ಕೆಳಗೆ ಸಹಿ ಮಾಡಿದವರು ೧೦ ಪಾಲುಗಳನ್ನು ತೆಗೆದುಕೊಂಡು ಕರ್ನಾಟಕ [illegible] ಸ್ಥಾಪನೆ ಎಂಬ [illegible] ಕಾದಂಬರಿಯನ್ನು [illegible] ಹೊರಗಿಟ್ಟಿದ್ದಾರೆ. ಕಾರ್ಯಕಾರಿ ಮಂಡಳಿಗೆ ಸೇರುವವರು ೪ ಅಥವಾ ಹೆಚ್ಚು ಪಾಲುಗಳನ್ನು ತೆಗೆದುಕೊಳ್ಳಬೇಕು.

೬. ಕನ್ನಡ ನುಡಿಯ ಏಳ್ಗೆಯನ್ನು ಬಯಸುವವರು ೫ ರೂ.ಗಳೊಡನೆ ತಮ್ಮ ಪಾಲಿನ ಅರ್ಜಿಯನ್ನು ಕಳಿಸಬಹುದು.

೭. ಈ ವಿಷಯದಲ್ಲಿ ಪತ್ರವ್ಯವಹಾರ ಮಾಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬೇಕು

[illegible] ಧಾರವಾಡ,
೪ ಚೈತ್ರ ಶುದ್ಧ ೧,
[illegible]

**ರಾಮಚಂದ್ರ ಹನುಮಂತ ದೇಶಪಾಂಡೆ.**
**ಶ್ರೀಪಾದ ರಾಮಚಂದ್ರ ದೇಶಪಾಂಡೆ.**